ಬುಧವಾರ, ಮಾರ್ಚ್ 10, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಗುರಿಯತ್ತ ಚಿತ್ತ...
1971ರ ಯುದ್ಧದ ಸುವರ್ಣ ಮಹೋತ್ಸವದ ಅಂಗವಾಗಿ ಕೋಲ್ಕತ್ತದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಶಸ್ತ್ರಾಸ್ತ್ರ ಪ್ರದರ್ಶನದಲ್ಲಿ ಕ್ಷಿಪಣಿ ಹಿಡಿದು ಗುರಿಯತ್ತ ನೋಟ ಬೀರಿದ ಬಾಲಕಿ

ಯಡಿಯೂರು ವಾರ್ಡ್‌ನ ಸಮುದಾಯ ಭವನ ಕಾಮಗಾರಿ– ನಿರ್ದಿಷ್ಟ ಗುತ್ತಿಗೆದಾರನಿಗೆ ಸಹಕರಿಸಲು ತುಂಡು ಗುತ್ತಿಗೆ

ಮೊದಲ ಮಹಡಿ, 2ನೇ ಮಹಡಿಗೆ ಪ್ರತ್ಯೇಕ ಟೆಂಡರ್!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡು ಮಹಡಿಗಳ ಸಮುದಾಯ ಭವನ ನಿರ್ಮಿಸುವಾಗ ಮೊದಲ ಮಹಡಿಗೆ ಪ್ರತ್ಯೇಕ ಹಾಗೂ ಎರಡನೇ ಮಹಡಿಗೆ ಪ್ರತ್ಯೇಕವಾಗಿ ಟೆಂಡರ್ ಕರೆಯುವುದನ್ನು ಎಲ್ಲಾದರೂ ನೋಡಿದ್ದೀರಾ? ಬಿಬಿಎಂಪಿಯಲ್ಲಿ ಇದು ಕೂಡಾ ಸಾಧ್ಯ.

ಅಚ್ಚರಿಯೆಂದರೆ, ಸಮುದಾಯ ಭವನ ಕಾಮಗಾರಿ ಬೇರೆ ಬೇರೆ ಮಹಡಿಗಳಿಗೆ ಪ್ರತ್ಯೇಕವಾಗಿ ಟೆಂಡರ್ ಕರೆದರೂ ಕಾಮಗಾರಿಯ ಗುತ್ತಿಗೆಯನ್ನು ಮಾತ್ರ ಒಬ್ಬನೇ ಗುತ್ತಿಗೆದಾರನಿಗೆ ನೀಡಲಾಗಿದೆ.

ಯಡಿಯೂರು ವಾರ್ಡ್‌ನಲ್ಲಿ ಬಿಬಿಎಂಪಿಯು ಸಮುದಾಯ ಭವನ ನಿರ್ಮಿಸುತ್ತಿದೆ. ಎರಡು ಮಹಡಿಗಳನ್ನು ಹಾಗೂ ಎಲೆಕ್ಟ್ರಿಕಲ್ ಕೆಲಸಗಳನ್ನು ಒಳಗೊಂಡ ಈ ಕಾಮಗಾರಿಯ ಅಂದಾಜು ವೆಚ್ಚ ₹ 5.50 ಕೋಟಿ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆ ಪ್ರಕಾರ ಇಷ್ಟು ಮೊತ್ತದ ಕಾಮಗಾರಿ ನಿರ್ವಹಿಸಬೇಕಾದರೆ ಗುತ್ತಿಗೆದಾರ 2014–15ರಿಂದ 2018–19ರ ನಡುವಿನ ಎರಡು ಆರ್ಥಿಕ ವರ್ಷಗಳಲ್ಲಿ ಕನಿಷ್ಠ ₹ 11 ಕೋಟಿ ವೆಚ್ಚದ ಕಾಮಗಾರಿ ನಿರ್ವಹಿಸಿರಬೇಕು. ಈ ಕಾಮಗಾರಿಯ ತರಹದ್ದೇ ಆದ ₹ 2.75 ಕೋಟಿ ವೆಚ್ಚದ ಒಂದಾದರೂ ಕಾಮಗಾರಿ ಅದರಲ್ಲಿ ಸೇರಿರಬೇಕು.

ಬಿಬಿಎಂಪಿ ಅಧಿಕಾರಿಗಳು ರಾಜಕೀಯ ಒತ್ತಡದಿಂದ ಈ ಕಾಮಗಾರಿಯ ಗುತ್ತಿಗೆಯನ್ನು ಯಾರಿಗೆ ನೀಡಬೇಕೆಂದು ಬಯಸಿದ್ದರೋ, ಆ ಗುತ್ತಿಗೆದಾರರ ಇಷ್ಟು ಮೊತ್ತದ ಕಾಮಗಾರಿ ನಿರ್ವಹಿಸುವ ಅರ್ಹತೆ ಹೊಂದಿರಲಿಲ್ಲ. ಹಾಗಾಗಿ ಕಾಮಗಾರಿಯನ್ನೇ ಅಧಿಕಾರಿಗಳು ಮೂರು ವಿಭಾಗಗಳನ್ನಾಗಿ ವಿಂಗಡಿಸಿದ್ದಾರೆ. ಮೊದಲ ಮಹಡಿಯ ನಿರ್ಮಾಣಕ್ಕೆ ₹ 1.99 ಕೋಟಿ, ಎರಡನೇ ಮಹಡಿಯ ನಿರ್ಮಾಣಕ್ಕೆ ₹ 1.99 ಕೋಟಿ ಹಾಗೂ ಎಲೆಕ್ಟ್ರಿಕಲ್ ಕೆಲಸಗಳಿಗೆ ₹ 1.52 ಕೋಟಿ ವೆಚ್ಚಕ್ಕೆ ಪ್ರತ್ಯೇಕ ಟೆಂಡರ್ ಕರೆದಿದ್ದಾರೆ. ಈ ಕಾಮಗಾರಿ ನಿರ್ವಹಣೆಗೆ 9 ತಿಂಗಳು ಕಾಲಾವಕಾಶ ನೀಡಲಾಗಿದೆ.

ಕಾಮಗಾರಿಯನ್ನು ಸತೀಶ್ ಆರ್. ಎಂಬ ಗುತ್ತಿಗೆದಾರರಿಗೆ ನೀಡಲಾಗಿದೆ. ಅವರ ಟೆಂಡರ್ ಸಾಮರ್ಥ್ಯ ₹ 11 ಕೋಟಿ ಇಲ್ಲ. ಹಾಗಾಗಿ ಸತೀಶ್ ಅವರು ಈ ಕಾಮಗಾರಿಯ ಟೆಂಡರ್ ಪಡೆಯುವುದಕ್ಕೆ ಅನುಕೂಲ ಕಲ್ಪಿಸಲುವ ಸಲುವಾಗಿ ₹ 5.50 ಕೋಟಿ ವೆಚ್ಚದ ಕಾಮಗಾರಿಯನ್ನು ಮೂರು ಪ್ರತ್ಯೇಕ ಕಾಮಗಾರಿಗಳನ್ನಾಗಿ ವಿಭಜಿಸಲಾಗಿದೆ ಎಂಬ ಆರೋಪ ಕೇಳಿಬಂದಿದೆ.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಯಡಿಯೂರು ವಾರ್ಡ್‌ನ ಈ ಕಾಮಗಾರಿಯ ಉಸ್ತುವಾರಿ ಹೊತ್ತ ಕಾರ್ಯಪಾಲಕ ಎಂಜಿನಿಯರ್ (ಯೋಜನೆ) ಅವರಿಗೆ ಕರೆ ಮಾಡಲಾಯಿತು. ಆದರೆ, ಅವರು ಕರೆ ಸ್ವೀಕರಿಸಲಿಲ್ಲ.

‘ಪ್ರತಿ ಮಹಡಿಗೆ ಪ್ರತ್ಯೇಕ ಟೆಂಡರ್– ಅವಕಾಶ ಇಲ್ಲ’

‘ಸಮುದಾಯ ಭವನ ನಿರ್ಮಿಸುವಾಗ ಮೊದಲ ಮಹಡಿಗೆ, ಎರಡನೇ ಮಹಡಿಗೆ ಹಾಗೂ ಎಲೆಕ್ಟ್ರಿಕಲ್ ಕಾಮಗಾರಿಗಳಿಗೆ ಏಕಕಾಲಕ್ಕೆ ಪ್ರತ್ಯೇಕವಾಗಿ ಟೆಂಡರ್ ಕರೆಯುವುದಕ್ಕೆ ಅವಕಾಶ ಇಲ್ಲ. ಆ ರೀತಿ ಮಾಡಿದ್ದರೆ ಅದು ತಪ್ಪಾಗುತ್ತದೆ. ಯಡಿಯೂರು ವಾರ್ಡ್‌ನ ಸಮುದಾಯ ಭವನ ಕಾಮಗಾರಿಯಲ್ಲಿ ಈ ರೀತಿ ಆಗಿದ್ದರೆ ಪರಿಶೀಲಿಸಿ ತಪ್ಪೆಸಗಿದವರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ’ ಎಂದು ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ ಪ್ರಸಾದ್ ‘ಪ್ರಜಾವಾಣಿ’ಗೆ ತಿಳಿಸಿದರು.

ಬಿಬಿಎಂಪಿ ಸುದ್ದಿ

4ಜಿ ಅಡಿ ವಿನಾಯಿತಿ ಕೋರಿದ್ದ ಗುತ್ತಿಗೆದಾರ

ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ದ.ರಾ ಬೇಂದ್ರೆ ವೃತ್ತದಿಂದ ಆರ್ಮುಗಂ ವೃತ್ತದವರೆಗಿನ 1.2 ಕಿ.ಮೀ ರಸ್ತೆಯ ವೈಟ್‌ಟಾಪಿಂಗ್ ಕಾಮಗಾರಿಯನ್ನು ಟೆಂಡರ್ ಕರೆಯದೆಯೇ ಗುತ್ತಿಗೆದಾರ ಸತೀಶ್ ಆರ್. ಅವರ ಮೂಲಕ ನಡೆಸುವುದಕ್ಕೆ 2019ರಲ್ಲಿ ಬಿಬಿಎಂಪಿ ಸಿದ್ಧತೆ ನಡೆಸಿತ್ತು. ಸತೀಶ್ ಅವರು ಈ ಕಾಮಗಾರಿಗೆ ಕೆಟಿಪಿಪಿ ಕಾಯ್ದೆಯ 4 ಜಿ ಕಲಂ ಅಡಿ ವಿನಾಯಿತಿ ನೀಡುವಂತೆ ಕೋರಿ ಬಿಬಿಎಂಪಿಯ ಆಗಿನ ಆಯುಕ್ತರಿಗೆ 2019ರ ಸೆ. 21ರಂದು ಪತ್ರವನ್ನೂ ಬರೆದಿದ್ದರು.

ಈ ಕುರಿತು ನಗರಾಭಿವೃದ್ಧಿ ಇಲಾಖೆಯಲ್ಲಿ ಆಗ ಹೆಚ್ಚುವರಿ ಮುಖ್ಯಕಾರ್ಯದರ್ಶಿರಾಗಿದ್ದ ಇ.ವಿ.ರಮಣ ರೆಡ್ಡಿ ಅವರಿಗೆ 2019ರ ಸೆ. 24ರಂದು ಪತ್ರ ಬರೆದಿದ್ದ ಬಿಬಿಎಂಪಿಯ ಆಗಿನ ಆಯುಕ್ತ ಬಿ.ಎಚ್.ಅನಿಲ್ ಕುಮಾರ್ ಅವರು, ‘ಈ ಕಾಮಗಾರಿ ಬಗ್ಗೆ ಆಗಿನ ಮುಖ್ಯಕಾರ್ಯದರ್ಶಿ ಅವರು ಎನ್.ಆರ್.ರಮೇಶ್ ಜೊತೆ ದೂರವಾಣಿಯಲ್ಲಿ ಮಾತನಾಡಿ ಈ ಎರಡೂ ಕಾಮಗಾರಿಗಳ ಅಂದಾಜು ಮೊತ್ತವನ್ನು ಶೇ 3ರಷ್ಟು ಕಡಿಮೆ ಮಾಡುವಂತೆ ಸೂಚಿಸಿದ್ದಾರೆ. ಅದರಂತೆ ಅಂದಾಜುಪಟ್ಟಿಯಲ್ಲಿ ಶೇ 3ರಷ್ಟು ಕಡಿಮೆ ಮಾಡಿ ಕಾಮಗಾರಿ ನಿರ್ವಹಿಸಲು ಗುತ್ತಿಗೆದಾರರಾದ ಆರ್.ಸತೀಶ್ ಹಾಗೂ ಎಸ್.ಮಂಜುನಾಥ್ ಒಪ್ಪಿದ್ದಾರೆ’ ಎಂದು ಉಲ್ಲೇಖಿಸಿದ್ದರು. ಈ ಪತ್ರವನ್ನು ಆಧರಿಸಿ ‘ಪ್ರಜಾವಾಣಿ’ 2019ರ ಸೆ. 15ರ ಸಂಚಿಕೆಯಲ್ಲಿ ‘ಬಿಜೆಪಿ ವಕ್ತಾರನ ಜೊತೆ ಮುಖ್ಯ ಕಾರ್ಯದರ್ಶಿ ಚೌಕಾಸಿ!’ ಎಂಬ ಶೀರ್ಷಿಕೆಯಡಿ ವಿಶೇಷ ವರದಿ ಪ್ರಕಟಿಸಿತ್ತು.

ಬಳಿಕ ಟೆಂಡರ್ ಕರೆಯದೆಯೇ ಕಾಮಗಾರಿ ನಡೆಸುವ ಪ್ರಸ್ತಾಪವನ್ನು ಬಿಬಿಎಂಪಿ ಕೈಬಿಟ್ಟಿತ್ತು.

ಬಾಲಚಂದ್ರಗೆ ಸಚಿವ ಸ್ಥಾನ: ಶಾಸಕರ ಒತ್ತಡ

ಬೆಂಗಳೂರು: ಶಾಸಕ ರಮೇಶ ಜಾರಕಿಹೊಳಿ ವಿರುದ್ಧದ ಲೈಂಗಿಕ ದೌರ್ಜನ್ಯದ ಆರೋಪ ಬಗ್ಗೆ ಎಫ್‌ಎಸ್‌ಎಲ್ ವರದಿಯಲ್ಲಿ ಕ್ಲಿನ್ ಚಿಟ್ ಸಿಕ್ಕಿದ್ದರೆ, ಪುನಃ ಅವರನ್ನು ಸಚಿವರನ್ನಾಗಿ ಮಾಡಬೇಕು ಎಂದು ರಮೇಶ ಅವರ ಆಪ್ತ ಶಾಸಕರು ಒತ್ತಾಯಿಸಿದ್ದಾರೆ.

ಮಂಗಳವಾರ ರಾತ್ರಿ ರಮೇಶ ಜಾರಕಿಹೊಳಿ ಅವರ ನಿವಾಸದಲ್ಲಿ ಸಭೆ ಸೇರಿದ ಶಾಸಕರು, ರಮೇಶ ಅವರ ತೇಜೋವಧೆಗೆ ಸಂಚು ರೂಪಿಸಿದವರನ್ನು ಯಾವುದೇ ಕಾರಣಕ್ಕೂ ಬಿಡಬಾರದು. ತಕ್ಕ ಶಿಕ್ಷೆ ಆಗುವಂತೆ ನೋಡಿಕೊಳ್ಳಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ರಮೇಶ ಅವರು ರಾಜೀನಾಮೆ ನೀಡಿರುವ ಕಾರಣ, ಸಚಿವ ಸ್ಥಾನವನ್ನು ಬಾಲಚಂದ್ರ ಜಾರಕಿಹೊಳಿ ಅವರಿಗೆ ನೀಡಬೇಕು. ಜಲಸಂಪನ್ಮೂಲ ಖಾತೆಯನ್ನು ಮುಖ್ಯಮಂತ್ರಿಯವರೇ ಇಟ್ಟುಕೊಳ್ಳಲಿ ಎಂದು ಶಾಸಕರು ಸಭೆಯಲ್ಲಿ ಹೇಳಿದರು ಎಂದು ಮೂಲಗಳು ತಿಳಿಸಿವೆ.

ಮುಖ್ಯಮಂತ್ರಿ ಯಡಿಯೂರಪ್ಪ ಅವರನ್ನು ಸೋಮವಾರ ಭೇಟಿ ಮಾಡಿದ ರಮೇಶ ಅವರ ಆಪ್ತರೆನ್ನಲಾದ 15 ಶಾಸಕರು, ’ಬಾಲಚಂದ್ರ ಅವರಿಗೆ ಸಚಿವ ಸ್ಥಾನ ನೀಡಬೇಕು. ರಮೇಶ ವಿರುದ್ಧದ ರಾಜಕೀಯ ಪಿತೂರಿ ಬಯಲಿಗೆಳೆಯಲು ತನಿಖೆ ನಡೆಸಬೇಕು‘ ಎಂದು ಒತ್ತಾಯಿಸಿದರು.

ವಿಧಾನ ಪರಿಷತ್ ಕಲಾಪದಲ್ಲಿ ಶಾಸಕರು, ಸಚಿವರ ಅಸಮಾಧಾನ

ಕೆ.ಸಿ. ವ್ಯಾಲಿ ಯೋಜನೆಗೆ ಜಲಮಂಡಳಿ ಅಸಹಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿಯ ಕೊಳಚೆ ನೀರನ್ನು ಸಂಸ್ಕರಿಸಿ ಕೋಲಾರ ಜಿಲ್ಲೆಯ ಕೆರೆಗಳಿಗೆ ಹರಿಸುವ ಕೋರಮಂಗಲ–ಚಲ್ಲಘಟ್ಟ (ಕೆ.ಸಿ.) ವ್ಯಾಲಿ ಯೋಜನೆಗೆ ಬೆಂಗಳೂರು ಜಲಂಮಡಳಿ ಸಹಕಾರ ನೀಡುತ್ತಿಲ್ಲ ಎಂದು ಬಿಜೆಪಿ ಸದಸ್ಯ ವೈ.ಎ. ನಾರಾಯಣಸ್ವಾಮಿ ವಿಧಾನ ಪರಿಷತ್ತಿನಲ್ಲಿ ಮಂಗಳವಾರ ಆರೋಪಿಸಿದರು.

ನಿಯಮ 330ರ ಅಡಿಯಲ್ಲಿ ವಿಷಯ ಪ್ರಸ್ತಾಪಿಸಿದ ನಾರಾಯಣ ಸ್ವಾಮಿ, ‘ಸಣ್ಣ ನೀರಾವರಿ ಇಲಾಖೆ ಸರಿಯಾಗಿ ಕೆಲಸ ಮಾಡುತ್ತಿದೆ. ಆದರೆ, ಜಲಮಂಡಳಿ ಭಂಡ ಬಿದ್ದಿದೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು. ನಂತರ ಉತ್ತರ ನೀಡಿದ ಸಣ್ಣ ನೀರಾವರಿ ಸಚಿವ ಜೆ.ಸಿ. ಮಾಧುಸ್ವಾಮಿ ಕೂಡ ಜಲಮಂಡಳಿಯಿಂದ ಅಗತ್ಯ ಸಹಕಾರ ದೊರೆಯುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ಕೆ.ಸಿ. ವ್ಯಾಲಿ ಯೋಜನೆಗೆ ಈ ಬಜೆಟ್‌ನಲ್ಲೂ ₹ 500 ಕೋಟಿ ಒದಗಿಸಿರುವುದು ಸ್ವಾಗತಾರ್ಹ. ಮೊದಲ ಹಂತದಲ್ಲಿ ನಿತ್ಯ 400 ದಶಲಕ್ಷ ಲೀಟರ್ ನೀರನ್ನು ಹರಿಸಿ, ಕೋಲಾರ ಜಿಲ್ಲೆಯ 126 ಕೆರೆಗಳನ್ನು ಭರ್ತಿ ಮಾಡಲು ಯೋಜನೆ ರೂಪಿಸಲಾಗಿತ್ತು. ಆದರೆ, 83 ಕೆರೆಗಳಿಗೆ ಮಾತ್ರ ನೀರು ಹರಿದಿದೆ. ಇನ್ನೂ 43 ಕೆರೆಗಳಿಗೆ ನೀರು ಬರಬೇಕಿದೆ. ಜಲಮಂಡಳಿ ಸರಿಯಾಗಿ ಸಹಕಾರ ನೀಡದಿರುವುದೇ ಕಾರಣ’ ಎಂದು ನಾರಾಯಣಸ್ವಾಮಿ ದೂರಿದರು.

‘ಬೆಂಗಳೂರಿನ ಜನರು ಬಳಸಿ ಬಿಟ್ಟಿರುವ ಕೊಳಚೆ ನೀರನ್ನು ಸಂಸ್ಕರಿಸಿ ನಮಗೆ ನೀಡಲಾಗುತ್ತಿದೆ. ಅದರಲ್ಲೂ ಈ ರೀತಿ ಮಾಡುವುದು ಸರಿಯೆ? 13 ತಿಂಗಳಿನಿಂದಲೂ 292 ದಶಲಕ್ಷ ಲೀಟರ್ ನೀರು ಮಾತ್ರ ಹರಿಯುತ್ತಿದೆ. ಎಲ್ಲ ಕೆರೆಗಳು ಭರ್ತಿ ಆಗುವುದು ಯಾವಾಗ’ ಎಂದು ಪ್ರಶ್ನಿಸಿದರು.

ಉತ್ತರ ನೀಡಿದ ಸಚಿವ ಮಾಧುಸ್ವಾಮಿ, ‘ಸದ್ಯ ಕೆ.ಸಿ. ವ್ಯಾಲಿ ಯೋಜನೆಯ ಕಾಲುವೆಯಲ್ಲಿ 300 ದಶಲಕ್ಷ ಲೀಟರ್ ನೀರು ಮಾತ್ರ ಹರಿಯುತ್ತಿದೆ. ಆದರೆ, ಜಲಮಂಡಳಿಯು 382 ದಶಲಕ್ಷ ಲೀಟರ್ ನೀರು ಹರಿಯುತ್ತಿದೆ ಎಂದು ಹೇಳುತ್ತಿದೆ. ಮಾರ್ಗ ಮಧ್ಯದಲ್ಲಿ ರೈತರೂ ನೀರು ಬಳಕೆ ಮಾಡುತ್ತಿದ್ದಾರೆ. ಇದರಿಂದಾಗಿ ಎಲ್ಲ ಕೆರೆಗಳನ್ನೂ ಭರ್ತಿ ಮಾಡಲು ಸಾಧ್ಯವಾಗಿಲ್ಲ’ ಎಂದರು.

ಯೋಜನೆಯಡಿ ಪೂರ್ಣ ಪ್ರಮಾಣದಲ್ಲಿ ಸಂಸ್ಕರಿಸಿದ ನೀರನ್ನು ಕೋಲಾರ ಜಿಲ್ಲೆಯ ಕೆರೆಗಳಿಗೆ ಹರಿಸುವ ಸಂಬಂಧ ಶೀಘ್ರದಲ್ಲಿ ಸಭೆ ನಡೆಸಲಾಗುವುದು. ಶಾಸಕರು, ಅಧಿಕಾರಿಗಳ ಜತೆ ಚರ್ಚಿಸಿ ಯೋಜನೆಗೆ ವೇಗ ನೀಡಲಾಗುವುದು ಎಂದು ಭರವಸೆ ನೀಡಿದರು.

13ರಂದು ‘ಶಿವಮೊಗ್ಗ ಚಲೋ’: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ಬಿಜೆಪಿ ಸರ್ಕಾರ ಅಧಿಕಾರ ದುರ್ಬಳಕೆ ಮಾಡಿಕೊಂಡು ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರ ಮೇಲೆ ಸುಳ್ಳು ಕೇಸು ಹಾಕಿಸಿ, ದೌರ್ಜನ್ಯ ನಡೆಸುತ್ತಿದೆ. ಇದನ್ನು ಖಂಡಿಸಿ ಇದೇ 13ರಂದು ‘ಶಿವಮೊಗ್ಗ ಚಲೋ’ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ" ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಜೊತೆ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ‘ಕೊರೊನಾ ಹಾಗೂ ನಂತರದ ಸಮಯದಲ್ಲಿ ಬಿಜೆಪಿ ನಾಯಕರು ಶಾಂತಿಭಂಗದ ಹೇಳಿಕೆ ನೀಡಿದ್ದರೂ ಸರ್ಕಾರ ಯಾರ ಮೇಲೂ ಕೇಸು ದಾಖಲಿಸಲಿಲ್ಲ. ಆಗಲೂ ಅಧಿಕಾರ ದುರ್ಬಳಕೆ ಮಾಡಿಕೊಂಡು ಸರ್ಕಾರದ ಪದಾರ್ಥವನ್ನು ತಮ್ಮ ಪದಾರ್ಥ ಎಂಬಂತೆ ಹಂಚಿದ್ದನ್ನು ಬಯಲು ಮಾಡಿದರೂ ಕ್ರಮ ಕೈಗೊಳ್ಳಲಿಲ್ಲ’ ಎಂದರು.

‘ಬಿಜೆಪಿ ಸರ್ಕಾರದ ಈ ನಡೆಯ ವಿರುದ್ಧ ಪ್ರತಿಭಟನೆಗೆ ನಾವು ನಿರ್ಧರಿಸಿದ್ದೇವೆ. ಈ ಬಗ್ಗೆ ಸದನದಲ್ಲಿ ಹಾಗೂ ಇತರೆ ಕಡೆಗಳಲ್ಲಿ ಚರ್ಚೆ ಮಾಡಿದ್ದೇವೆ. ಈ ಮಧ್ಯೆ, ಪಕ್ಷದ ಶಾಸಕ ಬಿ.ಕೆ. ಸಂಗಮೇಶ್ವರ್ ಮತ್ತು ಅವರ ಕುಟುಂಬ ಸದಸ್ಯರು ಹಾಗೂ ಕಾರ್ಯಕರ್ತರ ಮೇಲೆ ಸುಳ್ಳು ಕೇಸು ಹಾಕಲಾಗಿದೆ. ಅವರನ್ನು ಬಿಜೆಪಿಗೆ ಸೆಳೆಯಲು ಒತ್ತಡ ಹೇರಿದ್ದರು. ಅವರು ಆಪರೇಷನ್ ಕಮಲಕ್ಕೆ ಬಲಿಯಾಗಲಿಲ್ಲ ಎಂಬ ಕಾರಣಕ್ಕೆ ಕಿರುಕುಳ ನೀಡಲಾಗುತ್ತಿದೆ’ ಎಂದೂ ಆರೋಪಿಸಿದರು.

‘ಶಿವಮೊಗ್ಗ ಜಿಲ್ಲೆಯಲ್ಲಿ ಒಬ್ಬ ಕಾಂಗ್ರೆಸ್ ಶಾಸಕ ಇದ್ದಾನೆ ಎಂದು ಪೊಲೀಸರ ಕೈಯಲ್ಲಿ ಎಫ್‌ಐಆರ್ ಹಾಕಿಸಿ, ತೊಂದರೆ ನೀಡುತ್ತಿದ್ದಾರೆ. ತಮಗೆ ಆಗುತ್ತಿರುವ ಅನ್ಯಾಯದ ವಿರುದ್ಧ ಮಾತನಾಡಲು ಅವಕಾಶ ಕೊಡಿ ಎಂದು ಕೇಳಿದರೂ ಅವಕಾಶ ನೀಡಲಿಲ್ಲ. ಆಗ ನೋವಿನಿಂದ ತಮ್ಮ ಅಂಗಿ ಬಿಚ್ಚಿ, ಮೈಮೇಲಾಗಿರುವ ಗಾಯ ತೋರಿಸಲು ಮುಂದಾದಾಗ, ಅಸಭ್ಯ ವರ್ತನೆ ಎಂದು ಹೇಳಿ ಅವರನ್ನು ವಿಧಾನಸಭೆ ಕಲಾಪದಿಂದ ಅಮಾನತು ಮಾಡಲಾಗಿದೆ. ಆ ಮೂಲಕ ಅವರ ಹಕ್ಕಿಗೆ ಧಕ್ಕೆ ತರಲಾಗಿದೆ’ ಎಂದರು.

ಅಂಗವಿಕಲ ಮಗು ಕೊಂದ ಅಜ್ಜಿ, ಮುತ್ತಜ್ಜಿ

ಪ್ರಜಾವಾಣಿ ವಾರ್ತೆ

ಕನಕಪುರ: ಯಡಮಾರನಹಳ್ಳಿ ಗ್ರಾಮದಲ್ಲಿ ಸೋಮವಾರ ಎರಡು ವರ್ಷದ ಅಂಗವಿಕಲ ಹೆಣ್ಣು ಮಗುವೊಂದನ್ನು ಅಜ್ಜಿ ಮತ್ತು ಮುತ್ತಜ್ಜಿ ಪಾಳು ಬಾವಿಗೆ ಬಿಸಾಡಿ ಕೊಲೆ ಮಾಡಿದ್ದಾರೆ.

ತಾಲ್ಲೂಕಿನ ಉಯ್ಯಂಬಳ್ಳಿ ಹೋಬಳಿ ಮರಳೇಬೇಕುಪ್ಪೆ ಗ್ರಾಮದ ಶಂಕರ್ ಮತ್ತು ಮಾನಸ ಅವರ ಮಗು ಮಹಾದೇವಿ ಕೊಲೆಯಾದ ದುರ್ದೈವಿ. ಶಂಕರ್ ಅವರ ತಾಯಿ ರತ್ನಮ್ಮ ಮತ್ತು ಅಜ್ಜಿ ಭದ್ರಮ್ಮ ಮಗುವನ್ನು ಕೊಲೆ ಮಾಡಿರುವ ಆರೋಪಿಗಳು.

ಶಂಕರ್ ಮತ್ತು ಮಾನಸ ಅವರಿಗೆ ಹೆಣ್ಣು ಮಗು ಹುಟ್ಟುವಾಗಲೇ ಸೊಂಟದ ಕೆಳಗಿನ ಭಾಗ ಸ್ವಾಧೀನ ಕಳೆದುಕೊಂಡಿತ್ತು. ಜತೆಗೆ ಮಾತು ಬರುತ್ತಿರಲಿಲ್ಲ. ಗಂಡ ಹೆಂಡತಿ ಇಬ್ಬರೂ ಜೀವನೋಪಾಯಕ್ಕಾಗಿ ಹಾರೋಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಕೆಲಸ ಮಾಡಿಕೊಂಡಿದ್ದು, ಮಗುವನ್ನು ತಾಯಿ ರತ್ನಮ್ಮ ಜತೆಯಲ್ಲಿ ಬಿಟ್ಟಿದ್ದರು.

ಮಗುವಿನ ಭವಿಷ್ಯ ತುಂಬಾ ಕಷ್ಟವಾಗುತ್ತದೆ. ಬಡತನದಲ್ಲಿರುವ ಮಗನಿಗೆ ಮುಂದೆ ಆಸ್ಪತ್ರೆ ಮತ್ತಿತರರ ಖರ್ಚುಗಳಿಂದ ತೊಂದರೆ ಆಗಬಹುದು ಎಂದು ಭಾವಿಸಿ ರತ್ನಮ್ಮ ತನ್ನ ತಾಯಿ ಭದ್ರಮ್ಮ ಜತೆ ಸೇರಿ ಯಾರಿಗೂ ತಿಳಿಯದಂತೆ ಯಡಮಾರನಹಳ್ಳಿ ಬಳಿ ಇರುವ ಮಹದೇಶ್ವರ ದೇವಸ್ಥಾನದ ಪಕ್ಕದಲ್ಲಿನ ಪಾಳುಬಾವಿಗೆ ಬಿಸಾಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಂಗಳವಾರ ದೇವಸ್ಥಾನದ ಪೂಜೆಗೆ ಹೋದ ಅರ್ಚಕ ಪಾಳು ಬಾವಿಯಲ್ಲಿ ಮಗುವಿನ ಶವ ನೋಡಿ ಪೊಲೀಸರಿಗೆ ತಿಳಿಸಿದ್ದಾರೆ. ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ನೀರಿನಲ್ಲಿ ತೇಲುತ್ತಿದ್ದ ಮಗುವನ್ನು ಹೊರ ತೆಗೆದರು. ಸ್ಥಳೀಯರು ನೀಡಿದ ಮಾಹಿತಿ ಮೇರೆಗೆ ಪೊಲೀಸರು ಮಗುವಿನ ಪೋಷಕರು, ಅಜ್ಜಿ, ಮುತ್ತಜ್ಜಿಯನ್ನು ಠಾಣೆಗೆ ಕರೆತಂದು ವಿಚಾರಣೆ ನಡೆಸಿದರು. ಮಗುವನ್ನು ತಾವೇ ಕೊಂದಿರುವುದಾಗಿ ರತ್ನಮ್ಮ ಮತ್ತು ಭದ್ರಮ್ಮ ಒಪ್ಪಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ವೀರಗಾಸೆ ಕಲಾವಿದ ಎಂ.ಆರ್.ಬಸಪ್ಪ ಅವರಿಗೆ ಜಾನಪದ ವಿಶ್ವವಿದ್ಯಾಲಯದ ವತಿಯಿಂದ ‘ಗೌರವ ಡಾಕ್ಟರೇಟ್’ ಪ್ರದಾನ ಮಾಡಲಾಯಿತು. ಕುಲಸಚಿವ ಪ್ರೊ.ಕೆ.ಎನ್.ಗಂಗಾನಾಯಕ್, ಕುಲಪತಿ ಪ್ರೊ.ಡಿ.ಬಿ.ನಾಯಕ, ಕುಲಸಚಿವ (ಮೌಲ್ಯಮಾಪನ) ಪ್ರೊ.ಎನ್.ಎಂ.ಸಾಲಿ, ಡಾ.ಆರ್.ಬಾಲಸುಬ್ರಹ್ಮಣ್ಯಂ ಇದ್ದಾರೆ

ಜಾನಪದ ವಿ.ವಿ 5ನೇ ಘಟಿಕೋತ್ಸವ

ರೈತನ ಮಗಳಿಗೆ ಚಿನ್ನದ ಪದಕ

ಪ್ರಜಾವಾಣಿ ವಾರ್ತೆ

ಹಾವೇರಿ: ‘ನಮಗಿರುವುದು ಒಂದೇ ಎಕರೆ ಕೃಷಿ ಭೂಮಿ. ಹೀಗಾಗಿ ನನ್ನ ತಂದೆ ರೈತನಾಗಿ ಮತ್ತು ಕೃಷಿ ಕೂಲಿ ಕಾರ್ಮಿಕನಾಗಿ ದುಡಿಯುತ್ತಾರೆ. ತಂದೆ–ತಾಯಿಯ ಪರಿಶ್ರಮ ಮತ್ತು ತ್ಯಾಗದಿಂದ ಉನ್ನತ ಶಿಕ್ಷಣ ಪಡೆದು, ಚಿನ್ನದ ಪದಕ ಪಡೆಯಲು ಸಾಧ್ಯವಾಗಿದೆ’ ಎಂದು ಜಾನಪದ ವಿಶ್ವವಿದ್ಯಾಲಯದಲ್ಲಿ ಚಿನ್ನದ ಪದಕ ಪಡೆದ ವಿದ್ಯಾರ್ಥಿನಿ ರೂಪಾ ಮೂಡೇರ ಸಂತಸ ಹಂಚಿಕೊಂಡರು.

ಶಿಗ್ಗಾವಿ ತಾಲ್ಲೂಕು ಗೊಟಗೋಡಿಯಲ್ಲಿರುವ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ 5ನೇ ಘಟಿಕೋತ್ಸವದಲ್ಲಿ ‘ಜನಪದ ಸಾಹಿತ್ಯ’ ವಿಭಾಗದಲ್ಲಿ ಚಿನ್ನದ ಪದಕ ಸ್ವೀಕರಿಸಿದ ಸಂದರ್ಭ ಅವರು ‘ಪ್ರಜಾವಾಣಿ’ಯೊಂದಿಗೆ ಮಾತನಾಡಿದರು.

‘ಬ್ಯಾಡಗಿ ತಾಲ್ಲೂಕು ಚಿಕ್ಕಳ್ಳಿಯ ರೈತ ಕುಟುಂಬ ನಮ್ಮದು. ಚಿಕ್ಕಪ್ಪ ಸತೀಶ ಮೂಡೇರ ಅವರ ಪ್ರೇರಣೆಯೇ ಎಂ.ಎ. ಮಾಡಲು ಕಾರಣ. ಇದೇ ವಿ.ವಿ.ಯಲ್ಲಿ ಈಚೆಗೆ ನಡೆದ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣಳಾಗಿ, ಪಿಎಚ್.ಡಿಗೆ ದಾಖಲಾಗಿದ್ದೇನೆ. ದೇಸಿ ಸಂಪ್ರದಾಯವನ್ನು ಉಳಿಸಿ–ಬೆಳೆಸಬೇಕು ಎಂಬ ಅಭಿಲಾಷೆ ನನ್ನದು’ ಎಂದರು.

ಎರಡು ಚಿನ್ನದ ಪದಕಗಳನ್ನು ಪಡೆದ ಹುಸೇನ್‌ಸಾಬ್ ಪಿ. ಮಾತನಾಡಿ, ‘ಗಡಿನಾಡು ಬಳ್ಳಾರಿಯಿಂದ 20 ವರ್ಷಗಳ ಹಿಂದೆ ಬೆಂಗಳೂರಿಗೆ ನನ್ನ ಕುಟುಂಬ ಗುಳೇ ಹೋಗಿತ್ತು. ಇಂದಿಗೂ ಅಲ್ಲಿಯೇ ಬದುಕು ಕಟ್ಟಿಕೊಂಡಿದ್ದೇವೆ. ತೆಲುಗು ನಮ್ಮ ಮಾತೃಭಾಷೆ. ಕಡು ಬಡತನದಲ್ಲೇ ಬೆಳೆದ ನಾನು ಪರಿಶ್ರಮದಿಂದ ‘ಜನಪದ ಸಾಹಿತ್ಯ’ದಲ್ಲಿ ಸ್ನಾತಕೋತ್ತರ ಪದವಿ ಪಡೆದು, ಚಿನ್ನದ ಪದಕ ಗಳಿಸಿರುವುದು ಹೆಮ್ಮೆ ಎನಿಸಿದೆ. ಪೂರ್ವಿಕರು ಕಟ್ಟಿಕೊಟ್ಟ ಜ್ಞಾನ, ಕಲೆಯನ್ನು ಮುಂದಿನ ಪೀಳಿಗೆಗೂ ತಿಳಿಸುವ ಹಂಬಲ ನನ್ನದು’ ಎಂದರು.

ಗೌರವ ಡಾಕ್ಟರೇಟ್: ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕು ಮಾಳೇನಹಳ್ಳಿಯ ವೀರಗಾಸೆ ಕಲಾವಿದ ಎಂ.ಆರ್.ಬಸಪ್ಪ ಅವರಿಗೆ ಜಾನಪದ ವಿ.ವಿ.ಯಿಂದ ‘ಗೌರವ ಡಾಕ್ಟರೇಟ್’ ಪ್ರದಾನ ಮಾಡಲಾಯಿತು. ಇವರು ರಾಜ್ಯದಾದ್ಯಂತ 2 ಸಾವಿರಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡಿದ್ದು, 60ಕ್ಕೂ ಹೆಚ್ಚು ಮೇಳಗಳನ್ನು ಕಟ್ಟಿ ಬೆಳೆಸಿದ್ದಾರೆ.

ಮೈಸೂರಿನ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥಾಪಕ ಡಾ. ಆರ್. ಬಾಲಸುಬ್ರಹ್ಮಣ್ಯಂ ‘ಘಟಿಕೋತ್ಸವ ಭಾಷಣ’ ಮಾಡಿದರು. 789 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಜಾನಪದ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಡಿ.ಬಿ. ನಾಯಕ, ಕುಲಸಚಿವರಾದ ಪ್ರೊ. ಎನ್.ಎಂ.ಸಾಲಿ, ಪ್ರೊ.ಕೆ.ಎನ್. ಗಂಗಾನಾಯಕ್, ಸಿಂಡಿಕೇಟ್ ಸದಸ್ಯರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

‘ಜನಪದ ಸಾಹಿತ್ಯ’ ವಿಭಾಗದಲ್ಲಿ ಚಿನ್ನದ ಪದಕ ಪಡೆದ ಹುಸೇನ್‌ಸಾಬ್ ಪಿ ಮತ್ತು ರೂಪಾ ಮೂಡೇರ

13ಕ್ಕೆ ಒಕ್ಕಲಿಗರ ಸಮಾವೇಶ

ಪ್ರಜಾವಾಣಿ ವಾರ್ತೆ

ಕೋಲಾರ: ‘ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾಲ್ಲೂಕಿನ ನಗರೂರು ಗ್ರಾಮದಲ್ಲಿ ಮಾರ್ಚ್ 13ರಂದು ಸಮುದಾಯದ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗಿದೆ’ ಎಂದು ಅಖಿಲ ಕರ್ನಾಟಕ ಒಕ್ಕಲಿಗರ ಒಕ್ಕೂಟದ ಜಿಲ್ಲಾ ಅಧ್ಯಕ್ಷ ವೆಂಕಟಾಚಲ ತಿಳಿಸಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ‘ನರಗೂರು ಗ್ರಾಮದ ಬಿಜಿಎಸ್ ವರ್ಲ್ಡ್ ಸ್ಕೂಲ್ ಆವರಣದಲ್ಲಿ ಸಮಾವೇಶ ನಡೆಯಲಿದೆ. ಅಂದು ಬೆಳಿಗ್ಗೆ ಜಿಲ್ಲಾ ಕೇಂದ್ರದ ಒಕ್ಕಲಿಗರ ವಿದ್ಯಾರ್ಥಿ ನಿಲಯದಿಂದ ಸಮಾವೇಶಕ್ಕೆ ಸಮುದಾಯದವರನ್ನು ಬಸ್‌ಗಳಲ್ಲಿ ಕರೆದೊಯ್ಯಲಾಗುತ್ತದೆ. ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಬರಬೇಕು’ ಎಂದು ಮನವಿ ಮಾಡಿದರು.

‘ಉತ್ತರ ಕರ್ನಾಟಕ ಭಾಗದಲ್ಲಿ ಒಕ್ಕಲಿಗ ಸಮುದಾಯದ ಜನಸಂಖ್ಯೆ ಸುಮಾರು 12 ಲಕ್ಷವಿದೆ. ಜನಾಂಗದವರಿಗೆ 3ಎ ಜಾತಿ ಪ್ರಮಾಣಪತ್ರವಿಲ್ಲದ ಕಾರಣ ತೊಂದರೆಯಾಗಿದೆ. ಲಿಂಗಾಯತ ಸಮುದಾಯದ ಜಾತಿ ಪ್ರಮಾಣಪತ್ರ ನೀಡುತ್ತಿರುವುದರಿಂದ ಒಕ್ಕಲಿಗ ಸಮುದಾಯದವರಿಗೆ ಸಮಸ್ಯೆಯಾಗುತ್ತಿದೆ. ಈ ಸಮಸ್ಯೆ ನಿವಾರಣೆಗೆ ಅಖಿಲ ಕರ್ನಾಟಕ ಒಕ್ಕಲಿಗರ ಒಕ್ಕೂಟ ಆರಂಭಿಸಲಾಗಿದೆ’ ಎಂದರು.

6 ಕಡೆ ಸಮಾವೇಶ: ‘ರಾಜ್ಯದಲ್ಲಿ 6 ಕಡೆ ಒಕ್ಕಲಿಗರ ಬೃಹತ್ ಸಮಾವೇಶ ನಡೆಲಾಗುತ್ತದೆ. ಮೊದಲ ಹಂತದಲ್ಲಿ ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಬೆಂಗಳೂರು ನಗರ, ಗ್ರಾಮಾಂತರ, ತುಮಕೂರು ಜಿಲ್ಲೆ ಒಳಗೊಂಡಂತೆ ಸಮಾವೇಶ ನಡೆಸಲಾಗುತ್ತದೆ. 2ನೇ ಹಂತದಲ್ಲಿ ಹೈದರಾಬಾದ್ ಕರ್ನಾಟಕ, 3ನೇ ಹಂತದಲ್ಲಿ ಮುಂಬೈ ಕರ್ನಾಟಕ, 4ನೇ ಹಂತದಲ್ಲಿ ಉತ್ತರ ಕರ್ನಾಟಕ, 5ನೇ ಹಂತದಲ್ಲಿ ಮಧ್ಯ ಕರ್ನಾಟಕದಲ್ಲಿ ಸಮಾವೇಶ ನಡೆಯಲಿದೆ. ಅಂತಿಮವಾಗಿ ಮೈಸೂರಿನಲ್ಲಿ ಬೃಹತ್ ಸಮಾವೇಶ ನಡೆಸಲಾಗುತ್ತದೆ’ ಎಂದರು.

‘ರಾಜ್ಯ ಬಜೆಟ್‌ನಲ್ಲಿ ಒಕ್ಕಲಿಗರ ಪ್ರಾಧಿಕಾರಕ್ಕೆ ₹ 500 ಕೋಟಿ ಅನುದಾನ ಮೀಸಲಿಟ್ಟಿರುವುದು ಒಳ್ಳೆಯ ಬೆಳವಣಿಗೆ. ಉಳುಮೆ ಮಾಡುವವರೆಲ್ಲರೂ ಒಕ್ಕಲಿಗರು. ಜನಾಂಗದವರು ಸ್ವಾಭಿಮಾನದಿಂದ ಬದುಕುತ್ತಿದ್ದು, ಸಮುದಾಯದ ಸಮಸ್ಯೆಗಳ ಪರಿಹಾರಕ್ಕೆ ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರಬೇಕು’ ಎಂದು ಒಕ್ಕೂಟದ ಕಾನೂನು ಸಲಹೆಗಾರ ಕೆ.ವಿ.ಶಂಕರಪ್ಪ ಹೇಳಿದರು.

ಒಕ್ಕೂಟದ ರಾಜ್ಯ ಹಿರಿಯ ಉಪಾಧ್ಯಕ್ಷ ಎಚ್.ರಾಮಚಂದ್ರಪ್ಪ, ಸಂಘಟನಾ ಕಾರ್ಯದರ್ಶಿ ಬಿ.ಆರ್. ಲಕ್ಷ್ಮಣ್, ನಿರ್ದೇಶಕ ನಾಗರಾಜ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಶಿವಕುಮಾರ್, ಸಂಘಟನಾ ಕಾರ್ಯದರ್ಶಿ ಲಕ್ಷ್ಮಣಗೌಡ, ಉಪಾಧ್ಯಕ್ಷ ಎನ್.ಎಸ್.ಪ್ರವೀಣ್‌ಗೌಡ, ನಿರ್ದೇಶಕರಾದ ಎಸ್.ಬೈಚಪ್ಪ, ಮುತ್ತುರಾಜ್, ಪುನಿತ್, ಖಜಾಂಚಿ ವೀರವೆಂಕಟಪ್ಪ ಹಾಜರಿದ್ದರು.

ಸ್ಕ್ಯಾನಿಂಗ್ ಮಾಡಿಸಲು ಹೋಗುವಾಗ ಹೆರಿಗೆ ನೋವು

ಪಾರ್ಕ್‌ನಲ್ಲಿ ಹೆರಿಗೆ: ನೆರವಿಗೆ ಬಂದ ಶಿಕ್ಷಕಿಗೆ ಶ್ಲಾಘನೆ

ಪ್ರಜಾವಾಣಿ ವಾರ್ತೆ

ಮೈಸೂರು: ಕೊಡಗಿನ ಬುಡಕಟ್ಟು ಸಮುದಾಯದ ಮಲ್ಲಿಗೆ ಎಂಬುವವರು, ನಗರದ ಪೀಪಲ್ಸ್ ಪಾರ್ಕ್‌ನಲ್ಲಿ ಮಂಗಳವಾರ ಹೆಣ್ಣುಮಗುವಿಗೆ ಜನ್ಮನೀಡಿದ್ದಾರೆ.

ಸಹಜ ಹೆರಿಗೆಯಾಗಿದ್ದು, ಈ ಸಂದರ್ಭದಲ್ಲಿ ನೆರವಿಗೆ ಧಾವಿಸಿದ ದೈಹಿಕ ಶಿಕ್ಷಣ ಶಿಕ್ಷಕಿ ಶೋಭಾಕುಮಾರಿ ಅವರ ಕಾಳಜಿಗೆ ಶ್ಲಾಘನೆ ವ್ಯಕ್ತವಾಗಿದೆ.

ಕೊಡಗು ಜಿಲ್ಲೆಯ ಗೋಣಿಕೊಪ್ಪಲು ಬಳಿಯ ಅರವತ್ತಕ್ಲೊಲುವಿನ ಮನೆಯೊಂದರಲ್ಲಿ ತನ್ನ ತಾಯಿಯೊಂದಿಗೆ ಕೆಲಸ ಮಾಡಿಕೊಂಡಿದ್ದ ಮಲ್ಲಿಗೆ, ಸ್ಕ್ಯಾನಿಂಗ್ ಮಾಡಿಸಲಿಕ್ಕಾಗಿ ಮಂಗಳವಾರ ಬೆಳಿಗ್ಗೆ ಮೈಸೂರಿಗೆ ಬಂದಿದ್ದರು. ಬಸ್ ಇಳಿದು, ನಡೆದು ಹೋಗುತ್ತಿದ್ದಾಗ ಹೆರಿಗೆ ನೋವು ಕಾಣಿಸಿಕೊಂಡಿದೆ. ತಕ್ಷಣವೇ ಸಮೀಪದಲ್ಲಿದ್ದ ಪೀಪಲ್ಸ್ ಪಾರ್ಕ್‌ಗೆ ಹೋಗಿ, ಒಂದೆಡೆ ಕುಳಿತಿದ್ದಾರೆ. ನೋವು ಹೆಚ್ಚಾಗಿ, ನರಳಾಡುತ್ತಿರುವಾಗ ಸುತ್ತ-ಮುತ್ತಲಿನ ಜನ ಜಮಾಯಿಸಿದ್ದಾರೆ.

ಇದೇ ಮಾರ್ಗವಾಗಿ, ಕರ್ತವ್ಯಕ್ಕೆ ತೆರಳುತ್ತಿದ್ದ ನಂಜನಗೂಡು ತಾಲ್ಲೂಕು ನವಿಲೂರು ಗ್ರಾಮದ ಸರ್ಕಾರಿ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕಿ ಶೋಭಾಕುಮಾರಿ, ಜನ ನೆರೆದಿರುವುದನ್ನು ಗಮನಿಸಿದ್ದಾರೆ. ತಕ್ಷಣವೇ ಮಹಿಳೆಯ ನೆರವಿಗೆ ತೆರಳಿದ್ದಾರೆ. ಇದರೊಂದಿಗೆ, ಸ್ಥಳದಲ್ಲಿದ್ದವರೊಬ್ಬರು ಮೊಬೈಲ್ ಮೂಲಕ ವೈದ್ಯರನ್ನು ಸಂಪರ್ಕಿಸಿ ವಿಷಯ ಮುಟ್ಟಿಸಿದ್ದಾರೆ. ವೈದ್ಯರು ಮೊಬೈಲ್‌ನಲ್ಲಿ ನೀಡಿದ ಸೂಚನೆಯಂತೆ ಶೋಭಾಕುಮಾರಿ ಮಹಿಳೆಯ ಹೆರಿಗೆ ಮಾಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಮುಖ್ಯಾಂಶಗಳು
- ₹ 5 ಸಾವಿರ ನೆರವು
- ಶಿಕ್ಷಕಿ ಕಾರ್ಯಕ್ಕೆ ಮೆಚ್ಚುಗೆ
- ಮೊಬೈಲ್ ಮೂಲಕ ವೈದ್ಯರ ಸಲಹೆ

ಮೈಸೂರಿನ ಪೀಪಲ್ಸ್ ಪಾರ್ಕ್‌ನಲ್ಲಿ ಹೆಣ್ಣು ಮಗುವಿಗೆ ಜನ್ಮ ನೀಡಿದ ಮಲ್ಲಿಗೆ

ಮಹಿಳೆಯು ಹೆರಿಗೆ ನೋವಿನಿಂದ ನರಳಾಡುವಾಗ ಸ್ಥಳದಲ್ಲಿದ್ದ ಕೆಲವು ಮಹಿಳೆಯರು ನೆರವಿಗೆ ಮುಂದಾಗದೇ ಇದ್ದುದು ಮನಸ್ಸಿಗೆ ನೋವಾಯಿತು
ಶೋಭಾಕುಮಾರಿ, ದೈಹಿಕ ಶಿಕ್ಷಣ ಶಿಕ್ಷಕಿ

ಪತಿ ನನ್ನಿಂದ ದೂರವಾಗಿದ್ದಾರೆ. ಕೆಲಸ ಮಾಡಿಕೊಂಡು ಮಕ್ಕಳಿಬ್ಬರನ್ನು ಸಾಕುತ್ತಿರುವೆ
ಮಲ್ಲಿಗೆ, ಬಾಣಂತಿ

ತಾಯಿಯ ಗರ್ಭದಿಂದ ಹೊರ ಬಂದ ಮಗುವಿನ ಹೊಕ್ಕುಳ ಬಳ್ಳಿಯನ್ನು ಸಕಾಲಕ್ಕೆ ಕತ್ತರಿಸಲಾಗದೇ ಶಿಕ್ಷಕಿ ಪರದಾಡಿದ್ದಾರೆ. ಕೆಲ ಹೊತ್ತಿನ ಬಳಿಕ ಮಗುವಿನ ಹೊಕ್ಕುಳ ಬಳ್ಳಿ ತನ್ನಿಂದ ತಾನೇ ತಾಯಿಯ ಗರ್ಭದಿಂದ ಬೇರ್ಪಟ್ಟಿದೆ. ಆಂಬುಲೆನ್ಸ್ ಬಂದ ಬಳಿಕ ತಾಯಿ–ಮಗು ಇಬ್ಬರನ್ನೂ ಚೆಲುವಾಂಬಾ ಆಸ್ಪತ್ರೆಗೆ ದಾಖಲಿಸಲಾಯಿತು. ಇಬ್ಬರೂ ಆರೋಗ್ಯವಾಗಿದ್ದಾರೆ ಎಂದು ಆಸ್ಪತ್ರೆಯ ಆರ್‌ಎಂಒ ಡಾ.ರಾಜೇಂದ್ರ ತಿಳಿಸಿದ್ದಾರೆ.

ಮಲ್ಲಿಗೆಗೆ ಈಗಾಗಲೇ ಇಬ್ಬರು ಮಕ್ಕಳಿದ್ದಾರೆ (ಗಂಡು–ಹೆಣ್ಣು). ಹೆರಿಗೆಯಾಗಿರುವ ವಿಷಯ ತಿಳಿದ ಈಕೆಯ ಸಂಬಂಧಿಕರು ಆಸ್ಪತ್ರೆಗೆ ಬಂದಿದ್ದು, ಆರೈಕೆಯಲ್ಲಿ ನಿರತರಾಗಿದ್ದಾರೆ.

ಶಿಕ್ಷಕಿಯ ಮಾನವೀಯ ನಡೆಗೆ ಸ್ಥಳೀಯರು ಮೆಚ್ಚುಗೆ ವ್ಯಕ್ತಪಡಿಸಿದ್ದು, ಶಿಕ್ಷಕರ ಸಂಘದವರು ಶೋಭಾಕುಮಾರಿಯನ್ನು ಅಭಿನಂದಿಸಿದ್ದಾರೆ. ಇದರೊಂದಿಗೆ, ಚೆಲುವಾಂಬಾ ಆಸ್ಪತ್ರೆಗೆ ತೆರಳಿದ ಶಿಕ್ಷಕರು ಹಾಗೂ ನೌಕರರ ಸಂಘದ ಪದಾಧಿಕಾರಿಗಳು ಮಹಿಳೆಗೆ ₹ 5 ಸಾವಿರ ನಗದು ನೀಡಿ, ನೆರವಾಗಿದ್ದಾರೆ.

ಸುದ್ದಿ 2 ನಿಮಿಷ

ತ್ಯಾಜ್ಯ ಶಾಖದಿಂದ ವಿದ್ಯುತ್ ಉತ್ಪಾದನೆ

ಬೆಂಗಳೂರು: ನಗರದ ಜವಾಹರಲಾಲ್ ನೆಹರೂ ಸೆಂಟರ್ ಫಾರ್ ಅಡ್ವಾನ್ಸ್ಡ್ ಸೈಂಟಿಫಿಕ್ ರೀಸರ್ಚ್‌ನ (ಜೆಎನ್‌ಸಿಎಎಸ್‌ಆರ್) ಪ್ರಾಧ್ಯಾಪಕ ಕಾನಿಷ್ಕ ಬಿಶ್ವಾಸ್ ನೇತೃತ್ವದ ಸಂಶೋಧಕರ ತಂಡವು ತ್ಯಾಜ್ಯ ಶಾಖವನ್ನು ವಿದ್ಯುತ್ ಶಕ್ತಿಯನ್ನಾಗಿ ಪರಿವರ್ತಿಸಬಲ್ಲ ಪರಿಸರ ಸ್ನೇಹಿ ‘ಥರ್ಮೊ ಎಲೆಕ್ಟ್ರಿಕ್’ ತಂತ್ರಾಂಶ ಅಭಿವೃದ್ಧಿಪಡಿಸಿದೆ.

ವಿಶ್ವದ ಪ್ರತಿಷ್ಠಿತ ಜರ್ನಲ್‌ಗಳಲ್ಲಿ (ವಿಜ್ಞಾನಕ್ಕೆ ಸಂಬಂಧಿಸಿ) ಒಂದಾದ ‘ಸೈನ್ಸ್’ನಲ್ಲಿ ಈ ಸಂಶೋಧನೆಯ ಕುರಿತ ವರದಿ ಪ್ರಕಟವಾಗಿದೆ.

ಲ್ಯಾಪ್‌ಟಾಪ್‌ನಿಂದ ಉತ್ಪತ್ತಿಯಾಗುವ ಶಾಖವನ್ನು ಮೊಬೈಲ್ ಫೋನ್ ಚಾರ್ಜ್ ಮಾಡಲು, ಮೊಬೈಲ್‌ನಿಂದ ಉತ್ಪತ್ತಿಯಾಗುವ ಶಾಖವನ್ನು ಕೈಗಡಿಯಾರ ರೀಚಾರ್ಜ್ ಮಾಡಲು ಬಳಸಬಹುದು.

‘ನಾವು ಅಭಿವೃದ್ಧಿಪಡಿಸಿರುವ ತಂತ್ರಾಂಶದ ಬಗ್ಗೆ ರತನ್ ಟಾಟಾ ಒಡೆತನದ ಟಾಟಾ ಸ್ಟೀಲ್ಸ್ ಸಂಸ್ಥೆ ಆಸಕ್ತಿ ತೋರಿದೆ. ಉಕ್ಕಿನ ಘಟಕಗಳಲ್ಲಿ ಉತ್ಪತ್ತಿಯಾಗುವ ಅಪಾರ ಪ್ರಮಾಣದ ತ್ಯಾಜ್ಯ ಶಾಖವನ್ನು ವಿದ್ಯುತ್ ಶಕ್ತಿಯನ್ನಾಗಿ ಪರಿವರ್ತಿಸುವ ಸಲುವಾಗಿ ಈ ತಂತ್ರಾಂಶವನ್ನು ತನ್ನ ಘಟಕಗಳಲ್ಲಿ ಅಳವಡಿಸಿಕೊಳ್ಳಲು ಯೋಜನೆ ರೂಪಿಸಿದೆ’ ಎಂದು ಬಿಶ್ವಾಸ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಭಾರತೀಯ ವಿಜ್ಞಾನ ಮತ್ತು ಎಂಜಿನಿಯರಿಂಗ್ ಸಂಶೋಧನಾ ಮಂಡಳಿ (ಎಸ್‌ಇಆರ್‌ಬಿ), ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ (ಡಿಎಸ್‌ಟಿ), ರಸಾಯನವಿಜ್ಞಾನ ಘಟಕ (ಎನ್‌ಸಿಯು), ಇಂಟರ್‌ನ್ಯಾಷನಲ್ ಸೆಂಟರ್ ಫಾರ್ ಮೆಟೀರಿಯಲ್ಸ್ ಸೈನ್ಸ್ (ಐಸಿಎಂಎಸ್) ಹಾಗೂ ಜೆಎನ್‌ಸಿಎಎಸ್‌ಆರ್ ಸಂಸ್ಥೆಗಳು ಈ ಸಂಶೋಧನೆಗೆ ಆರ್ಥಿಕ ನೆರವು ನೀಡಿವೆ’ ಎಂದು ಪ್ರಕಟಣೆ ತಿಳಿಸಿದೆ.

ಶಿವರಾಮ ಕಾರಂತ ಬಡಾವಣೆ: ಮೂರು ಸಹಾಯ ಕೇಂದ್ರಗಳ ಸ್ಥಾಪನೆ

ಬೆಂಗಳೂರು: ಶಿವರಾಮ ಕಾರಂತ ಬಡಾವಣೆ ನಿರ್ಮಾಣಕ್ಕಾಗಿ ಭೂಸ್ವಾಧೀನ ಪಡಿಸಿಕೊಳ್ಳಲು ಅಧಿಸೂಚನೆ ಹೊರಡಿಸಿರುವ ಪ್ರದೇಶಗಳಲ್ಲಿ 2018ರ ಆ.3ಕ್ಕಿಂತ ಮುಂಚೆ ನಿರ್ಮಿಸಿರುವ ಕಟ್ಟಡಗಳ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಲು ಸುಪ್ರೀಂ ಕೋರ್ಟ್ ನೇಮಿಸಿರುವ ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ಸಮಿತಿ ನಾಗರಿಕರಿಂದ ದಾಖಲೆ ಸಂಗ್ರಹಕ್ಕಾಗಿ ಮತ್ತೆ ಮೂರು ಸಹಾಯ ಕೇಂದ್ರಗಳನ್ನು ಆರಂಭಿಸಲಿದೆ.

ಸೋಮಶೆಟ್ಟಿಹಳ್ಳಿಯ ಅಂಬೇಡ್ಕರ್ ಸಮುದಾಯ ಭವನ, ಬ್ಯಾಲಕೆರೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಸಿಂಗನಾಯಕನಹಳ್ಳಿಯ ಡಾ.ಅಂಬೇಡ್ಕರ್ ಸಮುದಾಯ ಭವನಗಳಲ್ಲಿ ಈ ಸಹಾಯಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ. ಇದೇ 15ರಿಂದ ಈ ಸಹಾಯ ಕೇಂದ್ರಗಳು ಆರಂಭವಾಗಲಿವೆ. ಈ ಕೇಂದ್ರಗಳು ಸರ್ಕಾರಿ ರಜಾದಿನಗಳನ್ನು ಹೊರತುಪಡಿಸಿ ಉಳಿದ ದಿನಗಳಲ್ಲಿ ಬೆಳಿಗ್ಗೆ 10.30ರಿಂದ ಸಂಜೆ 4.30ರವರೆಗೆ ಕಾರ್ಯಾಚರಿಸಲಿವೆ.

ಬಡಾವಣೆಗಾಗಿ ಅಧಿಸೂಚನೆ ಹೊರಡಿಸಲಾದ ಪ್ರದೇಶಗಳಲ್ಲಿ ಕಟ್ಟಡ ನಿರ್ಮಿಸಿಕೊಂಡಿರುವವರು ಈ ಸಹಾಯ ಕೇಂದ್ರಗಳಲ್ಲದೇ ಆನ್‌ಲೈನ್ ಪೋರ್ಟಲ್ (jcc-skl.in) ಮೂಲಕವೂ ದಾಖಲೆಗಳನ್ನು ಸಲ್ಲಿಸಬಹುದು ಎಂದು ಸಮಿತಿಯ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಮಿತಿಯು ಈಗಾಗಲೇ ಮೇಡಿ ಅಗ್ರಹಾರದ ಸರ್ಕಾರಿ ಉರ್ದು ಪ್ರಾಥಮಿಕ ಶಾಲೆಯಲ್ಲಿ ಸಹಾಯಕೇಂದ್ರವನ್ನು ಆರಂಭಿಸಿದೆ.

ಅಗತ್ಯ ಸೌಲಭ್ಯ ಒದಗಿಸಲು ಆಗ್ರಹ

ಸಮೀಕ್ಷೆಗಳಲ್ಲಿ ಆರೋಗ್ಯ, ಆರ್ಥಿಕ ಮಾಹಿತಿ ಕಲೆ ಹಾಕುವಂತೆ ಸೂಚಿಸಲಾಗಿದೆ. ಜನರು ಆರ್ಥಿಕ ಮಾಹಿತಿ ನೀಡಲು ನಿರಾಕರಿಸುತ್ತಾರೆ. ಅದನ್ನು ಕೈಬಿಡಬೇಕು

ಇ–ಸಮೀಕ್ಷೆ ನಡೆಸದಿರಲು ‘ಆಶಾ’ ತೀರ್ಮಾನ

ಬೆಂಗಳೂರು: ಮೊಬೈಲ್ ಫೋನ್, ಇಂಟರ್‌ನೆಟ್ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಸರ್ಕಾರ ಒದಗಿಸದ ಕಾರಣ ಆಶಾ ಕಾರ್ಯಕರ್ತೆಯರು ಆರೋಗ್ಯ ಸೇರಿದಂತೆ ವಿವಿಧ ಇಲಾಖೆಗಳಿಗೆ ಸಂಬಂಧಿಸಿದ ಇ–ಸಮೀಕ್ಷೆಗಳನ್ನು ನಡೆಸದಿರಲು ತೀರ್ಮಾನಿಸಿದ್ದಾರೆ.

ಈ ಸಂಬಂಧ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘವು ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕರಿಗೆ ಪತ್ರ ಬರೆದಿದೆ. ಸಾಂಕ್ರಾಮಿಕವಲ್ಲದ ರೋಗಗಳ ಸಮೀಕ್ಷೆ, 0–18 ವರ್ಷದ ಮಕ್ಕಳ ಮನೆ ಮನೆ ಸಮೀಕ್ಷೆ ಸೇರಿದಂತೆ ವಿವಿಧ ಸಮೀಕ್ಷೆಗಳಿಗೆ ಆಶಾ ಕಾರ್ಯಕರ್ತೆಯರನ್ನು ಬಳಸಿಕೊಳ್ಳಲಾಗುತ್ತಿದೆ. ಈ ಸಮೀಕ್ಷೆಗಳನ್ನು ಮೊಬೈಲ್ ಆ್ಯಪ್‌ಗಳ ನೆರವಿನಿಂದ ನಡೆಸಲು ಸೂಚಿಸಿ, ತರಬೇತಿ ನೀಡಲಾಗುತ್ತಿದೆ. ಎಲ್ಲ ಆಶಾ ಕಾರ್ಯಕರ್ತೆಯರ ಬಳಿ ಸ್ಮಾರ್ಟ್ ಫೋನ್‌ಗಳು ಇರುವುದಿಲ್ಲ. ಹಲವರಿಗೆ ಸ್ಮಾರ್ಟ್ ಫೋನ್‌ಗಳ ನಿರ್ವಹಣೆ ತಿಳಿದಿಲ್ಲ. ಕೋವಿಡ್‌ನಿಂದಾಗಿ ಈಗಾಗಲೇ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದು, ಹೊಸ ಮೊಬೈಲ್‌ಗಳನ್ನು ಖರೀದಿಸಲು ಸಾಧ್ಯವಿಲ್ಲ. ಹಾಗಾಗಿ, ಸಮೀಕ್ಷೆಗಳನ್ನು ಮಾಡದಿರಲು ನಿರ್ಧರಿಸಿದ್ದೇವೆ ಎಂದು ಸಂಘದ ರಾಜ್ಯ ಅಧ್ಯಕ್ಷ ಕೆ. ಸೋಮಶೇಖರ್ ಯಾದಗಿರಿ ಹಾಗೂ ರಾಜ್ಯ ಕಾರ್ಯದರ್ಶಿ ಡಿ. ನಾಗಲಕ್ಷ್ಮಿ ತಿಳಿಸಿದ್ದಾರೆ.

‘ಆಶಾ ಕಾರ್ಯಕರ್ತೆಯರಿಗೆ ಮೊಬೈಲ್, ಇಂಟರ್‌ನೆಟ್ ಒದಗಿಸಿದಲ್ಲಿ ಸಮೀಕ್ಷೆಗಳನ್ನು ನಡೆಸಲು ಸಾಧ್ಯವಾಗುತ್ತದೆ. ಮೊಬೈಲ್ ಮತ್ತು ಟ್ಯಾಬ್ ಬಳಸಲು ಬರದವರಿಗೆ ಪರ್ಯಾಯ ವ್ಯವಸ್ಥೆ ಮಾಡಬೇಕು. ಅಂತಹವರಿಗೆ ಲಿಖಿತ ರೂಪದಲ್ಲಿ ಸಮೀಕ್ಷೆ ನಡೆಸಲು ಅವಕಾಶ ನೀಡಬೇಕು. ಸಮೀಕ್ಷೆಗಳನ್ನು ನಡೆಸಲು ಸೂಕ್ತ ಸಂಭಾವನೆ ಹಾಗೂ ಸಮಯ ನೀಡಬೇಕು’ಎಂದು ಆಗ್ರಹಿಸಿದ್ದಾರೆ.

ಬುಧವಾರ, ಮಾರ್ಚ್ 10, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 69 | ಪುಟ 18
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ನಾವು ಬಳಸುವ ಸಾಮಾಜಿಕ ಜಾಲತಾಣಗಳಲ್ಲಿ ಸ್ಮಾರ್ಟ್‌ಫೋನ್‌ಗಳ ಬಗ್ಗೆ ಜಾಹೀರಾತುಗಳು ಬರುವುದು ಸಾಮಾನ್ಯ. ಅವುಗಳಿಂದ ಬಿಡುಗಡೆ ಹೇಗೆ?

ಆಳ-ಅಗಲ
ಆಹಾರ ಪೋಲು; ಹಸಿವು ನಿರ್ಮೂಲನೆಗೆ ಸವಾಲು

ನಟ ಯಶ್ ಪೋಷಕರೊಂದಿಗೆ ಗ್ರಾಮಸ್ಥರ ವಾಗ್ವಾದ 5

ಉತ್ತರಾಖಂಡ: ಮುಖ್ಯಮಂತ್ರಿ ಸ್ಥಾನಕ್ಕೆ ರಾವತ್ ರಾಜೀನಾಮೆ 10

ಸೆನ್ಸೆಕ್ಸ್	ನಿಫ್ಟಿ	₹/$
51,025 ▲	15,098 ▲	72.93 ▼

'ಅನೈತಿಕ 6 ಸಚಿವರ ಉತ್ತರ ಬೇಕಿಲ್ಲ': ಉಭಯ ಸದನಗಳಲ್ಲಿ ಕಾಂಗ್ರೆಸ್ ತಕರಾರು

'ಕೈ'ಪಟ್ಟು: ಸರ್ಕಾರಕ್ಕೆ ಇಕ್ಕಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಮ್ಮ ವಿರುದ್ಧ ಮಾನಹಾನಿಕರ ಸುದ್ದಿ, ವಿಡಿಯೊ ಪ್ರಕಟಿಸಬಾರದು' ಎಂದು ಕೋರಿ ಕೋರ್ಟ್‌ನಿಂದ ತಾತ್ಕಾಲಿಕ ತಡೆಯಾಜ್ಞೆ ಪಡೆದಿರುವ ಆರು ಸಚಿವರು ಹಾಗೂ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಮುಂದಾಗಿರುವ ಕಾಂಗ್ರೆಸ್ ನಾಯಕರು, 'ಅನೈತಿಕ ಸಚಿವರ ಉತ್ತರ ಬೇಕಿಲ್ಲ' ಎಂಬ ಘೋಷಣೆ ಮುಂದಿಟ್ಟು ವಿಧಾನ ಮಂಡಲದ ಉಭಯ ಸದನಗಳಲ್ಲೂ ಹೊಸ ಮಾದರಿಯ ಹೋರಾಟ ನಡೆಸಲು ಮುಂದಾಗಿದ್ದಾರೆ.

ಕಾಂಗ್ರೆಸ್‌ನ ಈ ಹೊಸ ಆಟ, ಆಡಳಿತಾರೂಢ ಬಿಜೆಪಿ ಸರ್ಕಾರವನ್ನು ಇಕ್ಕಟ್ಟಿಗೆ ದೂಡುವ ಸಾಧ್ಯತೆ ಇದ್ದು, ಸದನವನ್ನು ಹೇಗೆ ನಡೆಸುವುದೆಂಬ ಸಂಕಟವೂ ಶುರುವಾಗಿದೆ.

'ಲೈಂಗಿಕ ದೃಶ್ಯಗಳಿರುವ ಸಿ.ಡಿ ಪ್ರಸ್ತಾಪಿಸಲು ಹಾಗೂ ಆರು ಸಚಿವರನ್ನು ಇಕ್ಕಟ್ಟಿಗೆ ಸಿಲುಕಿಸುವ ಬಗ್ಗೆ ಸೋಮವಾರ ಸಂಜೆ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಚರ್ಚಿಸಲಾಗಿತ್ತು. ಸಚಿವರು ಉತ್ತರ ನೀಡಲು ಮುಂದಾದಾಗ, 'ಅನೈತಿಕ ಸಚಿವರ ಉತ್ತರ ಬೇಕಿಲ್ಲ' ಎಂದು ಪ್ರತಿಪಾದಿಸಿ ಸರ್ಕಾರವನ್ನು ಪೇಚಿಗೆ ಸಿಲುಕಿಸುವ ತಂತ್ರ ಹೆಣೆಯಲಾಗಿದೆ' ಎಂದು ಮೂಲಗಳು ಹೇಳಿವೆ.

ವಿಧಾನಸಭೆ ಹಾಗೂ ವಿಧಾನ-ಪರಿಷತ್ತಿನಲ್ಲಿ ಈ ಪ್ರಯೋಗವನ್ನು ಕಾಂಗ್ರೆಸ್ ಶಾಸಕರು ಮಂಗಳವಾರ ಮಾಡಿದರು. ಕೋರ್ಟ್ ಮೊರೆ ಹೋಗಿರುವ ಸಚಿವರಾದ ಕೆ.ಸಿ. ನಾರಾಯಣ ಗೌಡ, ಶಿವರಾಂ ಹೆಬ್ಬಾರ್, ಎಸ್.ಟಿ. ಸೋಮಶೇಖರ್, ಬೈರತಿ ಬಸವರಾಜ, ಡಾ. ಕೆ. ಸುಧಾಕರ್ ಹಾಗೂ ಬಿ.ಸಿ. ಪಾಟೀಲಅವರನ್ನುಗುರಿಮಾಡಿಕಾಂಗ್ರೆಸ್ ನಡೆ ಇಟ್ಟಿದೆ. ಪ್ರಶ್ನೋತ್ತರ ವೇಳೆಯಲ್ಲಿ ತಮ್ಮ ಇಲಾಖೆಗೆ ಸಂಬಂಧಿಸಿದ ಪ್ರಶ್ನೆಗೆ ಉತ್ತರ ಕೊಡುವಾಗ ನಿರಾಕರಿಸಿ, ಸಚಿವರನ್ನು ಮುಜುಗರಕ್ಕೆ ದೂಡುವುದು ಕಾಂಗ್ರೆಸ್ ತಂತ್ರದ ಭಾಗ.

'ಇಲಾಖೆಗೆ ಸಂಬಂಧಿಸಿ ಕೇಳಲಾದ ಪ್ರಶ್ನೆಗಳಿಗೆ ಬುಧವಾರ ಈ ಸಚಿವರ ಪೈಕಿ ಬಹುತೇಕರು ಉತ್ತರ ನೀಡಲಿದ್ದು, ಆ ವೇಳೆ ಈ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸುವುದು ಕಾಂಗ್ರೆಸ್ ಉದ್ದೇಶ' ಎಂದು ಶಾಸಕರೊಬ್ಬರು ತಿಳಿಸಿದರು.

'ಚಾಮರಾಜನಗರ ಜಿಲ್ಲೆಯ ಶಾಸಕರಿಗೆ ಪ್ರದೇಶಾಭಿವೃದ್ಧಿ ನಿಧಿಯಿಂದ ಎಷ್ಟು ಅನುದಾನ ನೀಡಲಾಗಿದೆ' ಎಂದು ಕಾಂಗ್ರೆಸ್‌ನ ಸಿ. ಪುಟ್ಟರಂಗಶೆಟ್ಟಿ ಪ್ರಶ್ನೆ ಕೇಳಿದ್ದರು. ಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಸಚಿವ ಕೆ.ಸಿ. ನಾರಾಯಣಗೌಡ ಉತ್ತರ ಕೊಡಲು ಮುಂದಾದರು. ಆಗ, 'ಅನೈತಿಕ ಸಚಿವರಿಂದ ಉತ್ತರ ಬೇಕಿಲ್ಲ' ಎಂದು ಶೆಟ್ಟಿ ಹೇಳಿದರು.

6ನೇ ಪುಟ ನೋಡಿ

'ಯುವತಿಗೆ ₹5 ಕೋಟಿ ಕೊಟ್ಟಿದ್ದಾರೆ'

'ನಾನು ಯಾವುದೇ ತಪ್ಪು ಮಾಡಿಲ್ಲ. ಆ ಸಿ.ಡಿ ನೂರಕ್ಕೆ ನೂರರಷ್ಟು ನಕಲಿ. ರಾಜಕೀಯವಾಗಿ ಮುಗಿಸಲು ನನ್ನ ವಿರುದ್ಧ ಷಡ್ಯಂತ್ರ ನಡೆದಿದೆ. ಆ ಯುವತಿಗೆ ₹ 50 ಲಕ್ಷ ಅಲ್ಲ, ₹ 5 ಕೋಟಿ ಕೊಟ್ಟಿದ್ದಾರೆ' ಎಂದು ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಹೇಳಿದರು. ಯುವತಿಯೊಬ್ಬಳನ್ನು ಲೈಂಗಿಕವಾಗಿ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂಬ ಆರೋಪಕ್ಕೆ ಸಿಲುಕಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಳಿಕ ಮೊದಲ ಬಾರಿಗೆ ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಅವರು ಮಾತನಾಡಿದರು. 'ಇದು ಒಬ್ಬ ಮಹಾನ್ ನಾಯಕನ ಕುತಂತ್ರ. ನಾನು ಮಂತ್ರಿಯಾದಾಗ, ಆ ಸ್ಥಾನದಲ್ಲಿ ಮುಂದುವರಿಯುವ ಬಗ್ಗೆ ನನಗೆ ಆತ ಸವಾಲು ಹಾಕಿದ್ದ. ಆ ಬಗ್ಗೆ ಈಗ ಹೇಳಲು ನಾನು ಇಚ್ಛಿಸುವುದಿಲ್ಲ. ಇದೊಂದು ಸೂಕ್ಷ್ಮ ವಿಚಾರ. ಇದನ್ನು ರಾಜಕೀಯ ಮಾಡುವುದಕ್ಕೆ ಹೋಗಬಾರದು' ಎಂದ ರಮೇಶ, 'ಇದರ ಹಿಂದಿರುವವರನ್ನು ಜೈಲಿಗೆ ಹಾಕುವವರೆಗೂ ಬಿಡುವುದಿಲ್ಲ' ಎಂದು ಎಚ್ಚರಿಸಿದರು.

6ನೇ ಪುಟ ನೋಡಿ

ಮುಂಬೈಗೆ ಕರೆದೊಯ್ದವರೇ ಸಿ.ಡಿ ಮಾಡಿದ್ರಾ?: ಎಚ್‌ಡಿಕೆ

'ಮುಂಬೈಗೆ ಹೋದ 12 ಮಂದಿಯದ್ದೂ ಸಿ.ಡಿಗಳಿವೆ ಎಂಬ ಸುದ್ದಿ ಮಾಧ್ಯಮಗಳಲ್ಲಿ ಬಂದಿದೆ. ಮುಂಬೈಗೆ ಕರೆದುಕೊಂಡು ಹೋದವರೇ ಇದನ್ನೆಲ್ಲಾ ಮಾಡಿದರೋ? ಸಿನಿಮಾ ರಂಗದ ಪರಿಣಿತರೂ ಜತೆಯಲ್ಲೇ ಇದ್ದರು. ಅವರೇನಾದರೂ ಮಾಡಿರಬಹುದಾ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅನುಮಾನ ವ್ಯಕ್ತಪಡಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಿ.ಡಿಯಲ್ಲಿ ಇದ್ದಾರೆ ಎನ್ನಲಾದ ಯುವತಿಯನ್ನು ಸಂತ್ರಸ್ತೆ ಎನ್ನುತ್ತಿದ್ದೀರಿ. ಆ ಹೆಣ್ಣುಮಗಳು ಭೇಟಿ ನೀಡಿದ ಸ್ಥಳದ ವಿವರ, ಆಕೆಯ ಭಾವಚಿತ್ರವನ್ನೂ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ. ಆಕೆ ಸಂತ್ರಸ್ತಳಾಗಿದ್ದು, ಅವರ ಕುಟುಂಬಕ್ಕೆ ನಿಜವಾಗಿಯೂ ಕಿರುಕುಳ ಆಗಿದ್ದರೆ ಸಾರ್ವಜನಿಕವಾಗಿ ಬಂದು ದೂರು ನೀಡಬೇಕಿತ್ತಲ್ಲವೇ' ಎಂದರು.

6ನೇ ಪುಟ ನೋಡಿ

'2ಎ ಪಟ್ಟಿಗೆ ಪ್ರಬಲ ಜಾತಿ ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಬಲ ಸಮುದಾಯಗಳನ್ನು ಪ್ರವರ್ಗ 2(ಎ) ಪಟ್ಟಿಗೆ ಸೇರ್ಪಡೆ ಮಾಡಬಾರದು. ಈಗ ರಚಿಸಿರುವ ಉನ್ನತ ಮಟ್ಟದ ಸಮಿತಿಯನ್ನು ರದ್ದುಗೊಳಿಸಬೇಕು' ಎಂದು ಅತಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಒತ್ತಾಯಿಸಿದೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಸಚಿವ ಕೋಟ ಶ್ರೀನಿವಾಸ ಪೂಜಾರಿ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಅತಿ ಹಿಂದುಳಿದ ವರ್ಗಗಳ ವೇದಿಕೆಯ ಗೌರವಾಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು, ಅಧ್ಯಕ್ಷ ಎಂ.ಸಿ.ವೇಣುಗೋಪಾಲ್ ನೇತೃತ್ವದ ನಿಯೋಗ ಮಂಗಳವಾರ ಭೇಟಿ ಮಾಡಿ ಮನವಿ ಸಲ್ಲಿಸಿತು.

'ಪ್ರವರ್ಗ 2(ಎ) ಪಟ್ಟಿಯಲ್ಲಿ 102 ಸಮುದಾಯಗಳಿದ್ದು, ಶೇ 15ರಷ್ಟು ಮೀಸಲಾತಿ ಹಂಚಿಕೊಳ್ಳುತ್ತಿವೆ. ಪ್ರಬಲ ಸಮುದಾಯಗಳ ಒತ್ತಡ ಗಮನಿಸಿದರೆ ಸಣ್ಣಪುಟ್ಟ ಸಮುದಾಯಗಳ ಭವಿಷ್ಯ ಅತ್ಯಂತ ದಾರುಣವಾಗುವ ಸಾಧ್ಯತೆ ಇದೆ' ಎಂದು ಮುಖ್ಯಮಂತ್ರಿ ಅವರಿಗೆ ಸಮಿತಿಯ ಗೌರವ ಸಲಹೆಗಾರ ವಿ.ಆರ್. ಸುದರ್ಶನ್ ಮತ್ತು ಸಿ.ಎಸ್. ದ್ವಾರಕನಾಥ್ ಮನವರಿಕೆ ಮಾಡಿದರು.

6ನೇ ಪುಟ ನೋಡಿ

'ಬಜೆಟ್‌ನಲ್ಲಿ ಕಾಣಿಸುತ್ತಿದೆ ಕಪ್ಪುಚುಕ್ಕೆ'

ಚಿತ್ರದುರ್ಗ: 'ರಾಜ್ಯ ಬಜೆಟ್‌ನಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ನಿಗಮಗಳಿಗೆ ಹಂಚಿಕೆ ಮಾಡಿದ ಅನುದಾನದ ಬಗ್ಗೆ ಅಸಮಾಧಾನವಿದೆ. ಬಜೆಟ್‌ನಲ್ಲಿ ಇದೊಂದು ಕಪ್ಪುಚುಕ್ಕೆಯಾಗಿ ಕಾಣಿಸುತ್ತಿದೆ' ಎಂದು ಬಿಜೆಪಿ ಸಂಸದ ಎ.ನಾರಾಯಣಸ್ವಾಮಿ ಬೇಸರ ವ್ಯಕ್ತಪಡಿಸಿದರು.

ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಂಗಳವಾರ ಮಾತನಾಡಿದ ಅವರು, 'ಮೇಲ್ವರ್ಗದ ನಿಗಮಗಳಿಗೆ ನೀಡಿದ ಅನುದಾನದ ಬಗ್ಗೆ ಆಕ್ಷೇಪವಿಲ್ಲ. ಆದರೆ, ತುಳಿತಕ್ಕೆ ಒಳಗಾದ ಹಾಗೂ ಆರ್ಥಿಕವಾಗಿ ಹಿಂದುಳಿದ ಸಮುದಾಯಗಳಿಗೆ ಹೆಚ್ಚು ಆದ್ಯತೆ ಸಿಗಬೇಕು. ಇದರಲ್ಲಿ ವ್ಯತ್ಯಾಸ ಕಾಣಿಸುತ್ತಿದೆ. ಈ ಸಮಸ್ಯೆಯನ್ನು ಸರಿಪಡಿಸಿಕೊಂಡರೆ ಪಕ್ಷಕ್ಕೆ ಅನುಕೂಲವಾಗುತ್ತದೆ' ಎಂದು ಹೇಳಿದರು. 'ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ದಲಿತ ಮತ್ತು ಹಿಂದುಳಿದ ಸಮುದಾಯಕ್ಕೆ ಹೆಚ್ಚು ಒತ್ತು ನೀಡುವಂತೆ ಚರ್ಚಿಸಲಾಗುವುದು. ಸಾಮಾಜಿಕ ಕಳಕಳಿ ಹೊಂದಿದ ಯಡಿಯೂರಪ್ಪ ಅವರು ಸ್ಪಂದಿಸುವ ನಿರೀಕ್ಷೆ ಇದೆ' ಎಂದರು.

ಎಸ್ಸೆಸ್ಸೆಲ್ಸಿ- ಪಿಯುಸಿ
ಪರೀಕ್ಷೆ ದಿಕ್ಸೂಚಿ
ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..
ಪುಟ-7

ಇಂದಿನ ಪಾಡ್‌ಕಾಸ್ಟ್ ವಿಶೇಷ
ಪ್ರಜಾವಾಣಿ ಕನ್ನಡ ಧ್ವನಿ
ಝಣ ಝಣ ಕಾಂಚಾಣ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

'ತಮಿಳುನಾಡು ಯೋಜನೆ: ಸರ್ವಪಕ್ಷ ಸಭೆ ಶೀಘ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾವೇರಿಯ 45 ಟಿಎಂಸಿ ಅಡಿ ಹೆಚ್ಚುವರಿ ನೀರನ್ನು ಅಕ್ರಮವಾಗಿ ಬಳಸಿಕೊಳ್ಳಲು ವೆಲ್ಲಾರು- ವೈಗೈ-ಗುಂಡಾರು ನದಿಗಳನ್ನು ಕಾವೇರಿಯೊಂದಿಗೆ ಜೋಡಿಸುವ ಯೋಜನೆಯನ್ನು ತಮಿಳುನಾಡು ಕೈಗೊಳ್ಳದಂತೆ ಎಲ್ಲ ಕ್ರಮಗಳನ್ನು ರಾಜ್ಯ ಸರ್ಕಾರ ತೆಗೆದುಕೊಂಡಿದೆ. ಈ ಬಗ್ಗೆ ಚರ್ಚಿಸಲು ಶೀಘ್ರದಲ್ಲಿ ಸರ್ವ ಪಕ್ಷ ಸಭೆ ಕರೆಯಲಾಗುವುದು' ಎಂದು ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ಹೇಳಿದರು.

ಕಾವೇರಿ ನದಿ ಪಾತ್ರದಲ್ಲಿ ತಮಿಳುನಾಡು ಕೈಗೊಂಡಿರುವ ಅಕ್ರಮ ಯೋಜನೆಯ ಕುರಿತು ವಿಧಾನ ಪರಿಷತ್‌ನಲ್ಲಿ ನಡೆದ ಚರ್ಚೆಗೆ ಉತ್ತರಿಸಿದ ಅವರು, 'ನೆಲ, ಜಲ ವಿಷಯದಲ್ಲಿ ಯಾವುದೇ ರಾಜಿ ಇಲ್ಲ. ರಾಜ್ಯದ ಹಿತ ಕಾಪಾಡಲು ಸರ್ಕಾರ ಬದ್ಧ. ಯೋಜನೆಗೆ ಆಕ್ಷೇಪಣೆ ವ್ಯಕ್ತಪಡಿಸಿ ಪ್ರಧಾನಿ ಮತ್ತು ಕೇಂದ್ರ ಜಲಶಕ್ತಿ ಸಚಿವರಿಗೆ ಮಾ.1ರಂದು ಮುಖ್ಯಮಂತ್ರಿ ಪತ್ರ ಬರೆದಿದ್ದಾರೆ' ಎಂದರು.

9 ಅಧಿಕಾರಿಗಳ ಮನೆ, ಕಚೇರಿಗೆ ದಾಳಿ

ಯೋಜನಾ ನಿರ್ದೇಶಕ 19 ನಿವೇಶನಗಳ ಒಡೆಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಇಲಾಖೆಗಳ 9 ಅಧಿಕಾರಿಗಳ ಮನೆ ಮತ್ತು ಕಚೇರಿ ಸೇರಿ 11 ಜಿಲ್ಲೆಯ 28 ಕಡೆ ಮಂಗಳವಾರ ಬೆಳಿಗ್ಗೆ ಏಕಕಾಲದಲ್ಲಿ ದಾಳಿ ನಡೆಸಿದ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಅಪಾರ ಪ್ರಮಾಣದ ಆಸ್ತಿಯನ್ನು ಪತ್ತೆ ಮಾಡಿದೆ.

ಬೆಂಗಳೂರು ಮಹಾನಗರ ಕಾರ್ಯಪಡೆಯ (ಬಿಎಂಟಿಎಫ್) ಇನ್‌ಸ್ಪೆಕ್ಟರ್ ವಿಕ್ಟರ್ ಸೈಮನ್ ಅವರು ನ್ಯಾಷನಲ್ ಗೇಮ್ಸ್ ವಿಲೇಜ್‌ನಲ್ಲಿ ಒಂದು ಫ್ಲ್ಯಾಟ್, ಮೈಸೂರಿನಲ್ಲಿ 129 ಚದರ ಅಡಿಯಲ್ಲಿ ಐಷಾರಾಮಿ ಬಂಗಲೆ, ಮೈಸೂರಿನಲ್ಲಿ 2 ನಿವೇಶನ, 10 ಎಕರೆ ಕೃಷಿ ಜಮೀನು, ₹1 ಕೋಟಿ ಬೆಲೆಯ ಬಾಂಡ್ ಪೇಪರ್ ಹೊಂದಿದ್ದಾರೆ. ಜತೆಗೆ, ಬ್ಯಾಂಕ್ ಲಾಕರ್‌ಗಳಲ್ಲಿ 500 ಗ್ರಾಂ ಚಿನ್ನಾಭರಣ, ವಾಸದ ಮನೆಯಲ್ಲಿ 7.26 ಲಕ್ಷ ನಗದು, 22.36 ಲೀಟರ್ ದುಬಾರಿ ಮದ್ಯದ ಬಾಟಲಿ, ₹21.61ಲಕ್ಷ ಮೌಲ್ಯದ ಗೃಹೋಪಯೋಗಿ ವಸ್ತುಗಳು ಪತ್ತೆಯಾಗಿವೆ. ಹಲವು ಬಾರಿ ವಿದೇಶ ಪ್ರವಾಸ ಮಾಡಿರುವ ದಾಖಲೆಗಳು ದೊರೆತಿವೆ. ಆದಾಯಕ್ಕಿಂತ ಶೇ 257ರಷ್ಟು ಹೆಚ್ಚು ಆಸ್ತಿ ಹೊಂದಿದ್ದಾರೆ ಎಂದು ಎಸಿಬಿ ವಿವರಿಸಿದೆ.

ಬಿಬಿಎಂಪಿ ಯಶವಂತಪುರ ವಲಯದ ಕಿರಿಯ ಎಂಜಿನಿಯರ್ ಕೆ. ಸುಬ್ರಹ್ಮಣ್ಯಂ ಅವರು ಸಹಕಾರ ನಗರದಲ್ಲಿ ಮನೆ, ವೈಟ್‌ಫೀಲ್ಡ್‌ನಲ್ಲಿ 33 ಕೊಠಡಿಗಳ ಪಿ.ಜಿ ಕಟ್ಟಡ, ಬೆಂಗಳೂರಿನ ವಿವಿಧೆಡೆ 4 ನಿವೇಶನಗಳನ್ನು ಹೊಂದಿದ್ದಾರೆ. ಇನ್ನೋವಾ ಕಾರು, ಫಿಯೆಟ್ ಪುಂಟೋ, ಐ10 ಕಾರು, 531 ಗ್ರಾಂ ಚಿನ್ನ, 8 ಕೆ.ಜಿ ಬೆಳ್ಳಿ ಆಭರಣ, ವಿವಿಧ ಬ್ಯಾಂಕ್‌ಗಳಲ್ಲಿ ₹1 ಕೋಟಿ ಠೇವಣಿ, ₹31.90 ಲಕ್ಷ ಮೌಲ್ಯದ ಗೃಹೋಪಯೋಗಿ ವಸ್ತುಗಳು, ವಿದೇಶ ಪ್ರವಾಸದ ದಾಖಲೆಗಳು ಪತ್ತೆಯಾಗಿವೆ.

5ನೇ ಪುಟ ನೋಡಿ

ಮನೆಯಲ್ಲಿ ಸರ್ಕಾರಿ ಕಡತ, ನಗದು

ಮೈಸೂರು ಚೆಸ್ಕಾಂ ಸೂಪರಿಂಟೆಂಡಿಂಗ್ ಎಂಜಿನಿಯರ್ ಮುನಿಗೋಪಾಲರಾಜ್ ಮನೆಯಲ್ಲಿ 50ಕ್ಕೂ ಹೆಚ್ಚು ಕಡತಗಳು ಮತ್ತು ಅದರೊಟ್ಟಿಗಿದ್ದ ₹2.45 ಲಕ್ಷ ನಗದು ದೊರೆತಿದೆ. ಅವರು ಮೈಸೂರಿನ ಗೋಕುಲಂನಲ್ಲಿ 1 ಮನೆ, ಹೂಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಫ್ಲಾಟ್, ಮೈಸೂರಿನ ವಿವಿಧೆಡೆ 6 ನಿವೇಶನ, ಕೆಂಗೇರಿಯಲ್ಲಿ 1 ಫ್ಲ್ಯಾಟ್, ವಿವಿಧೆಡೆ 6 ಎಕರೆ ಕೃಷಿ ಜಮೀನು, 3 ಕಾರು, 717 ಗ್ರಾಂ ಚಿನ್ನ, 16 ಕೆ.ಜಿ ಬೆಳ್ಳಿ ವಸ್ತು, ₹20 ಲಕ್ಷ ಮೌಲ್ಯದ ಗೃಹೋಪಯೋಗಿ ವಸ್ತುಗಳನ್ನು ಹೊಂದಿದ್ದಾರೆ ಎಂದು ಎಸಿಬಿ ತಿಳಿಸಿದೆ.

ಎಂಜಿನಿಯರ್ ಮುನಿಗೋಪಾಲ ರಾಜ್ ಮನೆಯಲ್ಲಿ ದೊರೆತ ನಗದು ಮತ್ತು ವಾಚ್‌ಗಳು

ಶಿವಮೊಗ್ಗ ವಿಮಾನ ನಿಲ್ದಾಣ ಸ್ಥಳದಲ್ಲಿ ಭಾರಿ ಸ್ಫೋಟಕ ಪತ್ತೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಸೋಗಾನೆ ವಿಮಾನ ನಿಲ್ದಾಣ ಸ್ಥಳದಲ್ಲಿ ಮಂಗಳವಾರ ಸ್ಫೋಟಕ ಸಾಮಗ್ರಿಗಳು ಪತ್ತೆಯಾಗಿದ್ದು, ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ವಿಮಾನ ನಿಲ್ದಾಣ ಕಾಮಗಾರಿ ಪ್ರಗತಿಯಲ್ಲಿದ್ದು, ರನ್‌ವೇ ಸ್ಥಳದ ಹತ್ತಿರ ಎರಡು ಮಿನಿ ಸರಕು ಸಾಗಣೆ ವಾಹನಗಳಲ್ಲಿ 36 ಬಾಕ್ಸ್‌ನಲ್ಲಿ 904 ಕೆ.ಜಿ ಜಿಲೆಟಿನ್ ಕಡ್ಡಿ ಹಾಗೂ 3,267 ಡಿಟೋನೇಟರ್ ಪತ್ತೆಯಾಗಿರುವುದನ್ನು ಪೊಲೀಸರು ಖಚಿತಪಡಿಸಿದ್ದಾರೆ. ವಿಷಯ ಗೊತ್ತಾದ ಕೂಡಲೇ ತುಂಗಾ ನಗರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬಳಿಕ ಬೆಂಗಳೂರಿನಿಂದ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಬಂದು ಸ್ಫೋಟಕಗಳನ್ನು ಪರಿಶೀಲಿಸಿದರು.

ಅನುಮತಿ ನೀಡಿದ್ದ ಜಿಲ್ಲಾಧಿಕಾರಿ: ವಿಮಾನ ನಿಲ್ದಾಣ ಕಾಮಗಾರಿಗೆ ಜಲ್ಲಿ ಪೂರೈಸಲು ಸ್ಥಳದಲ್ಲೇ ಕ್ವಾರಿ ನೀಡಲಾಗಿದೆ.

6ನೇ ಪುಟ ನೋಡಿ

ಚುನಾವಣಾ ರಂಗಕ್ಕಿಳಿದ ಸಿಎಸ್‌ಆರ್ ವೇದಿಕೆ

ತಿರುವನಂತಪುರ: ಕೇರಳದ ಸ್ಥಳೀಯಾಡಳಿತ ಸಂಸ್ಥೆಗಳಿಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ನಾಲ್ಕು ಪಂಚಾಯಿತಿಗಳಲ್ಲಿ ಗೆಲುವು ಸಾಧಿಸಿದ 'ಟ್ವೆಂಟಿ-20' ಎಂಬ ಸಿಎಸ್‌ಆರ್ ವೇದಿಕೆಯು ವಿಧಾನಸಭೆ ಚುನಾವಣೆಯಲ್ಲಿಯೂ ಅದೃಷ್ಟ ಪರೀಕ್ಷೆಗೆ ಮುಂದಾಗಿದೆ. 10

ವೇರಿಯಂಟ್	ಪ್ಲೆಟಿನಾ 100 ES ಡಿಸ್ಕ್	ಪ್ಲೆಟಿನಾ 100 ES ಡ್ರಮ್	ಪ್ಲೆಟಿನಾ 100 KS ಡ್ರಮ್	CT 110 ES
ಈಗಿರುವ ಬೆಲೆ*	~~₹63 629/-~~	~~₹59 910/-~~	~~₹53 120/-~~	~~₹54 023/-~~
ಆಫರ್ ಬೆಲೆ	₹58 629/-	₹54 910/-	₹50 120/-	₹51 023/-

ಕೋವಿಡ್: ದೇಶದಲ್ಲೇ ಮೊದಲ ಸಾವು

ವರ್ಷವಾದರೂ ಕುಟುಂಬದ ಕೈ ಸೇರಿಲ್ಲ ಪಾಸಿಟಿವ್ ವರದಿ!

ಪ್ರಜಾವಾಣಿ ವಾರ್ತೆ

ಕಲಬುರ್ಗಿ: ಕೋವಿಡ್‌ನಿಂದ ದೇಶದಲ್ಲೇ ಮೊದಲು ಮೃತಪಟ್ಟ ಇಲ್ಲಿನ ಮೊಹಮದ್ ಹುಸೇನ್ ಸಿದ್ದಿಕಿ (76) ಅವರ ಕೋವಿಡ್ ಪಾಸಿಟಿವ್ ವರದಿ ಇನ್ನೂ ಅವರ ಕುಟುಂಬದ ಕೈ ಸೇರಿಲ್ಲ!

ಸೌದಿ ಅರೇಬಿಯಾದ ಮೆಕ್ಕಾ ಯಾತ್ರೆಗೆ ತೆರಳಿದ್ದ ಅವರು 2020ರ ಫೆಬ್ರುವರಿ 29ರಂದು ಕಲಬುರ್ಗಿಗೆ ಮರಳಿದ್ದರು. ಅವರ ಆರೋಗ್ಯ ತೀವ್ರ ಹದಗೆಟ್ಟಿದ್ದರಿಂದ ಮಾರ್ಚ್ 9ರಂದು ಹೈದರಾಬಾದ್‌ಗೆ ಕರೆದೊಯ್ಯಲಾಗಿತ್ತು. ಅಲ್ಲಿಯೂ ಸರಿಯಾದ ಚಿಕಿತ್ಸೆ ಸಿಗಲಿಲ್ಲ ಎಂದು ಕಲಬುರ್ಗಿಗೆ ಕರೆತರುವಾಗ ಮಾರ್ಗ ಮಧ್ಯೆ ಮಾರ್ಚ್ 10ರಂದು ಮೃತಪಟ್ಟರು. ಅವರಿಗೆ ಕೋವಿಡ್-19 ತಗುಲಿದ್ದು ದೃಢಪಟ್ಟಿದ್ದರಿಂದ ದೇಶದ ಗಮನ ಕಲಬುರ್ಗಿಯತ್ತ ಹರಿದಿತ್ತು.



ಮೊಹಮದ್ ಹುಸೇನ್ ಸಿದ್ದಿಕಿ

6ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಒಳ ಪುಟಗಳು

'ಮಕ್ಕಳನ್ನು ಕೊಲ್ಲಬೇಡಿ, ನನಗೇ ಗುಂಡಿಕ್ಕಿ' 10
ವಾಣಿಜ್ಯ ಉದ್ದೇಶದ ಎಸ್‌ಎಂಎಸ್: ನಿಯಮ ಜಾರಿಗೆ ಒಂದು ವಾರ ತಡೆ 11
ಭಾರತ-ಬಾಂಗ್ಲಾ ನಡುವಿನ 'ಮೈತ್ರಿ ಸೇತು' ಉದ್ಘಾಟನೆ 12

ಆಲೂರು: ಚುನಾವಣೆ ಅಧಿಸೂಚನೆ

ಹೆಸರಘಟ್ಟ: ದಾಸನಪುರ ಹೋಬಳಿ ಆಲೂರು ಗ್ರಾ.ಪಂ. ಚುನಾವಣೆ ನಡೆಸಲು ರಾಜ್ಯ ಚುನಾವಣಾ ಆಯೋಗವು ಅಧಿಸೂಚನೆ ಹೊರಡಿಸಿದೆ. ನಾಮಪತ್ರ ಸಲ್ಲಿಸಲು ಇದೇ 19 ಕೊನೆದಿನ. ನಾಮಪತ್ರ 20ರಂದು ಹಿಂತೆಗೆಯಬಹುದು. 29ರಂದು ಮತದಾನ, 31ರಂದು ಮತಎಣಿಕೆ ನಡೆಯಲಿದೆ.

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ, ತುಮಕೂರು
ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ವಿಭಾಗ, ತುಮಕೂರು

ಕ್ರ.ಸಂ:ಕಾಇಂ/ಲೋಇವಿ/ತುಮ/ಸಇಂ-1/ಟೆಂಡರ್ 27/2020-21 ದಿನಾಂಕ: 05-03-2021

ಟೆಂಡರ್ ಪ್ರಕಟಣೆ ಸಂ.27/2020-21 ದಿನಾಂಕ: 05.03.2021

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 27/2020-21 **ದಿನಾಂಕ: 05.03.2021** ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ ಲೆಕ್ಕ ಶೀರ್ಷಿಕೆ 4059-80-051-0-32-386 ಇಲಾಖಾ ಕಟ್ಟಡಗಳು ಅಡಿಯಲ್ಲಿ 01 ಕಾಮಗಾರಿಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರ್‌ಗಿಟ್ಟ ಮೊತ್ತ **ರೂ.306.62 ಲಕ್ಷಗಳು,** ಅರ್ಹ ಗುತ್ತಿಗೆದಾರರು : 1ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 11 ತಿಂಗಳು ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷೀಕರಣಗಳಿಗೆ ಕೊನೆ **ದಿನಾಂಕ ಮತ್ತು ವೇಳೆ: 31.03.2021 ರ 16.00 ಗಂಟೆಗೆ,** ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು **ದಿನಾಂಕ 08.03.2021 ರಿಂದ 06.04.2021ರ 16.00 ಗಂಟೆಯವರೆಗೆ** ಪಡೆಯಬಹುದಾಗಿದೆ. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ **ದಿನಾಂಕ ಮತ್ತು ವೇಳೆ: 06.04.2021ರ ಸಂಜೆ 16.00 ಗಂಟೆವರೆಗೆ,** ತಾಂತ್ರಿಕ ಬಿಡ್ಡುಗಳನ್ನು ತೆರೆಯುವ **ದಿನಾಂಕ 07.04.2021 ಸಂಜೆ 16.30 ಗಂಟೆಗೆ,** ಆರ್ಥಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ 09.04.2021 ಸಂಜೆ 16.30 ಗಂಟೆಗೆ,** ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ **www.eproc.karnataka.gov.in** ಪಡೆಯಬಹುದಾಗಿದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ,ತುಮಕೂರು.

ವಾಸಾಸಂಇ/ತುಮಕೂರು/ಶಿರಡಿ ಸಾಯಿ/225/2020-21

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸರ್ಕಾರಿ ಜಮೀನು ರಕ್ಷಣೆಗೆ ವಾಚ್‌ಮನ್ ನೇಮಕ • ₹100 ಕೋಟಿ ಮೀಸಲು: ಕಂದಾಯ ಸಚಿವ ಆರ್. ಅಶೋಕ

ತೆರವುಗೊಳಿಸಿದ ಜಮೀನಿಗೆ ಕಾಂಪೌಂಡ್

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಹುಲಿಮಂಗಲದಲ್ಲಿ ಸರ್ಕಾರಿ ಜಾಗದಲ್ಲಿ ಅನಧಿಕೃತ 45 ವಿಲ್ಲಾಗಳ ನಿರ್ಮಾಣ
- ಒಂದೊಂದು ಫ್ಲ್ಯಾಟ್ ₹3.50 ಕೋಟಿ ಬೆಲೆಗೆ ಮಾರಾಟ
- ಭೂ ಅಕ್ರಮಗಳ ತನಿಖೆಗೆ ಶಾಸಕರ ಆಗ್ರಹ

ಬೆಂಗಳೂರು: ಒತ್ತುವರಿಯಾಗಿರುವ ಸರ್ಕಾರಿ ಭೂಮಿಯನ್ನು ತೆರವುಗೊಳಿಸಿದ ಬಳಿಕ ಅದರ ರಕ್ಷಣೆಗಾಗಿ ಕಾಂಪೌಂಡ್ ಹಾಕಿ ವಾಚ್‌ಮನ್‌ಗಳಿಂದ ಕಾವಲು ವ್ಯವಸ್ಥೆ ಮಾಡಲಾಗುವುದು ಎಂದು ಕಂದಾಯ ಸಚಿವ ಆರ್.ಅಶೋಕ ತಿಳಿಸಿದರು.

ವಿಧಾನಸಭೆಯಲ್ಲಿ ಬಿಜೆಪಿಯ ಗೂಳಿಹಟ್ಟಿ ಶೇಖರ್ ಅವರ ಗಮನ ಸೆಳೆಯುವ ಸೂಚನೆಗೆ ಉತ್ತರ ನೀಡಿದ ಸಚಿವರು, 'ಇದಕ್ಕಾಗಿ ₹100 ಕೋಟಿ ಮೀಸಲಿಡುವಂತೆ ಮುಖ್ಯಮಂತ್ರಿಯವರಿಗೆ ಮನವಿ ಮಾಡಿದ್ದೇನೆ' ಎಂದು ಹೇಳಿದರು.

'ಅಕ್ರಮವಾಗಿ ದಾಖಲೆಗಳನ್ನು ಸೃಷ್ಟಿಸಿದ ಆರೋಪದ ಮೇಲೆ ಅಧಿಕಾರಿಗಳನ್ನು ಅಮಾನತು ಮಾಡಿದರೆ, ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆ ತರುತ್ತಾರೆ. ಅಕ್ರಮ ತಪ್ಪಿಸಲು ಬೆಂಗಳೂರಿನಿಂದ ಬೇರೆ ಊರಿಗೆ ವರ್ಗಾವಣೆ ಮಾಡಿದರೆ, ತಕ್ಷಣವೇ ಕೆಎಟಿಗೆ ಹೋಗಿ ತಡೆಯಾಜ್ಞೆ ತಂದು ಅಲ್ಲೇ ಬಂದು ಕೂರುತ್ತಾರೆ. ವಿರೋಧ ಪಕ್ಷದಲ್ಲಿ ಇದ್ದಾಗ ನಾವು ಈ ಅಕ್ರಮಗಳ ಬಗ್ಗೆ ಪ್ರಸ್ತಾಪಿಸಿದ್ದೇವೆ. ಈಗ ಕೈಕಟ್ಟಿದ ಹಾಗೆ ಆಗಿದೆ' ಎಂದು ಅವರು ಹೇಳಿದರು.

ವಿಷಯ ಪ್ರಸ್ತಾಪಿಸಿದ ಗೂಳಿಹಟ್ಟಿ ಶೇಖರ್, 'ಆನೇಕಲ್ ತಾಲ್ಲೂಕು ಹುಲಿಮಂಗಲ ಗ್ರಾಮದಲ್ಲಿ ಸರ್ವೆ ನಂ. 155ರ ಸರ್ಕಾರಿ ಜಾಗದಲ್ಲಿ ಅನಧಿಕೃತವಾಗಿ 45 ವಿಲ್ಲಾಗಳನ್ನು ನಿರ್ಮಾಣ ಮಾಡಲಾಗಿದೆ. ಅಲ್ಲದೆ 12 ಅಂತಸ್ತುಗಳ ಬಹುಮಹಡಿ ನಿರ್ಮಾಣ ಮಾಡಲಾಗಿದೆ. ಒಂದೊಂದು ಫ್ಲ್ಯಾಟ್‌ಗೂ ₹3.50 ಕೋಟಿ ಬೆಲೆ ಇಟ್ಟು ಮಾರಲಾಗುತ್ತಿದೆ. ವಿಶೇಷ ಜಿಲ್ಲಾಧಿಕಾರಿ ಸರ್ಕಾರದ ಮುಖ್ಯಕಾರ್ಯದರ್ಶಿಗಿಂತಲೂ ಪ್ರಭಾವಶಾಲಿಯಾಗಿದ್ದಾರೆ. ಈ ಅಕ್ರಮಗಳ ಬಗ್ಗೆ ಕೂಡಲೇ ತನಿಖೆ ನಡೆಸಿ, ಜಮೀನು ತೆರವುಗೊಳಿಸಬೇಕು' ಎಂದು ಒತ್ತಾಯಿಸಿದರು.

ಇದಕ್ಕೆ ಧ್ವನಿಗೂಡಿಸಿದ ಜೆಡಿಎಸ್‌ನ ಎ.ಟಿ. ರಾಮಸ್ವಾಮಿ, 'ಸರ್ವೆ ನಂ. 154,155,156 ಮತ್ತು 350 ರಲ್ಲಿ 470 ಎಕರೆ 17 ಗುಂಟೆ ಜಮೀನಿಗೆ ದಾಖಲೆಗಳೇ ಲಭ್ಯವಿಲ್ಲ. ಬದಲಿಗೆ ನಕಲಿ ದಾಖಲೆ ಸೃಷ್ಟಿಸಲಾಗಿದೆ. ಇಲ್ಲಿ ಲೇಔಟ್ ಮಾಡಿ ನಿವೇಶನಗಳನ್ನು ಹಂಚಲಾಗಿದೆ. ಇವರಿಗೆ ಯಾರ ಭಯವೂ ಇಲ್ಲವಾಗಿದೆ' ಎಂದರು.

'ಹುಲಿಮಂಗಲ ಗ್ರಾಮದ ಅಕ್ರಮಕ್ಕೆ ಸಂಬಂಧಿಸಿದಂತೆ ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಎನ್. ಜಯರಾಮ್ ಅವರನ್ನು ಅಮಾನತ್ತಿನಲ್ಲಿ ಇರಿಸಲಾಗಿದೆ. 41 ನಿವೇಶನಗಳ ಭೂಪರಿವರ್ತನೆ ಆಗಿಲ್ಲದ ಕಾರಣ, ಅನಧಿಕೃತ ಕಟ್ಟಡ ತೆರವುಗೊಳಿಸಲು ಆನೇಕಲ್ ತಹಶೀಲ್ದಾರ್ ನೋಟಿಸ್ ಜಾರಿ ಮಾಡಿದ್ದಾರೆ' ಎಂದು ಸಚಿವ ಅಶೋಕ ವಿವರಿಸಿದರು.

ಈ ಸಂಬಂಧ ವಿಶೇಷ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ 136 (3) ಅಡಿ ದಾಖಲಾಗಿದ್ದ ಪ್ರಕರಣ ವಿಚಾರಣೆಯ ಹಂತದಲ್ಲಿದೆ. ಇದರಲ್ಲಿ 16 ಪ್ರಕರಣಗಳಿಗೆ ಸಂಬಂಧಿಸಿದಂತೆ ಸರ್ಕಾರದ ಪರವಾಗಿ ಆದೇಶವಾಗಿದ್ದು, ಒತ್ತುವರಿ ತೆರವು ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ಹೇಳಿದರು.

ಪತ್ರಕರ್ತರಿಗೂ ಕೋವಿಡ್ ಪರಿಹಾರ: ಶಾಸಕ ಟಿ.ಡಿ. ರಾಜೇಗೌಡ ಆಗ್ರಹ

ಕೋವಿಡ್‌ನಿಂದ ಮೃತಪಟ್ಟ ಪತ್ರಕರ್ತರ ಕುಟುಂಬಗಳಿಗೆ ತಲಾ ₹30 ಲಕ್ಷ ಪರಿಹಾರ ನೀಡಬೇಕು ಎಂದು ಕಾಂಗ್ರೆಸ್‌ನ ಟಿ.ಡಿ. ರಾಜೇಗೌಡ ಸರ್ಕಾರವನ್ನು ಒತ್ತಾಯಿಸಿದರು.

ಕೋವಿಡ್ ಲಾಕ್‌ಡೌನ್ ವೇಳೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಹಗಲಿರುಳೆನ್ನದೇ ಶ್ರಮಿಸಿದ್ದಾರೆ. ಕೆಲವರು ಕೋವಿಡ್‌ನಿಂದ ಮೃತಪಟ್ಟಿದ್ದಾರೆ. ಇವರ ಕುಟುಂಬಗಳಿಗೆ ಕೊರೋನಾ ವಾರಿಯರ್ಸ್‌ಗಳಿಗೆ ಪರಿಹಾರ ನೀಡುವ ಮಾದರಿಯಲ್ಲೇ ಪರಿಹಾರ ಮೊತ್ತವನ್ನು ನೀಡಬೇಕು ಎಂದು ಆಗ್ರಹಿಸಿದರು.

ಅಲ್ಲದೇ, ಆದ್ಯತೆ ಮೇರೆಗೆ ಕೋವಿಡ್ ಲಸಿಕೆ ಕೊಡುವ ವ್ಯವಸ್ಥೆ ಮಾಡಬೇಕು. ಅನಾರೋಗ್ಯಕ್ಕೆ ತುತ್ತಾದರೆ ಉಚಿತವಾಗಿ ಚಿಕಿತ್ಸೆ ನೀಡಬೇಕು ಎಂದೂ ಅವರು ಸಲಹೆ ನೀಡಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Multiple Vacancy

POWER-ONE Micro Systems Pvt.Ltd. — **JOB OPPORTUNITIES**

A leading Manufacturers of ONLINE UPS, Servo Stabilizers, Isolation Transformers and EV Chargers are looking for dynamic Sales personnel for the following posts at Bangalore.

Manager - Sales
With 3 to 4 years experience Selling of Online UPS system in Pvt. Industry.

Asst. Manager - Sales
With 2 to 3 years experience Selling of Online UPS system in Pvt. Industry.

Marketing Executives
With 1 to 2 years experience in Selling of Online UPS system.

Service Engineers
Diploma / ITI in Electronics with or without experience.

Production Assistant
ITI / JOC with Electrical wiring experience.

WALK IN INTERVIEW AT : Powerone Micro Systems Pvt. Ltd.
GF-3, KSSIDC Building, 5th Cross, Peenya Industrial Estate, Bangalore-58

Call: 63669 47362
E-mail: careers@poweroneups.com

Engg/ Production Technical

"WANTED IMMEDIATELY, Engineers" Qualification: BE-Mech/ Civil,Diploma in-Mech and ITI-holders for-a manufacturing unit-in Bommanahalli, Bangalore-68. Candidates preferably-from Bangalore South.Send resume: uppbangalore@gmail.com/ Contact: 08025731282/ 9449817703.

General

IMMEDIATE RECRUITMENT HRD/ ADMINISTRATION/ ACCOUNTS/ MANAGER/ SUPERVISOR/ MECHANICAL/ ELECTRONICS/ ELECTRICAL/ SOFTWARE/ HARDWARE ENGINEERS:-7676760299/ 7676760399

WANTED FOR Reputed Company, Graduates Age-30-70, Bangalore only, Earn: 30,000- 50,000. Contact: 9008305194/ 9880441530.

JOBS FOR Women (Reliance) Age Above 30 Years (Degree) FIXED SALARY+ PF Contact: 9343349670

Part-Time Jobs

PARTTIME JOBS :Sales and Marketing, Affiliated Marketing, Digital Marketing www.bangaloreteamouting.com Call-9008007267

Marketing & Sales

SALES ENGINEERS for Compressors/ Machinery Sales After/ Market Product Sales Email: chandra@synergics.in/ Mob: 9341856562

TELECALLER[F], MARKETING EXECUTIVES Required For Advertising Company with Computer Knowledge, Good Communication (Basaveswaranagar): 9945465871

WANTED TEAM leaders, Sales Executives and Telecallers. Sal+incentives. Opportunity to earn upto 20,000/pm. Age 22/50years. 8147311490

Hotel

WANTED VEG COOKS for Breakfast at Restaurants (with Exp.), SALES EXECUTIVE & DELIVERY BOYS at Indiranagar. Candidates Near Indiranagar Call- 9108993199

Placement Bureaus/Consultants

FOR ALL Placements / Hiring, Call 08023443555, 8183046799, Email: anzconsultants@yahoo.co.in

Wanted

PHOTO & VIDEO EDITORS for Social Media Work needed Full or Part Time. Address: Nagarbhavi Kengeri Ring Road Archana: 9916869328

Teachers/ Professors

PRINCIPAL

Jindal Degree College for Women with NAAC accreditation having, PUC, Degree, MBA and MCom streams with students' strength of 2000 requires a competent & efficient candidate for the post of Principal. He/ She must have PhD with brilliant academic records having 10-15 years of teaching experience including 5 years as Principal in a reputed Degree College.
Candidates with good administrative experience believing in strict discipline and conversant with UGC rules preferred salary will be based on qualification & experience.
Apply immediately to: Jindal Degree College for Women Jindal Nagar, Tumkur road, Bengaluru - 560 073
Email: hr@jindalaluminium.com

SREE SARASWATHI VIDYA MANDIRA
No.9, Vani Vilas Road, Visveswarapuram, B'lore-04
Ph: 080-41277700/41324223
Require Qualified, Trained & experienced **TEACHERS** for
1. SOCIAL SCIENCE & ENGLISH for High School
2. ENGLISH LITERATURE for CBSE
& Also required an experienced LADY ACCOUNTANT & CASHIERS with **Tally background,** one for at Somanahalli-Kanakapura Road.
Walk-in-Interview with written application on **13th March 2021 (Sat)** from 10 a.m. to 1 p.m.

ST.THOMAS RES. SCHOOL, Bidadi-562109,1.PRINCIPAL-M. Com/M.Sc./MA.,B.Ed.(55% above) 5years Experience in PUC/High School Age below 50years Christians preferred 2.ENGLISH TEACHER- (HS)-MA/BA(English)B.Ed. 3.ENGLISH TEACHER Primary BA (English)B.Ed/D.Ed 4.HINDI TEACHER (PRIMARY) BA (Hindi)B.Ed/D.Ed 2years teaching exp./fresh graduate 5.OFFICE ACCOUNTANT - B.Com Experienced in School/College-Recognition, Accounts Admission Procedure, Tally-9 ERP, etc. 6.DRIVER- Xstd- DL -Heavy vehicle & batch 2years exp. 7.AYAH- Std.IV Good Salary and other benefits offered. Transport & Accommodation facilities are provided. Send the resume with scanned copies of the testimonials within_10days to The Secretary, MME SOCIETY No.47 Primrose Road, Bangalore-560025 or email: mmesblr.yahoo.in

REQUIRES LADY Teachers for Chemistry (MSC BEd) English (MA.BEd), Art and Craft, Social Studies (BA.BEd), Substitution teacher- BA/ B.Com Graduates with good English skills. Walk-in Interview with The Secretary, SRIKRISHNA International School, ITI-Layout, BSK 3rd Stage B'lore-85 Phone: 65365824

DH Classifieds
BOOK YOUR PROPERTY TEXT AD ON SATURDAY & SUNDAY
FOR JUST ₹ 1530/-*
For more information contact:
9880856233
9731810277 | 9901641752
9845114560 | 9886213331
*condition apply

PUBLIC NOTICE

ಸಾರ್ವಜನಿಕ ಪ್ರಕಟಣೆ

ಭಾರತ ಪೆಟ್ರೋಲಿಯಂ ಕಾರ್ಪೊರೇಶನ್ ಲಿಮಿಟೆಡ್ (ಬಿಪಿಸಿಎಲ್),
ಭಾರತೀಯ ಕಂಪನಗಳ ಕಾಯ್ದೆ, 1913ರ ಅಡಿಯಲ್ಲಿ ಸ್ಥಾಪಿತ ಈ ಸಂಸ್ಥೆಯು ಮರಿಯಪ್ಪನಪಾಳ್ಯ (ನಾಗದೇವನಹಳ್ಳಿ ದಾಖಲೆ), ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು ವಿಳಾಸದಲ್ಲಿ ಸ್ಥಿತಗೊಂಡಿರುವ ಖಾತಾ ನಂ. 76, ಸೈಟ್ ನಂ. 61/1 ಹೊಂದಿರುವ, 69+76)/2 x (104+80)/2 ಒಟ್ಟಾರೆ 6670 ಚ.ಅ. ವಿಸ್ತೀರ್ಣವುಳ್ಳ ಮತ್ತು ಪೂರ್ವಕ್ಕೆ: 80 ಅಡಿ ಹೊರ ವರ್ತುಲ ರಸ್ತೆ; ಪಶ್ಚಿಮಕ್ಕೆ: 25 ಅಡಿ ರಸ್ತೆ; ಉತ್ತರಕ್ಕೆ: ಖಾಸಗಿ ಸ್ವತ್ತು (ಮುದ್ದಲಿಂಗಯ್ಯನವರ ಸ್ವತ್ತು); ದಕ್ಷಿಣಕ್ಕೆ: ಖಾಸಗಿ ಸ್ವತ್ತು (ಅನಂತರಾಮ ರವರ ಸ್ವತ್ತು) ಚಕ್ಕುಬಂದಿ ಹೊಂದಿರುವ ಸ್ವತ್ತನ್ನು ಅದರ ಮಾಲೀಕರಾದ (1) ಶ್ರೀ. ಅಜಯ್. ಆರ್, ಬಿನ್ ಲೇಟ್ ಶ್ರೀ. ಡಿ. ರಾಮಯ್ಯ, (2) ಶ್ರೀಮತಿ. ಶ್ರೀಪ್ರಿಯಾ. ಎ, ಕೋಂ. ಶ್ರೀ. ಅಜಯ್. ಆರ್ ಮತ್ತು (3) ಶ್ರೀಮತಿ. ಟಿ. ಗೌರಮ್ಮ, ಕೋಂ. ಲೇಟ್ ಶ್ರೀ. ಡಿ. ರಾಮಯ್ಯ, ಎಲ್ಲರ ವಿಳಾಸ ನಂ. 104, 80 ಅಡಿ ವರ್ತುಲ ರಸ್ತೆ, ಮರಿಯಪ್ಪನಪಾಳ್ಯ, ಬೆಂಗಳೂರು ವಿಶ್ವವಿದ್ಯಾಲಯ ಅಂಚೆ, ಬೆಂಗಳೂರು-560 056 ಇವರುಗಳಿಂದ, 19 ವರ್ಷ 11 ತಿಂಗಳು ಅವಧಿಗೆ ಮೇಲೆ ಉಲ್ಲೇಖಿಸಲಾದ ಖಾಲಿ ಜಮೀನು ಸ್ವತ್ತನ್ನು ಭೋಗ್ಯಕ್ಕೆ ಪಡೆಯಲು ಉದ್ದೇಶಿಸಿರುತ್ತದೆ. ಒಂದು ವೇಳೆ, (1) ಶ್ರೀ. ಅಜಯ್. ಆರ್, (2) ಶ್ರೀಮತಿ. ಶ್ರೀಪ್ರಿಯಾ. ಎ, ಮತ್ತು (3) ಶ್ರೀಮತಿ. ಟಿ. ಗೌರಮ್ಮ ಇವರನ್ನು ಹೊರತುಪಡಿಸಿ ಬೇರೆ ಯಾವುದೇ ವ್ಯಕ್ತಿಗಾಗಲಿ ಅಥವಾ ಸಂಸ್ಥೆಗಾಗಲಿ (ಸಂಘಟಿತ ಅಥವಾ ಅಸಂಘಟಿತ) ಸದರಿ ಸ್ವತ್ತಿನ ಮೇಲೆ ಯಾವುದೇ ರೀತಿಯ ಹಕ್ಕು ಅಥವಾ ಕ್ಲೇಮ್ ಹೊಂದಿದ್ದಲ್ಲಿ, ಅಂತಹವರು ಇದೇ 10-03-2021 ರಿಂದ 7 ದಿನಗಳೊಳಗೆ, ಬಿಪಿಸಿಎಲ್ ಸಂಸ್ಥೆಯ ಕೆಳಗಿನ ವಿಳಾಸಕ್ಕೆ ಮಾಹಿತಿ ನೀಡುವುದು.
ಭಾರತ ಪೆಟ್ರೋಲಿಯಂ ಕಾರ್ಪ್. ಲಿ., ಡ್ಯೂ ಪಾರ್ಕ್ ಟ್ರಿನಿಟಿ, 7ನೇ ಮಹಡಿ, 17, ಎಂ.ಜಿ. ರಸ್ತೆ, ಬೆಂಗಳೂರು-560 001.

EDUCATIONAL

Admission

DIRECT FINAL Year: B.Ed/ LL.B/ B.Tech/M.Tech/ Diploma/MBA/BBA/BCA/ B.Com. Govt, UGC Recognised, Join immediately. Asha Institute: Bangalore. 9448460103/ 7093438248

REAL ESTATE SELLING

Flat

Bommanahalli

LUXURY-APARTMENT FOR Sale. 3 BHK with attached bathroom. 1800 Sft + 1 Car Park & all amenities in Roopena Agrahara, Bommanahalli Ph: 9391024959, 7710878007

Cookes Town

COOKE TOWN FLAT for Sale, 1 BHK 600 sqft with 1 car parking, Rental income Rs. 20000/-. Contact: 9845055346.

Jalahalli

2.5 Bedroom Apartment In Commanders Glory For Sale 40 Lakhs Contact 9342546425 7760780309

Jayanagar

SEMI FURSHINISHED 3 Bhk apartment. 2nd floor. Constructed area 2200 sqft. Address- No 292, 12th cross, 2nd block Jayanagar Bangalore 560011, 2.5 crores Name- B.A Srinivasa Moblie- 9845006484

House

HRBR Layout

HRBR (BDA) 1st Block Kalyan Nagar 2bhk, Carpark Independent House 40feet road, 96 Lakhs -8310675943

J P Nagar

J.P.NAGAR 2ND Phase 40x62 North Facing 4 BHK (with Garden) House For Sale Call:9845069739 9380613718

Nagarabhavi

SALE NAGARABHAVI 9th block, Hanumagiri 30X40 BDA House West Facing. Contact Janardhan: 9901552147 (Brokers Excuse)

Sites

Hosur Road

APPROX. ONE Acre Industrial Land for Sale. Power, Water available. Papers upto date. Ideal for Pharma aswell. Brokers Excuse. Contact: 9620938350/ 9342825263.

Kumaraswamy Layout

BDA 30X40 Intermediate Vacant 2nd Stage, Near 15F/G Bus Stop, ISKCON South, Genuine Buyers Call 9972095359 Brokers Excuse.

Multiple Locations

JAKKUR ARKAVATHY layout manyata 20x30, 30x40, 50x80, sqft BDA Plot for sale west facing 9019144869

REAL ESTATE BUYING

Sites

Kanakapura Road

BDA/BBMP "A" Khata Sites Wanted. Banashankari 6th Stage,Anjanapura, BCC Layout,Narayananagar , Rajarajeshwari Nagar: 9945835569

CONNECT
ಕ್ಲಾಸಿಫೈಡ್ಸ್

ANGEL ACAADEMY®
6 DAYS TRAINING THE TRAINERS COURSE
(Licensed & Certified Live Programs)
CASH WISDOM™
(6th April, 2021 to 11th April, 2021)
TOVAA®
(19th April, 2021 to 24th April, 2021)
Angel's Therapy
(24th May, 2021 to 29th May, 2021)
6 Days Heal Your Life Immersive
(Residential Retreat : 6th May, 2021 to 11th May, 2021)
Inquiries, Details & Registrations : Kalyaan Kumar Jain 9320010301
angelacaademy@gmail.com • angelacaademy.com
ROUNAQH

RENTAL PROPERTIES

Accommodation Available

House

VYALIKAVAL 13TH A CROSS- Two BHK Semi-Furnished house for LEASE 2nd Floor one is North East Facing and one West Facing- 9845193341/ 9844708511

MATRIMONIAL

Matrimonial Bureaus

1000 DAYS Validity + Free Benefits One Time Regn. Fees Rs. 1000 . www.brahminkalyanam.com (brahmins) , hindusmatri.com (other castes) 8939702500

BUSINESS

Business to Business

Finance

NRI'S INVESTMENT AND FINANCE AVAILABLE ON LOW-INTEREST AGAINST PROPERTIES,LAND, BUILDINGS SITES,FLATS, BUSINESSES ALSO AYUSH, MEDICAL HOSPITALS. CALL -7411265189

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

PERSONAL

Lost

LOST DOCUMENTS
I, **R.M. BASAVARAJ,** S/o. Revanasiddaiah hereby inform to general public that I have lost my **POSITION CERTIFICATE of SITE No. 1112, Locating SITE in HOSAHALLI.** on 04/03/2021 Near Vijayanagar, Bangalore. Police complaint has been given. Lost Report No. 064916/2021 Finders may please contact **9972777573** and return the documents.

Change of Name

CHANGE OF NAME
I, **MANJULA. N** spouse of No.14462609K, Rank: Hav, Name: Chandrappa S. D (Retd), Residing at No.2374, 25th main, Sector-1, H.S.R Layout, Bengaluru- 560102, wrongly mentioned my name as N. Manjula in the service documents / Manjulamma. N in the education certificate & MANJULA. N in the voter ID, Aadhaar, Pan card. Here declaring that all names pertain to one and same person of New Name **MANJULA. N** vide affidavit dated 08/03/2021 before Notary A. Gerard, Bangalore.

I, RENEE JOSEPH residing at 306, Veeranna Palya, Bangalore-560045 have changed my name to REVECCA RENEE JOSEPH vide affidavit dated 09/03/2021 sworn before notary K.A.Appanna, Bangalore.

WE NAZIA TABASUM and INAYATH ULLA KHAN are changed my minor son's name from MUHAMMAD SULTAN ALI KHAN to MUHAMMAD RAIS ALI KHAN vide affidavit dated 08/03/2021 sworn before notary K.A.Appanna, Bangalore

I, ANITHA RANI MANANDHI, R/at No. 301, Ward No. 19, Near Kodandarama Temple, Dharmachatra Road, Chickballapur, have changed my name to ANITHA MEDA RAMESH vide affidavit dated 20-02-2021 sworn before notary, K.H. Venkatappa, Chickballapur

DH Classifieds
BOOK YOUR AD on SATURDAY & GET 50% OFF ON SUNDAY
For more information contact:
9880856233
9731810277 | 9901641752
9845114560 | 9886213331
*condition apply

ಮಾಜಿ ಸಂಸದ ವಿರೂಪಾಕ್ಷಪ್ಪ ಬಿಜೆಪಿ ಸೇರ್ಪಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಸಂಸದ ಕೆ. ವಿರೂಪಾಕ್ಷಪ್ಪ ಅವರು ಕಾಂಗ್ರೆಸ್ ತೊರೆದು ಸೋಮವಾರ ಬಿಜೆಪಿ ಸೇರ್ಪಡೆಗೊಂಡರು.

ನಗರದ ಜಗನ್ನಾಥ ಭವನದಲ್ಲಿ ನಡೆದ ಸೇರ್ಪಡೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಇದ್ದರು.

ಈ ಸಂದರ್ಭದಲ್ಲಿ ಯಡಿಯೂರಪ್ಪ ಮಾತನಾಡಿ, ವಿರೂಪಾಕ್ಷಪ್ಪ ಅವರ ಸೇರ್ಪಡೆಯಿಂದ ಪಕ್ಷಕ್ಕೆ ಆನೆ ಬಲ ಬಂದಂತಾಗಿದೆ. ಇದೇ 20 ರಂದು ಮಸ್ಕಿಯಲ್ಲಿ ಬೃಹತ್ ಸಮಾವೇಶ ನಡೆಸಲಾಗುವುದು ಎಂದು ಹೇಳಿದರು.

ನಳಿನ್ ಕುಮಾರ್ ಕಟೀಲ್ ಮಾತನಾಡಿ, ಕಾಂಗ್ರೆಸ್‌ನಲ್ಲಿ ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ಅವರ ಬೀದಿ ಜಗಳದಿಂದ ಅಭದ್ರತೆಯ ವಾತಾವರಣ ಸೃಷ್ಟಿಯಾಗಿದೆ. ಹೀಗಾಗಿ ಹತ್ತಾರು ಶಾಸಕರು ಬಿಜೆಪಿ ಸೇರಲು ಸರದಿ ಸಾಲಿನಲ್ಲಿ ನಿಂತಿದ್ದಾರೆ ಎಂದರು.

ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆ ಕಾರ್ಯಕ್ರಮ • ಅಧಿಕಾರಕ್ಕೆ ಗುದ್ದಾಟ ಬೇಡ– ಸಿದ್ದರಾಮಯ್ಯ

'ಕೈ' ಹಿಡಿದ ಅಶೋಕ ಮನಗೂಳಿಗೆ ಸಿಂದಗಿ ಟಿಕೆಟ್?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಂದಗಿ ಕ್ಷೇತ್ರದ ಜೆಡಿಎಸ್ ಶಾಸಕರಾಗಿದ್ದ ದಿವಂಗತ ಎಂ.ಸಿ. ಮನಗೂಳಿ ಅವರ ಪುತ್ರ ಅಶೋಕ ಮನಗೂಳಿ ಜೆಡಿಎಸ್ ತ್ಯಜಿಸಿ ಕಾಂಗ್ರೆಸ್ ಸೇರಿದರು. ಈ ಕ್ಷೇತ್ರಕ್ಕೆ ಶೀಘ್ರದಲ್ಲಿ ಉಪ ಚುನಾವಣೆ ಘೋಷಣೆಯಾಗಲಿದ್ದು, ಅಶೋಕ ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡುವ ಸಾಧ್ಯತೆ ಇದೆ.

ಕೆಪಿಸಿಸಿ ಕಚೇರಿಯಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಪಕ್ಷದ ಧ್ವಜ ನೀಡಿ ಅಶೋಕ ಅವರನ್ನು ಬರಮಾಡಿಕೊಂಡರು.

ಈ ಸಂದರ್ಭದಲ್ಲಿ ಮಾತನಾಡಿದ ಶಿವಕುಮಾರ್ , 'ನಿಧನರಾಗುವ 15 ದಿನ ಮೊದಲು ನಮ್ಮನ್ನು ಭೇಟಿ ಮಾಡಿದ್ದ ಮನಗೂಳಿ, ಮಗನನ್ನು ನಿಮ್ಮ ತೆಕ್ಕೆಗೆ ಹಾಕ್ತಿದ್ದೇನೆ ಎಂದು ಹೇಳಿ ಹೋಗಿದ್ದರು. ಯಾವುದೇ ಷರತ್ತು ಇಲ್ಲದೆ ಕಾಂಗ್ರೆಸ್ ಸೇರುತ್ತೇನೆ ಎಂದು ಅಶೋಕ ಕೂಡಾ ಹೇಳಿದ್ದರು. ಅಲ್ಲಂ ವೀರಭದ್ರಪ್ಪ ನೇತೃತ್ವದ ಪಕ್ಷ ಸೇರ್ಪಡೆ ಸಮಿತಿಯ ಶಿಫಾರಸಿನಂತೆ ಪಕ್ಷಕ್ಕೆ ಸೇರಿಸಿಕೊಂಡಿದ್ದೇವೆ'' ಎಂದರು.

'ಎಂ.ಸಿ ಮನಗೂಳಿ ಅವರನ್ನೂ ಕಾಂಗ್ರೆಸ್‌ಗೆ ಬರುವಂತೆ ನಾನು ಆಹ್ವಾನಿಸಿದ್ದೆ. ಸಿಂದಗಿಗೆ ನೀರಿನ ವ್ಯವಸ್ಥೆ ಮಾಡಿದವನೇ ನಾನು. ಈ ಕ್ಷೇತ್ರದ ಉಪಚುನಾವಣೆ ಗೆಲ್ಲಲೇಬೇಕು. ಅಭ್ಯರ್ಥಿ ಯಾರು ಎನ್ನುವುದನ್ನು ಇನ್ನು ಮುಂದೆ ತೀರ್ಮಾನ ಮಾಡುತ್ತೇವೆ. ನಾಳೆಯೇ ವಿಧಾನಸಭೆ ವಿಸರ್ಜಿಸಿದರೂ ನಮ್ಮ ಪಕ್ಷ ಅಧಿಕಾರಕ್ಕೆ ಬರಲಿದೆ. ಈಗಲೇ ಗುದ್ದಾಡುವುದು ಬೇಡ. ಅಧಿಕಾರ ಬಂದಾಗ ಎಲ್ಲರೂ ಹಂಚಿಕೊಳ್ಳೋಣ' ಎಂದು ಪಕ್ಷದ ನಾಯಕರಿಗೆ ಸಿದ್ದರಾಮಯ್ಯ ಕಿವಿಮಾತು ಹೇಳಿದರು.

ಜೆಡಿಎಸ್ ತ್ಯಜಿಸಿ ಕಾಂಗ್ರೆಸ್ ಸೇರಿದ ಸಿಂದಗಿ ಕ್ಷೇತ್ರದ ಜೆಡಿಎಸ್ ಮುಖಂಡ ಅಶೋಕ ಮನಗೂಳಿ ಅವರನ್ನು ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಪಕ್ಷದ ಧ್ವಜ ನೀಡಿ ಬರಮಾಡಿಕೊಂಡರು

'ಐದಾರು ಜಿಲ್ಲೆಗಳಿಗೆ ಮಾತ್ರ ಜೆಡಿಎಸ್ ಸೀಮಿತವಾಗಿದೆ. ಅದೊಂದು ಪ್ರಾದೇಶಿಕ ಪಕ್ಷ' ಎಂದು ಮತ್ತೊಮ್ಮೆ ಜೆಡಿಎಸ್ ವಿರುದ್ಧ ವಾಗ್ದಾಳಿ ನಡೆಸಿದ ಸಿದ್ದರಾಮಯ್ಯ, 'ಅಶೋಕ ಅವರು ಜಿಲ್ಲೆಯ ಎಲ್ಲರ ಜೊತೆ ಹೋಗಬೇಕು. ನಮ್ಮವರೂ ಅವರಿಗೆ ಸಹಕಾರ ನೀಡಬೇಕು' ಎಂದರು.

ಸಿಂದಗಿ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿರುವ ಅಶೋಕ ಮಾತನಾಡಿ, 'ನಮ್ಮ ಕ್ಷೇತ್ರದಲ್ಲಿ ಯಾರಿಗೆ ಟಿಕೆಟ್ ಕೊಟ್ಟರೂ ಕೆಲಸ ಮಾಡುತ್ತೇನೆ. ನಾಯಕರ ಮಾರ್ಗದರ್ಶನದಲ್ಲಿ ಸಾಮಾನ್ಯ ಕಾರ್ಯಕರ್ತನಾಗಿ ಪಕ್ಷ ಕಟ್ಟುತ್ತೇನೆ. ತಂದೆಯವರು ಮೈತ್ರಿ ಸರ್ಕಾರದ ಅವಧಿಯಲ್ಲಿ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿದ್ದರು' ಎಂದು ನೆನಪಿಸಿದರು.

ಮೂತ್ರಪಿಂಡ ಆರೋಗ್ಯ: ಜಾಗೃತಿ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಮೂತ್ರಪಿಂಡ ದಿನದ ಪ್ರಯುಕ್ತ ಮಣಿಪಾಲ್ ಆಸ್ಪತ್ರೆಗಳ ಸಮೂಹವು ಬುಧವಾರ (ಮಾ.10) ಬೆಳಿಗ್ಗೆ 11.30ಕ್ಕೆ ಹಳೆ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಸ್ಟರ್ಲಿಂಗ್ ಮ್ಯಾಕ್ ಹೋಟೆಲ್‌ನಲ್ಲಿ ಮೂತ್ರಪಿಂಡ ಆರೋಗ್ಯದ ಕುರಿತು ವಿಚಾರಸಂಕಿರಣ ಆಯೋಜಿಸಿದೆ.

ಈ ಕಾರ್ಯಕ್ರಮವು 'ಪ್ರಜಾವಾಣಿ' ಮತ್ತು ಡೆಕ್ಕನ್ ಹೆರಾಲ್ಡ್' ಸಹಯೋಗದಲ್ಲಿ ನಡೆಯಲಿದೆ. ಗೌರವ ಅತಿಥಿಯಾಗಿ ಐಪಿಎಸ್ ಅಧಿಕಾರಿ ಡಿ. ರೂಪಾ ಪಾಲ್ಗೊಳ್ಳಲಿದ್ದಾರೆ. ಮಣಿಪಾಲ್ ಆಸ್ಪತ್ರೆಗಳ ಸಮೂಹದ ಅಧ್ಯಕ್ಷ ಡಾ. ಸುದರ್ಶನ್ ಬಲ್ಲಾಳ್ ಅಧ್ಯಕ್ಷತೆ ವಹಿಸಲಿದ್ದಾರೆ.

ಮೂತ್ರಪಿಂಡ ಆರೋಗ್ಯಕ್ಕೆ ಸಂಬಂಧಿಸಿದಂತೆ ತಜ್ಞ ವೈದ್ಯರಾದ ಡಾ. ವಿಶ್ವನಾಥ್ ಎಸ್., ಡಾ. ಶಂಕರನ್ ಸುಂದರ್, ಡಾ. ದೀಪಕ್ ದುಬೆ, ಡಾ.ಟಿ. ಮುಖರ್ಜಿ, ಡಾ. ಗೋಕುಲಕೃಷ್ಣನ್ ಪಿ.ಜೆ., ಡಾ.ಆರ್. ಸಂಜಯ್ ರಾಮ್‌ಪುರೆ, ಡಾ. ನಾಗಸುಬ್ರಮಣ್ಯಮ್ ಎಸ್., ಡಾ.ಜಿ. ಕೆ. ಪ್ರಕಾಶ್ ಹಾಗೂ ಡಾ. ಆನಂದ್ ಎಂ. ಮಾತನಾಡಲಿದ್ದಾರೆ. ಅಂತರರಾಷ್ಟ್ರೀಯ ಭಾಷಣಕಾರ ಶೇಖರ್ ವಿಜಯನ್ ವಿಚಾರಸಂಕಿರಣ ನಡೆಸಿಕೊಡಲಿದ್ದಾರೆ.

ಮೂತ್ರಪಿಂಡ ಸಮಸ್ಯೆಗೆ ಯಾವೆಲ್ಲ ಅಂಶಗಳು ಕಾರಣವಾಗುತ್ತವೆ ಎಂಬುದನ್ನು ತಜ್ಞರು ತಿಳಿಸಿಕೊಡಲಿದ್ದಾರೆ. ಅದೇ ರೀತಿ, ಸಮಸ್ಯೆಗಳ ಲಕ್ಷಣ, ಅವನ್ನು ಗುರುತಿಸುವ ವಿಧಾನ, ಲಭ್ಯವಿರುವ ಚಿಕಿತ್ಸೆಗಳು, ಡಯಾಲಿಸಿಸ್, ರೋಗಿಗಳ ಸಬಲೀಕರಣ ಸೇರಿದಂತೆ ಮೂತ್ರಪಿಂಡಕ್ಕೆ ಸಂಬಂಧಿಸಿದ ವಿವಿಧ ವಿಷಯಗಳ ಬಗ್ಗೆ ವೈದ್ಯರು ಮಾಹಿತಿ ನೀಡಲಿದ್ದಾರೆ. ಮೂತ್ರಪಿಂಡಕ್ಕೆ ಸಂಬಂಧಿಸಿದ ಕಾಯಿಲೆಯನ್ನು ಜಯಿಸಿದವರು, ರೋಗಿಗಳಿಗೆ ಆರೈಕೆ ಮಾಡಿದವರು ಕೂಡ ಪಾಲ್ಗೊಂಡು, ತಮ್ಮ ಅನುಭವ ಹಂಚಿಕೊಳ್ಳುತ್ತಾರೆ.

ಕಾರ್ಯಕ್ರಮವನ್ನು ಆನ್‌ಲೈನ್ ವೇದಿಕೆ bit.ly/WKDMH21ರಲ್ಲಿ ನೋಂದಾಯಿಸಿ, ವೀಕ್ಷಿಸಬಹುದಾಗಿದೆ ಎಂದು ಆಸ್ಪತ್ರೆ ಪ್ರಕಟಣೆಯಲ್ಲಿ ತಿಳಿಸಿದೆ.



ಹೋಟೆಲ್‌ಗಳ ಸಂಘಕ್ಕೆ ಪದಾಧಿಕಾರಿಗಳ ಆಯ್ಕೆ

ಬೆಂಗಳೂರು: ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘದ ಅಧ್ಯಕ್ಷರಾಗಿ ಪಿ.ಸಿ. ರಾವ್ ಮತ್ತೊಮ್ಮೆ ಆಯ್ಕೆಯಾಗಿದ್ದಾರೆ.

ಸಂಘದ ಕಾರ್ಯಕಾರಿ ಮಂಡಳಿಯ ಸಭೆಯಲ್ಲಿ ಈ ಆಯ್ಕೆ ನಡೆದಿದೆ. ಗೌರವಾಧ್ಯಕ್ಷರಾಗಿ ಡಾ.ಆರ್. ರವಿಚಂದ್ರ, ಉಪಾಧ್ಯಕ್ಷರಾಗಿ ಸುಬ್ರಹ್ಮಣ್ಯ ಹೊಳ್ಳ, ರಾಧಾಕೃಷ್ಣ ಅಡಿಗ, ಗೌರವ ಕಾರ್ಯದರ್ಶಿಯಾಗಿ ವೀರೇಂದ್ರ ಎಸ್. ಕಾಮತ್, ಜಂಟಿ ಕಾರ್ಯದರ್ಶಿಯಾಗಿ ಶಕೀರ್ ಹಕ್, ರಾಕೇಶ್ ಎ. ಎಲ್. ಹಾಗೂ ಖಜಾಂಚಿಯಾಗಿ ಸುಧಾಕರ್ ಶೆಟ್ಟಿ ಜಿ. ಆಯ್ಕೆಯಾಗಿದ್ದಾರೆ.



ಪಿ.ಸಿ. ರಾವ್

ರೀಸರ್ಚ್ ಸ್ಕಾಲರ್ಸ್ ಹುದ್ದೆಗೆ ಅರ್ಜಿ ಆಹ್ವಾನ

ಬೆಂಗಳೂರು: ದಯಾನಂದ ಸಾಗರ್ ವಿಶ್ವವಿದ್ಯಾಲಯ 'ರೀಸರ್ಚ್ ಸ್ಕಾಲರ್ಸ್ ಮತ್ತು ಸೈಂಟಿಫಿಕ್ ಆಫೀಸರ್ಸ್' ಹುದ್ದೆಗೆ ಅರ್ಜಿ ಆಹ್ವಾನಿಸಿದೆ.

ವಿಜ್ಞಾನ ಅಥವಾ ಎಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದವರು ಹಾಗೂ ಪಿಎಚ್.ಡಿ ಮಾಡಲು ಬಯಸುವವರು ಅರ್ಜಿ ಸಲ್ಲಿಸಬಹುದಾಗಿದೆ. ಸಂಶೋಧನೆ ಅಥವಾ ಉದ್ಯಮದಲ್ಲಿ ಅನುಭವ ಹೊಂದಿರುವವರಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. ಆಯ್ಕೆಯಾಗುವ ಅಭ್ಯರ್ಥಿಗಳಿಗೆ ವಿದ್ಯಾರ್ಥಿವೇತನದ ಜೊತೆಗೆ ಪಿಎಚ್.ಡಿ ಕಾರ್ಯಕ್ರಮಕ್ಕೆ ಪ್ರವೇಶ ಪಡೆಯಲು ಸಹಾಯಧನ ಕೊಡಲಾಗುತ್ತದೆ.

ಆಯ್ಕೆಯಾಗುವವರು ಸಂಶೋಧಕರು, ವಿದ್ಯಾರ್ಥಿಗಳು, ಅಧ್ಯಾಪಕರು, ಎಸ್‌ಎಂಇಗಳಿಗೆ ಪೂರ್ವನಿರ್ಧರಿತ ಫಲಿತಾಂಶ ಸಾಧಿಸಲು ನೆರವಾಗಬೇಕು. ಹೆಚ್ಚಿನ ಮಾಹಿತಿಗೆ ಕುಲಪತಿ ಆರ್.ಜನಾರ್ದನ್ (janardhan.dsi@gmail.com) ಅಥವಾ www.dsu.edu.in ವೆಬ್‌ಸೈಟ್‌ಗೆ ಭೇಟಿ ನೀಡಿ.

ಸಂಕ್ಷಿಪ್ತ ಸುದ್ದಿ

ಗ್ರಾಫಿಕ್ಸ್ ಆ್ಯಂಡ್ ಆನಿಮೇಷನ್: 15ರವರೆಗೆ ಅವಕಾಶ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯುನ್ಮಾನ ಮಾಧ್ಯಮ ವಿಭಾಗದಲ್ಲಿರುವ ಎಂ.ಎಸ್ಸಿ. ಫಿಲ್ಮ್ ಮೇಕಿಂಗ್ ಹಾಗೂ ಎಂ.ಎಸ್ಸಿ. ಗ್ರಾಫಿಕ್ಸ್ ಆ್ಯಂಡ್ ಆನಿಮೇಷನ್ ಕೋರ್ಸ್‌ನ 2020-21ನೇ ಸಾಲಿನ ಪ್ರವೇಶಾತಿಗೆ ಮಾರ್ಚ್ 15ರವರೆಗೆ ಅವಕಾಶ ಕಲ್ಪಿಸಲಾಗಿದೆ.

ಯಾವುದೇ ಪದವಿ ಅಥವಾ ತತ್ಸಮಾನ ಕೋರ್ಸ್‌ಗಳಲ್ಲಿ ಕನಿಷ್ಠ ಶೇ 50ರಷ್ಟು ಅಂಕ ಗಳಿಸಿರುವ ಸಾಮಾನ್ಯ ಹಾಗೂ ಹಿಂದುಳಿದ ವರ್ಗದ ಅಭ್ಯರ್ಥಿಗಳು ಮತ್ತು ಶೇ 45ರಷ್ಟು ಅಂಕ ಗಳಿಸಿದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಅಭ್ಯರ್ಥಿಗಳು ಕೋರ್ಸ್‌ಗಳಿಗೆ ಸೇರಲು ಅರ್ಹರು. ಆಸಕ್ತರು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಿಂದ ಅರ್ಜಿ ಡೌನ್‌ಲೋಡ್ ಮಾಡಿಕೊಂಡು, ದಾಖಲಾತಿಗಳೊಂದಿಗೆ ವಿದ್ಯುನ್ಮಾನ ಮಾಧ್ಯಮ ವಿಭಾಗಕ್ಕೆ ನೇರವಾಗಿ ಬಂದು ಪ್ರವೇಶ ಪಡೆಯಬಹುದು. ಮಾಹಿತಿಗೆ 9482218980 ಅಥವಾ 9844129885 ಸಂಪರ್ಕಿಸಬಹುದು.

ಸಹಪಾಠಿಗಳಿಂದಲೇ ವಿದ್ಯಾರ್ಥಿ ಕೊಲೆ

ಬೆಂಗಳೂರು: ಪಿಯುಸಿ ಮೊದಲ ವರ್ಷದ ವಿದ್ಯಾರ್ಥಿ ಮೊಹಮ್ಮದ್ ಫೈಜ್ (17) ಎಂಬಾತನನ್ನು ಡ್ರ್ಯಾಗರ್‌ನಿಂದ ಇರಿದು ಕೊಲೆ ಮಾಡಲಾಗಿದ್ದು, ಆತನ ಸಹಪಾಠಿಗಳೇ ಕೃತ್ಯ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ.

'ಯಶವಂತಪುರ ಠಾಣೆ ವ್ಯಾಪ್ತಿಯ ಮಂಗಳ ನರ್ಸಿಂಗ್ ಹೋಮ್ ಬಳಿ ಈ ಘಟನೆ ನಡೆದಿದೆ. ಆರೋಪಿಗಳ ವಯಸ್ಸು 17' ಎಂದು ಪೊಲೀಸರು ಹೇಳಿದರು. 'ಸುಬೇದಾರ್‌ಪಾಳ್ಯ ನಿವಾಸಿ ಮೊಹಮ್ಮದ್ ಫೈಜ್ ಹಾಗೂ ಸಹಪಾಠಿಯೊಬ್ಬನ, ನಡುವೆ ಸೋಮವಾರ ಗಲಾಟೆ ಆಗಿತ್ತು. ಇಬ್ಬರೂ ಪರಸ್ಪರ ಜೀವ ಬೆದರಿಕೆ ಹಾಕಿದ್ದರು. ಮಂಗಳವಾರ ಸಂಜೆಯೂ ಅವರಿಬ್ಬರ ನಡುವೆ ಜಗಳವಾಗಿ ಕೊಲೆಯಲ್ಲಿ ಅಂತ್ಯವಾಗಿದೆ' ಎಂದೂ ತಿಳಿಸಿದರು.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ 'ಪಿವಿ ಬ್ರ್ಯಾಂಡ್ ಸ್ಪಾಟ್'ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಹುಲಿ ಕೊಲ್ಲಲು ಒಪ್ಪಿಗೆ: ಶಾಸಕರ ಒತ್ತಾಯ

ಬೆಂಗಳೂರು: 'ಕೊಡಗಿನಲ್ಲಿ ಮನುಷ್ಯರನ್ನು ಕೊಲ್ಲುತ್ತಿರುವ ಹುಲಿ ಹಿಡಿಯಲು ಅಥವಾ ಸಾಯಿಸಲು ಸರ್ಕಾರದಿಂದ ಆದೇಶ ಇದ್ದರೆ ಅದನ್ನು ಕೊಲ್ಲಲು ನಮಗೆ ಒಪ್ಪಿಗೆ ಕೊಡಿ' ಎಂದು ಬಿಜೆಪಿಯ ಕೆ.ಜಿ. ಬೋಪಯ್ಯ ಮತ್ತು ಅಪ್ಪಚ್ಚು ರಂಜನ್ ಹಕ್ಕೊತ್ತಾಯ ಮಂಡಿಸಿದರು.

ವಿಧಾನಸಭೆಯಲ್ಲಿ ಮಂಗಳವಾರ ಶೂನ್ಯ ವೇಳೆಯಲ್ಲಿ ಮಾತನಾಡಿದ ಬೋಪಯ್ಯ, 'ನಾಲ್ಕು ಜನರನ್ನು ಹುಲಿ ತಿಂದಿದೆ. 25ಕ್ಕೂ ಹೆಚ್ಚು ದನಗಳನ್ನು ಕೊಂದಿದೆ. [illegible] ದರೆ ನಮಗೆ ಅಧಿಕಾರ ಕೊಡಿ' ಎಂದು ಒತ್ತಾಯಿಸಿದರು.

ಅಪ್ಪಚ್ಚು ರಂಜನ್ ಮಾತನಾಡಿ, 'ಹುಲಿ ಕೊಲ್ಲಬೇಕೆಂದು ಜನರು ಧರಣಿ ನಡೆಸುತ್ತಿದ್ದು, ಭೀತಿ ಎಲ್ಲೆಡೆ ಮನೆ ಮಾಡಿದೆ. ಹುಲಿ ಕೊಲ್ಲಲು ಸರ್ಕಾರ ಒಪ್ಪಿಗೆ ಕೊಟ್ಟರೆ ನಾನೇ ಕೋವಿ ಹಿಡಿದು ಶಿಕಾರಿಗೆ ಹೋಗುವೆ' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಅರಣ್ಯ ಸಚಿವ ಅರವಿಂದ ಲಿಂಬಾವಳಿ, 'ಫೆಬ್ರುವರಿ 21ರಂದು ಹೆಣ್ಣುಹುಲಿ ಸೆರೆ ಹಿಡಿಯಲಾಗಿದೆ. ಒಂದು ಗಂಡು ಹುಲಿ ಜನರ ಸಾವಿಗೆ ಕಾರಣವಾಗಿದೆ. ಜೆನೆಟಿಕ್ ಮ್ಯಾಪಿಂಗ್ ಮಾಡಲು ಸೂಚಿಸಲಾಗಿದೆ. ಹುಲಿ ಕೊಲ್ಲುವಂತೆ ಆದೇಶಿಸಲಾಗಿದೆ. ಅಧಿಕಾರಿಗಳು ಹುಲಿ ಹತ್ಯೆ ಮಾಡಬೇಕೇ ವಿನಃ ಜನರಿಗೆ ಆ ಅಧಿಕಾರ ನೀಡಲಾಗುವುದಿಲ್ಲ' ಎಂದರು.

ಕೊಡಗು: ವ್ಯಾಘ್ರನ ಸೆರೆಗೆ ಮುಂದುವರಿದ ಕಾರ್ಯಾಚರಣೆ

ಸಿಗದ ಹುಲಿ: ನೀಗದ ಭಯ

ಮುಖ್ಯಾಂಶಗಳು
- ಗಾಯಾಳು ವೃದ್ಧನ ಸ್ಥಿತಿ ಗಂಭೀರ
- ಬೆಳೆಗಾರರು, ಕಾರ್ಮಿಕರ ಆಕ್ರೋಶ
- ಇನ್ನೂ ಸೆರೆಯಾಗದ ನರಭಕ್ಷಕ ಹುಲಿ

ಪ್ರಜಾವಾಣಿ ವಾರ್ತೆ

ಪೊನ್ನಂಪೇಟೆ (ಕೊಡಗು): ಕೊಡಗು ಜಿಲ್ಲೆಯ ದಕ್ಷಿಣ ಭಾಗದಲ್ಲಿ ಆತಂಕ ಸೃಷ್ಟಿಸಿರುವ ನರಭಕ್ಷಕ ಹುಲಿ ಸೆರೆಗೆ ಕಾರ್ಯಾಚರಣೆ ಮುಂದುವರಿದಿದ್ದು, ಹುಲಿಯ ಸುಳಿವು ಸಿಕ್ಕಿಲ್ಲ.

ಮತ್ತಿಗೋಡು ಸಾಕಾನೆಗಳ ಹಾಗೂ ಬಂಡೀಪುರ ಶ್ವಾನ 'ರಾಣಾ' ನೆರವು ಪಡೆದು, ಮಂಗಳವಾರವೂ 150ಕ್ಕೂ ಹೆಚ್ಚು ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದಾರೆ.

ಮತ್ತಿಗೋಡಿನ ಶ್ರೀಮಂಗಲ, ಪೊನ್ನಂಪೇಟೆ, ಮಂಚಳ್ಳಿ, ತೆರಾಲು, ತಾವಳಗೇರಿ, ಕುಮಟೂರು, ಬಾಡಗರಕೇರಿ, ಬೆಳ್ಳೂರು, ನಿಟ್ಟೂರು, ಹುದಿಕೇರಿ ಭಾಗದ ಗ್ರಾಮಸ್ಥರು ರೊಚ್ಚಿಗೆದ್ದಿದ್ದು, 'ಹುಲಿಯನ್ನು ಸೆರೆ ಹಿಡಿಯಬೇಕು. ಇಲ್ಲವೇ ಗುಂಡಿಕ್ಕಿ ಕೊಲ್ಲಬೇಕು' ಎಂದು ಆಗ್ರಹಿಸಿ, ಪ್ರತಿಭಟನೆ ನಡೆಸುತ್ತಿದ್ದಾರೆ.

ಹುಲಿಯು ಸಿಗದೇ ಇರುವುದರಿಂದ ಕಾರ್ಮಿಕರು, ಬೆಳೆಗಾರರು ಜೀವಭಯದಲ್ಲಿದ್ದಾರೆ. ಸಂಜೆ-ಬೆಳಿಗ್ಗೆ ಈ ಗ್ರಾಮಗಳಲ್ಲಿ ಜನ ಸಂಚಾರ ವಿರಳವಾಗಿದೆ.

ಹುಲಿ ದಾಳಿಯಿಂದ ಗಾಯಗೊಂಡು ಮೈಸೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಗುಂಡ್ಲುಪೇಟೆಯ ಕೆಂಚ (50) ಅವರ ಸ್ಥಿತಿ ಮತ್ತಷ್ಟು ಗಂಭೀರವಾಗಿದೆ.

ಹುಲಿ ಸೆರೆ ಹಿಡಿಯಲು ವಿಫಲವಾಗಿರುವ ಅರಣ್ಯ ಇಲಾಖೆ ವಿರುದ್ಧ ಪ್ರತಿಭಟನೆ ಮುಂದುವರಿಸಲು ಮಂಗಳವಾರ ನಡೆದ ರೈತ ಸಂಘದ ಸಭೆಯಲ್ಲಿ ನಿರ್ಧರಿಸಲಾಗಿದೆ.

ನರಭಕ್ಷಕ ಹುಲಿ ಸೆರೆ ಹಿಡಿಯಲು ಆಗ್ರಹಿಸಿ ಕೊಡಗು ಜಿಲ್ಲೆಯ ಬೆಳ್ಳೂರಿನಲ್ಲಿ ಮಂಗಳವಾರ ಕಾಫಿ ಬೆಳೆಗಾರರು ಪ್ರತಿಭಟನೆ ನಡೆಸಿದರು

ಬೆಳ್ಳೂರು ಗ್ರಾಮದಲ್ಲಿ ನಡೆಯುತ್ತಿರುವ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದ ರೈತ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಮನು ಸೋಮಯ್ಯ, 'ಮಂಗಳವಾರ ಬೆಳಿಗ್ಗೆ 11 ಗಂಟೆ ಒಳಗಾಗಿ ನರಭಕ್ಷಕ ಹುಲಿಯನ್ನು ಕೊಲ್ಲುವುದಾಗಿ ಭರವಸೆ ನೀಡಿದ್ದ ಅರಣ್ಯ ಇಲಾಖೆ ಅಧಿಕಾರಿಗಳು, ಈ ಕೆಲಸದಲ್ಲಿ ವಿಫಲವಾಗಿದ್ದು, ಪ್ರತಿಭಟನೆ ಮುಂದುವರಿಸುತ್ತೇವೆ' ಎಂದರು. ಮಾನವ, ವನ್ಯಜೀವಿಗಳ ಸಂಘರ್ಷಕ್ಕೆ ಪರಿಹಾರ ಸಿಗದಿರುವುದಕ್ಕೆ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ಇಚ್ಛಾಶಕ್ತಿಯ ಕೊರತೆ ಕಾರಣ ಎಂದು ಆಪಾದಿಸಿದರು.

'ಹುಲಿಯನ್ನು ಕೊಂದ ಮಾತ್ರಕ್ಕೆ ಸಮಸ್ಯೆಗೆ ಪರಿಹಾರ ಸಿಗುವುದಿಲ್ಲ. ಮಾನವ-ವನ್ಯಜೀವಿ ಸಂಘರ್ಷಕ್ಕೆ ಶಾಶ್ವತ ಪರಿಹಾರ ಸಿಗುವವರೆಗೂ ಹೋರಾಟ ಮುಂದುವರಿಸುವ ಅಗತ್ಯವಿದೆ' ಎಂದು ಹೇಳಿದರು.

'ಶಾಂತಿಯುತವಾಗಿ ರೈತರು ಪ್ರತಿಭಟನೆಗೆ ಮುಂದಾಗಿದ್ದರೂ ವಿರಾಜಪೇಟೆ ತಹಶೀಲ್ದಾರ್ ನಿರ್ದೇಶನದಲ್ಲಿ ಜಾರಿಗೊಳಿಸಿ ರೈತರ ಪ್ರತಿಭಟನೆಯನ್ನು ಹತ್ತಿಕ್ಕುವ ಪ್ರಯತ್ನ ಮಾಡಿದ್ದಾರೆ' ಎಂದು ದೂರಿದರು.

'ಯುಕೋ' ಸಂಘಟನೆ ಸಂಚಾಲಕ ಕೊಕ್ಕಲೆಮಾಡ ಮಂಜು ಚಿಣ್ಣಪ್ಪ, 'ಹುಲಿ ನರಭಕ್ಷಕ ಎಂದು ತಿಳಿದ ಮೇಲೂ ಅಧಿಕಾರಿಗಳು ಹುಲಿಯನ್ನು ಕೊಲ್ಲಲು ಹಿಂದೇಟು ಹಾಕುತ್ತಿರುವುದು ಸರಿಯಲ್ಲ. ಹೋರಾಟದಲ್ಲಿ ಪ್ರತಿಯೊಬ್ಬ ಗ್ರಾಮಸ್ಥರ ಕೊಡುಗೆ ಇರಬೇಕು. ಈಗ ನಡೆಯುತ್ತಿರುವ ಹೋರಾಟವು ಗ್ರಾಮಕ್ಕೆ ಮಾತ್ರ ಸೀಮಿತವಾದಂತಿದೆ. ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರಗಳನ್ನು ಬಂದ್ ಮಾಡಿದರೆ ಮಾತ್ರ ಹೋರಾಟ ತೀವ್ರತೆ ಪಡೆಯುತ್ತದೆ. ಆದರೆ ವ್ಯವಸ್ಥೆಯು ರೈತರಲ್ಲಿ ಗೊಂದಲ ಸೃಷ್ಟಿಸಿ ಹೋರಾಟವನ್ನು ಹತ್ತಿಕ್ಕುವ ಪ್ರಯತ್ನ ಮಾಡುತ್ತಿದೆ' ಎಂದರು.

'ಹುಲಿಯಿಂದ ಸಮಾಜದ ಎಲ್ಲ ಹಂತದ ಜನರಿಗೂ ತೊಂದರೆಯಾಗಿದೆ. ಹೋರಾಟಗಾರರು ಎಲ್ಲಿ ಹೋಗಿದ್ದಾರೆ' ಎಂದು ಜಿಲ್ಲಾ ಪಂಚಾಯಿತಿ ಸದಸ್ಯ ಶಿವು ಮಾದಪ್ಪ ಪ್ರಶ್ನಿಸಿದರು.

ಬುಧವಾರ ಬೆಳಿಗ್ಗೆ ಕಾನೂರು ಜಂಕ್ಷನ್‌ನಿಂದ ಜಾಥಾ ತೆರಳಿ, ಮತ್ತಿಗೋಡು ವನ್ಯಜೀವಿ ವಲಯ ಅರಣ್ಯ ಕಚೇರಿ ಎದುರು ಹೆದ್ದಾರಿ ತಡೆ ನಡೆಸಲಾಗುವುದು

ಮನು ಸೋಮಯ್ಯ, ಜಿಲ್ಲಾ ಘಟಕದ ಅಧ್ಯಕ್ಷ, ರೈತ ಸಂಘ

ಮೇ 21ರಿಂದ ಚಲನಚಿತ್ರೋತ್ಸವ

ಹುಬ್ಬಳ್ಳಿ: ನವ ಕರ್ನಾಟಕ ಚಲನಚಿತ್ರ ಅಕಾಡೆಮಿಯು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಸಹಯೋಗದಲ್ಲಿ ಮೇ 31ರಿಂದ ಮೂರು ದಿನ ಹುಬ್ಬಳ್ಳಿ-ಧಾರವಾಡದಲ್ಲಿ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಹಾಗೂ ಕಿರುಚಿತ್ರಗಳ ಸ್ಪರ್ಧೆ ಹಮ್ಮಿಕೊಂಡಿದೆ ಎಂದು ನಿರ್ಮಾಪಕ ಸಾ.ರಾ.ಗೋವಿಂದು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.

No:CCD/HS/Bio Rem/CR-2/2020-21 Date: 09.03.2021

ಆಸಕ್ತಿ ವ್ಯಕ್ತಪಡಿಸುವಿಕೆ ಆಹ್ವಾನಿಸುವ ಪ್ರಕಟಣೆ

ದಾವಣಗೆರೆ ಮಹಾನಗರ ಪಾಲಿಕೆ ಒಡೆತನದ ಆವರಗೊಳ್ಳ ವಿಲೇವಾರಿ ಘಟಕದಲ್ಲಿ ಸಂಗ್ರಹವಾಗಿರುವ ಪಾರಂಪರಿಕ ತ್ಯಾಜ್ಯವನ್ನು (Legacy Waste) ಸೂಕ್ತ ತಂತ್ರಜ್ಞಾನವನ್ನು ಉಪಯೋಗಿಸಿ ಬಯೋರೆಮಿಡಿಯೇಷನ್/ಬಯೋಮೈನಿಂಗ್ ಮೂಲಕ ವೈಜ್ಞಾನಿಕವಾಗಿ ಸಂಸ್ಕರಿಸಿ ವಿಲೇ ಮಾಡಲು ಆಸಕ್ತಿ ವ್ಯಕ್ತಪಡಿಸುವಿಕೆ (Expression of Interest) ಪ್ರಸ್ತಾವನೆಗಳನ್ನು ಈ ಮೂಲಕ ಆಹ್ವಾನಿಸಲಾಗಿದೆ.
ಆಸಕ್ತ ಖಾಸಗಿ/ಸಂಸ್ಥೆಗಳಿಂದ ವಿಸ್ತೃತ ಮಾಹಿತಿಯುಳ್ಳ ಪ್ರಸ್ತಾವನೆಗಳನ್ನು ಕರ್ನಾಟಕ ರಾಜ್ಯ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ (http://eprocurement.kar.nic.in) ಮುಖಾಂತರ ದಿನಾಂಕ: 10.03.2021 ರಿಂದ ಸಲ್ಲಿಸಬಹುದು. ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ 20.03.2021 ಸಂಜೆ 4.00 ಗಂಟೆಯವರೆಗೆ. ಹೆಚ್ಚಿನ ಮಾಹಿತಿಗಾಗಿ, ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ), ಮಹಾನಗರ ಪಾಲಿಕೆ, ದಾವಣಗೆರೆ ಇವರಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.

ವಾಸಾಇ/ದಾವಣಗೆರೆ/747/ಎಂಸಿಎ/2020–21

ಸಹಿ/– ಆಯುಕ್ತರು, ಮಹಾನಗರ ಪಾಲಿಕೆ, ದಾವಣಗೆರೆ

ಕುವೆಂಪು ವಿಶ್ವವಿದ್ಯಾನಿಲಯ

ಕುಲಸಚಿವರ ಕಾರ್ಯಾಲಯ
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ– 577 451, ಶಿವಮೊಗ್ಗ ಜಿಲ್ಲೆ
ದೂರವಾಣಿ : 08282-256221, ಇ–ಮೇಲ್ : kureg14@gmail.com
ಸಂಖ್ಯೆ:KU/AC/FPI/5368/2020-21 ದಿನಾಂಕ:03.03.2021

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕುವೆಂಪು ವಿಶ್ವವಿದ್ಯಾಲಯವು ಪ್ರಸ್ತುತ, ಹಿಂದಿನ ಮತ್ತು ಭವಿಷ್ಯದ ವಿದ್ಯಾರ್ಥಿಗಳು ಮತ್ತು ಅಧ್ಯಾಪಕವರ್ಗಕ್ಕೆ ಸಂಬಂಧಿಸಿದ ಚಟುವಟಿಕೆಗಳಿಗಾಗಿ ಕುವೆಂಪುವಿಶ್ವವಿದ್ಯಾಲಯಕ್ಕೆ Fraternity Platform Infrastructure (FPI)ಯ ವಿನ್ಯಾಸ, ಅಭಿವೃದ್ಧಿ, ಅನುಷ್ಠಾನ ಮತ್ತು ಮೂಲ ಸೌಕರ್ಯಗಳ ನಿರ್ವಹಣೆಗಾಗಿ" ಪ್ರತಿಷ್ಠಿತ ಮಾರಾಟಗಾರರಿಂದ ಕರ್ನಾಟಕ ಸರಕಾರದ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶದ ಪ್ರಕಾರ ಟೆಂಡರ್‌ಗಳನ್ನು ಆಹ್ವಾನಿಸುತ್ತದೆ. ಕರ್ನಾಟಕ ಸರಕಾರದ ಇ-ಗವರ್ನನ್ಸಲ್ಲಿ ನೋಂದಾಯಿತ ಗುತ್ತಿಗೆದಾರರು ಇ-ಟೆಂಡರ್‌ನಲ್ಲಿ ಭಾಗವಹಿಸಬಹುದು. ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್ ಸೈಟ್ https://eproc.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಅರ್ಹ ಟೆಂಡರ್‌ದಾರರು ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ನಿಗಧಿ ಪಡಿಸಿದಂತೆ ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗೆ ಕುಲಸಚಿವರನ್ನು ಸಂಪರ್ಕಿಸುವುದು. ದೂರವಾಣಿ ಸಂಖ್ಯೆ : 08282–256221.

ವಾ.ಸಾ.ಸಂ.ಇ./ಶಿ/ನಂ.57–03/ಝೇಂಕಾರ್/2020–21 ಸಹಿ/– ಕುಲಸಚಿವರು

ಕೆನರಾ ಬ್ಯಾಂಕ್ Canara Bank ಭಾರತ ಸರ್ಕಾರದ ಒಂದು ಉದ್ಯಮ / A Government of India Undertaking
ಸಿಂಡಿಕೇಟ್ Syndicate

ಆಸ್ತಿ ಮತ್ತು ಭವನ ವಿಭಾಗ, ವೃತ್ತ ಕಛೇರಿ,
ನಂ. 86, ಎಂ.ಜಿ.ರಸ್ತೆ, ಬೆಂಗಳೂರು–560001. ದೂ.: 25310038

ಗುತ್ತಿಗೆಗಾಗಿ ಸ್ಥಳದ ಅವಶ್ಯಕತೆ

ಕೆಳಕಂಡ ಪ್ರದೇಶ/ಸ್ಥಳಗಳಲ್ಲಿ ಶಾಖೆಗಳಿಗೆ ನಮೂದಿಸಿರುವ ವಿದ್ಯುತ್ ಪ್ರಮಾಣ ಮತ್ತು ವಾಹನ ನಿಲುಗಡೆಗೆ ಸಾಕಾಗುವಷ್ಟು ಸ್ಥಳಾವಕಾಶವಿರುವ ವಾಣಿಜ್ಯ ಸ್ಥಳಕ್ಕಾಗಿ ಸ್ವತ್ತಿನ ಮಾಲೀಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಸ್ಥಳ, ಜಿಲ್ಲೆ	ವಿದ್ಯುತ್ ಅವಶ್ಯಕತೆ	ಕಾರ್ಪೆಟ್ ಜಾಗ ಚ.ಅಡಿಗಳಲ್ಲಿ (ಅಂದಾಜು)
1	ತಾವರೆಕೆರೆ, ಮಾಗಡಿ ರಸ್ತೆ, ಬೆಂಗಳೂರು	20 KW	1500 ಚ.ಅಡಿ
2	ಸರಸ್ವತಿಪುರಂ, ಮೈಸೂರು	25 KW	2500 ಚ.ಅಡಿ
3	ಗೋಕುಲ, ಬೆಂಗಳೂರು	25 KW	2500 ಚ.ಅಡಿ
4	ವಿಜಯನಗರ, ಬೆಂಗಳೂರು	25 KW	2500 ಚ.ಅಡಿ
5	ಬನಶಂಕರಿ 3ನೇ ಹಂತ, ಬೆಂಗಳೂರು	25 KW	2500 ಚ.ಅಡಿ
6	ಭಾರತ್‌ನಗರ, ಮಾಗಡಿ ರಸ್ತೆ, ಬೆಂಗಳೂರು–91	25 KW	2500 ಚ.ಅಡಿ
7	ಕೆಂಪೇಗೌಡ ನಗರ, ಬೆಂಗಳೂರು–18	25 KW	2500 ಚ.ಅಡಿ
8	ರಾಮಕೃಷ್ಣ ಹೆಗ್ಡೆ ನಗರ, ಬೆಂಗಳೂರು	25 KW	2500 ಚ.ಅಡಿ
9	ಕಾಕ್ಸ್‌ಟೌನ್, ಬೆಂಗಳೂರು	25 KW	2500 ಚ.ಅಡಿ
10	ಶಾಂತಿನಗರ, ಬೆಂಗಳೂರು	30 KW	3000 ಚ.ಅಡಿ

ವಿವರಗಳನ್ನು ಬ್ಯಾಂಕಿನ ವೆಬ್‌ಸೈಟ್: http://www.canarabank.com ನಲ್ಲಿ ಪ್ರಕಟಿಸಲಾಗಿದೆ. ಅಗತ್ಯವಿರುವ ಅರ್ಜಿ ನಮೂನೆಗಳನ್ನು ಮೇಲ್ಕಂಡ ಕಛೇರಿ ಅಥವಾ ಸಂಬಂಧ ಪಟ್ಟ ಶಾಖೆಗಳಿಂದ ಪಡೆಯಬಹುದು, ಇಲ್ಲವೆ ಬ್ಯಾಂಕಿನ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಅರ್ಜಿಗಳನ್ನು ಈ ಮೇಲ್ಕಂಡ ಕಛೇರಿಯಲ್ಲಿ ಸಲ್ಲಿಸಲು ಕೊನೆಯ ದಿನಾಂಕ 25–03–2021ರ ಮಧ್ಯಾಹ್ನ 3.00 ಗಂಟೆಯೊಳಗೆ. ಇತರೆ ತಿದ್ದುಪಡಿಗಳಿದ್ದಲ್ಲಿ / ಮಾರ್ಪಾಡುಗಳಿದ್ದಲ್ಲಿ, ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. "ಮಧ್ಯವರ್ತಿಗಳಿಗೆ ಅವಕಾಶವಿಲ್ಲ".

ಸ್ಥಳ : ಬೆಂಗಳೂರು
ತಾರೀಖು : 10–03–2021

ಸಹಿ/– ಸಹಾಯಕ ಮಹಾ ಪ್ರಬಂಧಕರು, ಬೆಂಗಳೂರು ವೃತ್ತ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ,
ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560 001.
ಫೋನ್ : 080–22265383, ಫ್ಯಾಕ್ಸ್: 080–22267901,
website: www.kiadb.in Email: ceoemkiadb@gmail.com
ಸಂ. ಕ.ಕೈ.ಪ್ರ.ಅ.ಮಂ/ಜ.ನಿ(ನ.ಗ್ರಾ.ಯೋ)/13095/2020–21 ದಿನಾಂಕ: 06.03.2021

ಪ್ರಕಟಣೆ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಕೈಗಾರಿಕೆಗಳ ತ್ವರಿತ ಮತ್ತು ಕ್ರಮಬದ್ಧ ಸ್ಥಾಪನೆ, ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಸಂವರ್ಧಿಸುವ ಮತ್ತು ಅದಕ್ಕೆ ನೆರವು ನೀಡುವ ಮತ್ತು ಕೈಗಾರಿಕೆ ಪ್ರದೇಶಗಳಲ್ಲಿ ಕೈಗಾರಿಕಾ ಮೂಲ ಸೌಕರ್ಯಗಳು ಮತ್ತು ಸೌಲಭ್ಯಗಳನ್ನು ಒದಗಿಸುವ ಪ್ರಕಾರ್ಯಗಳನ್ನು ನಿರ್ವಹಿಸುತ್ತಿರುತ್ತದೆ. ರಾಜ್ಯ ಸರ್ಕಾರವು ಘೋಷಿಸಿದ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸುವುದು ಮತ್ತು ತಾವೇ ಉದ್ಯಮಗಳ ಸ್ಥಾಪನೆಗೆ ಅವುಗಳ ಲಭ್ಯವಾಗುವಂತೆ ಮಾಡುವುದು ಮಂಡಳಿಯ ಪ್ರಕಾರ್ಯವಾಗಿರುತ್ತದೆ.
ಮಂಡಳಿಯ ಕೈಗಾರಿಕಾ ಪ್ರದೇಶಗಳಲ್ಲಿ ಉದ್ದಿಮೆದಾರರು ಕಾರ್ಖಾನೆ ಸ್ಥಾಪನೆ ಮತ್ತು ನಿರ್ಮಾಣ ಮಾಡುವುದಕ್ಕೆ ಸಂಬಂಧಿಸಿದಂತೆ ನಿಯಮಾನುಸಾರ ಅಭಿವೃದ್ಧಿ ಯೋಜನೆ ನಕ್ಷೆ, ಕಟ್ಟಡ ನಕ್ಷೆಗಳನ್ನು ತಯಾರಿಸುವುದು ವಿನ್ಯಾಸಗೊಳಿಸುವುದು, ಪ್ರಾರಂಭಿಕ ಪ್ರಮಾಣ ಪತ್ರ, ಸ್ವಾಧೀನಾನುಭವ ಪ್ರಮಾಣ ಪತ್ರ ಪಡೆಯುವಲ್ಲಿ ಮತ್ತು ಮೇಲ್ವಿಚಾರಣೆಗಾಗಿ ತಾಂತ್ರಿಕ ಪರಿಣಿತರ/ವೃತ್ತಿಪರರು (Architects/Engineers/Town Planners/Structural Engineers) ಸೇವೆಯು ಅವಶ್ಯಕವಾಗಿರುತ್ತದೆ. ಮಂಡಳಿಯಲ್ಲಿ ನೋಂದಾಯಿತ ತಾಂತ್ರಿಕ ವೃತ್ತಿಪರರಿಗೆ ಕೈಗಾರಿಕಾ ಪ್ರದೇಶಗಳಲ್ಲಿ ನಿವೇಶನದ ಅಭಿವೃದ್ಧಿ ನಕ್ಷೆ, ಕಟ್ಟಡದ ನಕ್ಷೆ Structural Design, Architectural Drawings ಗಳನ್ನು ತಯಾರಿಸಲು ಮತ್ತು ಪ್ರಾರಂಭಿಕ ಪ್ರಮಾಣ ಪತ್ರ (Commencement Certificate) ಹಾಗೂ ಸ್ವಾಧೀನಾನುಭವದ ಪ್ರಮಾಣ ಪತ್ರ (Occupancy Certificate) ಗಳನ್ನು ನೀಡುವ ಸಂಬಂಧ ದೃಢೀಕೃತ ನಕ್ಷೆಗಳು ಮತ್ತು ವರದಿಗಳನ್ನು ಸಲ್ಲಿಸಲು ಅಧಿಕೃತಗೊಳಿಸಲಾಗುವುದು.
ಆದಕಾರಣ, ತಾಂತ್ರಿಕ ಪರಿಣಿತರು/ವೃತ್ತಿಪರರು (Architects/ Engineers/Town Planners/Structural Engineers) ಸಮಾಲೋಚಕ ಸೇವೆಗಾಗಿ ಮಂಡಳಿಯಲ್ಲಿ ನೋಂದಾಯಿಸಿಕೊಳ್ಳಲು ಕೋರಲಾಗಿದೆ. ನೋಂದಾವಣೆ ಮಾಡಿಕೊಳ್ಳಲು ಅನುಸರಿಸಬೇಕಾದ ಕ್ರಮಗಳ ಮತ್ತು ಅರ್ಜಿ ನಮೂನೆಗಳನ್ನು ಮಂಡಳಿಯ ಜಾಲತಾಣ website: www.kiadb.in ದಲ್ಲಿ ಪ್ರಕಟಿಸಲಾಗಿದೆ. ಆಸಕ್ತಿಯುಳ್ಳ ತಾಂತ್ರಿಕ ಪರಿಣಿತರು/ವೃತ್ತಿಪರರು (Architects/ Engineers/ Town Planners/Structural Engineers) ಮಂಡಳಿಯಲ್ಲಿ ನೋಂದಾಯಿಸಿಕೊಳ್ಳಲು ಅಗತ್ಯ ದಾಖಲಾತಿಗಳೊಂದಿಗೆ (ಸ್ವಯಂ–ದೃಢೀಕೃತ) ನಿಗದಿತ ನಮೂನೆಯಲ್ಲಿ ಈ ಪ್ರಕಟಣೆ ದಿನಾಂಕದಿಂದ ಅರ್ಜಿಗಳನ್ನು ಸಲ್ಲಿಸಿ ನೋಂದಾವಣೆ ಮಾಡಿಕೊಳ್ಳಬಹುದಾಗಿದೆ.

ಸಹಿ/– ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಮತ್ತು ಕಾರ್ಯನಿರ್ವಾಹಕ ಸದಸ್ಯರು

DIPR/DDU/Zen/R.O:3062/2020-21

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಆಯುಕ್ತರ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ
ಕೇಂದ್ರೀಕೃತ ದಾಖಲಾತಿ ಘಟಕ, ಸೆಂಟ್ರಲ್ ಜೂನಿಯರ್ ಕಾಲೇಜು ಆವರಣ, ಕೆಂಪೇಗೌಡ ರಸ್ತೆ, ಬೆಂಗಳೂರು–560009, ದೂ: 22228805, 22483140, 22483145
ಇ–ಮೇಲ್: :- cackarnataka@gmail.com

ಪತ್ರಿಕಾ ಪ್ರಕಟಣೆ

2020–21ನೇ ಸಾಲಿನ ಬಿ.ಇಡಿ ಕೋರ್ಸಿನ ದಾಖಲಾತಿಗಾಗಿ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ದಿನಾಂಕ: 04–03–2021 ರಂದು ಇಲಾಖಾ ವೆಬ್ ಸೈಟ್ ನಲ್ಲಿ ಪ್ರಕಟಿಸಲಾಗಿದೆ. ಸದರಿ ಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ ಆನ್ ಲೈನ್ ಮೂಲಕ ನಿಗದಿತ ಶುಲ್ಕ ಪಾವತಿಸಿ ಹಂಚಿಕೆಯಾದ ಕಾಲೇಜಿಗೆ ದಾಖಲಾತಿ ಪಡೆಯಲು ದಿನಾಂಕ: 10–03–2021 ರವರೆಗೆ ಅವಕಾಶ ಕಲ್ಪಿಸಲಾಗಿತ್ತು. ಅಭ್ಯರ್ಥಿಗಳ ಹಿತದೃಷ್ಟಿಯಿಂದ ದಾಖಲಾತಿಗೆ ನಿಗದಿಪಡಿಸಿದ್ದ ಅಂತಿಮ ದಿನಾಂಕವನ್ನು 20–03–2021 ರವರೆಗೆ ವಿಸ್ತರಿಸಲಾಗಿದೆ.

ವಾಸಾಸಂಇ/ಬೆಂ.ನ/ಶಿರಡಿ ಸಾಯಿ/3065/2020–21 ಸಹಿ/– ವಿಶೇಷಾಧಿಕಾರಿ

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರಕಾರ
ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ
ಮಂಗಳೂರು
ಟೆಂಡರ್ ಪ್ರಕಟಣೆ ಸಂಖ್ಯೆ: ಕಾ.ನಿ.ಇ.ಗ್ರಾ.ಕು.ನೀ.ಸ & ನೈ:ವಿ:ಮಂ: ದಿ:- 05.03.2021
ಟೆಂಡರ್:ಎಇ-1:2020-21/1836

ಕರ್ನಾಟಕ ರಾಜ್ಯಪಾಲರ ಪರವಾಗಿ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್‌ರವರಿಂದ ಅರ್ಹ ಗುತ್ತಿಗೆದಾರರಿಂದ ಗ್ರಾಮೀಣಾಭಿವೃದ್ಧಿ ಇಂಜಿನಿಯರಿಂಗ್ ಇಲಾಖೆಯಲ್ಲಿ ನೋಂದಾಯಿಸಲಾದ ಅರ್ಹ 4ನೇ ದರ್ಜೆ ಮತ್ತು ಮೇಲ್ಪಟ್ಟ ಸಾಮಾನ್ಯ ವರ್ಗ/ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಗುತ್ತಿಗೆದಾರರಿಂದ 2020-21ನೇ ಸಾಲಿನ ಜಲಜೀವನ್ ಮಿಷನ್ ಯೋಜನೆ ಲೆಕ್ಕ ಶೀರ್ಷಿಕೆಯಡಿ ಕಾಮಗಾರಿಗಳಿಗೆ Tender document KW-1, K/W-2, K/W-3 & K/W-4 ಆಧಾರದ ಮೇಲೆ ಇ-ಪ್ರೊಕ್ಯೂರ್‌ಮೆಂಟ್ ವೇದಿಕೆಯ ಮೂಲಕ ಐಟಂವಾರು ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರನ್ನು www.eproc.karnataka.gov.in ವೆಬ್‌ಸೈಟ್‌ನಲ್ಲಿ ಸ್ವೀಕರಿಸಲಾಗುವುದು.

ಕಾಮಗಾರಿಗಳ ಸಂಖ್ಯೆ:-
1. ಬಂಟ್ವಾಳ ತಾಲೂಕು - 10 ಪ್ಯಾಕೇಜ್, ಅಂದಾಜು ಮೊತ್ತ - ರೂ. 1796.72 ಲಕ್ಷ
2. ಬೆಳ್ತಂಗಡಿ ತಾಲೂಕು - 4 ಪ್ಯಾಕೇಜ್, ಅಂದಾಜು ಮೊತ್ತ - ರೂ. 880.40 ಲಕ್ಷ
3. ಮಂಗಳೂರು ತಾಲೂಕು - 5 ಅಂದಾಜು ಮೊತ್ತ - ರೂ. 393.80 ಲಕ್ಷ; 10 ಪ್ಯಾಕೇಜ್, ಅಂದಾಜು ಮೊತ್ತ - ರೂ. 1665.62 ಲಕ್ಷ
4. ಪುತ್ತೂರು ತಾಲೂಕು - 2 ಪ್ಯಾಕೇಜ್, ಅಂದಾಜು ಮೊತ್ತ - ರೂ. 72.65 ಲಕ್ಷ
5. ಸುಳ್ಯ ತಾಲೂಕು - 2 ಪ್ಯಾಕೇಜ್, ಅಂದಾಜು ಮೊತ್ತ - ರೂ. 438.08 ಲಕ್ಷ

1. ಟೆಂಡರ್ ದಾಖಲೆಗಳನ್ನು Download ಮಾಡಿಕೊಳ್ಳುವ ದಿನಾಂಕ: 08.03.2021 ರಿಂದ 26.03.2021
2. ಭರ್ತಿ ಮಾಡಿದ ಟೆಂಡರುಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:26.03.2021 ಸಂಜೆ 5.30 ಗಂಟೆಯವರೆಗೆ
3. ಟೆಂಡರನ್ನು ತೆರೆಯುವ ದಿನಾಂಕ: 27.03.2021 ಸಂಜೆ 5.30. ಗಂಟೆಗೆ

ಹೆಚ್ಚಿನ ವಿವರಗಳಿಗೆ ಈ ಕಛೇರಿ ದೂರವಾಣಿ ಸಂಖ್ಯೆ: 0824-2220583ಕ್ಕೆ ಸಂಪರ್ಕಿಸಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ದಕ್ಷಿಣ ಕನ್ನಡ ವಿಭಾಗ, ಮಂಗಳೂರು

DIPR / MNG / 1040 / MPL / 20-21

ಕರ್ನಾಟಕ ಸರ್ಕಾರ
ಜಲ ಸಂಪನ್ಮೂಲ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನೀಯರ ರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೊಪ್ಪಳ.
E-mail: eemidnkst@rediffmail.com
ಕ್ರ.ಸಂ: ಕಾನಿಇಂ/ಸನೀ&ಅಂಅವಿ/ಕೊಪ್ಪಳ/ತಾಶಾ/2020–21/672 ದಿನಾಂಕ :06.03.2021

ಅಲ್ಪಾವಧಿ ಟೆಂಡರ್ ವಿಸ್ತರಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಈ ಕಛೇರಿ ಅಲ್ಪಾವಧಿ ಪ್ರಕಟಣೆ ಸಂಖ್ಯೆ: 524 ದಿನಾಂಕ: 25–02–2020 ರಲ್ಲಿ ಕರೆದ ಕಾಮಗಾರಿಗಳ ಇಂಡೆಂಟ್ ಸಂಖ್ಯೆ 31261 ಮತ್ತು 31628 ರಲ್ಲಿಯ ಕಾಮಗಾರಿಗಳಿಗೆ ಸಂಬಂದಿಸಿದಂತೆ ತಾಂತ್ರಿಕ ಕಾರಣಗಳಿಂದ ಟೆಂಡರ ಸಲ್ಲಿಸುವುದನ್ನು ಈ ಕೆಳಗಿನಂತೆ ವಿಸ್ತರಿಸಲಾಗಿದೆ.
ಗುತ್ತಿಗೆದಾರರು ಕರ್ನಾಟಕ ಸರ್ಕಾರದ "ಇ–ಪ್ರಕ್ಯೂರ್‌ಮೆಂಟ್" ವೆಬ್‌ಸೈಟ್ http://eproc.karntaka.gov.in/ eportal/ index.seam ಟೆಂಡರ ಸಲ್ಲಿಸಲು ಅಂತಿಮ ದಿನಾಂಕ: 18–03–2021 ರ ಸಂಜೆ 5.30 ಗಂಟೆಯವರೆಗೆ ಸಲ್ಲಿಸಬಹುದು. ಟೆಂಡರ್ ತಾಂತ್ರಿಕ ಬಿಡ್‌ನ್ನು ದಿನಾಂಕ: 20–03–2021 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಟೆಂಡರ್ ಆರ್ಥಿಕ ಬಿಡ್‌ನ್ನು ದಿನಾಂಕ: 22–03–2021 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು, ಕಾಮಗಾರಿ ವಿವರ ಅಥವಾ "ಇ–ಪ್ರಕ್ಯೂರ್‌ಮೆಂಟ್" ಹೆಲ್ಪ್ ಡೆಸ್ಕ್‌ನಿಂದ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೊಪ್ಪಳ

ಡಿಐಪಿಆರ್/ಕೊಪ್ಪಳ/454/ಎಂಸಿಎ/2020–21

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ. ಮೈಸೂರು ವಿಭಾಗ, ಮೈಸೂರು
www:eemys@kpwd.gov.in ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 08212420810

ಐಟಂವಾರು ಟೆಂಡರು ಅಧಿಸೂಚನೆ ಸಂ.32/2020–21/ ದಿನಾಂಕ: 09.03.2021

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್‌ರವರಿಂದ ಈ ವಿಭಾಗ ವ್ಯಾಪ್ತಿಯ ನಂಜನಗೂಡು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ KW-2, ಮತ್ತು KW-3 ನಿಬಂಧನೆ ಮತ್ತು ಷರತ್ತುಗಳನ್ವಯ ಟೆಂಡರ್‌ನ್ನು ಏಕ-ಲಕೋಟೆ ಹಾಗೂ ಎರಡು ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಕಾಮಗಾರಿಗಳಲ್ಲಿ ಗರಿಷ್ಠ ಟೆಂಡರಿಗಿಟ್ಟ ಮೊತ್ತ ರೂ. 66.93 ಲಕ್ಷಗಳು ಮತ್ತು ಕನಿಷ್ಠ ಟೆಂಡರಿಗಿಟ್ಟ ಮೊತ್ತ ರೂ. 43.37 ಲಕ್ಷಗಳಾಗಿರುತ್ತದೆ. ಸರ್ಕಾರದ ಆದೇಶ ಸಂ:DE675 ವೆಚ್ಚ–12/2020, ಬೆಂಗಳೂರು ದಿನಾಂಕ: 22.12.2020 ರನ್ವಯ ದಿನಾಂಕ: 31.12.2021 ರವರೆಗಿನ ಎಲ್ಲಾ ಟೆಂಡರ್‌ಗಳಿಗೆ ಇ.ಎಂ.ಡಿ ಬದಲಾಗಿ ಇ.ಎಂ.ಡಿ ಡಿಕ್ಲರೇಷನ್ ಫಾರಂನ್ನು ಟೆಂಡರ್ ದಾಖಲಾತಿಗಳೊಂದಿಗೆ ಸಲ್ಲಿಸಲು ಸೂಚಿಸಿದೆ. 3ನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ನೊಂದಾಯಿಸಿರುವವರು ಭಾಗವಹಿಸಬಹುದು. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (http://eproc.karnataka.gov.in) ಕಾಮಗಾರಿಗಳ ಟೆಂಡರ್‌ಗಳನ್ನು ದಿನಾಂಕ:17.03.2021 ಸಂಜೆ 4.00 ಘಂಟೆವರೆಗೆ ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಮೈಸೂರು ವಿಭಾಗ, ಮೈಸೂರು.

AMBEDKAR DEVELOPMENT CORPORATION
ಡಾ: ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ
9 ಮತ್ತು 10ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕಗೋಪುರ, ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು–01. ಫೋನ್: 080–22865401, 22868870, 22865747 / 194/ 1986
ಸಂಖ್ಯೆ: ಅಂಅನಿ/ಗಂಕಯೋ/3ನೇ.ತ.ಟೆಂಡರ್/2020–21/13573 ದಿನಾಂಕ: 09–03–2021

ಟೆಂಡರ್ ಪ್ರಕಟಣೆ (ಇ–ಪೋರ್ಟಲ್ ಮುಖಾಂತರ)

ಡಾ॥ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ವತಿಯಿಂದ ಗಂಗಾ ಕಲ್ಯಾಣ ಯೋಜನೆಯಡಿ 2019–20 ಮತ್ತು 2020–21ನೇ ಸಾಲಿನಲ್ಲಿ ಕೊರೆದ ಕೊಳವೆಬಾವಿಗಳ ಆಳ, ಕೊಳವೆಬಾವಿಗಳಿಗೆ ಅಳವಡಿಸುವ ಕೇಸಿಂಗ್ ಪೈಪ್‌ನ ಗುಣಮಟ್ಟ, ಉದ್ದ ಹಾಗೂ ಸರಬರಾಜು ಮಾಡುವ ಪಂಪ್‌ಸೆಟ್ಸ್ ಮತ್ತು ಪೂರಕ ಸಾಮಗ್ರಿಗಳ ವಿಶಿಷ್ಟತೆಯ ಗುಣಮಟ್ಟವನ್ನು ಪರಿಶೀಲಿಸಲು 3ನೇ ತಪಾಸಣಾ ಸಂಸ್ಥೆಗಳಿಂದ ಒಟ್ಟು ನಾಲ್ಕು ಪ್ಯಾಕೇಜ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಸದರಿ ಪ್ಯಾಕೇಜ್ ಟೆಂಡರ್‌ಗಳಲ್ಲಿ ಭಾಗವಹಿಸಲು ಬೇಕಾದ ಅರ್ಹತೆ, ಟೆಂಡರ್ ಸಲ್ಲಿಸುವ ವಿಧಾನ, ನಿಬಂದನೆಗಳು, ಪ್ಯಾಕೇಜ್‌ವಾರು ಟೆಂಡರ್‌ಗಿಟ್ಟ ಮೊತ್ತ, ಕೊಳವೆಬಾವಿಗಳ ಸಂಖ್ಯೆ, ಪಂಪ್‌ಸೆಟ್‌ಗಳ ಸಂಖ್ಯೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಅಂತರ್ಜಾಲ ತಾಣ https://eproc.karnataka.gov.in ನಲ್ಲಿ ಅಥವಾ ಕಛೇರಿ ವೇಳೆಯಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.
(1) ಇ–ಪೋರ್ಟಲ್ ಮೂಲಕ ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 10–03–2021. (2) ಇ–ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕ: 24–03–2021 ಸಂಜೆ 5:00 ಗಂಟೆ. (3) ಪ್ರೀ ಬಿಡ್ ಸಭೆಯ ದಿನಾಂಕ: 16–03–2021 ಬೆಳಿಗ್ಗೆ 11:00 ಗಂಟೆಗೆ. (4) ಪ್ರಿ ಬಿಡ್ Queries ಸಲ್ಲಿಸಲು ಕೊನೆಯ ದಿನಾಂಕ: 17–03–2021 ಸಂಜೆ 5:00 ಗಂಟೆಗೆ. (5) ಟೆಂಡರ್‌ಗೆ ಸಂಬಂಧಿಸಿದಂತೆ ತಿದ್ದುಪಡಿಗಳು ಏನಾದರೂ ಇದ್ದಲ್ಲಿ ಇ–ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು. (6) ಕಂಡೀಷನ್ ಟೆಂಡರ್‌ಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಇಂಜಿನಿಯರ್ ಮತ್ತು ಟೆಂಡರ್ ಆಹ್ವಾನಿಸುವ ಪ್ರಾಧಿಕಾರ.

DIPR/DDU/RO3069/AAPL/2020-21

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

Government of Karnataka
HOUSING DEPARTMENT
KARNATAKA GOVERNMENT SECRETARIAT,
Vikasa Soudha, Bengaluru.
No. DOH 16 RERA 2021 Date: 09.03.2021

NOTIFICATION

The detailed notification inviting applications from the eligible persons for appointment to the posts of Chairperson and Member of Karnataka Real Estate Regulatory Authority is placed on the website : www.rera.karnataka.gov.in.
Interested persons may apply till 5.00 p.m. on 09.04.2021.

By Order and in the name of the Governor of Karnataka.
Sd/- (MANOJ KUMAR MEENA)
Secretary to Government, Housing Department.

STAY PROTECTED FROM COVID-19, NO CARELESSNESS UNTIL THERE IS A CURE.
Wear Mask | 6 Feet Follow Physical Distancing | Maintain Hand Hygiene

ಕರ್ನಾಟಕ ಸರ್ಕಾರ
ಹಿರಿಯ ಭೂ ವಿಜ್ಞಾನಿ(ಖ) ರವರ ಕಛೇರಿ
ಗಣಿ ಮತ್ತು ಭೂವಿಜ್ಞಾನ ಇಲಾಖೆ, ನಂ.04, ಗಗನಚುಂಬಿ ಜೋಡಿ ರಸ್ತೆ,
ಕುವೆಂಪುನಗರ ಮೈಸೂರು–570023
ಇ–ಮೇಲ್: sgmmysore@gmail.com, ದೂರವಾಣಿ ಸಂಖ್ಯೆ: 0821–2561240
ಸಂಖ್ಯೆ: DMG/SGM/DroneSurvey-01/ 2020-21 ದಿನಾಂಕ: 09.03.2021

ಇ–ಟೆಂಡರ್ ಪ್ರಕಟಣೆ

ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿನ ಕಲ್ಲುಗಣಿ ಗುತ್ತಿಗೆ ಪ್ರದೇಶ ಮತ್ತು ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳು ಗುರುತಿಸುವ ಇತರೆ ಯಾವುದೇ ಕಲ್ಲು ಗಣಿ ಪ್ರದೇಶವನ್ನು Drone/DGPS ಸಮೀಕ್ಷೆ ಮೂಲಕ ಗಡಿಗಳನ್ನು ಗುರುತಿಸುವುದು, ಗುತ್ತಿಗೆ ಪ್ರದೇಶದ ಒಳಗೆ ಹಾಗೂ ಹೊರಗೆ ತೆಗೆಯಲಾಗಿರುವ ಖನಿಜದ ಪ್ರಮಾಣವನ್ನು ಅಂದಾಜಿಸುವುದು ಮತ್ತು ಕಲ್ಲುಗಣಿ ಗುತ್ತಿಗೆಗಳ Reduced Level ಅನ್ನು ದಾಖಲಿಸುವ ಸೇವೆಯನ್ನು ಒದಗಿಸಲು ಅರ್ಹ ಬಿಡ್ಡುದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸುತ್ತಿರುವ ಬಗ್ಗೆ. 1) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಡಾಕ್ಯುಮೆಂಟ್ ಹಾಗೂ ಇನ್ನಿತರೆ ವಿವರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾದ ದಿನಾಂಕ: 09–03–2021. 2) ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ ಮತ್ತು ಸ್ಥಳ: ದಿನಾಂಕ: 22–03–2021 ರಂದು ಬೆಳಗ್ಗೆ 11.00 ಗಂಟೆಗೆ. ಸ್ಥಳ : ಹಿರಿಯ ಭೂವಿಜ್ಞಾನಿಯವರ ಕಛೇರಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ನಂ.4, ಗಗನಚುಂಬಿ ಜೋಡಿ ರಸ್ತೆ, ಕುವೆಂಪುನಗರ, ಮೈಸೂರು–570023. 3) ಟೆಂಡರ್ ದಸ್ತಾವೇಜು ಸಲ್ಲಿಸಲು ಕೊನೆಯ ದಿನಾಂಕ: 29–03–2021 ಸಂಜೆ 5.30 ಗಂಟೆವರೆಗೆ. 4) ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 02–04–2021 ಬೆಳಗ್ಗೆ 11.00. ಟೆಂಡರ್ ದಾಖಲಾತಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವಿಳಾಸ: https://eproc.karnataka.gov.in ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಹಿರಿಯ ಭೂವಿಜ್ಞಾನಿಯವರ ಕಛೇರಿ, ಮೈಸೂರು ರವರನ್ನು ಅಥವಾ ದೂರವಾಣಿ ಸಂ: 0821–2561240 ರ ಮೂಲಕ ಸಂಪರ್ಕಿಸಲು ಕೋರಿದೆ. ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ತಿದ್ದುಪಡಿ/ಬದಲಾವಣೆಗಳು ಇದ್ದಲ್ಲಿ ವಿದ್ಯನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ತಿದ್ದುಪಡಿ/ಬದಲಾವಣೆಗಳನ್ನು ಪ್ರಕಟಿಸಲಾಗುವುದೆಂದು ತಿಳಿಯಪಡಿಸಿದೆ.

ಸಹಿ/– ಹಿರಿಯ ಭೂವಿಜ್ಞಾನಿ ಹಾಗೂ ಸದಸ್ಯ ಕಾರ್ಯದರ್ಶಿ, ಜಿಲ್ಲಾ ಟಾಸ್ಕ್ ಫೋರ್ಸ್ (ಗಣಿ) ಸಮಿತಿ, ಮೈಸೂರು ಜಿಲ್ಲೆ

ವಾಸಾಸಂಇ/ಮೈಸೂರು/ಶಿರಡಿಸಾಯಿ/1120/2020–21

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರವರ ಕಚೇರಿ, ಕೃಭಾಜನಿನಿ,
ಐಬಿಸಿ ನಿಮಪೋ ವಿಭಾಗ, ರಾಂಪೂರ (ಪ.ಅ). ತಾ: ಸಿಂದಗಿ, ಜಿ: ವಿಜಯಪುರ.
ದೂರವಾಣಿ ಸಂಖ್ಯೆ: 08488–224328, ಇ–ಮೇಲ್: kbjnleerampur@gmail.com
CIN L 85320 KA 1994 SGC 016101
ಸಂಖ್ಯೆ:ಕೃಭಾಜನಿನಿ/ಐಬಿಸಿ/ನಿಮಪೋ/ವಿರಾಂ/ಪಿಬಿ–2/2020–21/2230 ದಿನಾಂಕ: 08.03.2021

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಪರವಾಗಿ ಕಾರ್ಯಪಾಲಕ ಅಭಿಯಂತರರು, ಕೃಭಾಜನಿನಿ, ಐಬಿಸಿ ನಿಮಪೋ ವಿಭಾಗ, ರಾಂಪೂರ (ಪ.ಅ) ಇವರು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಈ ಕೆಳಕಾಣಿಸಿದ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ದರದ ಟೆಂಡರನ್ನು ದ್ವಿ–ಲಕೋಟೆ ಪದ್ಧತಿಯ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ್ ಮೂಲಕ ವೆಬ್‌ಸೈಟ್ (http://eproc.karnataka.gov.in) ಮಾಹಿತಿ ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಭಾಗವಹಿಸಬಹುದು.
ಕಾಮಗಾರಿಗಳ ಹೆಸರು : Protection Wall to the shri Mallikarjuna Temple on Upstream side of kallur(B) Bridge cum Barrage on the bank of Bheema river at Chinamalli village. (I no- 20397)
ಟೆಂಡರಿಗಿಟ್ಟ ಮೊತ್ತ : ರೂ 114.22 ಲಕ್ಷಗಳು, ಇ.ಎಂ.ಡಿ. ಮೊತ್ತ : ರೂ. 1.71 ಲಕ್ಷಗಳು, ಟೆಂಡರ್ ಪ್ರಕ್ರಿಯೆ ದಿನಾಂಕಗಳು ಈ ಕೆಳಗಿನಂತಿವೆ.
- ಇ–ಪ್ರೊಕ್ಯೂರ್‌ಮೆಂಟ್ (http://eproc.karnataka.gov.in) ವೆಬ್‌ಸೈಟ್‌ನಿಂದ ಖಾಲಿ ಟೆಂಡರ್ ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವುದು ಮತ್ತು ಭರ್ತಿ ಮಾಡಿದ ಬಿಡ್ ದಾಖಲೆಗಳನ್ನು ಸಲ್ಲಿಸುವ ದಿನಾಂಕ: 10.03.2021 ರಿಂದ 20.03.2021 ರ ಸಾಯಂಕಾಲ 5:00 ಗಂಟೆಯವರೆಗೆ ಸಲ್ಲಿಸುವುದು.
- ಭರ್ತಿಗೊಳಿಸಿದ ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 20.03.2021ರ ಸಾಯಂಕಾಲ 5.00 ಗಂಟೆಯವರೆಗೆ ಸಲ್ಲಿಸುವುದು.
- ತಾಂತ್ರಿಕ ಬಿಡ್‌ನ್ನು(ಕವರ್–1)ನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಐಬಿಸಿ ನಿಮಪೋ ವಿಭಾಗ, ರಾಂಪೂರ (ಪಿಎ), ತಾ: ಸಿಂದಗಿ, ಜಿಲ್ಲೆ:ವಿಜಯಪೂರ ಕಛೇರಿಯಲ್ಲಿ 23.03.2021ರ ಬೆಳಿಗ್ಗೆ 11.00 ಗಂಟೆಗೆ ಹಾಜರಿದ್ದ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವುದು.
- ಹೆಚ್ಚಿನ ಮಾಹಿತಿಯನ್ನು ಕಾರ್ಯಪಾಲಕ ಅಭಿಯಂತರರು, ಕೃಭಾಜನಿನಿ, ಐಬಿಸಿ ನಿಮಪೋ ವಿಭಾಗ, ರಾಂಪೂರ (ಪ.ಅ) ಕಛೇರಿ ವೇಳೆಯಲ್ಲಿ ಪಡೆಯಬಹುದು ಅಥವಾ (http://eproc.karnataka.gov.in) ವೆಬ್‌ಸೈಟ್‌ನಿಂದ ಪಡೆಯಬಹುದು.
- ಮೇಲ್ಕಂಡ ದಿನಾಂಕಗಳಂದು ಸರ್ಕಾರಿ ರಜೆ ಘೋಷಣೆಯಾದಲ್ಲಿ ಅದರ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸುವುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಐಬಿಸಿ ನಿಮಪೋ ವಿಭಾಗ, ರಾಂಪೂರ (ಪ.ಅ)

ವಾಸಾಸಂಇ/ವಿಜಯಪುರ/608/ಜಿಎ/2020–21

ಕರ್ನಾಟಕ ಸರ್ಕಾರ
(ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಬಂದರು ವಿಭಾಗ, ಬೈತಖೋಲ್, ಕಾರವಾರ (ಉ.ಕ)–581302
ಫೋನ್/ ಫ್ಯಾಕ್ಸ್: 08382-229672 ಇಮೇಲ್: eepdk@rediffmail.com/ eepdkwr4@gmail.com
ನಂ: ಕಾನಿಇಂ/ಬಂವಿಕಾ:ಟೆಂಡರ–12(2)/2020–21/989 ದಿನಾಂಕ: 06.03.2021

ಟೆಂಡರು ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ದ್ವಿ ಲಕೋಟೆ ಪದ್ಧತಿಯಲ್ಲಿ ಮಾತ್ರ)

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಈ ಕೆಳಗೆ ನಮೂದಿಸಿದ ಕಾಮಗಾರಿಗಳನ್ನು ಕೈಗೊಳ್ಳಲು ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು, www.eproc.karnatakagov.in ನಲ್ಲಿ ಹೆಚ್ಚಿನ ಮಾಹಿತಿ ಪಡೆದು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಪಾಲ್ಗೊಳ್ಳಬಹುದಾಗಿದೆ. ಸದರಿ ಟೆಂಡರಿನ ಅವಧಿ ವಿಸ್ತರಣೆಯ ಮಾಹಿತಿಯನ್ನು ಮೇಲೆ ತಿಳಿಸಿರುವ ವೆಬ್‌ಸೈಟ್‌ನಿಂದ ಪಡೆಯತಕ್ಕದ್ದು. ಈ ಕುರಿತು ಪ್ರತ್ಯೇಕವಾಗಿ ದಿನಪತ್ರಿಕೆಗಳಲ್ಲಿ ಪ್ರಕಟಣೆ ಮಾಡಲಾಗುವುದಿಲ್ಲ.
"ಜಿಎಸ್‌ಟಿಯನ್ನು ಅನುಮೋದಿತ ಟೆಂಡರ್ ಮೊತ್ತಕ್ಕೆ ಅನುಗುಣವಾಗಿ ಪ್ರತ್ಯೇಕವಾಗಿ ಪಾವತಿಸಲಾಗುವುದು"
ಕಾಮಗಾರಿಯ ಹೆಸರು ಮತ್ತು ಟೆಂಡರ್ ಸಂಖ್ಯೆ: (1) ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲೂಕಿನ ಕಾರವಾರ ಬಂದರು ಪ್ರದೇಶದಲ್ಲಿ ಭಾರತೀಯ ಕೋಸ್ಟ್‌ಗಾರ್ಡ್‌ರವರಿಗಾಗಿ 150ಮೀx20ಮೀ ಅಳತೆಯ ಜೆಟ್ಟಿ ನಿರ್ಮಿಸುವ ಪೂರ್ವ ಮೆರೈನ್ ಜಿಯೋ ಟೆಕ್ನಿಕಲ್ ಇನ್‌ವೆಸ್ಟಿಗೇಷನ್ (ಭೂಪದರ ಸಮೀಕ್ಷೆ) ಕಾಮಗಾರಿ. (KPWD/2020-21/OW/WORK_INDENT135811), ಟೆಂಡರಿಗಿಟ್ಟ ಮೊತ್ತ: ರೂ.57.60 ಲಕ್ಷ.
ಟೆಂಡರ್ ಬಗ್ಗೆ ಅಕ್ಷೇಪಣೆ /ಸ್ಪಷ್ಟೀಕರಣ ಕೊನೆಯ ದಿನಾಂಕ: 10.03.2021 ಸಂಜೆ 17.00 ಗಂಟೆಯವರೆಗೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 15.03.2021 ಸಂಜೆ 16.30 ಗಂಟೆಯವರೆಗೆ.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರರು, ಬಂದರು ವಿಭಾಗ, ಕಾರವಾರ (ಉ.ಕ)

DIPR/ADK/MCA/827/20-21 Dt. 8.3.2021

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಆಯುಕ್ತರ ಕಚೇರಿ, 1ನೇ ಮಹಡಿ, ಬಹುಮಹಡಿಗಳ ಕಟ್ಟಡ
ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560 001
ಸಂ: ನಿಸಿಡಿ/ಟೆ.ಪ್ರ/40/2020–21 ದಿನಾಂಕ: 25–02–2021

ಪ್ರಕಟಣೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಆಯುಕ್ತಾಲಯಕ್ಕೆ 07 ವಾಹನ ಚಾಲಕರು, 17 ಡಾಟಾ ಎಂಟ್ರಿ ಆಪರೇಟರ್, 13 ಗ್ರೂಪ್ 'ಡಿ' ನೌಕರರು ಹಾಗೂ 02 ಭದ್ರತಾ ರಕ್ಷಕ ಹುದ್ದೆಗಳಿಗೆ ಮಾನವ ಸಂಪನ್ಮೂಲ ಸೇವೆಯನ್ನು ಬಾಹ್ಯ ಮೂಲದ ಆಧಾರದ ಮೇಲೆ 2021–22ನೇ ಸಾಲಿಗೆ ಒಂದು ವರ್ಷದ ಅವಧಿಗೆ ಒದಗಿಸಲು ಅರ್ಹ ಏಜೆನ್ಸಿದಾರರನ್ನು ಗುರುತಿಸುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ (KTPP) 1999, ನಿಯಮಗಳು 2000ರ ಪ್ರಕಾರ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ ಮೂಲಕ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಟೆಂಡರ್ ಅನ್ನು ದಿನಾಂಕ: 01.03.2021 ರಿಂದ ದಿನಾಂಕ: 30.03.2021 (ಸಂಜೆ 5.00 ಗಂಟೆ) ವರೆಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಹೆಚ್ಚಿನ ವಿವರಗಳು ಟೆಂಡರ್ ದಸ್ತಾವೇಜಿನಲ್ಲಿ ಲಭ್ಯವಿದ್ದು, www.eproc.karnataka.gov.in ವೆಬ್‌ಸೈಟ್‌ನಲ್ಲಿ ಪಡೆದು ಪರಿಶೀಲಿಸುವುದು ಹಾಗೂ ಹೆಚ್ಚಿನ ಮಾಹಿತಿಗಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಆಯುಕ್ತಾಲಯ, ಮೊದಲನೇ ಮಹಡಿ ಬಹುಮಹಡಿಗಳ ಕಟ್ಟಡ, ಬೆಂಗಳೂರು–01 ಇಲ್ಲಿ ಕಚೇರಿ ವೇಳೆಯಲ್ಲಿ ಸಂಪರ್ಕಿಸುವುದು. ದೂರವಾಣಿ ಸಂಖ್ಯೆ: 22374981 / 22353778.

ಸಹಿ/– ಆಯುಕ್ತರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು

DIPR/DDU/YC/3007/2020-21

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಕೊಪ್ಪಳ
ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಅಧಿಕಾರಿಗಳ ಕಛೇರಿ,
ಮೌಲಾನಾ ಆಜಾದ್ ಭವನ, ಹೊಸಪೇಟೆ ರಸ್ತೆ ಕೊಪ್ಪಳ ಜಿಲ್ಲೆ ಕೊಪ್ಪಳ.
ದೂ.ಸಂ:–08539–225070. E-mail-domwkoppal@gmail.com
ಸಂ/ಜಿಅಅಕಇಕೊ/ಆ.ಟೆ/ವಿನಿ–01/ಸಿಆರ್– /2020–21 ದಿನಾಂಕ : 08.03.2021

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ವಿಷಯ: 2021–22ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ/ವಸತಿ ಕಾಲೇಜು & ವಸತಿ ನಿಲಯಗಳಿಗೆ ಆಹಾರ ಮತ್ತು ಇತರೆ ಸಾಮಗ್ರಿಗಳ ಸರಬರಾಜು ಮಾಡಲು ಇ–ಟೆಂಡರ್ ಆಹ್ವಾನಿಸುವ ಬಗ್ಗೆ.
2021–22ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಲ್ಪಸಂಖ್ಯಾತರ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ/ವಸತಿ ಕಾಲೇಜು & ವಸತಿ ನಿಲಯಗಳಿಗೆ ಆಹಾರ ಹಾಗೂ ಇತರೆ ಸಾಮಗ್ರಿಗಳ ಖರೀದಿಗಾಗಿ ದ್ವಿ–ಲಕೋಟೆ ಪದ್ಧತಿಯಲ್ಲಿ ಇಚ್ಛೆಯುಳ್ಳ ಟೆಂಡರ್‌ದಾರರಿಂದ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು 2000 ರ ಅಡಿಯಲ್ಲಿ ಸ್ಪರ್ಧಾತ್ಮಕ ದರಗಳಿಗೆ ಅಲ್ಪಾವಧಿ ಇ–ಟೆಂಡರ್ ಕರೆಯಲಾಗಿದೆ.
1. ಟೆಂಡರ್‌ಗಿಟ್ಟ ಮೊತ್ತ: ಕೊಪ್ಪಳ & ಕುಷ್ಟಗಿ ತಾಲೂಕು: 211.91 ಲಕ್ಷ. ಗಂಗಾವತಿ ತಾಲೂಕು: 166.76 ಲಕ್ಷ. ಯಲಬುರ್ಗಾ ತಾಲೂಕು: 167.85 ಲಕ್ಷ. 2. ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: –. 3. ಪ್ರಿ–ಬಿಡ್ ಮೀಟಿಂಗ್: 18.03.2021, ಬೆ:11.00 ಗಂಟೆಗೆ. 4. Technical Bid ನ್ನು ತೆರೆಯುವ ವೇಳೆ ಮತ್ತು ದಿನಾಂಕ: 29.03.2021 ಬೆಳಿಗ್ಗೆ 11.00 ಗಂಟೆಗೆ. 5. ಆಹಾರ ಸಾಮಗ್ರಿಗಳ ಮಾದರಿಗಳನ್ನು ಸಲ್ಲಿಸುವ ದಿನಾಂಕ(ತಾಂತ್ರಿಕ ಬಿಡ್‌ನಲ್ಲಿ ಉತ್ತೀರ್ಣರಾದವರು ಮಾತ್ರ ಸಲ್ಲಿಸುವುದು): ತಾಂತ್ರಿಕ ಬಿಡ್‌ನಲ್ಲಿ ಉತ್ತೀರ್ಣರಾದವರಿಗೆ ಮಾದರಿ ಸ್ಯಾಂಪಲ್‌ಗಳನ್ನು ಸಲ್ಲಿಸಲು ದಿನಾಂಕವನ್ನು ನಂತರದಲ್ಲಿ ತಿಳಿಸಲಾಗುವುದು. 6. ಆರ್ಥಿಕ ಬಿಡ್ ತೆರೆಯುವ ವೇಳೆ ಮತ್ತು ದಿನಾಂಕ: 15.04.2021, ಬೆ:11–00 ಗಂಟೆಗೆ. 7. ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ.ಮೊತ್ತ: ಕೊಪ್ಪಳ & ಕುಷ್ಟಗಿ ತಾಲೂಕು: 3.18 ಲಕ್ಷ. ಗಂಗಾವತಿ ತಾಲೂಕು: 2.50 ಲಕ್ಷ. ಯಲಬುರ್ಗಾ ತಾಲೂಕು: 2.51 ಲಕ್ಷ. 8. ಸಾಲ್ವೆನ್ಸಿ ಸರ್ಟಿಫಿಕೇಟ್: ಕೊಪ್ಪಳ & ಕುಷ್ಟಗಿ ತಾಲೂಕು: 61.57 ಲಕ್ಷ. ಗಂಗಾವತಿ ತಾಲೂಕು: 50.00 ಲಕ್ಷ. ಯಲಬುರ್ಗಾ ತಾಲೂಕು: 50.35 ಲಕ್ಷ. 9. ಟೆಂಡರ್ ತೆರೆಯುವ ಸ್ಥಳ: ಜಿಲ್ಲಾ ಅಧಿಕಾರಿಗಳು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕೊಪ್ಪಳ ಮೌಲಾನಾ ಆಜಾದ್ ಭವನ ಹೊಸಪೇಟ್ ರಸ್ತೆ ಕೊಪ್ಪಳ Ph : 08539-225070.e-mail: domwkoppl@gmail.com.
ಟೆಂಡರ್ ತಪಶೀಲುಗಳಿಗಾಗಿ NEFT(Online) ನಲ್ಲಿ ಅರ್ಜಿ ಸಲ್ಲಿಸುವ ಆಸಕ್ತರು ನಿಗಧಿಪಡಿಸಿದ ದಿನಾಂಕಕ್ಕೆ ಸಲ್ಲಿಸಬೇಕಾಗುತ್ತದೆ. ಹೆಚ್ಚಿನ ಮಾಹಿತಿಯನ್ನು www.eproc.karnataka.gov.in ನಲ್ಲಿ ನೋಡಬಹುದು.

ಸಹಿ/– ಜಿಲ್ಲಾ ಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಕೊಪ್ಪಳ

ಡಿಐಪಿಆರ್/ಕೊಪ್ಪಳ/461/ಎಂಸಿಎ/2020–21

ಜಮೀನಿಗೆ ರಸ್ತೆ ನಿರ್ಮಿಸುವ ವಿಚಾರ: ಸರ್ವೆಗೆ ಸೂಚನೆ

ನಟ ಯಶ್ ಪೋಷಕರ ಜತೆ ಗ್ರಾಮಸ್ಥರ ವಾಗ್ವಾದ

ಪ್ರಜಾವಾಣಿ ವಾರ್ತೆ

ಹಾಸನ: ಜಮೀನಿಗೆ ರಸ್ತೆ ನಿರ್ಮಿಸುವ ವಿಚಾರವಾಗಿ, ತಾಲ್ಲೂಕಿನ ದುದ್ದ ಹೋಬಳಿಯ ತಿಮ್ಲಾಪುರ ಗ್ರಾಮದ ಬಳಿ ಚಿತ್ರನಟ ಯಶ್ ಅವರ ತಂದೆ-ತಾಯಿ ಹಾಗೂ ಗ್ರಾಮಸ್ಥರ ನಡುವೆ ಮಂಗಳವಾರ ಗಲಾಟೆ ನಡೆದಿದೆ.

ಯಶ್, ತಿಮ್ಲಾಪುರ ಬಳಿ 70 ಎಕರೆ ಜಮೀನು ಖರೀದಿಸಿದ್ದಾರೆ. ಅವರ ತಂದೆ ಅರುಣ್ ಕುಮಾರ್ ಹಾಗೂ ತಾಯಿ ಪುಷ್ಪಾ ಅವರು ಜಮೀನಿನ ಬಳಿ ಜೆಸಿಬಿಯೊಂದಿಗೆ ಕೆಲಸ ಮಾಡಿಸುತ್ತಿದ್ದಾಗ ಗ್ರಾಮಸ್ಥರು ಅಡ್ಡಿಪಡಿಸಿದ್ದಾರೆ.

ಜಮೀನಿಗೆ ಓಡಾಡುವ ಕಾಲು ದಾರಿ ಜಾಗಕ್ಕಾಗಿ ರಮೇಶ್ ಎಂಬ ಸ್ಥಳೀಯರೊಬ್ಬರೊಂದಿಗೆ ವಾಗ್ವಾದ ಶುರುವಾಗಿ, ಕೈ ಕೈ ಮಿಲಾಯಿಸುವ ಹಂತಕ್ಕೆ ತಲುಪಿದೆ. ನಂತರ ಗ್ರಾಮಸ್ಥರೆಲ್ಲರೂ ಗಲಾಟೆ ಮಾಡಿದ್ದಾರೆ.

ಸ್ಥಳಕ್ಕೆ ಭೇಟಿ ನೀಡಿದ ದುದ್ದ ಠಾಣೆ ಪೊಲೀಸರು, ಎರಡೂ ಕಡೆಯವರನ್ನು ಸಮಾಧಾನ ಪಡಿಸಿದರು. ಯಶ್, ಸಂಜೆ ಠಾಣೆಗೆ ಭೇಟಿ ನೀಡಿದ್ದು, ಡಿವೈಎಸ್‌ಪಿ ಪುಟ್ಟಸ್ವಾಮಿ ಗೌಡ ಎರಡೂ ಕಡೆಯವರನ್ನು ಕರೆಸಿ ಮಾತುಕತೆ ನಡೆಸಿದರು. ಜಮೀನಿಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರು ಪಡಿಸುವಂತೆ ಹಾಗೂ ತಹಶೀಲ್ದಾರ್‌ರಿಂದ ಸರ್ವೆ ಮಾಡಿಸುವಂತೆ ಸೂಚಿಸಿದರು.

‘ಈಗಾಗಲೇ ಮೂರು ದಾರಿ ಬಿಟ್ಟುಕೊಡಲಾಗಿದೆ. ಮತ್ತೊಂದು ದಾರಿ ಬಿಡುವಂತೆ ಕೇಳುತ್ತಿದ್ದಾರೆ. ಇದಕ್ಕೆ ಅವಕಾಶ ನೀಡುವುದಿಲ್ಲ’ ಎಂದು ರಮೇಶ್ ಹೇಳಿದರು.

‘ನಕ್ಷೆ ಪ್ರಕಾರ, ಮತ್ತೊಂದು ದಾರಿ ಬಿಡಬೇಕು. ಅದಕ್ಕಾಗಿ ಕಾಲು ದಾರಿ ನಿರ್ಮಿಸಲಾಗುತ್ತಿದೆ’ ಎಂದು ಯಶ್ ಬೆಂಬಲಿಗರು ತಿಳಿಸಿದರು.

ಯಶ್ ವಾಪಸ್ಸಾಗುವಾಗ ಪರ, ವಿರುದ್ಧ ಘೋಷಣೆಗಳು ಕೇಳಿಬಂದವು.

ದುದ್ದ ಪೊಲೀಸ್ ಠಾಣೆಯಲ್ಲಿ ಮಾತುಕತೆ ನಡೆಸಿ ಹೊರ ಬಂದ ನಟ ಯಶ್

‘ಮಾತುಕತೆ ಮೂಲಕ ಬಗೆಹರಿಸಿಕೊಳ್ಳಬೇಕು’

‘ಸಮಸ್ಯೆ ಇದ್ದರೆ ಮಾತುಕತೆ ಮೂಲಕ ಬಗೆಹರಿಸಿಕೊಳ್ಳಬೇಕು. ತಂದೆ, ತಾಯಿಯನ್ನು ನಿಂದಿಸಿದರೂ ನನ್ನ ಇಮೇಜ್ ನೋಡಿಕೊಂಡು ಸುಮ್ಮನೆ ಇರಲು ಆಗುವುದಿಲ್ಲ. ನಾನು ಇಲ್ಲೇ ಹುಟ್ಟಿ ಬೆಳೆದವನು. ನಾನು ಎಲ್ಲೆ ಬೇಕಾದರೂ ಜಮೀನು ಮಾಡ್ತೀನಿ’ ಎಂದು ನಟ ಯಶ್ ಹೇಳಿದರು.

‘ಜಮೀನಿಗೆ ಕಾಂಪೌಂಡ್ ಹಾಕಿಸುತ್ತಿರುವುದು ಸಮಸ್ಯೆ ಅಲ್ಲ. ಜಮೀನು ಬಳಿ ವಾಹನ ನಿಲ್ಲಿಸಿ, ಕುಡಿದು, ಇಸ್ಪೀಟು ಆಟವಾಡುತ್ತಿದ್ದರೆ ನೋಡಿಕೊಂಡು ಇರಲು ಆಗುವುದಿಲ್ಲ. ನಮ್ಮ ಜತೆ ಕೆಲಸ ಮಾಡುವವರ ಮೇಲೆ ಕೈ ಮಾಡಿದರೆ ಸುಮ್ಮನೆ ಇರಲು ಆಗುವುದಿಲ್ಲ. ನಮ್ಮ ಜಮೀನಿನಿಂದ ಕಾಲಭೈರವೇಶ್ವರ ದೇವಸ್ಥಾನಕ್ಕೆ ಹೋಗಲು ಗ್ರಾಮಸ್ಥರೇ ರಸ್ತೆ ಕೇಳಿದ್ದಾರೆ. ದೇವಸ್ಥಾನಕ್ಕೆ ಹೋಗುವ ರಸ್ತೆ ಆಗಿರುವುದರಿಂದ ಅದು ನಮಗೆ ಬೇಕಾಗಿಯೂ ಇಲ್ಲ. ಆದರೆ, ವಿಷಯ ಅದಲ್ಲ. ದುಡ್ಡು ಮಾಡಲು ಇಲ್ಲಿ ಜಮೀನು ಮಾಡಿಲ್ಲ. ಕೃಷಿ ಉದ್ದೇಶಕ್ಕಾಗಿ ಜಮೀನು ಖರೀದಿಸಿದ್ದೇನೆ. ಸರ್ಕಾರಿ ಶಾಲೆ, ಬಡವರಿಗೆ ಉಪಯೋಗವಾಗುತ್ತದೆ ಎನ್ನುವುದಾದರೆ ಹತ್ತು ಎಕರೆ ಜಮೀನು ಬಿಟ್ಟು ಕೊಡಲು ಸಿದ್ಧ’ ಎಂದರು.

ನಿಧನ ವಾರ್ತೆ

ಅಟ್ಟಾವರ ರಾಮದಾಸ್

ಚನ್ನರಾಯಪಟ್ಟಣ (ಹಾಸನ): ಉದ್ಯಮಿ ಮತ್ತು ಸಮಾಜ ಸೇವಕ ಅಟ್ಟಾವರ ರಾಮದಾಸ್ (74) ಮಂಗಳವಾರ ಸಂಜೆ ನಿಧನರಾದರು.

ಬರಗೂರು ಬಳಿ ಹಿರಣ್ಯಗರ್ಭ ಕ್ಷೇತ್ರದಲ್ಲಿರುವ ಮನೆಯಲ್ಲಿ ಬೆಳಿಗ್ಗೆ ಜಾರಿ ಬಿದ್ದಿದ್ದ ಅವರನ್ನು ಚಿಕಿತ್ಸೆಗಾಗಿ ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಸಂಜೆ ಪುನಃ ಮನೆಗೆ ಕರೆದುಕೊಂಡು ಬರಲಾಗಿತ್ತು.

ಅವರಿಗೆ ಪತ್ನಿ, ಪುತ್ರ, ಇಬ್ಬರು ಪುತ್ರಿಯರು ಇದ್ದಾರೆ.

ಹಿರಣ್ಯಗರ್ಭ ಕ್ಷೇತ್ರದಲ್ಲಿರುವ ತೋಟದಲ್ಲಿ ಬುಧವಾರ ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಕರ್ನಾಟಕ, ತಮಿಳುನಾಡಿನಲ್ಲಿ ಕೈಗಾರಿಕೆಗಳನ್ನು ಹೊಂದಿರುವ ರಾಮದಾಸ್ ಅವರು, ಈ ಹಿಂದೆ ಚೆನ್ನೈನಲ್ಲಿ ಸರ್ವಜ್ಞನ ಪುತ್ಥಳಿ ಸ್ಥಾಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಚೆನ್ನೈನಲ್ಲಿ ಕನ್ನಡ ಸಂಘದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು. ಮೂರು ಕನ್ನಡ ಚಲನಚಿತ್ರಗಳಲ್ಲಿ ನಟಿಸಿದ್ದರು.

ಹಾಸನ ತಾಲ್ಲೂಕಿನ ಅಟ್ಟಾವರ ಗ್ರಾಮದವರಾದ ರಾಮದಾಸ್, ಕೆಲವರ್ಷಗಳ ಹಿಂದೆ ಬರಗೂರು ಬಳಿ ಜಮೀನು ಖರೀದಿಸಿ ಮಹಾಲಕ್ಷ್ಮಿ ದೇವಸ್ಥಾನ ನಿರ್ಮಿಸಿದ್ದರು.

ಮಂದಿರದ ಆವರಣದಲ್ಲಿ ವೇದಮಂದಿರ, ಧ್ಯಾನ ಮಂದಿರ, ಮಾತಾ–ಪಿತೃ ಮಂದಿರವನ್ನು ನಿರ್ಮಿಸಿದ್ದಾರೆ.

ಪ್ರತಿವರ್ಷ ನವರಾತ್ರಿ ಉತ್ಸವ ಮತ್ತು ವೈಕುಂಠ ಏಕಾದಶಿ ಧಾರ್ಮಿಕ ಕಾರ್ಯಕ್ರಮವನ್ನು ಆಯೋಜಿಸುತ್ತಿದ್ದರು. ಬಡಮಕ್ಕಳ ಶಿಕ್ಷಣಕ್ಕೆ ಸಹಾಯ ಮಾಡುತ್ತಿದ್ದರು.

ಯೋಜನಾ ನಿರ್ದೇಶಕ 19 ನಿವೇಶನಗಳ ಒಡೆಯ

ಒಂದನೇ ಪುಟದಿಂದ

ಅವರ ಬಳಿ ಆದಾಯಕ್ಕಿಂತ ಶೇ 364ರಷ್ಟು ಹೆಚ್ಚುವರಿ ಆಸ್ತಿ ಇದೆ ಎಂದು ತಿಳಿಸಿದೆ.

ಲೆಕ್ಕಾಧಿಕಾರಿಗೆ 9 ನಿವೇಶನ: ಯಾದಗಿರಿಯ ಜೆಸ್ಕಾಂ ಕಚೇರಿ ಲೆಕ್ಕಾಧಿಕಾರಿ ರಾಜು ಪತ್ತಾರ್ ಅವರು ಯಾದಗಿರಿಯಲ್ಲಿ 1 ಮನೆ, ಒಂದು ಕಾರು, 676 ಗ್ರಾಂ ಚಿನ್ನ, 1 ಕೆ.ಜಿ 362 ಗ್ರಾಂ ಬೆಳ್ಳಿ ವಸ್ತು, ₹1.71 ಲಕ್ಷ ನಗದು, ಮುಂಡರಗಿಯಲ್ಲಿ ನಿವೇಶನ, ಯಾದಗರಿಯಲ್ಲಿ 7 ನಿವೇಶನ, ಕೊಯಿಲೂರಾದಲ್ಲಿ ನಿವೇಶನ, ಶಾರದಾಗಿರಿಯಲ್ಲಿ ನಿವೇಶನ, 3 ಎಕರೆ ಕೃಷಿ ಜಮೀನು ಹೊಂದಿದ್ದಾರೆ. ಬ್ಯಾಂಕ್ ಖಾತೆಗಳಲ್ಲಿ ₹31.75 ಲಕ್ಷ ಠೇವಣಿ ಇಟ್ಟಿದ್ದಾರೆ. ಶೇ 223 ಅಸಮತೋಲನ ಆಸ್ತಿ ಹೊಂದಿದ್ದಾರೆ.

ಹಾವೇರಿ ಜಿಲ್ಲೆಯ ಫ್ಯಾಕ್ಟರೀಸ್ ಮತ್ತು ಬಾಯ್ಲರ್ ವಿಭಾಗದ ಉಪನಿರ್ದೇಶಕ ಕೆ.ಎಂ. ಪ್ರಥಮ್ ಅವರು ಬೆಂಗಳೂರಿನ ಸಂಜಯನಗರದಲ್ಲಿ ಒಂದು ಮನೆ, 400 ಗ್ರಾಂ ಚಿನ್ನ, 69 ಗ್ರಾಂ ಬೆಳ್ಳಿ, ₹25 ಲಕ್ಷ ಬೆಲೆ ಬಾಳುವ ಗೃಹೋಪಯೋಗಿ ವಸ್ತುಗಳನ್ನು ಹೊಂದಿದ್ದಾರೆ. ಆದಾಯಕ್ಕಿಂತ ಶೇ 118ರಷ್ಟು ಹೆಚ್ಚು ಆಸ್ತಿ ಇದೆ.

19 ನಿವೇಶನಗಳ ಒಡೆಯ: ಚಿಕ್ಕಬಳ್ಳಾಪುರ ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ಕೃಷ್ಣೇಗೌಡ ಅವರು 2 ಮನೆ, ಬೆಂಗಳೂರು, ಕೋಲಾರ, ಚಿಕ್ಕಬಳ್ಳಾಪುರ, ಚಿಂತಾಮಣಿಯಲ್ಲಿ 19 ನಿವೇಶನ, 24 ಎಕರೆ ಕೃಷಿ ಜಮೀನು, ಒಂದು ಪೌಲ್ಟ್ರಿ ಫಾರಂ ಹೊಂದಿದ್ದಾರೆ. ಆದಾಯಕ್ಕಿಂಯ ಶೇ 295ರಷ್ಟು ಹೆಚ್ಚು ಆಸ್ತಿ ಇದೆ ಎಂದು ಎಸಿಬಿ ಅಂದಾಜಿಸಿದೆ.

ಬೆಳಗಾವಿ ಉಪ ಮುಖ್ಯ ಎಲೆಕ್ಟ್ರಿಕಲ್ ಇನ್‌ಸ್ಪೆಕ್ಟರ್ ಹನಮಂತ ಶಿವಪ್ಪ ಚಿಕ್ಕಣ್ಣನವರ ಬೆಳಗಾವಿಯಲ್ಲಿ ಮನೆ, 2 ಫ್ಲಾಟ್, 1 ಪೆಂಟಾ ಹೌಸ್, 4 ವಾಣಿಜ್ಯ ಮಳಿಗೆ ಹೊಂದಿದ್ದಾರೆ. ಈ ಮಳಿಗೆಗಳಲ್ಲಿ ₹71.75 ಲಕ್ಷ ಮೌಲ್ಯದ ವಸ್ತುಗಳು, 816 ಗ್ರಾಂ ಚಿನ್ನ, 6 ಕೆ.ಜಿ ಬೆಳ್ಳಿ ವಸ್ತುಗಳು, ₹1.88 ಲಕ್ಷ ನಗದು ಪತ್ತೆಯಾಗಿದೆ.

ಮೈಸೂರಿನ ನಗರ ಯೋಜನೆಗಳ ಜಂಟಿ ನಿರ್ದೇಶಕ ಸುಬ್ರಮಣ್ಯ ಕೆ.ವಡ್ಡರ್ ಅವರು ಪುತ್ತೂರಿನಲ್ಲಿ 1 ಮನೆ, 206 ಗ್ರಾಂ ಚಿನ್ನ, 2 ಕೆ.ಜಿ ಬೆಳ್ಳಿ, ₹1.35 ಲಕ್ಷ ನಗದು, 15 ಲಕ್ಷ ಮೌಲ್ಯದ ಗೃಹೋಪಯೋಗಿ ವಸ್ತುಗಳನ್ನು ಹೊಂದಿದ್ದಾರೆ. ಶೇ 88.33ರಷ್ಟು ಅಸಮತೋಲನ ಆಸ್ತಿ ಹೊಂದಿದ್ದಾರೆ.

ಮೈಸೂರು ದಕ್ಷಿಣ ಪ್ರಾದೇಶಿಕ ಸಾರಿಗೆ ಕಚೇರಿ ಪ್ರಥಮ ದರ್ಜೆ ಸಹಾಯಕ ಚನ್ನವೀರಪ್ಪ ಅವರು ಮಂಡ್ಯದಲ್ಲಿ ಮನೆ, ಪತ್ನಿ ಹೆಸರಿನಲ್ಲಿ ಕೆರಗೋಡಿನಲ್ಲಿ ಮನೆ, 2 ನಿವೇಶನ, 34 ಗುಂಟೆ ಕೃಷಿ ಜಮೀನು, ಹೋಂಡಾ ಸಿಟಿ ಕಾರು, 5 ಲಕ್ಷ ಮೌಲ್ಯದ ವಿಮಾ ಪಾಲಿಸಿ, ₹13.50 ಲಕ್ಷ ಬೆಲೆ ಬಾಳುವ ಗೃಹೋಪಯೋಗಿ ವಸ್ತುಗಳನ್ನು ಹೊಂದಿದ್ದಾರೆ. ಆದಾಯಕ್ಕಿಂತ ಶೇ 149ರಷ್ಟು ಹೆಚ್ಚು ಆಸ್ತಿ ಇದೆ ಎಂದು ಎಸಿಬಿ ಅಂದಾಜಿಸಿದೆ.

ಬೆಳಗಾವಿಯ ಅನಗೋಳದ ಚನ್ನಮ್ಮ ನಗರದಲ್ಲಿರುವ ಬೆಳಗಾವಿ ವೃತ್ತದ (ವಿದ್ಯುತ್ ಪರಿವೀಕ್ಷಣಾಲಯ) ಉಪ ಮುಖ್ಯ ವಿದ್ಯುತ್ ಪರಿವೀಕ್ಷಕ ಹಣಮಂತ ಶಿವಪ್ಪ ಚಿಕ್ಕಣ್ಣನವರ ಮನೆಯಲ್ಲಿ ಸಿಕ್ಕ ಆಭರಣಗಳ ದಾಖಲೆಗಳನ್ನು ಎಸಿಬಿ ಅಧಿಕಾರಿಗಳು ಪರಿಶೀಲಿಸಿದರು

ಪರಿಸರ ನಿಯಂತ್ರಣ ವ್ಯವಸ್ಥೆ: ಪ್ರತಿಕ್ರಿಯೆ ಕೇಳಿದ ‘ಸುಪ್ರೀಂ’

ನವದೆಹಲಿ: ವಿವಿಧ ಯೋಜನೆಗಳ ಅನುಷ್ಠಾನಕ್ಕೆ ಪರಿಸರ ಅನುಮತಿ ನೀಡಲು ಸ್ವತಂತ್ರ ನಿಯಂತ್ರಣ ವ್ಯವಸ್ಥೆಯನ್ನು ಸ್ಥಾಪಿಸದೇ ಇರುವುದಕ್ಕೆ ಪ್ರತಿಕ್ರಿಯೆ ಸಲ್ಲಿಸುವಂತೆ ಸುಪ್ರೀಂಕೋರ್ಟ್ ಮಂಗಳವಾರ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

ಮುಖ್ಯನ್ಯಾಯಮೂರ್ತಿ ಎಸ್.ಎ.ಬೊಬಡೆ, ನ್ಯಾಯಮೂರ್ತಿಗಳಾದ ಎ.ಎಸ್.ಬೋಪಣ್ಣ, ವಿ.ರಾಮಸುಬ್ರಮಣಿಯನ್ ಅವರಿರುವ ನ್ಯಾಯಪೀಠ ಈ ಸಂಬಂಧ ಹಿರಿಯ ವಕೀಲ ಪ್ರಶಾಂತಭೂಷಣ್ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿತು.

ಮೊಬೈಲ್ ಆಟಕ್ಕೆ ಬೇಕು ಕೌಶಲ: ಇದು ಜೂಜಲ್ಲ

ಮೊಬೈಲ್ ಗೇಮ್‌ಗಳಿಗೆ ವೇಗದ ಇಂಟರ್‌ನೆಟ್ ಅಗತ್ಯ. ಅಧಿಕ ರ‍್ಯಾಮ್ ಹೊಂದಿರುವ ಸ್ಮಾರ್ಟ್‌ಫೋನ್ ಇದ್ದರಂತೂ ಮೊಬೈಲ್‌ನಲ್ಲಿ ಗೇಮ್ ಆಡುವುದು ರೋಮಾಂಚನಕಾರಿಯಾಗಿರುತ್ತದೆ. ಕರ್ನಾಟಕದಲ್ಲಿ ಈಗ 4ಜಿ ನೆಟ್‌ವರ್ಕ್ ಸೇವೆ ಲಭ್ಯ. ವಿವಿಧ ಬ್ರ್ಯಾಂಡ್‌ನ ಸ್ಮಾರ್ಟ್‌ಫೋನ್‌ಗಳೂ ಸಿಗುತ್ತಿವೆ. ಇಂತಹ ಪೂರಕಸೌಲಭ್ಯಗಳಿಂದಾಗಿ ಮೊಬೈಲ್ ಗೇಮ್‌ಗಳು ಜನಪ್ರಿಯಗೊಳ್ಳುತ್ತಿವೆ.

ಮೊಬೈಲ್ ಗೇಮ್ ಆ್ಯಪ್‌ಗಳನ್ನು ಬಳಸುವವರ ಸಂಖ್ಯೆ ದೊಡ್ಡದು. ಅಂದರೆ, ಈ ಕ್ಷೇತ್ರ ದೊಡ್ಡ ಮಾರುಕಟ್ಟೆಯನ್ನೂ ಸೃಷ್ಟಿಸಿದೆ ಎಂದಾಯಿತು. ಈ ಮಾರುಕಟ್ಟೆಯಲ್ಲಿ ತಂತ್ರಜ್ಞಾನ ಆಧಾರಿತ ಗೇಮ್‌ಗಳನ್ನು ಒದಗಿಸಿ, ಹಣ ಗಳಿಸಲು ಸಾಧ್ಯವಿದೆ ಎಂಬ ಕಾರಣಕ್ಕೂ ಹಲವಾರು ಸಂಸ್ಥೆಗಳು ಮೊಬೈಲ್ ಗೇಮ್‌ಗಳನ್ನು ಅಭಿವೃದ್ಧಿಪಡಿಸುತ್ತಿವೆ.

ಮೊಬೈಲ್ ಗೇಮ್‌ಗಳ ಬಗ್ಗೆ ಜನರಲ್ಲಿ ಸಾಕಷ್ಟು ತಪ್ಪು ಕಲ್ಪನೆಗಳು ಮನೆ ಮಾಡಿವೆ. ಭವಿಷ್ಯದಲ್ಲಿ ಬೃಹತ್ ಮಾರುಕಟ್ಟೆ ಸೃಷ್ಟಿಸಿ, ಆದಾಯ ತರಬಲ್ಲ ಕ್ಷೇತ್ರವೊಂದರ ಬೆಳವಣಿಗೆಗೆ ಈ ತಪ್ಪು ಕಲ್ಪನೆಗಳೇ ಅಡ್ಡಿಯಾಗುತ್ತಿವೆ ಎಂಬುದು ಅಷ್ಟೇ ಸತ್ಯ.

ಮೊಬೈಲ್ ಗೇಮಿಂಗ್ ಎಂಬುದು ಜೂಜಾಟವಲ್ಲ. ಅದು ಕೌಶಲಾಧಾರಿತ ಆಟ. ಚುರುಕು ಬುದ್ಧಿ, ಅಗಾಧ ನೆನಪಿನ ಶಕ್ತಿ ಹಾಗೂ ಕಾರ್ಯತಂತ್ರ ರೂಪಿಸುವ ಚಾಕಚಕ್ಯತೆಯನ್ನು ಒಳಗೊಂಡಿದೆ. ಮೊಬೈಲ್ ಗೇಮ್ ಬರೀ ಜೂಜಾಟವಾಗಿದ್ದರೆ, ಚುರುಕಾದ ಬುದ್ಧಿ, ಕ್ಷಣಾರ್ಧದೊಳಗೆ ವ್ಯೂಹಾತ್ಮಕ ತಂತ್ರರೂಪಿಸುವ ಚಾಣಾಕ್ಷತನ ಬೇಕಾಗುತ್ತಿರಲಿಲ್ಲ ಅಲ್ಲವೇ?

ಯಾವುದೇ ಆಟದ ಅಂತಿಮ ಗುರಿ ಗೆಲುವು ಸಾಧಿಸುವುದೇ ಆಗಿರುತ್ತದೆ. ಆದರೆ, ಗೆಲುವಿನ ದಡ ಮುಟ್ಟಲು ತರಬೇತಿ ಮುಖ್ಯ. ಅನುಭವವೂ ಅಗತ್ಯ. ಇದಾವುದೂ ಜೂಜಾಟಕ್ಕೆ ಬೇಕಾಗಿಲ್ಲ. ಜೂಜಾಟದಲ್ಲಿ ತೊಡಗಿರುವವರು ಕೇವಲ ಅದೃಷ್ಟದ ಮೇಲೆ ಅವಲಂಬಿತರಾಗಿರಬೇಕಾಗುತ್ತದೆ.

ಮೊಬೈಲ್ ಗೇಮ್‌ಗಳು ಜೂಜಾಟ ಎಂದು ಕೆಲವರು ನಿರ್ಣಯಿಸುವುದಕ್ಕೆ ಮತ್ತೊಂದು ಕಾರಣ ಎಂದರೆ, ಈ ಗೇಮ್‌ಗಳಲ್ಲಿ ಗೆದ್ದ ನಂತರ ಕೈಸೇರುವ ಹಣ. ಸರಳವಾಗಿ ಹೇಳಬೇಕು ಎಂದರೆ, ಮೊಬೈಲ್ ಗೇಮ್‌ವೊಂದನ್ನು ಆಡಲು ಬಯಸುವವರಿಂದ ಪ್ರವೇಶ ಶುಲ್ಕವನ್ನು ಸಂಗ್ರಹಿಸಲಾಗುತ್ತದೆ. ಹೀಗೆ ಸಂಗ್ರಹಿಸಿದ ಅಪಾರ ಮೊತ್ತವನ್ನು ಬಹುಮಾನವಾಗಿ ಹಂಚಿಕೆ ಮಾಡಲಾಗುತ್ತದೆ.

ಮುಖ್ಯಾಂಶಗಳು

- ಮೊಬೈಲ್ ಗೇಮ್ ಆಡಲು ಚುರುಕುಬುದ್ಧಿ, ನೆನಪಿನ ಶಕ್ತಿ ಅಗತ್ಯ
- ಕೌಶಲಾಧಾರಿತ ಆಟಗಳು ಕಾನೂನುಬದ್ಧ
- ಎಲ್ಲ ಡಿಜಿಟಲ್ ವೇದಿಕೆಗಳಲ್ಲೂ ಆಡಲು ಅವಕಾಶ
- ಜನಪ್ರಿಯಗೊಳ್ಳುತ್ತಿರುವ ಇ–ಸ್ಪೋರ್ಟ್ಸ್
- ಒಲಿಂಪಿಕ್ಸ್‌ನಲ್ಲಿ ಮೊಬೈಲ್ ಗೇಮ್ ಸೇರಿಸುವ ವಿಷಯ ಚರ್ಚೆಯಲ್ಲಿ

ಜೂಜಿನಲ್ಲಿ ಸಹ ಹಣವನ್ನು ಪಣಕ್ಕಿಡಲಾಗುತ್ತದೆ. ಗೆದ್ದವರು ಹಣವನ್ನು ಬಾಚಿಕೊಳ್ಳುತ್ತಾರೆ. ಆದರೆ, ಗೆಲ್ಲಲು ಅದೃಷ್ಟ ಸಾಥ್ ಕೊಡಬೇಕಷ್ಟೆ. ಆದರೆ, ಮೊದಲೇ ಹೇಳಿದ ಹಾಗೆ, ಮೊಬೈಲ್ ಗೇಮ್‌ಗಳಲ್ಲಿ ಗೆಲ್ಲಲು ಅದೃಷ್ಟಕ್ಕಿಂತ ಚುರುಕು ಬುದ್ಧಿ, ಜ್ಞಾಪಕಶಕ್ತಿಯಂಥ ಕೌಶಲಗಳನ್ನು ಕರಗತ ಮಾಡಿಕೊಂಡಿರಬೇಕಾಗುತ್ತದೆ.

ಪ್ರಸ್ತುತಿ ಪಿವಿ ಬ್ರ್ಯಾಂಡ್ ಸ್ಪಾಟ್

ಈ ಎಲ್ಲ ಕಾರಣಗಳ ಹಿನ್ನೆಲೆಯಲ್ಲಿ ಅವಕೋಕಿಸಿದಾಗ, ಮೊಬೈಲ್ ಗೇಮ್ ಗಳ ಕುರಿತು ಸ್ಪಷ್ಟವಾದ ಹಾಗೂ ಈ ಕ್ಷೇತ್ರದ ಬೆಳವಣಿಗೆಗೆ ಪೂರಕವಾದ ನೀತಿಯನ್ನು ರೂಪಿಸುವುದು ಇಂದಿನ ತುರ್ತು. ಇದರಿಂದ ಈ ಕ್ಷೇತ್ರದ ಬಗೆಗಿನ ತಪ್ಪುಕಲ್ಪನೆಗಳನ್ನು ದೂರ ಮಾಡಬಹುದು.

ಈಗ ಡಿಜಿಟಲ್ ಹಾಗೂ ಆನ್ ಲೈನ್ ವೇದಿಕೆಗಳಲ್ಲಿ ತರಹೇವಾರಿ ಮೊಬೈಲ್ ಗೇಮ್‌ಗಳು ಲಭ್ಯ. ಅದರಲ್ಲೂ, ಸ್ಮಾರ್ಟ್‌ಫೋನ್‌ಗಳು ಪ್ರತಿಯೊಬ್ಬರ ಬಳಿಯೂ ಇವೆ. ಅಂಥ ಪುಟ್ಟ ಪರದೆ ಮೇಲೂ ಸ್ಪಷ್ಟವಾಗಿ ಕಾಣವಂಥ ಗೇಮ್‌ಗಳನ್ನು ಅಭಿವೃದ್ಧಿಪಡಿಸಲಾಗಿದೆ.

ಕರ್ನಾಟಕ ಮಾಹಿತಿ ತಂತ್ರಜ್ಞಾನದ ತೊಟ್ಟಿಲು. ಮೊಬೈಲ್ ಗೇಮ್ ಕ್ಷೇತ್ರವೂ ಶೈಶವಾವಸ್ಥೆಯಲ್ಲಿದೆ. ಆದರೆ, ಇದಕ್ಕೆ ಭವ್ಯ ಭವಿಷ್ಯ ಇದೆ. ಹೀಗಾಗಿ ಈ ಗೇಮ್‌ಗಳನ್ನು ಕಾನೂನಿನ ಚೌಕಟ್ಟಿನೊಳಗೇ ವ್ಯಾಖ್ಯಾನಿಸುವ ಕೆಲಸವಾಗಬೇಕಿದೆ. ಈ ಕಾರ್ಯವಾದರೆ, ವಿಪುಲ ಉದ್ಯೋಗಾವಕಾಶ ಸೃಷ್ಟಿಯಾಗಲಿದೆ.

ವಿಶ್ವದ ಇತರ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಇಂಟರ್‌ನೆಟ್ ಬಳಕೆ ವ್ಯಾಪಕವಾಗಿದೆ. ಕೈಗೆಟುಕುವ ದರದಲ್ಲಿ ಡೇಟಾ ಲಭ್ಯ. ಸಹಜವಾಗಿ ಗ್ರಾಹಕರ ಸಂಖ್ಯೆಯೂ ದೊಡ್ಡದಾಗಿರುವ ಕಾರಣ ಮೊಬೈಲ್ ಗೇಮ್ ಕ್ಷೇತ್ರದ ಬೆಳವಣಿಗೆಗೆ ಪೂರಕವಾದ ಎಲ್ಲ ಅಂಶಗಳೂ ನಮ್ಮಲ್ಲಿವೆ. ಅದರಂತೆ, ಈ ಕ್ಷೇತ್ರದ ಬೆಳವಣಿಗೆಗೆ ಪೂರಕವಾದ, ಪರಿಣಾಮಕಾರಿಯಾದ ನೀತಿಯೊಂದರ ಅಗತ್ಯವಿದೆ.

ಮೊಬೈಲ್ ಗೇಮ್‌ಗಳನ್ನು ಅಭಿವೃದ್ಧಿಪಡಿಸುವ ಸ್ಟಾರ್ಟ್‌ಅಪ್‌ಗಳು ಕರ್ನಾಟಕದಲ್ಲಿವೆ. ಜಾಗತಿಕ ಮಟ್ಟದಲ್ಲಿ ಈ ಕಂಪನಿಗಳಿಗೆ ಸ್ಪರ್ಧೆಯೂ ಇದೆ. ತಾನಿರುವ ಸ್ಥಳದಲ್ಲಿ ಪೂರಕವಾದ ನೀತಿ ಇಲ್ಲದಿದ್ದರೆ, ನಮ್ಮ ಕಂಪನಿಗಳು ಜಗತ್ತಿನ ಇತರ ರಾಷ್ಟ್ರಗಳೊಂದಿಗೆ ಪೈಪೋಟಿ ನಡೆಸುವುದಾದರೂ ಹೇಗೆ ಎಂಬ ಪ್ರಶ್ನೆ ಉದ್ಭವವಾಗುತ್ತದೆ.

ಮೊಬೈಲ್ ಗೇಮ್‌ಗಳು ಜೂಜು ಅಲ್ಲ ಎಂಬುದಕ್ಕೆ 1968ರಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಪುಷ್ಟಿ ನೀಡುತ್ತದೆ. ಕೆ.ಸತ್ಯನಾರಾಯಣ ಹಾಗೂ ಆಂಧ್ರಪ್ರದೇಶ ಸರ್ಕಾರ ನಡುವಿನ ವ್ಯಾಜ್ಯದಲ್ಲಿ ತೀರ್ಪು ನೀಡಿದ್ದ ಸುಪ್ರೀಂಕೋರ್ಟ್, ರಮ್ಮಿ ಒಂದು ಅದೃಷ್ಟದ ಆಟವಲ್ಲ ಎಂದು ಅಭಿಪ್ರಾಯಪಟ್ಟಿದೆ.

ರವೀಂದ್ರಸಿಂಗ್ ಚೌಧರಿ ವಿರುದ್ಧ ಕೇಂದ್ರ ಸರ್ಕಾರ ಪ್ರಕರಣದಲ್ಲಿಯೂ ಇದೇ ರೀತಿ ಅಭಿಪ್ರಾಯಪಟ್ಟ ಸುಪ್ರೀಂ ಕೋರ್ಟ್, ಕಲ್ಪನಾಶಕ್ತಿ ಬಳಸಿ ಆಡುವ ಆಟಗಳನ್ನು ಜೂಜು ಎಂದು ಪರಿಗಣಿಸಲಾಗದು ಎಂದು ತೀರ್ಪು ನೀಡಿದೆ.

ಇಂಡಿಯನ್ ಪೋಕರ್ ಅಸೋಸಿಯೇಶನ್ ವಿರುದ್ಧ ಕರ್ನಾಟಕ ಸರ್ಕಾರ ಪ್ರಕರಣದಲ್ಲಿ, ಪೋಕರ್ ಎಂಬುದು ಕೌಶಲ ಆಧಾರಿತ ಆಟ ಎಂದು ಕರ್ನಾಟಕ ಹೈಕೋರ್ಟ್ 2013ರಲ್ಲಿ ತೀರ್ಪು ನೀಡಿದೆ.

ಆನ್‌ಲೈನ್ ಮತ್ತು ಡಿಜಿಟಲ್ ವೇದಿಕೆಗಳಲ್ಲಿ ಆಡಲಾಗುವ ಈ ಆಟಗಳನ್ನು ಇ-ಸ್ಪೋರ್ಟ್ಸ್ ಎನ್ನಲಾಗುತ್ತದೆ. ಇಂಥ ಆಟಗಳನ್ನು ಒಲಿಂಪಿಕ್ಸ್‌ನಲ್ಲಿ ಸೇರ್ಪಡೆ ಮಾಡಬೇಕು ಎಂಬ ಚರ್ಚೆಗಳೂ ನಡೆಯುತ್ತಿವೆ. ಮೂಲಸೌಕರ್ಯ, ಆರ್ಥಿಕಶಕ್ತಿ ಸೇರಿದಂತೆ ವಿವಿಧ ಅಂಶಗಳನ್ನು ಪರಿಗಣಿಸಿದಾಗ ಸಾಂಪ್ರದಾಯಿಕ ಕ್ರೀಡೆಗಳಿಗಿಂತ ಮೊಬೈಲ್ ಗೇಮ್‌ಗಳು ಹೆಚ್ಚು ಜನರನ್ನು ತಲುಪುತ್ತವೆ.



ಪ್ರಾತಿನಿಧಿಕ ಚಿತ್ರ

> ಮೊಬೈಲ್ ಗೇಮಿಂಗ್ ಎಂಬುದು ಜೂಜಾಟವಲ್ಲ, ಅದು ಕೌಶಲಾಧಾರಿತ ಆಟ. ಚುರುಕು ಬುದ್ಧಿ, ಅಗಾಧ ನೆನಪಿನ ಶಕ್ತಿ ಹಾಗೂ ಕಾರ್ಯತಂತ್ರ ರೂಪಿಸುವ ಚಾಕಚಕ್ಯತೆಯನ್ನು ಒಳಗೊಂಡಿರುವ ತಾಂತ್ರಿಕ ಆಟ. ಇನ್ನೊಂದೆಡೆ, ಮೊಬೈಲ್ ಗೇಮ್‌ಗಳ ಬಗ್ಗೆ ಜನರಲ್ಲಿ ಸಾಕಷ್ಟು ತಪ್ಪು ಕಲ್ಪನೆಗಳು ಮನೆ ಮಾಡಿವೆ. ಈ ಕಾರಣದಿಂದ ಈ ಕೌಶಲಾಧಾರಿತ ಆಟದ ಬಗ್ಗೆ ಆಕ್ಷೇಪಗಳೂ ವ್ಯಕ್ತವಾಗುತ್ತಿವೆ. ಆದರೆ, ಮೊಬೈಲ್ ಗೇಮ್‌ಗಳ ಕುರಿತು ಸ್ಪಷ್ಟವಾದ ಹಾಗೂ ಈ ತಂತ್ರಜ್ಞಾನಾಧಾರಿತ ಈ ಕ್ಷೇತ್ರದ ಬೆಳವಣಿಗೆಗೆ ಪೂರಕವಾದ ನೀತಿ ರೂಪಿಸುವುದು ಇಂದಿನ ತುರ್ತು

ಉದ್ಯೋಗ ವಾಣಿ

SBI ಭಾರತೀಯ ಸ್ಟೇಟ್ ಬ್ಯಾಂಕ್ ಮಾನವ ಸಂಪನ್ಮೂಲ ಇಲಾಖೆ
ಸ್ಥಳೀಯ ಪ್ರಧಾನ ಕಚೇರಿ ನಂ.65, ಸಂತ ಮಾರ್ಕ್ಸ್ ರಸ್ತೆ
ಬೆಂಗಳೂರು–560001

FIMM ನೆಟ್ ವರ್ಕ್‌ನ DSH ಹಾಗೂ RBO ಗಳಲ್ಲಿ BUSINESS CORRESPONDENT FACILITATOR (BCF), EXECUTIVE (MARKETING) AND EXECUTIVE (RECOVERY) ಹುದ್ದೆಗಳಿಗೆ ನಿವೃತ್ತ ಅಧಿಕಾರಿಗಳ ನೇಮಕಾತಿ.

FIMM ನೆಟ್ ವರ್ಕ್ ನಲ್ಲಿ BUSINESS CORRESPONDENT FACILITATOR (BCF), EXECUTIVE (MARKETING) AND EXECUTIVE (RECOVERY) ಹುದ್ದೆಗಳಿಗೆ ಒಪ್ಪಂದದ ಆಧಾರದ ಮೇಲೆ ಭಾರತೀಯ ಸ್ಟೇಟ್ ಬ್ಯಾಂಕ್/ಇ–ಎಬಿ/ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ SCALE I / II / III / IV / V ಶ್ರೇಣಿಯಿಂದ ನಿವೃತ್ತಿ ಹೊಂದಿದ ಅಧಿಕಾರಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

28.02.2021 ರಂದು ಅಥವಾ ಮುಂಚಿತವಾಗಿ ನಿವೃತ್ತಿ ಹೊಂದಿರುವವರು ಹಾಗೂ ದಿನಾಂಕ 01.05.2021 ಕ್ಕೆ (ಆಯ್ಕೆಯಾದರೆ, ಅಂದಾಜು ಸೇರ್ಪಡೆ ದಿನಾಂಕ) ವಯಸ್ಸು 63 ವರ್ಷ ತುಂಬಿರದ ಅಧಿಕಾರಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

ಅರ್ಜಿ ನಮೂನೆ ಹಾಗೂ ಇತರೆ ವಿವರಗಳಾದ ಖಾಲಿ ಹುದ್ದೆಗಳು, ಅರ್ಹತೆ ಪಾತ್ರ ಮತ್ತು ಜವಾಬ್ದಾರಿಗಳು, ಸಂಭಾವನೆ ನಿಯಮಗಳು ಮತ್ತು ಶರತ್ತುಗಳು, ಉಲ್ಲೇಖಿತ ನಮೂನೆ ಇತ್ಯಾದಿಗಳನ್ನು ಬ್ಯಾಂಕ್‌ನ ವೆಬ್ ಸೈಟ್ www.sbi.co.in/Announcements ನಿಂದ download ಮಾಡಿಕೊಳ್ಳಬಹುದಾಗಿದೆ.

ಅರ್ಹ ನಿವೃತ್ತ ಅಧಿಕಾರಿಗಳು ಸರಿಯಾಗಿ ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯವಾದ ಅನುಬಂಧಗಳ ಜೊತೆಗೆ ಸಲ್ಲಿಸತಕ್ಕದ್ದು ಹಾಗೂ 21.03.2021 ರಂದು ಅಥವಾ ಅದಕ್ಕೂ ಮೊದಲು ನಮಗೆ ತಲುಪಿಸಬೇಕು

ದಿನಾಂಕ: 01.03.2021 ಸಹಾಯಕ ಪ್ರಧಾನ ವ್ಯವಸ್ಥಾಪಕರು – ಮಾನವ ಸಂಪನ್ಮೂಲ

ಕೇಂದ್ರೀಯ ವಿದ್ಯಾಲಯ, ರಾಷ್ಟ್ರೀಯ ವೈಮಾನಿಕ ಪ್ರಯೋಗಶಾಲೆ ಪರಿಸರ, ಬೆಂಗಳೂರು - ೫೬೦ ೦೧೭
केन्द्रीय विद्यालय राष्ट्रीय वांतरिक्ष प्रयोगशाला (एन ए एल)परिसर- बेंगलुरु- 560017

प्रवेश साक्षात्कार

KENDRIYA VIDYALAYA National Aerospace Laboratories (NAL) CAMPUS BANGALORE-560017

WALK - IN - INTERVIEW

शैक्षिक-सत्र 2021-22 के लिए संविदा के आधार पर नियुक्ति की वरीयता सूची बनाने हेतु निम्नलिखित विषयों के लिए प्रवेश साक्षात्कार दिनांक 18.03.2021 को प्रातः 10.00 बजे से 2.00 बजे तक होगा।

Walk in Interview for preparing panel for the Academic session 2021-2022 for the post of teachers on contractual Basis in the subjects mentioned below will be held on 18.03.2021 from **10.00 am to 2.00**

REPORTING TIME -9:00AM
Reporting time for Nurse, DEO and Counsellor – 11: 00 am

POSTS

PGT- English, Hindi, Maths, Physics, Chemistry, Biology, Economics, Commerce &Computer Science, **TGT-** English, Maths, Science, Hindi, Sanskrit & Social Science. **PRT,** Data Entry operator. Computer Instructors (General), Computer Instructor for Artificial Intelligence. Sports coach, Music, art & Craft, Yoga teachers. Nurse, Counsellor, & Kannada Teacher

Application with complete **BIODATA,** along with original and Xerox copy of relevant documents should be submitted to the Vidyalaya at the time of interview. Original documents will be returned after verification. For application form and other details log on https://nal.kvs.ac.in/

No TA/DA will be paid for appearing the WALK –IN – INTERVIEW.

In view of COVID 19, all SOPs of the government should be strictly followed

PRINCIPAL

Appointment Notice for
VICE CHANCELLOR

APPLICATIONS INVITED FOR THE POST OF VICE CHANCELLOR FROM EMINENT ACADEMICIANS TO LEAD A NEWLY ESTABLISHED STATE PRIVATE UNIVERSITY IN KARNATAKA.

The applicant should be a PhD degree holder with outstanding academic record, adept administrative skills with a minimum of ten years of experience as Professor in a University system or ten years of experience in an equivalent position in a reputed research and/or academic administrative organization.

The term of appointment shall be for a period of three (03) years.

The candidate should not be of more than 67 years of age as on closing date of receipt of application.

Applicant should submit a detailed resume with a complete list of publications, research experience, professional references as well as self-attested copies of certificates/relevant documents and a justification for candidature, along with a Passport size picture on or before 24st March 2021 to email id: vc9.appt@gmail.com

Application received after the prescribed date and incomplete applications shall not be considered. Short listed candidates shall be called for interview.



ಪ್ರಜಾವಾಣಿ
ಉದ್ಯೋಗ ವಾಣಿ
ಉದ್ಯೋಗ ಅವಕಾಶದ ಜಾಹೀರಾತಿಗಾಗಿ ಸಂಪರ್ಕಿಸಿ:
ಫೋನ್: 9986156464

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ
ಪ್ರೀಮಿಯಂ ಪ್ಲಾಟಿನಂ ಹಾಗೂ ಪ್ರೀಮಿಯಂ
ನಿವೇಶನಗಳ ಇ-ಹರಾಜು

80/60/40/30 ಅಡಿ ರಸ್ತೆಗಳಲ್ಲಿರುವ ವಾಣಿಜ್ಯ / ಮೂಲೆ / ಮಧ್ಯಂತರ ನಿವೇಶನಗಳು / ಮನೆಗಳನ್ನು ಇ-ಹರಾಜಿನಲ್ಲಿ ನಿಮ್ಮದಾಗಿಸಿಕೊಳ್ಳಲು ಸುಸಂದರ್ಭ. ಭಾಗವಹಿಸಲಿಚ್ಛಿಸುವವರಿಗೆ ಸೂಕ್ತ ಮಾಹಿತಿ ನೀಡಲು ಮುಡಾ ಕಚೇರಿಯಲ್ಲಿ ನುರಿತ ಸಿಬ್ಬಂದಿಯನ್ನು ನೇಮಿಸಲಾಗಿದ್ದು, ಸಾರ್ವಜನಿಕರು ಸಂಪರ್ಕಿಸಬಹುದಾಗಿದೆ.

ನಿಮ್ಮ ಕನಸಿನ ಸೂರು ಮೈ-ಸೂರಿನಲ್ಲಿ...

ಇ-ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿಯುಳ್ಳವರು ಇಎಂಡಿ ಪಾವತಿಸಲು ಕೊನೆ ದಿನಾಂಕ ಮತ್ತು ಸಮಯ ಹಾಗೂ ಬಿಡ್ಡಿಂಗ್‌ಕೊನೆಯಾಗುವ ದಿನಾಂಕ ಮತ್ತು ಸಮಯ

ನಿವೇಶನಗಳ ಕ್ರಮ ಸಂಖ್ಯೆ	ಇ.ಎಂ.ಡಿ ಪಾವತಿಸುವ ಕೊನೆಯ ದಿನಾಂಕ		ಬಿಡ್ಡಿಂಗ್ ಕೊನೆಗೊಳ್ಳುವ ದಿನಾಂಕ	
1 ರಿಂದ 75	19.03.2021	12.30	22.03.2021	7–30
76 ರಿಂದ 150	22.03.2021	12.30	24.03.2021	7–30
151 ರಿಂದ 225	25.03.2021	12.30	26.03.2021	7–30
226 ರಿಂದ 304	29.03.2021	12.30	31.03.2021	7–30
ಸಮಯ : ಆಯಾ ದಿನಾಂಕಗಳ ಸಂಜೆ 7.30 ಗಂಟೆ				

ಇ–ಹರಾಜನ್ನು ತೆರೆಯುವ ಹಾಗೂ ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ : 08–03–.2021 ಸಮಯ : 12.00 ಗಂಟೆ ನಂತರ

ಬಡಾವಣೆಗಳು
- ವಿಜಯನಗರ 1,2,3 & 4ನೇ ಹಂತ
- ದೇವನೂರು (ರಾಜೀವ್‌ನಗರ)
- ಜೆ.ಪಿ.ನಗರ 1,2,3ನೇ ಹಂತ
- ಲಲಿತಾದ್ರಿನಗರ
- ದಟ್ಟಗಳ್ಳಿ 2 & 3 ನೇ ಹಂತ
- ಗೋಕುಲಂ
- ಹಂಚ್ಯಾ, ಸಾತಗಳ್ಳಿ
- ಜೆ.ಸಿ.ಎಸ್.ಬಿ. ಕುವೆಂಪುನಗರ

ಇ- ಹರಾಜಿನಲ್ಲಿ ನೇರವಾಗಿ ಭಾಗವಹಿಸಲು
ನಮ್ಮ ಸಂಪರ್ಕ: eproc.karnataka.gov.in, support@helpdesk.com
+91 80–46010000 / +91 80–22631200
ಹೆಚ್ಚಿನ ಮಾಹಿತಿಗಾಗಿ: mudamysore.gov.in, mudamysore@gmail.com
ಹೆಚ್ಚಿನ ಮಾಹಿತಿಗಾಗಿ: ಕಛೇರಿ ವೇಳೆಯಲ್ಲಿ ಈ ಕೆಳಕಂಡ ಹರಾಜು ಶಾಖೆಯ ಸಹಾಯವಾಣಿ ಸಂಖ್ಯೆಗೆ ಸಂಪರ್ಕಿಸಿ
ಮೊಬೈಲ್ ಹಾಗೂ ವಾಟ್ಸ್‌ಆಪ್: 8884000752/8884000753 ಮೊಬೈಲ್:8884000791/8884000794
ಮಧ್ಯವರ್ತಿಗಳ ಹಾವಳಿಯಿಲ್ಲ, ದಾಖಲೆಗಳ ಸಂದೇಹವಿಲ್ಲ, ಬ್ಯಾಂಕ್‌ನಲ್ಲಿ ಸುಲಭ ಸಾಲಸೌಲಭ್ಯ
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ

ಕ್ರಿಕೆಟ್ ಬೆಟ್ಟಿಂಗ್‌ಗೆ ಕಾನ್‌ಸ್ಟೆಬಲ್‌ಗಳೇ ರೂವಾರಿ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಂದಿನಿ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ನಡೆಯುತ್ತಿದ್ದ ಕ್ರಿಕೆಟ್ ಬೆಟ್ಟಿಂಗ್ ದಂಧೆಯಲ್ಲಿ ಕಾನ್‌ಸ್ಟೆಬಲ್‌ಗಳಿಬ್ಬರು ಭಾಗಿಯಾಗಿ ಆರೋಪಿಗಳನ್ನು ರಕ್ಷಿಸುತ್ತಿದ್ದ ಸಂಗತಿ ಪೊಲೀಸರ ತನಿಖೆಯಿಂದ ಹೊರಬಿದ್ದಿದೆ.

'ಠಾಣೆ ವ್ಯಾಪ್ತಿಯಲ್ಲಿ ಹಲವು ದಿನಗಳಿಂದ ಕ್ರಿಕೆಟ್ ಬೆಟ್ಟಿಂಗ್ ನಡೆಯುತ್ತಿತ್ತು. ಖಚಿತ ಮಾಹಿತಿ ಮೇರೆಗೆ ಕೆಲ ದಿನಗಳ ಹಿಂದಷ್ಟೇ ದಾಳಿ ಮಾಡಿ ಇಬ್ಬರು ಕಾನ್‌ಸ್ಟೆಬಲ್ ಸೇರಿದಂತೆ ಆರು ಮಂದಿಯನ್ನು ಬಂಧಿಸಲಾಗಿತ್ತು. ನಗದು ಹಾಗೂ ಮೊಬೈಲ್ ಸಹ ಜಪ್ತಿ ಮಾಡಲಾಗಿತ್ತು. ಆರೋಪಿಗಳನ್ನು ಠಾಣಾ ಜಾಮೀನು ಮೇಲೆ ಬಿಡುಗಡೆ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಉಪ್ಪಾರಪೇಟೆ ಠಾಣೆ ಕಾನ್‌ಸ್ಟೆಬಲ್ ಶಿವಕುಮಾರ್ ಹಾಗೂ ಹುಳಿಮಾವು ಸಂಚಾರ ಠಾಣೆ ಕಾನ್‌ಸ್ಟೆಬಲ್ ಮಣಿಕಂಠ ಬಂಧಿತರು. ಒಂದೇ ಬ್ಯಾಚ್‌ನಲ್ಲಿ ಕಾನ್‌ಸ್ಟೆಬಲ್ ಆಗಿ ನೇಮಕಗೊಂಡಿದ್ದ ಅವರು, ಉಳಿದ ನಾಲ್ವರು ಆರೋಪಿಗಳ ಬೆಟ್ಟಿಂಗ್ ದಂಧೆಗೆ ನೆರವಾಗುತ್ತಿದ್ದರು. ದಾಳಿ ಬಗ್ಗೆ ಆರೋಪಿಗಳಿಗೆ ಮುಂಚಿತವಾಗಿ ಮಾಹಿತಿ ನೀಡುತ್ತಿದ್ದರು. ಅದಕ್ಕಾಗಿ ಹಣವನ್ನೂ ಪಡೆಯುತ್ತಿದ್ದರೆಂಬ ಮಾಹಿತಿ ಇದೆ' ಎಂದೂ ಮೂಲಗಳು ಹೇಳಿವೆ.

'ಕಾನ್‌ಸ್ಟೆಬಲ್‌ಗಳ ವಿರುದ್ಧವೂ ಪ್ರಕರಣ ದಾಖಲಿಸಿಕೊಂಡು, ಪ್ರಾಥಮಿಕ ವರದಿ ಸಮೇತ ಉತ್ತರ ವಿಭಾಗದ ಡಿಸಿಪಿ ಧರ್ಮೇಂದ್ರಕುಮಾರ್ ಮೀನಾ ಅವರಿಗೆ ವರದಿ ಸಲ್ಲಿಸಲಾಗಿದೆ. ಅಮಾನತು ಬಗ್ಗೆ ಆಯಾ ವಿಭಾಗದ ಡಿಸಿಪಿ ಅವರೇ ಕ್ರಮ ಕೈಗೊಳ್ಳಲಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

ಕಾನ್‌ಸ್ಟೆಬಲ್‌ಗಳು ಅಮಾನತು: ಕ್ರಿಕೆಟ್ ಬೆಟ್ಟಿಂಗ್‌ನಲ್ಲಿ ಭಾಗಿಯಾಗಿದ್ದರು ಎನ್ನಲಾದ ಕಾನ್‌ಸ್ಟೆಬಲ್‌ಗಳಾದ ಶಿವಕುಮಾರ್ ಹಾಗೂ ಮಣಿಕಂಠ್ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

'ಉಪ್ಪಾರಪೇಟೆ ಕಾನ್‌ಸ್ಟೆಬಲ್ ಶಿವಕುಮಾರ್ ಕೃತ್ಯದಲ್ಲಿ ಭಾಗಿಯಾಗಿದ್ದ ಬಗ್ಗೆ ಡಿಸಿಪಿ ಧರ್ಮೇಂದ್ರ ಕುಮಾರ್ ಮೀನಾ ವರದಿ ನೀಡಿದ್ದರು. ಅದನ್ನು ಪರಿಶೀಲಿಸಿ ಅಮಾನತು ಆದೇಶ ಹೊರಡಿಸಲಾಗಿದೆ' ಎಂದು ಸಂಜೀವ್ ಪಾಟೀಲ ಹೇಳಿದರು.

ಹುಳಿಮಾವು ಸಂಚಾರ ಠಾಣೆ ಕಾನ್‌ಸ್ಟೆಬಲ್ ಮಣಿಕಂಠ್ ಅವರನ್ನು ಸಂಚಾರ (ಪೂರ್ವ ವಿಭಾಗ) ಡಿಸಿಪಿ ನಾರಾಯಣ ಅಮಾನತು ಮಾಡಿದ್ದಾರೆ.

70 ಗ್ರಾಂ ಚಿನ್ನಕ್ಕಾಗಿ ದೊಡ್ಡಮ್ಮನ ಹತ್ಯೆ

ಅಪರಾಧ ಸುದ್ದಿ

ಬೆಂಗಳೂರು: ಅಶೋಕನಗರ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ದಿಲ್ಯಾನ್ ಬಾನು (62) ಹತ್ಯೆ ಪ್ರಕರಣ ಭೇದಿಸಿರುವ ಪೊಲೀಸರು, ಶಬಾನಾ ಬಾನು (29) ಎಂಬಾಕೆಯನ್ನು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿಯಾದ ಶಬಾನಾ ಬಾನು, ಕೊಲೆಯಾದ ದಿಲ್ಯಾನ್ ಅವರ ತಂಗಿಯ ಮಗಳು. ಚಿನ್ನಾಭರಣಕ್ಕಾಗಿ ಆಕೆ ಕೃತ್ಯ ಎಸಗಿದ್ದಳು. ಆಕೆಯನ್ನು ಬಂಧಿಸಿ, 70 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಆನೆಪಾಳ್ಯದ ನಿವಾಸಿ ದಿಲ್ಯಾನ್ ಬಾನು, ಮಗನ ಜೊತೆ ವಾಸವಿದ್ದರು. ಮಾ. 4ರಂದು ಬೆಳಿಗ್ಗೆ ಮಗ ಕೆಲಸಕ್ಕೆ ಹೋಗಿದ್ದರು. ಅದೇ ವೇಳೆಯೇ ಮನೆಗೆ ಬಂದಿದ್ದ ಆರೋಪಿ ಶಬಾನಾ, ಕತ್ತು ಹಿಸುಕಿ ಕೊಂದಿದ್ದರು. ನಂತರ ಮೈ ಮೇಲೆ ಹಾಗೂ ಮನೆಯಲ್ಲಿದ್ದ ಚಿನ್ನಾಭರಣ ತೆಗೆದುಕೊಂಡು ಪರಾರಿಯಾಗಿದ್ದಳು.'

'ಟೆಂಪೊ ಚಾಲಕನಾಗಿದ್ದ ಮಗ, ಕೆಲಸ ಮುಗಿಸಿ ಮಧ್ಯಾಹ್ನ ಊಟಕ್ಕೆಂದು ಮನೆಗೆ ಬಂದಿದ್ದರು. ಅವಾಗಲೇ ತಾಯಿ ಮೃತದೇಹ ಕಂಡಿತ್ತು. ಬಳಿಕ ದೂರು ನೀಡಿದ್ದರು' ಎಂದೂ ಪೊಲೀಸರು ತಿಳಿಸಿದರು.

'ಮನೆಗಳಲ್ಲಿ ಕೆಲಸ ಮಾಡುತ್ತಿದ್ದ ಶಬಾನಾ, ಆರ್ಥಿಕ ತೊಂದರೆಗೆ ಸಿಲುಕಿದ್ದಳು. ದೊಡ್ಡಮ್ಮನ ಮನೆಯಲ್ಲಿ ಚಿನ್ನಾಭರಣವಿದ್ದ ಮಾಹಿತಿ ಗೊತ್ತಿದ್ದರಿಂದ, ಅವರನ್ನೇ ಕೊಂದು ಚಿನ್ನಾಭರಣ ಕಳವು ಮಾಡಲು ತೀರ್ಮಾನಿಸಿ ಕೃತ್ಯ ಎಸಗಿದ್ದಳು' ಎಂದೂ ಹೇಳಿದರು.

ಸುದ್ದಿ 2 ನಿಮಿಷ

ಬೆಂಗಳೂರು ಕುಂದು ಕೊರತೆ ನಿವಾರಣಾ ಪ್ರಾಧಿಕಾರ

ಬೆಂಗಳೂರು: ರಾಜಧಾನಿಯ ಮೂಲಸೌಕರ್ಯದ ಬಗ್ಗೆ ನಾಗರಿಕರ ಸಮಸ್ಯೆಗಳನ್ನು ಆಲಿಸಲು 'ಬೆಂಗಳೂರು ಕುಂದು ಕೊರತೆ ನಿವಾರಣಾ ಪ್ರಾಧಿಕಾರ' ರಚಿಸಲು ಕ್ರಮವಹಿಸಲಾಗುವುದು ಎಂದು ಕಾನೂನು ಸಚಿವ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನಸಭೆಯಲ್ಲಿ ಕಾಂಗ್ರೆಸ್‌ನ ಎನ್.ಎ. ಹ್ಯಾರಿಸ್ ಅವರ ಪ್ರಶ್ನೆಗೆ ಉತ್ತರ ನೀಡಿದ ಅವರು, ಇದೇ ವರ್ಷದ ಜನವರಿ 11ರಿಂದ ಅನ್ವಯವಾಗುವಂತೆ ಬೆಂಗಳೂರು ಮಹಾನಗರ ಪಾಲಿಕೆ ಕಾಯ್ದೆ ಜಾರಿಗೆ ಬಂದಿದೆ. ಈ ಕಾಯ್ದೆಯಲ್ಲಿ ಕುಂದುಕೊರತೆ ನಿವಾರಣಾ ಪ್ರಾಧಿಕಾರ ರಚಿಸುವ ಬಗ್ಗೆ ಪ್ರಸ್ತಾಪಿಸಲಾಗಿದೆ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಹ್ಯಾರಿಸ್, 'ಪ್ರಾಧಿಕಾರ ರಚಿಸಲು ಅಧಿಕಾರ ಇದೆ ಎಂದು ಲಿಖಿತ ಉತ್ತರದಲ್ಲಿ ಹೇಳಲಾಗಿದೆ. ಅಧಿಕಾರ ಇರುವುದು ಬೇರೆ, ರಚಿಸುವುದು ಬೇರೆ. ಬೆಂಗಳೂರಿನಲ್ಲಿ ಬಿಬಿಎಂಪಿ, ಜಲಮಂಡಳಿ, ಬೆಸ್ಕಾಂ, ಮೆಟ್ರೊ, ಬಿಎಂಟಿಸಿ ಹೀಗೆ ಪ್ರತ್ಯೇಕವಾಗಿವೆ. ತಮ್ಮ ಪಾಡಿಗೆ ತಾವು ಕೆಲಸ ಮಾಡುವುದರಿಂದ ಅನೇಕ ಸಮಸ್ಯೆಗಳು ಸೃಷ್ಟಿಯಾಗುತ್ತಿವೆ. ಇದನ್ನು ತಪ್ಪಿಸಲು ಒಂದು ವ್ಯವಸ್ಥೆ ತರಬೇಕು' ಎಂದು ಆಗ್ರಹಿಸಿದರು.



ಬಸವರಾಜ ಬೊಮ್ಮಾಯಿ, 'ಕುಂದು ಕೊರತೆ ನಿವಾರಿಸಿ, ನಾಗರಿಕರ ಅಹವಾಲು ಆಲಿಸಲು ಬಿಬಿಎಂಪಿ ವ್ಯಾಪ್ತಿಯಲ್ಲಿ ತನ್ನದೇ ಆದ ವ್ಯವಸ್ಥೆ ಇದೆ. ಅದನ್ನು ಮತ್ತಷ್ಟು ಸುಧಾರಣೆ ಮಾಡುವ ಬಗ್ಗೆ ಕಾಯ್ದೆಯಲ್ಲಿ ಪ್ರಸ್ತಾವಿಸಲಾಗಿದೆ. ಅದರ ಅನುಷ್ಠಾನಕ್ಕೆ ಸೂಕ್ತ ಕ್ರಮಕೈಗೊಳ್ಳಲಾಗುವುದು ಎಂದರು.

₹ 50 ಸಾವಿರದೊಳಗೆ ಐವಿಎಫ್ ಚಿಕಿತ್ಸೆ

ಬೆಂಗಳೂರು: ಯಲಹಂಕದಲ್ಲಿರುವ ಮಾ ಫರ್ಟಿಲಿಟಿ ಸೆಂಟರ್ ತನ್ನ ಎರಡನೇ ವಾರ್ಷಿಕೋತ್ಸವ ಆಚರಿಸಿಕೊಳ್ಳುತ್ತಿದೆ. ಈ ಸಂಬಂಧ ಮಕ್ಕಳಾಗದ ದಂಪತಿಗೆ ₹ 50 ಸಾವಿರದ ಒಳಗಡೆಯೇ ಐವಿಎಫ್ ಚಿಕಿತ್ಸೆ ನೀಡುವುದಾಗಿ ಘೋಷಿಸಿದೆ.

'ವಿವಾಹವಾಗಿ ಹಲವು ವರ್ಷ ಕಳೆದರೂ ಮಕ್ಕಳಾಗದ ದಂಪತಿ ಪ್ರನಾಳ ಶಿಶು ವಿಧಾನದಲ್ಲಿ ಮಕ್ಕಳನ್ನು ಪಡೆಯಲು ಬರುತ್ತಾರೆ. ಆರೋಗ್ಯ ಪೂರ್ಣ ವೀರ್ಯಾಣು ಮತ್ತು ಅಂಡಾಣುವನ್ನು ಸಂಯೋಜನೆಗೊಳಿಸಲಾಗುತ್ತದೆ. ಅದು ಭ್ರೂಣ ವ್ಯವಸ್ಥೆಗೆ ಬಂದ ನಂತರ ಮಹಿಳೆಯ ಗರ್ಭದಲ್ಲಿ ಇಡಲಾಗುತ್ತದೆ. ಭ್ರೂಣ ಸಹಜವಾಗಿ ಬೆಳೆಯುತ್ತದೆ. ಇದರಿಂದ ಯಾವುದೇ ಅಡ್ಡ ಪರಿಣಾಮವಿಲ್ಲ' ಎಂದು ಸಂಸ್ಥೆಯ ನಿರ್ದೇಶಕಿ ಡಾ. ದೀಪ್ತಿ ತಿಳಿಸಿದ್ದಾರೆ.

'ಕಳೆದ ವರ್ಷ 50ಕ್ಕೂ ಹೆಚ್ಚು ಮಂದಿಗೆ ಐವಿಎಫ್ ಚಿಕಿತ್ಸೆ ನೀಡಲಾಗಿದ್ದು, ಎಲ್ಲರಲ್ಲೂ ಫಲಿತಾಂಶ ದೊರೆತಿದೆ. ವಿವಿಧ ರೀತಿಯ ಬಂಜೆತನದ ಸಮಸ್ಯೆ ಹೊಂದಿರುವ ದಂಪತಿಗಳಿಗೆ ಪ್ರನಾಳ ಶಿಶು ಚಿಕಿತ್ಸಾ ವಿಧಾನದಿಂದ ಪ್ರಯೋಜನ ಆಗಬಹುದು' ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಡಿಜಿ– ಐಜಿಪಿ ಮನೆ ಕಾಂಪೌಂಡ್‌ಗೆ ಗುದ್ದಿದ ಬಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಬಸ್ಸೊಂದು ಚಾಲಕನ ನಿಯಂತ್ರಣ ತಪ್ಪಿ ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿ-ಐಜಿಪಿ) ಪ್ರವೀಣ್ ಸೂದ್ ಅವರ ನಿವಾಸದ ಕಾಂಪೌಂಡ್‌ಗೆ ಗುದ್ದಿದ್ದು, ಚಾಲಕ ಹಾಗೂ ಕೆಲ ಪ್ರಯಾಣಿಕರು ಗಾಯಗೊಂಡಿದ್ದಾರೆ.

ನೃಪತುಂಗ ರಸ್ತೆಯಲ್ಲಿ ಮಂಗಳವಾರ ಬೆಳಿಗ್ಗೆ ಈ ಅವಘಢ ಸಂಭವಿಸಿದೆ. ಕಾಂಪೌಂಡ್ ಕುಸಿದು ಬಿದ್ದಿದೆ. ಹಲಸೂರು ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ರಸ್ತೆಗೆ ಹೊಂದಿಕೊಂಡೇ ಡಿಜಿ–ಐಜಿಪಿ ನಿವಾಸವಿದ್ದು, ಸುತ್ತಲೂ ಕಾಂಪೌಂಡ್ ಇದೆ. ಗೌರಿಬಿದನೂರಿನಿಂದ ಬೆಂಗಳೂರಿಗೆ ಬರುತ್ತಿದ್ದ ಖಾಸಗಿ ಬಸ್, ಬ್ರೇಕ್ ಫೇಲ್ ಆಗಿ ಚಾಲಕನ ನಿಯಂತ್ರಣ ತಪ್ಪಿ ಕಾಂಪೌಂಡ್‌ಗೆ ಗುದ್ದಿತ್ತು. ಚಾಲಕ ಹಾಗೂ ಕೆಲ ಪ್ರಯಾಣಿಕರು ಚಿಕಿತ್ಸೆ ಪಡೆದುಕೊಂಡಿದ್ದಾರೆ. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ' ಎಂದು ಪೊಲೀಸರು ಹೇಳಿದರು.

ಕಾಂಗ್ರೆಸ್ ಪ್ರತಿಭಟನೆ

'ರಾಜ್ಯ ಸರ್ಕಾರ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಜನರ ಸಾಲದ ಹೊರೆಯನ್ನು 2 ಪಟ್ಟು ಹೆಚ್ಚಿಸಿದ್ದು, ಇದೊಂದು ಜನವಿರೋಧಿ ಬಜೆಟ್' ಎಂದು ಆರೋಪಿಸಿ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ನಗರದ ಕಾಂಗ್ರೆಸ್ ಭವನ ಎದುರು ಮಂಗಳವಾರ ಪ್ರತಿಭಟನೆ ನಡೆಸಿದರು - ಪ್ರಜಾವಾಣಿ ಚಿತ್ರ

ವೈದ್ಯರಿಗೆ ಇರಿದ ರೋಗಿ!

ಕಲಬುರ್ಗಿ: ಹಲ್ಲು ನೋವಿಗೆ ಸೂಕ್ತ ಚಿಕಿತ್ಸೆ ನೀಡಿಲ್ಲ ಎಂಬ ಕಾರಣಕ್ಕಾಗಿ ರೋಗಿಯೊಬ್ಬರು ತನಗೆ ಚಿಕಿತ್ಸೆ ನೀಡಿದ ದಂತ ವೈದ್ಯರೊಬ್ಬರ ಹೊಟ್ಟೆಗೆ ಚಾಕುವಿನಿಂದ ಇರಿದು ಗಾಯಗೊಳಿಸಿದ ಘಟನೆ ಮಂಗಳವಾರ ಇಲ್ಲಿ ನಡೆದಿದೆ.

ಜಿಲ್ಲಾಧಿಕಾರಿ ಕಚೇರಿ ಎದುರಿನ ಸಿದ್ಧಗಂಗಾ ಡೆಂಟಲ್ ಕ್ಲಿನಿಕ್‌ನ ವೈದ್ಯ ಡಾ. ವಿಶ್ವನಾಥ ಪಾಟೀಲ ಇರಿತಕ್ಕೊಳಗಾದವರು. ಯಾದಗಿರಿ ಜಿಲ್ಲೆ ಸುರಪುರದ ಶ್ರೀನಿವಾಸ ಚಾರು (27) ಚಾಕು ಇರಿದ ಆರೋಪಿ.

'ಶ್ರೀನಿವಾಸ 2013ರಿಂದಲೇ ಡಾ. ವಿಶ್ವನಾಥ ಅವರ ಬಳಿ ಹಲ್ಲುನೋವಿಗೆ ಚಿಕಿತ್ಸೆ ಪಡೆಯುತ್ತಿದ್ದ. ಆದರೆ, ನೋವು ವಾಸಿಯಾಗಿರಲಿಲ್ಲ. ಇದೇ ದ್ವೇಷದಿಂದ ಅವರಿಗೆ ಚಾಕು ಹಾಕುವ ಸಂಚು ರೂಪಿಸಿದ ಶ್ರೀನಿವಾಸ, ಮಂಗಳವಾರ ಬೆಳಿಗ್ಗೆ ವೈದ್ಯರು ಕ್ಲಿನಿಕ್‌ಗೆ ಬರುವ ಮುಂಚೆಯೇ ಬಂದು ಕುಳಿತಿದ್ದಾನೆ. ವೈದ್ಯರು ಬಂದಿದ್ದನ್ನು ಖಚಿತಪಡಿಸಿಕೊಂಡು ಅವರ ಎದುರು ಬಂದು ಚಾಕು ಹಾಕಿದ್ದು, ತಕ್ಷಣವೇ ವಿಶ್ವನಾಥ ಅವರು ಹಿಂದೆ ಸರಿದಿದ್ದಾರೆ. ಹೊಟ್ಟೆಯ ಕೊಂಚ ಭಾಗಕ್ಕೆ ಗಾಯವಾಗಿ ರಕ್ತಸ್ರಾವವಾಗಿದೆ. ಕೂಡಲೇ ಅವರನ್ನು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಯಿತು' ಎಂದು ಸ್ಟೇಶನ್ ಬಜಾರ್ ಠಾಣೆ ಪೊಲೀಸ್ ಇನ್‌ಸ್ಪೆಕ್ಟರ್ ಸಿದ್ಧರಾಮೇಶ್ವರ ತಿಳಿಸಿದರು.

ಶ್ರೀನಿವಾಸ

ವಿಶ್ವನಾಥ

'ಶ್ರೀನಿವಾಸ ಮಾನಸಿಕ ಅಸ್ವಸ್ಥ ಎಂಬುದು ಮೇಲ್ನೋಟಕ್ಕೆ ಕಂಡು ಬಂದಿದ್ದು, ಹೆಚ್ಚಿನ ಮಾಹಿತಿ ಸಂಗ್ರಹಿಸುತ್ತಿದ್ದೇವೆ' ಎಂದರು.

ರಸ್ತೆ ಗುಂಡಿ: ಪ್ರಮಾಣಪತ್ರ ಸಲ್ಲಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾದಚಾರಿ ಮಾರ್ಗ ಮತ್ತು ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚಲು ಕೈಗೊಂಡ ಕ್ರಮಗಳ ಬಗ್ಗೆ ಪ್ರಮಾಣಪತ್ರ ಸಲ್ಲಿಸುವಂತೆ ಬಿಬಿಎಂಪಿ ಆಯುಕ್ತರಿಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಸಲ್ಲಿಸಿದ ವರದಿಗೆ ಬಿಬಿಎಂಪಿಯ ಇಬ್ಬರು ಮುಖ್ಯ ಎಂಜಿನಿಯರ್‌ಗಳು ನಿರ್ದಿಷ್ಟ ಪ್ರತಿಕ್ರಿಯೆ ನೀಡದ ಕಾರಣ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಈ ಆದೇಶ ನೀಡಿತು.

2015ರಲ್ಲಿ ವಿಜಯನ್ ಮೆನನ್ ಮತ್ತು ಇತರರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಪೀಠ ವಿಚಾರಣೆ ನಡೆಸುತ್ತಿದೆ. ವಿಡಿಯೊ ಕಾನ್ಫರೆನ್ಸ್ ವಿಚಾರಣೆ ವೇಳೆ ಮುಖ್ಯ ಎಂಜಿನಿಯರ್‌ಗಳಾದ ಸಿದ್ದೇಗೌಡ ಮತ್ತು ಬಿ.ಎಸ್. ಪ್ರಹ್ಲಾದ್ ಹಾಜರಿದ್ದರು. ತಂಡಗಳನ್ನು ರಚಿಸಿ ಸ್ಥಳ ಭೇಟಿಗೆ ಸೂಚನೆ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

'2019ರ ಜುಲೈನಲ್ಲಿ ನೀಡಿದ ಆದೇಶಗಳನ್ನು ಬಿಬಿಎಂಪಿ ಪಾಲಿಸದ ಕಾರಣ ಕಾನೂನು ಸೇವೆಗಳ ಪ್ರಾಧಿಕಾರದಿಂದ ಪೀಠ ವರದಿ ಪಡೆಯಲಾಗಿದೆ. ಆದೇಶ ಪಾಲನೆ ಬಗ್ಗೆ ಅನುಸರಣಾ ಅಫಿಡವಿಟ್ ಸಲ್ಲಿಸಬೇಕು' ಎಂದು ಬಿಬಿಎಂಪಿ ಆಯುಕ್ತರಿಗೆ ಸೂಚನೆ ನೀಡಿತು. ಮಾ.30ಕ್ಕೆ ವಿಚಾರಣೆ ಮುಂದೂಡಿತು.

'ನಾಗರಿಕರಿಂದ ದೂರುಗಳನ್ನು ಸ್ವೀಕರಿಸಲು ವಾಟ್ಸ್‌ಆ್ಯಪ್ ಗುಂಪುಗಳನ್ನು ರಚಿಸಲಾಗಿತ್ತು. 5,435 ಪ್ರತಿಕ್ರಿಯೆಗಳನ್ನು ಸ್ವೀಕರಿಸಲಾಗಿದೆ' ಎಂದು ಪ್ರಾಧಿಕಾರದ ವರದಿ ಹೇಳಿದೆ.

ಬೆಲ್ಟ್‌ನಲ್ಲಿ ಚಿನ್ನ

ಬೆಂಗಳೂರು: ಬೆನ್ನು ನೋವು ನಿವಾರಕ ಬೆಲ್ಟ್‌ನಲ್ಲಿ ಅಕ್ರಮವಾಗಿ ಬಚ್ಚಿಟ್ಟು ಸಾಗಿಸುತ್ತಿದ್ದ ₹ 58.94 ಲಕ್ಷ ಮೌಲ್ಯದ ಚಿನ್ನವನ್ನು ನಗರದ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.

ದುಬೈನಿಂದ ನಗರದ ನಿಲ್ದಾಣಕ್ಕೆ ಮಾ. 8ರಂದು ಬಂದಿಳಿದಿದ್ದ ತಮಿಳುನಾಡಿನ 34 ವರ್ಷದ ಮಹಿಳೆ ಬಳಿ ಬೆಲ್ಟ್ ಇತ್ತು. ಆಕೆಯ ನಡೆಯಿಂದ ಅನುಮಾನಗೊಂಡ ಸಿಬ್ಬಂದಿ ಪರಿಶೀಲನೆ ನಡೆಸಿದ್ದರು. ಆಗ ಚಿನ್ನ ಪತ್ತೆಯಾಯಿತು.

ಪರ್ಸ್ ಕದ್ದು ಸಿಕ್ಕಿಬಿದ್ದ ಕಳ್ಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೈಕ್ ಕಳವು ಮಾಡಿಕೊಂಡು ಪರಾರಿಯಾಗುತ್ತಿದ್ದ ಆರೋಪಿ ಎಚ್. ಹರೀಶ್ (29), ಲಾರಿ ಚಾಲಕರೊಬ್ಬರ ಪರ್ಸ್ ಕದ್ದು ಜಾಲಹಳ್ಳಿ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾನೆ.

'ಯಶವಂತಪುರದ ಬಾಂಬೆ ಡೈಯಿಂಗ್ ರಸ್ತೆಯ ನಿವಾಸಿ ಹರೀಶ್, ಬೈಕ್ ಹಾಗೂ ಪರ್ಸ್ ಕಳ್ಳತನ ಮಾಡುತ್ತಿದ್ದ. ಆತನಿಂದ ₹ 3 ಲಕ್ಷ ಮೌಲ್ಯದ ಐದು ಬೈಕ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ದೂರುದಾರ ಜಯದೇವ್ ಸರ್ಕಾರ್, ಕಾಂಕ್ರೀಟ್ ತುಂಬಿದ್ದ ಲಾರಿ ಚಲಾಯಿಸಿಕೊಂಡು ಹೆಬ್ಬಾಳ ಕಡೆಯಿಂದ ಕುವೆಂಪು ವೃತ್ತದತ್ತ ಹೊರಟಿದ್ದರು. ಬೈಕ್‌ನಲ್ಲಿ ಬಂದು ಲಾರಿಯನ್ನು ಅಡ್ಡಗಟ್ಟಿದ್ದ ಆರೋಪಿ ಹರೀಶ್, ರಸ್ತೆ ತಿರುವಿನಲ್ಲಿ ಇಂಡಿಕೇಟರ್ ಏಕೆ ಹಾಕಿಲ್ಲವೆಂದು ಗಲಾಟೆ ಮಾಡಿದ್ದ. ಸ್ಥಳದಲ್ಲಿದ್ದ ಜನರು ಜಗಳ ಬಿಡಿಸಿ ಕಳುಹಿಸಿದ್ದರು. ಆರೋಪಿ ಸಹ ಸ್ಥಳದಿಂದ ಹೊರಟು ಹೋಗಿದ್ದ.'

'ಕೆಲ ನಿಮಿಷ ಬಿಟ್ಟು ಜಯದೇವ್, ತಮ್ಮ ಜೇಬಿನಲ್ಲಿ ನೋಡಿದಾಗ ಪರ್ಸ್ ಇರಲಿಲ್ಲ. ಅದರಲ್ಲಿ ₹ 16,000 ನಗದು ಇತ್ತು. ಗಲಾಟೆ ವೇಳೆಯೇ ಪರ್ಸ್ ಕಳುವಾದ ಬಗ್ಗೆ ಠಾಣೆಗೆ ದೂರು ನೀಡಿದ್ದರು' ಎಂದೂ ತಿಳಿಸಿದರು.

ಹರೀಶ್

ಎಂಬಿಎ ಆಗಿದ್ದ ಹರೀಶ್; 'ಆರೋಪಿಗಾಗಿ ಹುಡುಕಾಟ ನಡೆದಿತ್ತು. ಮಾ. 6ರಂದು ಆರೋಪಿ ಎಂಇಎಸ್ ರಸ್ತೆಯಲ್ಲಿ ಬೈಕ್‌ನಲ್ಲಿ ಹೊರಟಿದ್ದ. ಆತನನ್ನು ತಡೆದಿದ್ದ ಪೊಲೀಸರು, ಬೈಕ್ ಸಮೇತ ಠಾಣೆಗೆ ಕರೆತಂದು ವಿಚಾರಣೆ ನಡೆಸಿದಾಗ ಕೃತ್ಯ ಬಯಲಾಯಿತು' ಎಂದು ಪೊಲೀಸರು ಹೇಳಿದರು.

'ಅಪರಾಧ ಹಿನ್ನೆಲೆಯುಳ್ಳ (ಎಂಬಿಎ) ಆರೋಪಿಯಾಗಿದ್ದ ಹರೀಶ್, ಜಾಲಹಳ್ಳಿ, ಯಶವಂತಪುರ, ಬಾಗಲಗುಂಟೆ, ಮಹದೇವಪುರ, ಕೆ.ಆರ್.ಪುರ, ಪುಟ್ಟೇನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಬೈಕ್ ಕದ್ದಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದೂ ತಿಳಿಸಿದರು.

ನಗರದಲ್ಲಿ ಇಂದು

ಎಕ್ಸಲೆರೇಟರ್ ಬೆಂಗಳೂರು: ಮಹಿಳಾ ದಿನಚರಣೆ ಪ್ರಯುಕ್ತ ಕಾರ್ಯಕ್ರಮ, ಉದ್ಘಾಟನೆ: ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಗೌರವ ಅತಿಥಿ: ಸಚಿವ ಸಿ.ಸಿ. ಪಾಟೀಲ, ಉಪಸ್ಥಿತಿ: ಕೆ. ರತ್ನಪ್ರಭ, ಆರ್. ವಿನೋತ್ ಪ್ರಿಯಾ, ಆಯೋಜನೆ: ಎಫ್‌ಕೆಸಿಸಿಐ, ಗೇಮ್, ಉಬಂಟು, ಸ್ಥಳ: ಸರ್.ಎಂ.ವಿ. ಸಭಾಂಗಣ, ಎಫ್‌ಕೆಸಿಸಿಐ, ಕೆ.ಜಿ. ರಸ್ತೆ, ಬೆಳಿಗ್ಗೆ 9.45

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಕಿತ್ತೂರು ರಾಣಿ ಚೆನ್ನಮ್ಮ ಹಾಗೂ ಇತರೆ ಪ್ರಶಸ್ತಿ ಪ್ರದಾನ: ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಉಪಸ್ಥಿತಿ: ಕೇಂದ್ರ ಸಚಿವರಾದ ಡಿ.ವಿ. ಸದಾನಂದಗೌಡ, ನಿರ್ಮಲಾ ಸೀತಾರಾಮನ್, ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ, ಲಕ್ಷ್ಮಣ ಸವದಿ, ಅಧ್ಯಕ್ಷತೆ: ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಮಕ್ಕಳ ದಿನಾಚರಣೆ ಅಂಗವಾಗಿ ನೀಡುವ ಪ್ರಶಸ್ತಿಗಳ ಪ್ರದಾನ: ಸಚಿವೆ ಶಶಿಕಲಾ ಜೊಲ್ಲೆ, ಆಯೋಜನೆ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸ್ಥಳ: ಗೇಟ್ ನಂ.9, ಅರಮನೆ ಮೈದಾನ, ಬಳ್ಳಾರಿ ರಸ್ತೆ, ಬೆಳಿಗ್ಗೆ 10

ಡಯಾಬಿಟಿಸ್ ಇನ್ ಪ್ರೆಗ್ನನ್ಸಿ ಸಮ್ಮಿಟ್ (ಗರ್ಭಾವಸ್ಥೆಯಲ್ಲಿ ಮಧುಮೇಹ ಕುರಿತು ಶೃಂಗ): ಡಾ. ಜಿತೇಂದ್ರ ಸಿಂಗ್, ತೇಜಸ್ವಿ ಸೂರ್ಯ, ಎಸ್. ಸಚ್ಚಿದಾನಂದ, ಪ್ರೊ. ಶೇಷಯ್ಯ ವಿ., ಡಾ. ಅನಿಲ್ ಕಪೂರ್, ಡಾ. ಹೇಮಾ ದಿವಾಕರ್, ಡಾ. ಅಲ್ಪೇಶ್ ಗಾಂಧಿ, ಕಮಲ್ ನಾರಾಯಣನ್, ಆಯೋಜನೆ: ಆರ್ಟಿಸ್ಟ್ ಫಾರ್ ಹರ್, ಐಎಚ್‌ಡಬ್ಲ್ಯು ಕೌನ್ಸಿಲ್, (ಆನ್‌ಲೈನ್ ಕಾರ್ಯಕ್ರಮ), ಬೆಳಿಗ್ಗೆ 11

ಡಾ. ಸುದರ್ಶನ್ ಬಲ್ಲಾಳ್

ವಿಶ್ವ ಮೂತ್ರಪಿಂಡ ದಿನ: ಮೂತ್ರಪಿಂಡ ಆರೋಗ್ಯದ ಕುರಿತು ವಿಚಾರಸಂಕಿರಣ, ಗೌರವ ಅತಿಥಿ: ಡಿ. ರೂಪಾ, ಅಧ್ಯಕ್ಷತೆ: ಡಾ. ಸುದರ್ಶನ್ ಬಲ್ಲಾಳ್, ತಜ್ಞ ವೈದ್ಯರು: ಡಾ. ವಿಶ್ವನಾಥ್ ಎಸ್., ಡಾ. ಶಂಕರನ್ ಸುಂದರ್, ಡಾ. ದೀಪಕ್ ದುಬೆ, ಡಾ.ಟಿ. ಮುಖರ್ಜಿ, ಡಾ. ಗೋಕುಲಕೃಷ್ಣನ್ ಪಿ.ಜೆ., ಡಾ.ಆರ್. ಸಂಜಯ್ ರಾಮ್‌ಪುರೆ, ಡಾ. ನಾಗಸುಬ್ರಮಣ್ಯಮ್ ಎಸ್., ಡಾ.ಜಿ. ಕೆ. ಪ್ರಕಾಶ್, ಡಾ. ಆನಂದ್ ಎಂ., ಆಯೋಜನೆ: ಮಣಿಪಾಲ್ ಆಸ್ಪತ್ರೆಗಳ ಸಮೂಹ, ಸಹಯೋಗ: ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್, ಸ್ಥಳ: ಸ್ಟರ್ಲಿಂಗ್ ಮ್ಯಾಕ್ ಹೋಟೆಲ್, ಹಳೆ ವಿಮಾನ ನಿಲ್ದಾಣ ರಸ್ತೆ, (ಆನ್‌ಲೈನ್), ಬೆಳಿಗ್ಗೆ 11.30

ನಾಟಕ ಬೆಂಗಳೂರು ರಂಗಭೂಮಿ ಸಂಭ್ರಮ ಸಮಾರೋಪ: 'ಚಿನ್ನದ ಪುಟಗಳು' ಕೃತಿ ಬಿಡುಗಡೆ: ಟಿ.ಎಸ್. ನಾಗಾಭರಣ, ಮುಖ್ಯ ಅತಿಥಿ: ಬಿ. ಜಯಶ್ರೀ, ಸಮಾರೋಪ ನುಡಿ: ಪ್ರಸನ್ನ, ಆಯೋಜನೆ: ನಾಟಕ ಬೆಂಗಳೂರು ರಂಗ ಬಳಗ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 6.15

ನಾಗಾಭರಣ

ನಾಟಕ ಪ್ರದರ್ಶನ: 'ಕಂತು', ನಿರ್ದೇಶನ: ಮಂಜುನಾಥ್ ಬಡಿಗೇರ್, ತಂಡ: ಸಮಷ್ಟಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 7

ಯುವತಿಗೆ ಎಸ್‌ಐ ಕಪಾಳಮೋಕ್ಷ: ಹಲ್ಲೆ ನಡೆಸಿದ ವಿಡಿಯೊ ವೈರಲ್

ಪ್ರಜಾವಾಣಿ ವಾರ್ತೆ

ಮಂಡ್ಯ: ಹೆಲ್ಮೆಟ್ ತಪಾಸಣೆ ಸಂದರ್ಭದಲ್ಲಿ ವಾಗ್ವಾದ ನಡೆಸಿದ ಯುವತಿಯೊಬ್ಬರ ಮೇಲೆ ಪೊಲೀಸರು ಹಲ್ಲೆ ನಡೆಸಿದ ದೃಶ್ಯವಿರುವ ವಿಡಿಯೊ, ಸಾಮಾಜಿಕ ಜಾಲತಾಣಗಳಲ್ಲಿ ಮಂಗಳವಾರ ಹರಿದಾಡುತ್ತಿದೆ.

ನಗರದ ಬೆಸಗರಹಳ್ಳಿ ರಾಮಣ್ಣ ಸರ್ಕಲ್‌ನಲ್ಲಿ ಪೊಲೀಸರು ತಪಾಸಣೆ ನಡೆಸುತ್ತಿದ್ದರು. ಈ ಸಂದರ್ಭದಲ್ಲಿ ಹೆಲ್ಮೆಟ್ ಧರಿಸದ ಬಿ.ಇಡಿ ವಿದ್ಯಾರ್ಥಿನಿ, ಮಾಡೆಲ್ ಸುಷ್ಮಿತಾ ಅವರ ದ್ವಿಚಕ್ರ ವಾಹನವನ್ನು ಪೊಲೀಸರು ತಡೆದರು. ದಾಖಲಾತಿ ಪರಿಶೀಲನೆ ನಂತರ ಹೆಲ್ಮೆಟ್ ಧರಿಸದ ಯುವತಿಗೆ ಪೊಲೀಸರು ದಂಡ ವಿಧಿಸಿದರು.

ಆದರೆ, ತಮ್ಮ ಬಳಿ ಸದ್ಯಕ್ಕೆ ಹಣ ಇಲ್ಲ; ಫೋನ್ ಪೇ ಮಾಡುವುದಾಗಿ ಇಲ್ಲವೇ ಬರೆಯುವರ ಬಳಿ ಪಡೆದು ಹಣ ಪಾವತಿಸುವುದಾಗಿ ಯುವತಿ ತಿಳಿಸುತ್ತಾರೆ. ಇದಕ್ಕೆ ಒಪ್ಪದ ಪೊಲೀಸರು ಸ್ಕೂಟರ್ ವಶಕ್ಕೆ ಪಡೆಯಲು ಮುಂದಾದಾಗ, ಕೋಪಗೊಂಡ ಯುವತಿ, ತಮ್ಮ ಗಾಡಿ ಮುಟ್ಟುವ ಹಕ್ಕು ಕೊಟ್ಟವರಾರು ಎಂದು ಏರು ಧ್ವನಿಯಲ್ಲಿ ಪ್ರಶ್ನಿಸುತ್ತಾರೆ. ತಾಳ್ಮೆ ಕಳೆದುಕೊಂಡ ಮಹಿಳಾ ಠಾಣೆ ಸಬ್ ಇನ್‌ಸ್ಪೆಕ್ಟರ್ ಸವಿತಾ, ಯುವತಿಯ ಕೆನ್ನೆಗೆ ಬಾರಿಸಿ, ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾರೆ. ಇದರಿಂದ ಕುಪಿತಗೊಂಡ ಯುವತಿಯೂ ಪೊಲೀಸ್ ಸಿಬ್ಬಂದಿಯನ್ನು ಏಕವಚನದಲ್ಲಿ ನಿಂದಿಸಿರುವುದು ವಿಡಿಯೊದಲ್ಲಿದೆ.

ಘಟನೆ ನಡೆಯುವ ಸಂದರ್ಭದಲ್ಲಿ ಸುತ್ತಲೂ ಇದ್ದ ಜನರು ಮೂಕ ಪ್ರೇಕ್ಷಕರಾಗಿದ್ದರು. ಘಟನೆಯ ವಿಡಿಯೊವನ್ನು ಪೊಲೀಸ್ ಸಿಬ್ಬಂದಿಯೇ ಮಾಡುತ್ತಿದ್ದರು.

'ಫೋನ್ ಪೇ, ಗೂಗಲ್ ಪೇ ಮೂಲಕ ದಂಡ ಪಾವತಿಸುವ ವ್ಯವಸ್ಥೆ ಇನ್ನೂ ಬಂದಿಲ್ಲ. ಇಲಾಖೆಯ ಖಾತೆಗೆ ಹಣ ಜಮೆ ಮಾಡಬೇಕಾದ ಅವಶ್ಯಕತೆ ಇದೆ. ಹೀಗಾಗಿ ಹಣ ನೀಡುವಂತೆ ಒತ್ತಾಯಿಸಿದ್ದಾರೆ. ಈ ಪ್ರಕರಣದಲ್ಲಿ ಎರಡೂ ಕಡೆ ತಪ್ಪಾಗಿದೆ. ಯುವತಿಯ ಪೋಷಕರು ಕ್ಷಮಾಪಣೆ ಪತ್ರ ಬರೆದು ಕೊಟ್ಟಿದ್ದಾರೆ. ಆದರೂ ನಾನು ತನಿಖೆಗೆ ಆದೇಶ ನೀಡಿದ್ದೇನೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಅಶ್ವಿನಿ ತಿಳಿಸಿದರು.

ಕಿಟಕಿ ಸರಳು ಕತ್ತರಿಸಿ ಕಳವು

ಬೆಂಗಳೂರು: ಬೀಗ ಹಾಕಿರುತ್ತಿದ್ದ ಮನೆಗಳ ಕಿಟಕಿ ಸರಳು ಕತ್ತರಿಸಿ ಕಳ್ಳತನ ಮಾಡುತ್ತಿದ್ದ ಆರೋಪಿ ಗಂಗಾರಾಮ್ ಸಿಂಗ್‌ನನ್ನು ಹೆಣ್ಣೂರು ಪೊಲೀಸರು ಬಂಧಿಸಿದ್ದಾರೆ. 'ಆರೋಪಿ ಗಂಗಾರಾಮ್, ಮನೆಗಳನ್ನು ಗುರುತಿಸಿ ಕೃತ್ಯ ಎಸಗುತ್ತಿದ್ದ. ಆತನಿಂದ ₹ 10.58 ಲಕ್ಷ ಮೌಲ್ಯದ ಚಿನ್ನಾಭರಣ, ಬೆಳ್ಳಿ ಸಾಮಗ್ರಿ ಹಾಗೂ ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಬಾಬುಸಾಪಾಳ್ಯದಲ್ಲಿರುವ 'ಎಕ್ಸ್‌ವ್ಹೀಲ್ ವರ್ಲ್ಡ್' ಸೈಕಲ್ ಮಾರಾಟ ಮಳಿಗೆಯಲ್ಲಿ ಕಿಟಕಿ ಸರಳು ಕತ್ತರಿಸಿ ಕಳ್ಳತನ ಮಾಡಲಾಗಿತ್ತು. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದಾಗ ಆರೋಪಿ ಸಿಕ್ಕಿಬಿದ್ದ. ಈತ, ಇದುವರೆಗೂ 7 ಕಡೆ ಕೃತ್ಯ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದೂ ತಿಳಿಸಿದರು.

ನಕಲಿ ಲೇಟರ್ ಹೆಡ್; ಎಫ್‌ಐಆರ್

ಬೆಂಗಳೂರು: ಶಾಸಕ ಗೂಳಿಹಟ್ಟಿ ಶೇಖರ್ ಹೆಸರಿನಲ್ಲಿ ನಕಲಿ ಲೆಟರ್ ಹೆಡ್ ಸೃಷ್ಟಿಸಿ ಅರಣ್ಯ ಸಚಿವರಿಗೆ ಕಳುಹಿಸಲಾಗಿದ್ದು, ಈ ಸಂಬಂಧ ವಿಧಾನಸೌಧ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. 'ಕೃತ್ಯದ ಬಗ್ಗೆ ಗೂಳಿಹಟ್ಟಿ ಶೇಖರ್ ದೂರು ನೀಡಿದ್ದಾರೆ. ಅದರನ್ವಯ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಸುರೇಶ್ ಎಂಬುವರನ್ನು ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ಉಪಾಧ್ಯಕ್ಷರನ್ನಾಗಿ ನಾಮ ನಿರ್ದೇಶನ ಮಾಡುವಂತೆ ಪತ್ರದಲ್ಲಿ ಕೋರಲಾಗಿತ್ತು. ಜೊತೆಗೆ, ಗೂಳಿಹಟ್ಟಿ ಶೇಖರ್ ಹೆಸರಿನಲ್ಲಿ ಅರಣ್ಯ ಸಚಿವರ ಆಪ್ತ ಸಹಾಯಕರಿಗೆ ಕರೆ ಮಾಡಿ ಒತ್ತಾಯಿಸಲಾಗಿತ್ತು. ಇದು ಗೊತ್ತಾಗುತ್ತಿದ್ದಂತೆ ಶೇಖರ್ ದೂರು ನೀಡಿದ್ದಾರೆ' ಎಂದೂ ತಿಳಿಸಿದರು.

ಚಿತ್ರಾವಳಿ



ಲೇಖಕ ಮಣ್ಣೆ ಮೋಹನ್ ಅವರ 'ಕೊರೊನಾ ಕಾಮಿಡಿ' ಪುಸ್ತಕವನ್ನು ವನಕಲ್ಲು ಮಠದ ಬಸವರಮಾನಂದ ಸ್ವಾಮೀಜಿ ಬಿಡುಗಡೆ ಮಾಡಿದರು. ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷರಾದ ಖಲಿಮುಲ್ಲ, ಡಾ.ಲಕ್ಷ್ಮೀನಾರಾಯಣ ಶ್ರೇಷ್ಠಿ, ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಮಾಯಣ್ಣ, ಜಿಲ್ಲಾ ಶಿಕ್ಷಕರ ಸಂಘದ ಅಧ್ಯಕ್ಷ ಕೆ.ವಿ. ಶ್ರೀಕಾಂತ, ಪರಿಷತ್ ತಾಲ್ಲೂಕು ಅಧ್ಯಕ್ಷ ಕೇಶವಮೂರ್ತಿ, ಎಸ್ಸಿ–ಎಸ್ಟಿ ನೌಕರರ ಸಂಘದ ಅಧ್ಯಕ್ಷ ರಾಮಾಂಜಿನಪ್ಪ, ಶಿಕ್ಷಕ ಮಲ್ಲಿಕಾರ್ಜುನಯ್ಯ ಇದ್ದಾರೆ



ಕೆಆರ್‌ಐಡಿಎಲ್ ವತಿಯಿಂದ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ₹7.48 ಕೋಟಿ ನೀಡಲಾಯಿತು. ಮುಖ್ಯಮಂತ್ರಿ ಬಿ.ಎಸ್‌.ಯಡಿಯೂರಪ್ಪನವರಿಗೆ ಸಂಸ್ಥೆಯ ಅಧ್ಯಕ್ಷ ಎಂ.ರುದ್ರೇಶ್ ಚೆಕ್ ಹಸ್ತಾಂತರಿಸಿದರು. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಪಾಲಯ್ಯ, ಮುಖ್ಯ ಎಂಜಿನಿಯರ್ ಮಹದೇವಸ್ವಾಮಿ, ಬಿಡಿಎ ಅಧ್ಯಕ್ಷ ಎಸ್‌.ಆರ್‌. ವಿಶ್ವನಾಥ್ ಹಾಗೂ ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಇದ್ದಾರೆ.

ತಂಗಿಯ ಮದುವೆಗೆಂದು ಬಂಗಾರ ತಂದಿದ್ದ ಅಣ್ಣ

ಹಸೆಮಣೆ ಏರಬೇಕಾದ ಯುವತಿ ಚಿತೆಗೆ

ಯಲ್ಲಾಪುರ: ತಂಗಿಯ ಮದುವೆಗೆ ಆಭರಣ ಖರೀದಿ ಮಾಡಬೇಕೆಂದು ಅಣ್ಣ ಚಿಚ್ಚು ಎಡಿಗೆ, ಶಿವಮೊಗ್ಗಕ್ಕೆ ಹೋಗಿ ಸೋಮವಾರ ಸಂಜೆಯಷ್ಟೇ ವಾಪಸ್ ಬಂದು ಮನೆಯ ಹಾದಿ ಹಿಡಿದಿದ್ದ. ಇತ್ತ ಕೆಲಸಕ್ಕೆ ಹೋಗಿದ್ದ ಭಾಗಿ (21) (ಭಾಗ್ಯಶ್ರೀ) ಎಡಿಗೆ ಮಣ್ಣಿನಡಿ ಸಿಲುಕಿ ಮೃತಪಟ್ಟಿದ್ದಾಳೆ.

ಇಡಗುಂದಿಯ ಸಂಪೇಬೈಲಿನ ತೋಟದಲ್ಲಿ ಸೋಮವಾರ ಮಣ್ಣು ಕುಸಿದು ನಾಲ್ವರು ಮೃತಪಟ್ಟ ಪ್ರಕರಣವು, ಹೊಸಳ್ಳಿ ಗಾಂವಠಾಣಾವನ್ನು ಬೆಚ್ಚಿಬೀಳಿಸಿದೆ. ಇಡೀ ಗೌಳಿ ಸಮುದಾಯವನ್ನು ಶೋಕಸಾಗರದಲ್ಲಿ ಮುಳುಗಿಸಿದೆ.

ಭಾಗ್ಯಶ್ರೀ

ಮೃತರಲ್ಲಿ ಲಕ್ಷ್ಮಿ ಹೊರತುಪಡಿಸಿ ಉಳಿದವರೆಲ್ಲ 21 ವರ್ಷ ಒಳಗಿನವರು. ಲಕ್ಷ್ಮಿ (38), ಸಂತೋಷ (17) ಹಾಗೂ ಮಾಳು (21) ಈ ಮೂವರು ದೋಯಿಪೋಡೆ ಕುಟುಂಬದವರಾಗಿದ್ದರು.

ಮೃತ ಭಾಗ್ಯಶ್ರೀ ಎಡಿಗೆಯ ಮದುವೆಯು ಕೊಲ್ಲಾಪುರದ ಯುವಕನೊಂದಿಗೆ ನಿಶ್ಚಯವಾಗಿತ್ತು. ಅವರ ಅಣ್ಣ ಮದುವೆಯ ಬಂಗಾರ ಖರೀದಿಗೆಂದು ಶಿವಮೊಗ್ಗಕ್ಕೆ ಹೋಗಿ ವಾಪಸ್ ಬಂದು ಮನೆಗೆ ಆಗಷ್ಟೇ ತಲುಪಿದ್ದರು. ಅಷ್ಟರಲ್ಲೇ ತಂಗಿಯ ಸಾವಿನ ಸುದ್ದಿ ಬರಸಿಡಿಲಿನಂತೆ ಬಂದೆರಗಿತು.

'ಬೇಡವೆಂದರೂ ಕೇಳಲಿಲ್ಲ': 'ಮಂಗಳವಾರ ನಡೆಯುವ ವಿಠ್ಠಲ ರುಕ್ಮಾಯಿ ದೇವರ ಜಾತ್ರೆಯ ಮೊದಲ ದಿನ ಗೌಳಿ ಸಮುದಾಯದಲ್ಲಿ ಯಾರೂ ಕೆಲಸಕ್ಕೆ ಹೋಗದಿರುವುದು ಸಂಪ್ರದಾಯ. ಅಂದು ಹೋಗಬೇಡಿ ಎಂದರೂ ಒಟ್ಟು ಏಳು ಮಂದಿ ಕೆಲಸಕ್ಕೆ ಸಂಪೇಬೈಲಿಗೆ ಹೋಗಿದ್ದರು' ಎಂದು ಅವರ ಸಂಬಂಧಿಕರು ದುಃಖಿಸುತ್ತಾರೆ.

ಗುಡ್ಡದ ಮಣ್ಣನ್ನು ಕೆಳಗಿನಿಂದ ತೆಗೆಯುತ್ತಿದ್ದವರು, ಆಯಾಸವಾಗಿ ಅಲ್ಲೇ ನೀರು ಕುಡಿಯಲು ಕುಳಿತಿದ್ದರು. ಆಗ ಅವರ ಮೇಲೆ ಮಣ್ಣು ಕುಸಿದು ಜೀವಂತ ಸಮಾಧಿಯಾದರು. ಅವರಿಂದ ಸ್ವಲ್ಪ ದೂರದಲ್ಲಿ ಕುಳಿತಿದ್ದ ತಗ್ಗಿಬಾಯಿ, ಸೋನಿ, ಬೀರು ಎನ್ನುವವರು ಪ್ರಾಣಾಪಾಯದಿಂದ ಪಾರಾದರು.

ವೈದ್ಯರು, ಆರೋಗ್ಯ ಕ್ಷೇತ್ರದ ಪ್ರಮುಖರ ಒತ್ತಾಯ

ಕೋಟ್ಪಾ ಕಾಯ್ದೆ ತಿದ್ದುಪಡಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಂಬಾಕು ಉತ್ಪನ್ನಗಳ ಸಾರ್ವಜನಿಕ ಬಳಕೆ ನಿಯಂತ್ರಣ ಕಾಯ್ದೆಗೆ (ಕೋಟ್ಪಾ 2003) ತಿದ್ದುಪಡಿ ತಂದು, ಹೋಟೆಲ್, ವಿಮಾನ ನಿಲ್ದಾಣ ಸೇರಿದಂತೆ ವಿವಿಧೆಡೆ ನಿರ್ದಿಷ್ಟ ಧೂಮಪಾನ ಪ್ರದೇಶವನ್ನು ತೆರವುಗೊಳಿಸುವಂತೆ ವೈದ್ಯರು ಹಾಗೂ ಆರೋಗ್ಯ ಕ್ಷೇತ್ರದ ಪ್ರಮುಖರು ಒತ್ತಾಯಿಸಿದ್ದಾರೆ.

ಕೋಟ್ಪಾ ಕಾಯ್ದೆ ಅನ್ವಯ ಎಲ್ಲ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧಿಸಲಾಗಿದೆ. ಈ ಕಾಯ್ದೆಯ ನಾಲ್ಕನೇ ವಿಭಾಗದಲ್ಲಿ ರೆಸ್ಟೋರೆಂಟ್, ಹೋಟೆಲ್, ವಿಮಾನ ನಿಲ್ದಾಣ ಮುಂತಾದ ಸಾರ್ವಜನಿಕ ಸ್ಥಳಗಳ ನಿರ್ದಿಷ್ಟ ಪ್ರದೇಶಗಳಲ್ಲಿ ಧೂಮಪಾನ ಮಾಡಲು ಅವಕಾಶ ಒದಗಿಸಲಾಗಿದೆ. ಇದು ಪರೋಕ್ಷ ಧೂಮಪಾನಕ್ಕೆ ಕಾರಣವಾಗಿದ್ದು, ಇದರಿಂದ ಕೂಡ ಶ್ವಾಸಕೋಶ ಕ್ಯಾನ್ಸರ್‌ಗೆ ಒಳಗಾಗುವ ಸಾಧ್ಯತೆ ಇರುತ್ತದೆ. ಹಾಗಾಗಿ, ಸಾರ್ವಜನಿಕ ಸ್ಥಳವನ್ನು ಪೂರ್ಣ ಪ್ರಮಾಣದಲ್ಲಿ ತಂಬಾಕು ಹೊಗೆರಹಿತ ಪ್ರದೇಶವನ್ನಾಗಿಸಬೇಕು ಎಂಬ ಆಗ್ರಹ ವ್ಯಕ್ತವಾಗಿದೆ.

'ಧೂಮಪಾನವು ಶ್ವಾಸಕೋಶದ ಕಾರ್ಯಕ್ಷಮತೆ ಹದಗೆಡಿಸಿ, ರೋಗ ನಿರೋಧಕ ಶಕ್ತಿ ಕುಗ್ಗಿಸುತ್ತದೆ. ಕೊರೊನಾ ಸೋಂಕಿಗೆ ತುತ್ತಾಗುವ ಧೂಮಪಾನಿಗಳು ಹೆಚ್ಚಿನ ತೊಂದರೆ ಅನುಭವಿಸುವುದಲ್ಲದೆ, ಮೃತಪಡುವ ಸಾಧ್ಯತೆ ಹೆಚ್ಚಿರುತ್ತದೆ. ಹೊಗೆ ಮುಕ್ತ ವಾತಾವರಣ ಕಲ್ಪಿಸಲು ಹೋಟೆಲ್, ರೆಸ್ಟೋರೆಂಟ್‌ಗಳು ಮಾತ್ರವಲ್ಲದೆ, ವಿಮಾನ ನಿಲ್ದಾಣಗಳಲ್ಲಿಯೂ ಎಲ್ಲ ನಿರ್ದಿಷ್ಟ ಧೂಮಪಾನ ಪ್ರದೇಶಗಳನ್ನು ತೆಗೆದು ಹಾಕಬೇಕು. ಈ ಮೂಲಕ ಜನಸಾಮಾನ್ಯರ ಆರೋಗ್ಯ ಕಾಪಾಡಲು ಸರ್ಕಾರ ಮುಂದಾಗಬೇಕು' ಎಂದು ಕ್ಯಾನ್ಸರ್ ತಜ್ಞ ಡಾ. ರಮೇಶ್ ಬಿಳಿಮಗ್ಗ ತಿಳಿಸಿದ್ದಾರೆ.

ಪರೋಕ್ಷ ಧೂಮಪಾನ ಹೆಚ್ಚಳ: 'ಹೋಟೆಲ್ ಸೇರಿದಂತೆ ವಿವಿಧ ಸಾರ್ವಜನಿಕ ಪ್ರದೇಶದಲ್ಲಿ ಧೂಮಪಾನಕ್ಕೆ ಅವಕಾಶ ನೀಡಿರುವುದರಿಂದ ಪರೋಕ್ಷ ಧೂಮಪಾನಕ್ಕೆ ಒಳಗಾಗುವವರ ಸಂಖ್ಯೆ ಹೆಚ್ಚುತ್ತಿದೆ. ಆದ್ದರಿಂದ ಕೋಟ್ಪಾ ಕಾಯ್ದೆಗೆ ತುರ್ತಾಗಿ ತಿದ್ದುಪಡಿ ತಂದು, ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಎಲ್ಲ ಸ್ಥಳಗಳು ಸಂಪೂರ್ಣ ಧೂಮಪಾನ ಮುಕ್ತವಾಗುವಂತೆ ನೋಡಿಕೊಳ್ಳಬೇಕು' ಎಂದು ಪರೋಕ್ಷ ಧೂಮಪಾನದ ಸಂತ್ರಸ್ತೆ ಮತ್ತು ಆರೋಗ್ಯ ಕಾರ್ಯಕರ್ತೆ ನಳಿನಿ ಸತ್ಯನಾರಾಯಣ್ ಮನವಿ ಮಾಡಿದ್ದಾರೆ.

'ಪರೋಕ್ಷ ಧೂಮಪಾನವೂ ನೇರ ಧೂಮಪಾನಕ್ಕೆ ಸಮಾನ. ಮಕ್ಕಳು, ಮಹಿಳೆಯರು ಮತ್ತು ವೃದ್ಧರು ಪರೋಕ್ಷ ಧೂಮಪಾನದಿಂದ ಹೆಚ್ಚಿನ ಸಮಸ್ಯೆ ಎದುರಿಸುತ್ತಿದ್ದಾರೆ. ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿ ಮಾಡಿ, ಧೂಮಪಾನಕ್ಕೆ ಕಡಿವಾಣ ಹಾಕಬೇಕು. ಆದರೆ, ಜನಪ್ರತಿನಿಧಿಗಳು ತಂಬಾಕು ಸಂಬಂಧಿತ ಕಾಯಿಲೆ ಮತ್ತು ಸಾವಿನಿಂದ ಜನರನ್ನು ರಕ್ಷಿಸಲು ನೆರವಾಗುವ ಕಾನೂನನ್ನು ಕಠಿಣಗೊಳಿಸಲು ಅಷ್ಟಾಗಿ ಆಸಕ್ತಿ ತೋರುತ್ತಿಲ್ಲ' ಎಂದು ಕನ್ಸೋರ್ಟಿಯಂ ಫಾರ್ ಟೊಬ್ಯಾಕೋ ಫ್ರೀ ಕರ್ನಾಟಕ ಸಂಘಟನೆಯ ಸಂಚಾಲಕ ಎಸ್.ಜೆ. ಚಂದರ್ ಬೇಸರ ವ್ಯಕ್ತಪಡಿಸಿದ್ದಾರೆ.

ಸಾಧನೆ ಮಾಡಿದ ಮಹಿಳೆಯರನ್ನು ಕೃಷ್ಣಬೈರೇಗೌಡ ಸನ್ಮಾನಿಸಿದರು

ಸಾಧಕಿಯರಿಗೆ ಸನ್ಮಾನ

ಯಲಹಂಕ: 'ಮಹಿಳೆಯರು ಪುರುಷರಿಗೆ ಸಮಾನರಲ್ಲ ಎಂಬ ಭಾವನೆ ಜನರ ಮನಸ್ಸಿನಿಂದ ದೂರವಾಗಬೇಕು. ಸಮಾಜದಲ್ಲಿ ಅವರಿಗೂ ಸಮಾನ ಅವಕಾಶ ನೀಡಿದರೆ ಪುರುಷರಷ್ಟೇ ಸಾಧನೆ ಮಾಡಲಿದ್ದಾರೆ' ಎಂದು ಶಾಸಕ ಕೃಷ್ಣಬೈರೇಗೌಡ ಹೇಳಿದರು.

ಕುವೆಂಪುನಗರ ವಾರ್ಡ್ ವ್ಯಾಪ್ತಿಯ ಸಿಂಗಾಪುರದಲ್ಲಿ ಆಯೋಜಿಸಿದ್ದ ಮಹಿಳಾ ದಿನ ಸಮಾರಂಭದಲ್ಲಿ ಮಾತನಾಡಿದರು, ಪಾಲಿಕೆ ಮಾಜಿ ಸದಸ್ಯ ವಿ.ವಿ.ಪಾರ್ತಿಬ ರಾಜನ್, ಸಾಮಾಜಿಕ ಕಾರ್ಯಕರ್ತರಾದ ಮೀನಾಕ್ಷಿ ಶೇಷಾದ್ರಿ, ಕಾಂಗ್ರೆಸ್ ಮುಖಂಡರಾದ ಎನ್. ಎನ್.ಶ್ರೀನಿವಾಸಯ್ಯ, ಸಂತೋಷ್ ರಾಜನ್, ಚಿತ್ರನಟಿ ಚಂದನ ಗೌಡ ಉಪಸ್ಥಿತರಿದ್ದರು.

ಡಿಸಿಎಂ ಗೋವಿಂದ ಕಾರಜೋಳ ಉತ್ತರಕ್ಕೆ ಅತೃಪ್ತಿ ವ್ಯಕ್ತಪಡಿಸಿದ ವಿಪಕ್ಷಗಳು

ಕಾವೇರಿ–ವೆಲ್ಲಾರ್ ಯೋಜನೆ: ಕಾಂಗ್ರೆಸ್, ಜೆಡಿಎಸ್ ಸಭಾತ್ಯಾಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವೇರಿ ನದಿ ಪಾತ್ರದಲ್ಲಿ ಹೆಚ್ಚುವರಿ ನೀರನ್ನು ಬಳಸಿಕೊಳ್ಳಲು ತಮಿಳುನಾಡು ಸರ್ಕಾರ ಕೈಗೊಂಡಿರುವ ಕಾವೇರಿ–ವೆಲ್ಲಾರ್ ಯೋಜನೆ ಕುರಿತು ವಿಧಾನ ಪರಿಷತ್‌ನಲ್ಲಿ ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ನೀಡಿದ ಉತ್ತರ ತೃಪ್ತಿಕರವಾಗಿಲ್ಲವೆಂದು ಪ್ರತಿಪಕ್ಷಗಳು ಕಾಂಗ್ರೆಸ್ ಮತ್ತು ಜೆಡಿಎಸ್ ಸದಸ್ಯರು ಸಭಾತ್ಯಾಗ ಮಾಡಿದರು.

'ಈ ಯೋಜನೆಗೆ ಕೇಂದ್ರ ತೀರುವಳಿ ನೀಡಬಾರದು ಮತ್ತು ಯೋಜನೆ ಮುಂದುವರಿಸದಂತೆ ತಮಿಳುನಾಡು ರಾಜ್ಯಕ್ಕೆ ನಿರ್ದೇಶನ ನೀಡುವಂತೆ ಕೋರಿ ಈಗಾಗಲೇ ಪ್ರಧಾನಿ ಮತ್ತು ಕೇಂದ್ರ ಜಲಶಕ್ತಿ ಸಚಿವರಿಗೆ ಮುಖ್ಯಮಂತ್ರಿ ಪತ್ರ ಬರೆದಿದ್ದಾರೆ. ಈ ಬಗ್ಗೆ ಚರ್ಚಿಸಲು ಶೀಘ್ರದಲ್ಲಿಯೇ ಸರ್ವಪಕ್ಷ ಸಭೆ ಕರೆಯಲು ಮುಖ್ಯಮಂತ್ರಿಗೆ ಕಡತ ಮಂಡಿಸಲಾಗಿದೆ' ಎಂದು ಕಾರಜೋಳ ಹೇಳಿದರು.

ಆದರೆ, ಈ ಉತ್ತರದಿಂದ ತೃಪ್ತರಾಗದ ಕಾಂಗ್ರೆಸ್ ಸದಸ್ಯರು, 'ರಾಜ್ಯ ಸರ್ಕಾರ ಈ ವಿಷಯದಲ್ಲಿ ನಿರ್ಲಕ್ಷ್ಯ ವಹಿಸಿದೆ. ಪಕ್ಷದಿಂದ ಆಯ್ಕೆಯಾದ 25 ಸಂಸದರಿದ್ದರೂ ಪ್ರಧಾನಿ ಅವರನ್ನು ಭೇಟಿ ಮಾಡಿ ಯೋಜನೆಗೆ ತಡೆ ನೀಡಲು ವಿಫಲರಾಗಿದ್ದಾರೆ' ಎಂದು ಆರೋಪಿಸಿದರು.

ಆ ಬಳಿಕ, ಜೆಡಿಎಸ್‌ನ ಮರಿತಿಬ್ಬೇಗೌಡ ಅವರು, 'ಬುಜಬಲವಿರುವ ಸರ್ಕಾರ' ಎಂದು ಟೀಕಿಸಿದರು. ಆ ಮಾತಿಗೆ ಆಡಳಿತ ಪಕ್ಷದ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತ ಪಡಿಸಿದರು. ಈ ವೇಳೆ, ಜೆಡಿಎಸ್ ಮತ್ತು ಬಿಜೆಪಿ ಸದಸ್ಯರ ಮಧ್ಯೆ ಮಾತಿನ ಸಮರ ನಡೆಯಿತು. ಮಾತಿನ ಮಧ್ಯೆಯೇ ಜೆಡಿಎಸ್ ಸದಸ್ಯರು ಕೂಡಾ ಸಭಾತ್ಯಾಗ ಮಾಡಿ ಹೊರನಡೆದರು.

ನಿಯಮ 68ರ ಅಡಿ ಸಾರ್ವಜನಿಕ ಮಹತ್ವದ ವಿಷಯವಾಗಿ ನಡೆದ ಚರ್ಚೆಯ ವೇಳೆ ಇದೇ ಯೋಜನೆಯ ಬಗ್ಗೆ ಮಾತನಾಡಿದ ಜೆಡಿಎಸ್‌ನ ಕೆ.ಟಿ. ಶ್ರೀಕಂಠೇಗೌಡ, '₹ 6,941 ಕೋಟಿ ವೆಚ್ಚದಲ್ಲಿ ವೆಲ್ಲಾರ್– ವೈಗೈ ಮತ್ತು ಗುಂಡಾರು ನದಿಗಳನ್ನು ಕಾವೇರಿ ಯೊಂದಿಗೆ ಜೋಡಿಸುವ ಮೊದಲ ಹಂತದ ಯೋಜನೆಗೆ ತಮಿಳುನಾಡು ಈಗಾಗಲೇ ಅಡಿಗಲ್ಲು ಹಾಕಿದೆ. ಆ ಯೋಜನೆ ರಾಜ್ಯ ಹಿತಕ್ಕೆ ಮಾರಕವಾಗಿದೆ. ಸರ್ಕಾರ ಏನು ಮಾಡುತ್ತಿದೆ' ಎಂದು ಪ್ರಶ್ನಿಸಿದರು.

ಜೆಡಿಎಸ್‌ನ ತಿಪ್ಪೇಸ್ವಾಮಿ ಮಾತನಾಡಿ, 'ಯೋಜನೆಯನ್ನು ತಡೆಯಲು ಸರ್ಕಾರ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಬೇಕು. ಹಿರಿಯ ನಾಯಕ ಎಚ್.ಡಿ. ದೇವೇಗೌಡ ಅವರನ್ನೂ ಆಹ್ವಾನಿಸಿ ಸರ್ವಪಕ್ಷ ಸಭೆ ಕರೆದು ಚರ್ಚೆ ನಡೆಸಬೇಕು' ಎಂದು ಆಗ್ರಹಿಸಿದರು.

'ಕಾವೇರಿಯ ಹೆಚ್ಚುವರಿ ನೀರನ್ನು ಸಂಗ್ರಹಿಸುವ ಕರ್ನಾಟಕದ ಯೋಜನೆಗಳಿಗೆ ತಮಿಳುನಾಡು ಕೈಗೆತ್ತಿಕೊಳ್ಳುತ್ತಿರುವ ಈ ಯೋಜನೆಯಿಂದ ತಡೆ ಬೀಳುವ ಸಾಧ್ಯತೆ ಇದ್ದರೂ, ರಾಜ್ಯ ಸರ್ಕಾರ ಇದುವರೆಗೂ ಚಕಾರ ಎತ್ತಿಲ್ಲ' ಎಂದು ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ ಮತ್ತು ಕಾಂಗ್ರೆಸ್‌ನ ನಾರಾಯಣಸ್ವಾಮಿ ಟೀಕಿಸಿದರು. 'ಯೋಜನೆಯ ಬಗ್ಗೆ ಅರಿವಿದ್ದೂ ಕೇಂದ್ರ ಸರ್ಕಾರ ಮೌನವಹಿಸಿದೆ' ಎಂದು ಕಾಂಗ್ರೆಸ್‌ನ ರವಿ ದೂರಿದರು.

ವಿದ್ಯುತ್ ಇದ್ದರೂ ವಿತರಣಾ ವ್ಯವಸ್ಥೆ ಇಲ್ಲ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಯಥೇಚ್ಛವಾಗಿ ವಿದ್ಯುತ್ ಉತ್ಪಾದನೆಯಾಗುತ್ತಿದ್ದರೂ ಮೂಲಸೌಕರ್ಯ ಹಾಗೂ ವಿತರಣಾ ವ್ಯವಸ್ಥೆ ಇಲ್ಲದೇ ಇರುವುದರಿಂದ ರೈತರಿಗೆ ದಿನಕ್ಕೆ ಏಳು ಗಂಟೆ ತ್ರಿಫೇಸ್ ವಿದ್ಯುತ್ ಪೂರೈಸಲು ಆಗುತ್ತಿಲ್ಲ ಎಂದು ಕಾನೂನು ಸಚಿವ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನಸಭೆಯಲ್ಲಿ ಜೆಡಿಎಸ್‌ನ ಬಂಡೆಪ್ಪ ಕಾಶೆಂಪೂರ ಪ್ರಶ್ನೆಗೆ ಉತ್ತರಿಸಿದ ಅವರು, 1205 ಸಬ್ ಸ್ಟೇಷನ್‌ಗಳಿದ್ದು, 308ರ ವ್ಯಾಪ್ತಿಯಲ್ಲಿ ಏಳು ಗಂಟೆ ತ್ರಿಫೇಸ್ ನೀಡಲಾಗುತ್ತಿದೆ. 575ರ ವ್ಯಾಪ್ತಿಯಲ್ಲಿ ಪಾಳಿಯ ಮೇಲೆ ವಿತರಣೆ ಮಾಡಲಾಗುತ್ತಿದೆ. 122 ಸಬ್ ಸ್ಟೇಷನ್‌ಗಳಿದ್ದರೂ ಅಲ್ಲಿ ವಿತರಣಾ ಸೌಕರ್ಯ ಇಲ್ಲದೇ ಇರುವುದರಿಂದ ನೀಡಲಾಗುತ್ತಿಲ್ಲ. ಮೂಲಸೌಲಭ್ಯ ಕಲ್ಪಿಸಲು ಮುಖ್ಯಮಂತ್ರಿ ಜತೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಇದಕ್ಕೂ ಮುನ್ನ ಮಾತನಾಡಿದ ಬಂಡೆಪ್ಪ ಕಾಶೆಂಪೂರ, 'ಏಳುಗಂಟೆ ಕೊಟ್ಟರೆ ಏಳು ಬಾರಿ ವಿದ್ಯುತ್ ಕಣ್ಣಾಮುಚ್ಚಾಲೆ ಆಡುತ್ತಿರುತ್ತದೆ. ಉತ್ಪಾದನೆ ಜಾಸ್ತಿಯಾಗಿದ್ದು ಪ್ರತಿ ಯೂನಿಟ್‌ಗೆ ₹2ರಂತೆ ನೀಡಿದರೂ ಖರೀದಿದಾರರು ಇಲ್ಲ. ರೈತರಿಗೆ ಏಳು ಗಂಟೆ ತ್ರಿಫೇಸ್ ನೀಡುವ ವಿದ್ಯುತ್ ಅನ್ನು 9 ಗಂಟೆಗೆ ಹೆಚ್ಚಿಸಿ ಎಂದು ಒತ್ತಾಯಿಸಿದರು.

2.28 ಲಕ್ಷ ಬಿಪಿಎಲ್ ಪಡಿತರ ಚೀಟಿ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 2,28,188 ಅನರ್ಹ ಬಿಪಿಎಲ್ ಪಡಿತರ ಚೀಟಿಗಳನ್ನು ಪತ್ತೆಮಾಡಿ ರದ್ದುಪಡಿಸಲಾಗಿದೆ. ಅರ್ಹತೆ ಇಲ್ಲದೆ ಬಿಪಿಎಲ್ ಪಡಿತರ ಚೀಟಿ ಪಡೆದಿದ್ದ ವ್ಯಕ್ತಿ ಗಳಿಂದ ₹ 3.07 ಕೋಟಿ ದಂಡ ವಸೂಲಿ ಮಾಡಲಾಗಿದೆ ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಉಮೇಶ್ ಕತ್ತಿ ತಿಳಿಸಿದರು.

ಮಂಗಳವಾರ ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ನ ಪಿ.ಆರ್. ರಮೇಶ್ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ರಾಜ್ಯದಲ್ಲಿ 10.90 ಲಕ್ಷ ಅಂತ್ಯೋದಯ ಅನ್ನ ಯೋಜನೆ ಪಡಿತರ ಚೀಟಿಗಳು ಮತ್ತು 1.16 ಕೋಟಿ ಬಿಪಿಎಲ್ ಪಡಿತರ ಚೀಟಿಗಳಿವೆ. ಅನರ್ಹ ಪಡಿತರ ಚೀಟಿಗಳನ್ನು ಪತ್ತೆಹಚ್ಚಲು ಕೆಲವು ಮಾನದಂಡಗಳನ್ನು ನಿಗದಿಪಡಿಸಲಾಗಿದೆ. ಅದರ ಪ್ರಕಾರ ಪತ್ತೆಕಾರ್ಯ ನಡೆಯುತ್ತಿದೆ' ಎಂದರು.

ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್ ಪ್ರಶ್ನೆಗೆ ಉತ್ತರಿಸಿದ ಆಹಾರ ಸಚಿವರು, '2018–19ರಿಂದ 2020–21ರ ಅವಧಿಯಲ್ಲಿ ಪಡಿತರ ಸಾಮಗ್ರಿಯ ಅಕ್ರಮ ಸಾಗಣೆ ಮತ್ತು ದಾಸ್ತಾನು ಮಾಡಿ ಆರೋಪದಲ್ಲಿ 786 ಪ್ರಕರಣ ದಾಖಲಿಸಲಾಗಿದೆ. 63,637 ಕ್ವಿಂಟಲ್ ಅಕ್ಕಿ, 783 ಕ್ವಿಂಟಲ್ ಗೋಧಿ ಮತ್ತು 630 ಕ್ವಿಂಟಲ್ ರಾಗಿ ವಶಪಡಿಸಿಕೊಳ್ಳಲಾಗಿದೆ' ಎಂದು ತಿಳಿಸಿದರು.

ಪಡಿತರ ಚೀಟಿ ವಿತರಣೆ ಹಾಗೂ ಪಡಿತರ ಸಾಮಗ್ರಿಯ ಅಕ್ರಮ ಸಾಗಣೆ, ದಾಸ್ತಾನಿಗೆ ಸಂಬಂಧಿಸಿದಂತೆ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ನೀಡಬೇಕೆಂಬ ಬಿ.ಕೆ. ಹರಿಪ್ರಸಾದ್ ಅವರ ಮನವಿಯನ್ನು ಸಭಾಪತಿ ಪುರಸ್ಕರಿಸಿದರು.

ಗಂಗಾ ಜಲ ವಿತರಣೆ

ಮಹಾಶಿವರಾತ್ರಿ ಅಂಗವಾಗಿ ಮಾಜಿ ಸಚಿವ ಕೃಷ್ಣಯ್ಯ ಶೆಟ್ಟಿ ನೇತೃತ್ವದಲ್ಲಿ ಮುಜರಾಯಿ ಇಲಾಖೆ ವ್ಯಾಪ್ತಿಯ 3,700 ಶಿವನ ದೇವಾಲಯಗಳಿಗೆ ಗಂಗಾಜಲ ವಿತರಣೆ ಮಾಡಲಾಗುತ್ತಿದ್ದು ಈ ಕಾರ್ಯಕ್ರಮಕ್ಕೆ ಆನಂದ್ ಗುರೂಜಿ ಮಂಗಳವಾರ ಚಾಲನೆ ನೀಡಿದರು. ಬಳೆಪೇಟೆ ಬಳಿ ಇರುವ ಶ್ರೀ ಕಾಶಿ ವಿಶ್ವನಾಥ ದೇವಸ್ಥಾನದ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಿ.ಎಸ್.ಪ್ರಕಾಶ್, ಮಂಜುನಾಥ ಸ್ವಾಮಿ ಹಾಗೂ ಧರ್ಮ ಸೂರಿ ಇದ್ದರು -ಪ್ರಜಾವಾಣಿ ಚಿತ್ರ

ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮಾಹಿತಿ

ಮೇಕೆದಾಟು: ₹9 ಸಾವಿರ ಕೋಟಿ ಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವೇರಿ ನದಿಗೆ ಅಡ್ಡಲಾಗಿ ಮೇಕೆದಾಟು ಸಮತೋಲನಾ ಜಲಾಶಯ ಹಾಗೂ ಕುಡಿಯುವ ನೀರಿನ ಯೋಜನೆ ಅನುಷ್ಠಾನಕ್ಕೆ ₹9 ಸಾವಿರ ಕೋಟಿ ಮೊತ್ತದ ಯೋಜನಾ ವರದಿ ತಯಾರಿಸಿ, ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಲಾಗಿದೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿಧಾನಸಭೆಗೆ ತಿಳಿಸಿದ್ದಾರೆ.

ಜೆಡಿಎಸ್‌ನ ಎ. ಮಂಜುನಾಥ ಕೇಳಿದ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಅವರು, ಯೋಜನೆಗೆ ಅಗತ್ಯ ಇರುವ ಅನುಮತಿಗಳನ್ನು ಪಡೆಯುವ ಪ್ರಕ್ರಿಯೆ ನಡೆದಿದೆ. ಶಾಸನಬದ್ಧ ಸಮ್ಮತಿ ಪಡೆದ ನಂತರ ಕಾಮಗಾರಿ ಪ್ರಾರಂಭಿಸಲು ಕ್ರಮವಹಿಸಲಾಗುವುದು ಎಂದು ಹೇಳಿದ್ದಾರೆ.

ಸಮಗ್ರ ಯೋಜನಾ ವರದಿಗೆ ಕೇಂದ್ರ ಜಲ ಆಯೋಗದ ಒಪ್ಪಿಗೆ ಪಡೆಯಬೇಕಿದೆ. ಜಲ ಆಯೋಗವು ಯೋಜನೆಯ ಕುರಿತು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಅಭಿಪ್ರಾಯ ವನ್ನು ಕೇಳಿದ್ದು, ಅದು ಸಲ್ಲಿಕೆಯಾಗಬೇಕಿದೆ. ಯೋಜನೆಗೆ ಬೇಕಾದ 5252 ಹೆಕ್ಟೇರ್ ಭೂಮಿಯಲ್ಲಿ 5051 ಹೆಕ್ಟೇರ್ ಅರಣ್ಯ ಭೂಮಿಯಿದ್ದು ಪರಿಸರ ಸಚಿವಾಲಯದ ಒಪ್ಪಿಗೆಯೂ ಬೇಕಾಗುತ್ತದೆ ಎಂದು ವಿವರಿಸಿದ್ದಾರೆ.

ಯೋಜನಾ ವರದಿ ತಯಾರಿಸಲು ಕೇಂದ್ರ ಜಲ ಆಯೋಗ ನೀಡಿರುವ ಅನುಮತಿ ತಡೆ ಹಿಡಿದು, ಅದನ್ನು ವಾಪಸ್ ಪಡೆಯಲು, ಅಲ್ಲಿಯವರೆಗೆ ಯಥಾಸ್ಥಿತಿ ಕಾಪಾಡಿಕೊಳ್ಳುವಂತೆ ಸೂಚಿಸಬೇಕೆಂದು ಕೋರಿ ತಮಿಳುನಾಡು ಸರ್ಕಾರ ಸುಪ್ರೀಂ-ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದೆ. ಅದು ಇತ್ಯರ್ಥಕ್ಕೆ ಬಾಕಿ ಇದೆ ಎಂದು ಅವರು ಹೇಳಿದ್ದಾರೆ.



ಮೇಕೆದಾಟು ಪ್ರದೇಶ

ಎತ್ತಿನಹೊಳೆ ರಾಷ್ಟ್ರೀಯ ಯೋಜನೆ: ಪತ್ರ

ಎತ್ತಿನಹೊಳೆ ಯೋಜನೆಯನ್ನು ನೇತ್ರಾವತಿ–ಹೇಮಾವತಿ ಸಂಪರ್ಕಿಸುವ ವಿಸ್ತರಣೆ ಯೋಜನೆಯೆಂದು ಪರಿಗಣಿಸಿ ರಾಷ್ಟ್ರೀಯ ಯೋಜನೆಯಾಗಿ ಘೋಷಿಸಬೇಕೆಂದು ಕೇಂದ್ರ ಜಲ ಶಕ್ತಿ ಸಚಿವರಿಗೆ ಇದೇ ವರ್ಷದ ಫೆಬ್ರುವರಿ-ಯಲ್ಲಿ ಪತ್ರ ಬರೆಯಲಾಗಿದೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದ್ದಾರೆ.

ವಿಧಾನಸಭೆಯಲ್ಲಿ ಜೆಡಿಎಸ್‌ನ ಕೆ.ಎಂ. ಶಿವಲಿಂಗೇಗೌಡರ ಪ್ರಶ್ನೆಗೆ ಉತ್ತರ ನೀಡಿರುವ ಅವರು, ಸಮಗ್ರ ಯೋಜನಾ ವರದಿಯನ್ನೂ ಕೇಂದ್ರಕ್ಕೆ ಕಳಿಸಲಾಗಿದೆ. ಜನವರಿಯಲ್ಲಿ ಕೇಂದ್ರ ಜಲಶಕ್ತಿ ಸಚಿವಾಲಯದ ಕಾರ್ಯದರ್ಶಿಗೆ ಈ ಬಗ್ಗೆ ಪತ್ರ ಬರೆಯಲಾಗಿದೆ. ಕೇಂದ್ರ ಸರ್ಕಾರದಿಂದ ಪ್ರತಿಕ್ರಿಯೆ ನಿರೀಕ್ಷಿಸ-ಲಾಗಿದ್ದು, ತರುವಾಯ ವಿವರವಾದ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಹೇಳಿದ್ದಾರೆ.

ಸಿ.ಎಂ ವಿರುದ್ಧ ಹಕ್ಕುಚ್ಯುತಿ ಮಂಡನೆಗೆ ಮುಂದಾದ ಸಿ.ಎಂ. ಇಬ್ರಾಹಿಂ

ಬೆಂಗಳೂರು: ಸಿ.ಡಿ ವಿಚಾರ ತಮ್ಮ ಗಮನಕ್ಕೆ ಬಂದಿಲ್ಲ ಎಂದು ಹೇಳುವ ಮೂಲಕ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಸುಳ್ಳು ಹೇಳಿದ್ದಾರೆ ಎಂದು ಆರೋಪಿಸಿದ ಕಾಂಗ್ರೆಸ್ ಸದಸ್ಯ ಸಿ.ಎಂ. ಇಬ್ರಾಹಿಂ ಅವರು, ಮುಖ್ಯಮಂತ್ರಿ ವಿರುದ್ಧ ಹಕ್ಕುಚ್ಯುತಿ ಮಂಡನೆಗೆ ಅವಕಾಶ ನೀಡುವಂತೆ ಮಂಗಳವಾರ ವಿಧಾನ ಪರಿಷತ್‌ನಲ್ಲಿ ಮನವಿ ಮಾಡಿದರು.

ಬೆಲೆ ಏರಿಕೆ ವಿರುದ್ಧ ನಿಲುವಳಿ ಸೂಚನೆ ಮಂಡನೆಗೆ ಅವಕಾಶ ನೀಡುವಂತೆ ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ ಅವರು ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ಮನವಿ ಮಾಡುತ್ತಿದ್ದರು. ಅಷ್ಟರಲ್ಲಿ ಮಧ್ಯ ಪ್ರವೇಶಿಸಿದ ಇಬ್ರಾಹಿಂ, 'ಸಿ.ಡಿ ವಿಚಾರವೇ ಗೊತ್ತಿಲ್ಲ ಎಂದು ಮುಖ್ಯಮಂತ್ರಿ ತಪ್ಪು ಮಾಹಿತಿ ನೀಡಿದ್ದಾರೆ. ಇದರಿಂದ ಸದನದ ಹಕ್ಕುಚ್ಯುತಿ ಆಗಿದೆ. ಅವರ ವಿರುದ್ಧ ಹಕ್ಕುಚ್ಯುತಿ ಮಂಡಿಸಲು ಅವಕಾಶ ನೀಡಬೇಕು' ಎಂದು ಸಭಾಪತಿಯವರನ್ನು ಆಗ್ರಹಿಸಿದರು. ಸರಿಯಾದ ರೂಪದಲ್ಲಿ ವಿಷಯ ಪ್ರಸ್ತಾಪಿಸುವಂತೆ ಸಭಾಪತಿ ಸೂಚನೆ ನೀಡಿದರು.

361 ಪ್ರೌಢಶಾಲೆ ಪಿಯು ಕಾಲೇಜುಗಳಾಗಿ ಮೇಲ್ದರ್ಜೆಗೆ

ಬೆಂಗಳೂರು: ರಾಜ್ಯದಲ್ಲಿ 361 ಪ್ರೌಢಶಾಲೆಗಳನ್ನು ಪದವಿಪೂರ್ವ ಕಾಲೇಜುಗಳಾಗಿ ಪರಿವರ್ತಿಸಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ತಿಳಿಸಿದರು.

ವಿಧಾನಸಭೆಯಲ್ಲಿ ಕಾಂಗ್ರೆಸ್‌ನ ಪ್ರಸಾದ್ ಅಬ್ಬಯ್ಯ ಅವರ ಗಮನಸೆಳೆಯುವ ಸೂಚ ನೆಗೆ ಸಚಿವರು ಈ ವಿಷಯ ತಿಳಿಸಿದರು.

ಬಡ ಮತ್ತು ಮಧ್ಯಮ ವರ್ಗದ ವಿದ್ಯಾರ್ಥಿಗಳು ಸರ್ಕಾರಿ ಕಾಲೇಜುಗಳನ್ನೇ ಹೆಚ್ಚಾಗಿ ನೆಚ್ಚಿಕೊಳ್ಳುತ್ತಿದ್ದಾರೆ. ಬೇಡಿಕೆಯೂ ಹೆಚ್ಚಾಗಿದೆ. ಹೀಗಾಗಿ 50 ಕಾಲೇಜುಗಳು ಬೇಕು ಎಂದು ಹಣಕಾಸು ಇಲಾಖೆಗೆ ತಿಳಿಸಿದ್ದೇವೆ ಎಂದರು.

ಪರಿಷತ್‌ನಲ್ಲಿ ಕಾಂಗ್ರೆಸ್‌ನ ಎಂ. ನಾರಾಯಣಸ್ವಾಮಿ ಆರೋಪ

ಭೂಕಬಳಿಕೆಯಲ್ಲಿ ಸಚಿವ ಬೈರತಿ ಬಸವರಾಜ ಭಾಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೆ.ಆರ್.ಪುರ ವ್ಯಾಪ್ತಿಯ ಬಸವನಪುರ ಗ್ರಾಮದ ಸರ್ವೆ ನಂಬರ್ 26/01ರಲ್ಲಿ 4 ಎಕರೆ 18 ಗುಂಟೆ ಸರ್ಕಾರಿ ಜಮೀನು ಕಬಳಿಕೆ-ಯಾಗಿದ್ದು, ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಅದರಲ್ಲಿ ಭಾಗಿಯಾಗಿದ್ದಾರೆ ಎಂದು ವಿರೋಧ ಪಕ್ಷದ ಮುಖ್ಯ ಸಚೇತಕ ಎಂ. ನಾರಾಯಣಸ್ವಾಮಿ ವಿಧಾನ ಪರಿಷತ್‌ನಲ್ಲಿ ಮಂಗಳವಾರ ಆರೋಪಿಸಿದರು.

ಸರ್ಕಾರಿ ಜಮೀನು ಕಬಳಿಕೆ ನಡೆದಿರುವ ಕುರಿತು ಗಮನ ಸೆಳೆಯುವ ಸೂಚನೆ ಮಂಡಿಸಿದ ಅವರು, '₹ 70 ಕೋಟಿ ಮೌಲ್ಯದ ಜಮೀನು ಕಬಳಿಕೆಯಾಗಿದೆ. ಸರ್ಕಾರಿ ಜಮೀನಿನ ದಾಖಲೆಗಳನ್ನು ತಿದ್ದಿ ಖಾಸಗಿಯವರ ಹೆಸರಿಗೆ ವರ್ಗಾವಣೆ ಮಾಡಲಾಗಿದೆ. ಹಿಂದಿನ ಅಧಿವೇಶನದಲ್ಲೂ ಈ ಬಗ್ಗೆ ಪ್ರಸ್ತಾಪಿಸಲಾಗಿತ್ತು. ಆದರೆ, ಯಾವ ಕ್ರಮವೂ ಆಗಿಲ್ಲ. ಈಗಲೂ ಅಲ್ಲಿ ನಿರಂತರವಾಗಿ ಕೆಲಸ ನಡೆಯುತ್ತಿದೆ' ಎಂದರು.

ಮಧ್ಯ ಪ್ರವೇಶಿಸಿದ ಬೈರತಿ ಬಸವರಾಜ, 'ನಾನು ಆ ಕ್ಷೇತ್ರದ ಶಾಸಕ. ಆ ಜಮೀನು ಸರ್ಕಾರದ್ದಲ್ಲ. ಖಾಸಗಿಯವರಿಗೆ ಸೇರಿದ್ದು. ಅಲ್ಲಿ ಯಾವುದೇ ಅಕ್ರಮವೂ ನಡೆದಿಲ್ಲ' ಎಂದು ಉತ್ತರ ನೀಡಲು ಮುಂದಾದರು.

ಕಂದಾಯ ಸಚಿವ ಆರ್. ಅಶೋಕ ಅವರೇ ಉತ್ತರ ನೀಡಬೇಕೆಂದು ಪಟ್ಟು ಹಿಡಿದ ನಾರಾಯಣಸ್ವಾಮಿ, 'ನೀವೇ ಅಕ್ರಮದಲ್ಲಿ ಭಾಗಿಯಾಗಿದ್ದೀರಿ. ಭೂಕಬಳಿಕೆಯಲ್ಲಿ ನೇರವಾಗಿ ನಿಮ್ಮ ಕೈವಾಡವೇ ಇದೆ' ಎಂದು ಆರೋಪಿಸಿದರು.

ಇದೇ ವಿಚಾರವಾಗಿ ಕಾಂಗ್ರೆಸ್ ಮತ್ತು ಬಿಜೆಪಿ ಸದಸ್ಯರ ನಡುವೆ ವಾಕ್ಸಮರ ಆರಂಭವಾಗುತ್ತಿದ್ದಂತೆ ಮಧ್ಯ ಪ್ರವೇಶಿಸಿದ ಸಭಾಪತಿ ಬಸವರಾಜ ಹೊರಟ್ಟಿ, ಕಂದಾಯ ಸಚಿವರಿಂದಲೇ ಉತ್ತರ ಕೊಡಿಸುವಂತೆ ಸಭಾ ನಾಯಕ ಕೋಟ ಶ್ರೀನಿವಾಸ ಪೂಜಾರಿ ಅವರಿಗೆ ನಿರ್ದೇಶನ ನೀಡಿದರು.

ಗಡಿಯಲ್ಲಿ ಪ್ರವೇಶ ನಿರ್ಬಂಧ ಪ್ರಶ್ನಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ಕನ್ನಡ ಜಿಲ್ಲೆಗೆ ಕೇರಳದ ಗಡಿಯಲ್ಲಿ ಯಾವ ಕಾನೂನಿನ ಅಡಿ ಪ್ರವೇಶ ನಿರ್ಬಂಧ ಮಾಡಲಾಗಿದೆ ಎಂದು ಜಿಲ್ಲಾಡಳಿತವನ್ನು ಹೈಕೋರ್ಟ್ ಪ್ರಶ್ನೆ ಮಾಡಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿ ನೇತೃತ್ವದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ (ಡಿಡಿಎಂಎ) ಆದೇಶ ಪ್ರಶ್ನಿಸಿ ವಕೀಲ ಬಿ.ಸುಬ್ಬಯ್ಯ ರೈ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

'ಕೇರಳದಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಪ್ರವೇಶಿಸಲು 23 ಕಡೆ ಅವಕಾಶ ಇದೆ. ಆದರೆ, ನಾಲ್ಕು ಕಡೆಗಳಲ್ಲಿ ಮಾತ್ರ ಅವಕಾಶ ನೀಡಲಾಗಿದೆ. ಪ್ರತಿನಿತ್ಯ 80 ಸಾವಿರಕ್ಕೂ ಹೆಚ್ಚು ಜನರು ಆಸ್ಪತ್ರೆ, ವ್ಯಾಪಾರ ವಹಿವಾಟು ಇನ್ನಿತರ ಕಾರಣಕ್ಕೆ ಗಡಿ ದಾಟಬೇಕಾದ ಅನಿವಾರ್ಯ ಇದೆ' ಎಂದು ಅರ್ಜಿದಾರರು ದೂರಿದ್ದಾರೆ.

'ಕೇರಳದಿಂದ ಕರ್ನಾಟಕಕ್ಕೆ ಪ್ರವೇಶಿಸಬಹುದಾದ ಜಿಲ್ಲೆಗಳ ಸಂಖ್ಯೆ ಎಷ್ಟು, ಬೇರೆ ಜಿಲ್ಲೆಗಳಿಂದ ಕೇರಳದ ನಿವಾಸಿಗಳು ಕರ್ನಾಟಕ ಪ್ರವೇಶಿಸಬಹುದು, ದಕ್ಷಿಣ ಕನ್ನಡ ಜಿಲ್ಲೆಯಿಂದ ಮಾತ್ರ ಪ್ರವೇಶಿಸುವಂತಿಲ್ಲವೇ' ಎಂದು ಮೌಖಿಕವಾಗಿ ಕೇಳಿತು.

'ರಾಜ್ಯ ಸರ್ಕಾರದ 2021 ಫೆಬ್ರುವರಿ 16ರ ಸುತ್ತೋಲೆ ಪ್ರಕಾರ ಕೋವಿಡ್ ಪರೀಕ್ಷೆಯ ನೆಗೆಟಿವ್ ವರದಿ ಕೇಳಬಹುದು. ವರದಿ ಇದ್ದರೂ ಪ್ರವೇಶಕ್ಕೆ ನಿರ್ಬಂಧ ಹೇರುವಂತಿಲ್ಲ. ಪ್ರವೇಶ ದ್ವಾರಗಳನ್ನು ಮುಚ್ಚಲು ಸುತ್ತೋಲೆಯಲ್ಲಿ ತಿಳಿಸಲಾಗಿಲ್ಲ' ಎಂದು ಪೀಠ ಅಭಿಪ್ರಾಯಪಟ್ಟಿತು.

ಅರ್ಜಿದಾರರು ಎತ್ತಿರುವ ಕಾನೂನು ಸಮಸ್ಯೆಗಳನ್ನು ಜಿಲ್ಲಾಡಳಿತ ಎದುರಿಸಬೇಕಾಗುತ್ತದೆ ಎಂದು ತಿಳಿಸಿದ ಪೀಠ, ಮಾ.18ಕ್ಕೆ ವಿಚಾರಣೆ ಮುಂದೂಡಿತು.

ಸಾಲ ವಸೂಲಿಗೆ ಕಿರುಕುಳ ಕೊಟ್ಟರೆ 2 ವರ್ಷ ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಲ ವಸೂಲಿಗಾಗಿ ಕಿರುಕುಳ ಮತ್ತು ಹಿಂಸೆ ನೀಡುವ ನೀಡುವ ಲೇವಾದೇವಿದಾರ-ರಿಗೆ ದಂಡ ಮತ್ತು ಜೈಲು ಶಿಕ್ಷೆ ಪ್ರಮಾಣ ಹೆಚ್ಚಿಸುವ ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ಮಸೂದೆ 2021 ಅನ್ನು ವಿಧಾನ ಸಭೆಯಲ್ಲಿ ಮಂಡಿಸಲಾಯಿತು.

ಮೊದಲ ಬಾರಿ ಅಪರಾಧ ಎಸಗಿದವರಿಗೆ ಒಂದು ವರ್ಷದ ವರೆಗೆ ವಿಸ್ತರಿಸಬಹುದಾದ ಸಾದಾ ಜೈಲು ಶಿಕ್ಷೆ ಅಥವಾ ₹50 ಸಾವಿರದವರೆಗೆ ಜುಲ್ಮಾನೆ. ಎರಡನೇ ಅಥವಾ ಮುಂದುವರೆದ ಅಪರಾಧಕ್ಕಾಗಿ ಎರಡು ವರ್ಷ ಜೈಲು ಅಥವಾ ₹1 ಲಕ್ಷದವರೆಗೆ ಜುಲ್ಮಾನೆ ವಿಧಿಸಲಾಗುವುದು. ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಅವರು ಮಸೂದೆ ಮಂಡಿಸಿದರು.

ಅಲ್ಲದೆ, ಕರ್ನಾಟಕ ಸೊಸೈಟಿಗಳ ನೋಂದಣಿ(ತಿದ್ದುಪಡಿ)ಮಸೂದೆ 2021 ಮತ್ತು ಕರ್ನಾಟಕ ಪೌರ ಸಭೆಗಳ (ತಿದ್ದುಪಡಿ) ಮಸೂದೆ 2021 ಅನ್ನೂ ಮಂಡಿಸಲಾಯಿತು.

ಬಿ.ಕಾಂ: ರಾಘವೇಂದ್ರಗೆ 5ನೇ ರ‍್ಯಾಂಕ್

ರಾಘವೇಂದ್ರ

ಬೆಂಗಳೂರು: ಹನುಮಂತನಗರದಲ್ಲಿರುವ ಪಿಇಎಸ್ ಪದವಿ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಜೆ.ಪಿ. ರಾಘವೇಂದ್ರ ಅವರು ಬಿ.ಕಾಂ.ನಲ್ಲಿ ಐದನೇ ರ‍್ಯಾಂಕ್ ಗಳಿಸಿದ್ದಾರೆ.

ಬೆಂಗಳೂರು ವಿಶ್ವವಿದ್ಯಾಲಯ 2020ರ ಸೆಪ್ಟೆಂಬರ್–ಅಕ್ಟೋಬರ್‌ನಲ್ಲಿ ನಡೆಸಿದ್ದ ಪರೀಕ್ಷೆಯಲ್ಲಿ ರಾಘವೇಂದ್ರ ಅವರು ಶೇ 92.22 ಅಂಕಗಳನ್ನು ಪಡೆದು ಈ ಸಾಧನೆ ಮಾಡಿದ್ದಾರೆ ಎಂದು ಪ್ರಕಟಣೆಯು ತಿಳಿಸಿದೆ.

ವಿಧಾನಸಭೆಯಲ್ಲಿ ಅರಣ್ಯ ಸಚಿವ ಅರವಿಂದ ಲಿಂಬಾವಳಿ ಹೇಳಿಕೆ

ಪರಿಸರ ಅನುಮತಿಗಾಗಿ ಪ್ರತ್ಯೇಕ ಕೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೀರಾವರಿ ಅಥವಾ ಅಭಿವೃದ್ಧಿ ಯೋಜನೆಗಳಿಗೆ ಕೇಂದ್ರ ಪರಿಸರ ಸಚಿವಾಲಯದ ಅನುಮತಿ ಪಡೆಯಲು ಆಗುತ್ತಿರುವ ವಿಳಂಬ ತಪ್ಪಿಸುವ ಉದ್ದೇಶದಿಂದ ಅರಣ್ಯ ಇಲಾಖೆಯಲ್ಲಿ ಪ್ರತ್ಯೇಕ ಕೋಶ ತೆರೆಯಲಾಗುವುದು ಎಂದು ಅರಣ್ಯ ಸಚಿವ ಅರವಿಂದ ಲಿಂಬಾವಳಿ ಹೇಳಿದರು.

ವಿಧಾನಸಭೆಯಲ್ಲಿ ಕಾಂಗ್ರೆಸ್‌ನ ಮಹಾಂತೇಶ ಕೌಜಲಗಿ ಅವರು ಬೈಲಹೊಂಗಲ ಕ್ಷೇತ್ರದ ಚಚಡಿ ಏತ ನೀರಾವರಿ ಯೋಜನೆಯ ವಿಳಂಬದ ಪ್ರಶ್ನೆ ಕೇಳಿದ್ದರು. ಪರಿಸರ ಸಚಿವಾಲಯದ ಅನುಮತಿ ಸಿಗದೇ ಇರುವುದರಿಂದ ವಿಳಂಬವಾಗಿದೆ ಎಂದು ಸಚಿವ ಗೋವಿಂದ ಕಾರಜೋಳ ಸದನಕ್ಕೆ ತಿಳಿಸಿದರು.

ಈ ಸಂದರ್ಭದಲ್ಲಿ ಮಧ್ಯ ಪ್ರವೇಶಿಸಿದ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, 'ನೀರಾವರಿ, ರೈಲ್ವೆ, ರಸ್ತೆ ಹೀಗೆ ಅನೇಕ ಕಾಮಗಾರಿಗಳಿಗೆ ಕೇಂದ್ರ ಪರಿಸರ ಸಚಿವಾಲಯದ ನಿರಾಕ್ಷೇಪಣಾ ಪತ್ರ ಸಿಗದೇ ಇರುವುದರಿಂದ ಯೋಜನೆಗಳು ಕಾಲಮಿತಿಯಲ್ಲಿ ಅನುಷ್ಠಾನವಾಗುತ್ತಿಲ್ಲ. ಹಿರಿಯ ಐಎಫ್‌ಎಸ್ ಅಧಿಕಾರಿಯೊಬ್ಬರನ್ನು ನೇಮಕ ಮಾಡಿ, ಕೇಂದ್ರ ಸರ್ಕಾರದ ಮುಂದಿರುವ ಪ್ರಸ್ತಾವನೆಗಳಿಗೆ ಅನುಮತಿ ಪಡೆಯುವ ಜವಾಬ್ದಾರಿಯನ್ನು ವಹಿಸಿ. ಕಡತಗಳ ಬೆನ್ನು ಬಿದ್ದು ಕೆಲಸ ಮಾಡುವ ಅಧಿಕಾರಿಗಳನ್ನು ನೇಮಕ ಮಾಡಿ' ಎಂದು ಸಲಹೆ ನೀಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಲಿಂಬಾವಳಿ, 'ಪ್ರತ್ಯೇಕ ಕೋಶ ಆರಂಭಿಸಿ ನೋಡಲ್ ಅಧಿಕಾರಿಯನ್ನು ನೇಮಕ ಮಾಡಲಾಗುವುದು. ಎಲ್ಲ ಇಲಾಖೆಯವರು ತಮ್ಮ ಪ್ರಸ್ತಾವನೆಗಳು, ಕಡತಗಳನ್ನು ಈ ಅಧಿಕಾರಿಯ ಗಮನಕ್ಕೆ ತಂದರೆ ಕೇಂದ್ರದಿಂದ ಅನುಮತಿ ಕೊಡಿಸುವ ಕೆಲಸವನ್ನು ಮಾಡಿಸಲಾಗುವುದು' ಎಂದು ಹೇಳಿದರು.



ಕೋವಿಡ್: ರಾಜ್ಯದಲ್ಲಿ 7 ಸಾವಿರ ದಾಟಿದ ಸಕ್ರಿಯ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಎರಡು ವಾರದಿಂದ ಪ್ರತಿನಿತ್ಯ ಸರಾಸರಿ 500 ಪ್ರಕರಣಗಳು ವರದಿಯಾಗುತ್ತಿರುವ ಪರಿಣಾಮ 5 ಸಾವಿರದ ಗಡಿಯ ಆಸುಪಾಸಿನಲ್ಲಿದ್ದ ಸಕ್ರಿಯ ಪ್ರಕರಣಗಳ ಸಂಖ್ಯೆ 7 ಸಾವಿರದ ಗಡಿ (7,033) ದಾಟಿದೆ.

ಮಂಗಳವಾರ 590 ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 9.56 ಲಕ್ಷ ದಾಟಿದೆ.

ಈ ತಿಂಗಳು 9 ದಿನಗಳ ಅವಧಿಯಲ್ಲಿ 4,790 ಮಂದಿ ಕೋವಿಡ್ ಪೀಡಿತರಾಗಿರುವುದು ಖಚಿತಪಟ್ಟಿದೆ. ಸೋಂಕಿತರಲ್ಲಿ ಬೆಂಗಳೂರಿನಲ್ಲಿ ನಾಲ್ವರು ಹಾಗೂ ಧಾರವಾಡ, ತುಮಕೂರಿನಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಸಾವಿಗೀಡಾದವರ ಒಟ್ಟು ಸಂಖ್ಯೆ 12,373ಕ್ಕೆ ತಲುಪಿದೆ.

ಕೋವಿಡ್ ಪೀಡಿತರಲ್ಲಿ 366 ಮಂದಿ ಗುಣಮುಖರಾಗಿದ್ದು, ಚೇತರಿಸಿಕೊಂಡವರ ಸಂಖ್ಯೆ 9.36 ಲಕ್ಷ ದಾಟಿದೆ.

ಒಂದು ದಿನದ ಅವಧಿಯಲ್ಲಿ 66 ಸಾವಿರ ಮಂದಿ ಕೋವಿಡ್ ಪರೀಕ್ಷೆಗೆ ಒಳಪಟ್ಟಿದ್ದಾರೆ. ಈವರೆಗೆ 1.94 ಕೋಟಿ ಪರೀಕ್ಷೆಗಳನ್ನು ನಡೆಸಲಾಗಿದೆ.

ಬೆಂಗಳೂರಿನಲ್ಲಿ 363 ಮಂದಿ ಕೋವಿಡ್ ಪೀಡಿತರಾಗಿದ್ದು, ಸೋಂಕಿತರ ಸಂಖ್ಯೆ 4.08 ಲಕ್ಷ ದಾಟಿದೆ. ಮೈಸೂರಿನಲ್ಲಿ ಮತ್ತೆ 56 ಪ್ರಕರಣಗಳು ದೃಢಪಟ್ಟಿವೆ. ಅಲ್ಲಿ ಈವರೆಗೆ ಕೋವಿಡ್ ಪೀಡಿತರಾದವರ ಸಂಖ್ಯೆ 54,265ಕ್ಕೆ ತಲುಪಿದೆ. ಬಳ್ಳಾರಿಯಲ್ಲಿ 26, ಕಲಬುರ್ಗಿಯಲ್ಲಿ 25, ಬೆಳಗಾವಿಯಲ್ಲಿ 15, ತುಮಕೂರಿನಲ್ಲಿ 14, ಉಡುಪಿಯಲ್ಲಿ 12, ದಕ್ಷಿಣ ಕನ್ನಡ ಹಾಗೂ ಚಿಕ್ಕಬಳ್ಳಾಪುರದಲ್ಲಿ ತಲಾ 11 ಪ್ರಕರಣಗಳು ಹೊಸದಾಗಿ ವರದಿಯಾಗಿವೆ.

43 ಸಾವಿರ ಮಂದಿಗೆ ಲಸಿಕೆ: ರಾಜ್ಯದಲ್ಲಿ ಮಂಗಳವಾರ 964 ಕಡೆ ಕೋವಿಡ್ ಲಸಿಕೆ ವಿತರಣೆ ಅಭಿಯಾನ ನಡೆದಿದ್ದು, 43,394 ಮಂದಿಗೆ ಲಸಿಕೆ ವಿತರಣೆ ಮಾಡಲಾಗಿದೆ. ಇವರಲ್ಲಿ 26,385 ಮಂದಿ ಹಿರಿಯ ನಾಗರಿಕರು ಸೇರಿದ್ದಾರೆ. ಈವರೆಗೆ 10.57 ಲಕ್ಷ ಡೋಸ್ ಲಸಿಕೆಯನ್ನು ಫಲಾನುಭವಿಗಳಿಗೆ ನೀಡಲಾಗಿದೆ.

4.67 ಲಕ್ಷ ಆರೋಗ್ಯ ಕಾರ್ಯಕರ್ತರು ಮೊದಲ ಡೋಸ್ ಪಡೆದುಕೊಂಡಿದ್ದಾರೆ. ಇವರಲ್ಲಿ 2.56 ಲಕ್ಷ ಮಂದಿ ಎರಡನೇ ಡೋಸ್ ಪೂರ್ಣಗೊಳಿಸಿದ್ದಾರೆ.

60 ವರ್ಷ ಮೇಲ್ಪಟ್ಟವರಲ್ಲಿ 1.37 ಲಕ್ಷ ಮಂದಿ ಲಸಿಕೆ ಹಾಕಿಸಿಕೊಂಡಿದ್ದಾರೆ.

45ರಿಂದ 60 ವರ್ಷದೊಳಗಿನ ಕೋವಿಡೇತರ ಕಾಯಿಲೆ ಎದುರಿಸು ತ್ತಿರುವವರಲ್ಲಿ 23,236 ಮಂದಿ ಲಸಿಕೆ ಪಡೆದುಕೊಂಡಿದ್ದಾರೆ.

ಈವರೆಗೆ 23 ಮಂದಿಯಲ್ಲಿ ಮಾತ್ರ ತೀವ್ರ ಮತ್ತು ಗಂಭೀರ ಸ್ವರೂಪದ ಅಡ್ಡ ಪರಿಣಾಮಗಳು ಕಾಣಿಸಿಕೊಂಡಿವೆ.

103 ವರ್ಷದ ವೃದ್ಧೆಗೆ ಅಪೋಲೊ ಆಸ್ಪತ್ರೆಯ ಶುಶ್ರೂಷಕರು ಲಸಿಕೆ ನೀಡಿದರು.

103 ವರ್ಷದ ವೃದ್ಧೆಗೆ ಕೋವಿಡ್ ಲಸಿಕೆ

ಬೆಂಗಳೂರು: ಬನ್ನೇರುಘಟ್ಟ ರಸ್ತೆಯಲ್ಲಿರುವ ಅಪೋಲೊ ಆಸ್ಪತ್ರೆಯಲ್ಲಿ 103 ವರ್ಷದ ವೃದ್ಧೆಯೊಬ್ಬರು ಕೋವಿಡ್ ಲಸಿಕೆ ಪಡೆದುಕೊಂಡಿದ್ದಾರೆ. ದೇಶದಲ್ಲಿ ಈವರೆಗೆ ಲಸಿಕೆ ಪಡೆದವರಲ್ಲಿ ಇವರು ಅತೀ ಹಿರಿಯ ವ್ಯಕ್ತಿ ಎನ್ನಲಾಗಿದೆ.

ನಗರದ ಜೆ. ಕಾಮೇಶ್ವರಿ ಎನ್ನುವವರು ಕುಟುಂಬದ ಸದಸ್ಯರೊಂದಿಗೆ ಆಸ್ಪತ್ರೆಗೆ ಮಂಗಳವಾರ ಬಂದು ಲಸಿಕೆ ಪಡೆದುಕೊಂಡರು. ಬಳಿಕ ವೈದ್ಯಕೀಯ ಸಿಬ್ಬಂದಿ ಅವರ ಮೇಲೆ 30 ನಿಮಿಷಗಳು ವಿಶೇಷ ನಿಗಾ ಇರಿಸಿ, ಆರೋಗ್ಯ ವಿಚಾರಿಸಿದರು. ಈ ವೇಳೆ ಅವರಿಗೆ ಯಾವುದೇ ಅಡ್ಡ ಪರಿಣಾಮ ಕಾಣಿಸಿಕೊಂಡಿಲ್ಲ. ಅವರ 77 ವರ್ಷದ ಪುತ್ರ ಪ್ರಸಾದ್ ರಾವ್ ಕೂಡ ಲಸಿಕೆ ಹಾಕಿಸಿಕೊಂಡರು.

'ಕಾಮೇಶ್ವರಿ ಲಸಿಕೆಗೆ ಉತ್ತಮವಾಗಿ ಸಹಕರಿಸಿದರು. ಅವರಿಗೆ ಯಾವುದೇ ಅಡ್ಡ ಪರಿಣಾಮಗಳು ಕಾಣಿಸಿಕೊಂಡಿಲ್ಲ. ಧೈರ್ಯವಾಗಿ ಲಸಿಕೆ ಪಡೆದುಕೊಂಡರು. ಅವರು ಎಲ್ಲರಿಗೆ ಮಾದರಿಯಾಗಿದ್ದಾರೆ. ಕೋವಿಡ್ ವಿರುದ್ಧದ ಹೋರಾಟದಲ್ಲಿ ಜಯಿಸಬೇಕಾದಲ್ಲಿ ಎಲ್ಲರೂ ಲಸಿಕೆ ಪಡೆದುಕೊಳ್ಳಬೇಕು. ಅದರಲ್ಲೂ ಹಿರಿಯ ನಾಗರಿಕರು ಹಾಗೂ ವಿವಿಧ ಕಾಯಿಲೆಗಳನ್ನು ಎದುರಿಸುತ್ತಿರುವವರಿಗೆ ಲಸಿಕೆ ರಕ್ಷಣೆ ಒದಗಿಸಲಿದೆ' ಎಂದು ಆಸ್ಪತ್ರೆ ತಿಳಿಸಿದೆ.

ಸಾರ್ವಜನಿಕ ನೋಟಿಸು

ನಮ್ಮ ಕಕ್ಷಿದಾರರು ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಕಸಬಾ ಹೋಬಳಿಯ ಬೆಸ್ತಾಮಾನಹಳ್ಳಿ ಗ್ರಾಮಕ್ಕೆ ಸೇರಿದ ಷೆಡ್ಯೂಲು ಸ್ವತ್ತುಗಳನ್ನು ಇದರ ಮಾಲೀಕರಾದ ಮೆ: ಸಂಚಯ ಲ್ಯಾಂಡ್ & ಎಸ್ಟೇಟ್ಸ್ ಪ್ರೈವೇಟ್ ಲಿಮಿಟೆಡ್ ಕಛೇರಿ ವಿಳಾಸ : ನಂ.482, 3ನೇ ಮಹಡಿ, 80 ಅಡಿ ರಸ್ತೆ, ಎಚ್.ಎಂ.ಟಿ ಲೇಔಟ್, ಆರ್.ಟಿ.ನಗರ ಬಸ್ ಡಿಪೋ, ಕಪ್ಪಾ ರೆಸ್ಟೋರೆಂಟ್ ಮೇಲೆ, ಬೆಂಗಳೂರು–560032, ಇವರಿಂದ ಖರೀದಿಸಲು ತೀರ್ಮಾನಿಸಿರುತ್ತಾರೆ.

ಸದರಿ ಮಾಲೀಕರಲ್ಲದೆ ಬೇರಾರಿಗಾದರೂ ಯಾವುದೇ ತರಹವಾದಂತಹ ಹಕ್ಕಾಗಲಿ, ಭಾಗವಾಗಲಿ, ಕ್ಲೇಮುಗಳಾಗಲಿ, ಅಧಿಕಾರವಾಗಲಿ, ಹಿತಾಸಕ್ತಿಯಾಗಲಿ ಇದ್ದಲ್ಲಿ ಅಂತಹವರು ಸದರಿ ಉದ್ದೇಶಿತ ಕ್ರಯದ ವ್ಯವಹಾರಕ್ಕೆ, ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅವರಲ್ಲಿರುವ ದಾಖಲೆಗಳ ಛಾಯಾ ಪ್ರತಿಗಳೊಂದಿಗೆ ಈ ಕೆಳಗೆ ಸಹಿಮಾಡಿರುವವರಿಗೆ ಈ ನೋಟಿಸು ಪ್ರಕಟಗೊಂಡ 14 ದಿನದೊಳಗಾಗಿ ಸಲ್ಲಿಸಲು ಕೋರಲಾಗಿದೆ. ತದನಂತರ ಸಲ್ಲಿಸಲಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲು ಸ್ವತ್ತುಗಳ ವಿವರ

ಕ್ರಮ ಸಂಖ್ಯೆ	ಸರ್ವೆ ನಂಬರ್	ವಿಸ್ತೀರ್ಣ		ಕ್ರಮ ಸಂಖ್ಯೆ	ಸರ್ವೆ ನಂಬರ್	ವಿಸ್ತೀರ್ಣ	
			ಗುಂಟೆ	ಎಕರೆ		ಎಕರೆ	ಗುಂಟೆ
1	85/3	0	13	23	101/3	0	4
2	85/6	0	5	24	101/4	0	6
3	85/7	0	7	25	101/5	0	3
4	86/1	0	15	26	101/7	0	5
5	88/3	0	6	27	101/8	0	9
6	91/1	1	20	28	102/2	0	11
7	93	0	27	29	102/5	0	3
8	95	0	7	30	102/6	0	9
9	96	0	7	31	103	0	17
10	97	1	1	32	106/1	0	2
11	98/2	0	10	33	106/2	0	10
12	98/3	0	34	34	106/3	0	1
13	99/1	0	9	35	108/1	0	21
14	99/2	0	20	36	108/2	0	10
15	99/3	0	6	37	108/3	0	8
16	99/4	0	4	38	109	0	15
17	99/5	0	8	39	110	0	7
18	100/1	0	32	40	111/3	0	5
19	100/2	0	8	41	113	1	3
20	100/3	0	8	42	114	0	25
21	101/1	0	4				
22	101/2	0	12				

ಸಹಿ/–
ಅಜಯ್ ಕುಮಾರ್. ಎನ್. ವಕೀಲರು
ನಂ.ಜಿ2, ನೆಲ ಮಹಡಿ, ಬಿ.ಕೆ.ಪಿ.ನಿವಾಸ್, 3ನೇ ಅಡ್ಡರಸ್ತೆ,
ರಾಘವೇಂದ್ರ ಲೇಔಟ್, ಬೆಂಗಳೂರು–560061

ತೈಲದ ಮೇಲೆ ಅಧಿಕ ಸುಂಕ, ತೆರಿಗೆ ಹೇರಿಕೆ ವಿರುದ್ಧ ಆಕ್ರೋಶ

‘ಜನರಿಗೆ ದ್ರೋಹ ಬಗೆದ ಕೇಂದ್ರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅತ್ಯಧಿಕ ಸುಂಕ, ತೆರಿಗೆ ಹೇರುವ ಮೂಲಕ ಜನರಿಗೆ ದ್ರೋಹ ಬಗೆದಿವೆ. ಬಡ ಹಾಗೂ ಮಧ್ಯಮ ವರ್ಗವನ್ನು ಸುಲಿಗೆ ಮಾಡಲಾಗುತ್ತಿದೆ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ವಿಧಾನಸಭೆಯಲ್ಲಿ ಬೆಲೆ ಏರಿಕೆ ವಿಷಯವನ್ನು ಪ್ರಸ್ತಾಪಿಸಿದ ಅವರು, ಅಗತ್ಯ ವಸ್ತುಗಳ ಬೆಲೆ ಗಗನಕ್ಕೆ ಏರಿರುವುದರಿಂದ ಬಡವರು ಮತ್ತು ಮಧ್ಯಮ ವರ್ಗದವರು ಜೀವನ ನಡೆಸುವುದೇ ಕಷ್ಟವಾಗಿದೆ ಎಂದು ಹೇಳಿದರು.

ಪ್ರಧಾನಿ ಮೋದಿ ಅವರು ಒಳ್ಳೆಯ ದಿನ ಬರುತ್ತದೆ. ಸ್ವರ್ಗವನ್ನೇ ಸೃಷ್ಟಿಸುತ್ತೇವೆ ಎಂದಿದ್ದರು. ಒಳ್ಳೆಯ ದಿನ ಬರಲಿಲ್ಲ. ಬೆಲೆ ಏರಿಕೆಯನ್ನು ತಡೆಯಲು ತೈಲಗಳ ಮೇಲಿನ ತೆರಿಗೆಯನ್ನು ಇಳಿಸುವುದರ ಬದಲು, ಪರೋಕ್ಷ ತೆರಿಗೆಯನ್ನು ಹೇರಿದ್ದಾರೆ ಎಂದು ಅವರು ಹರಿಹಾಯ್ದರು.

ಒಂದು ಲೀಟರ್ ಪೆಟ್ರೋಲ್ ಮೇಲೆ ₹32.98 ಮತ್ತು ಒಂದು ಲೀಟರ್ ಡೀಸೆಲ್ ಮೇಲೆ ₹31.83 ಕೇಂದ್ರ ಸರ್ಕಾರ ಸುಂಕ ವಿಧಿಸುತ್ತಿದೆ. ಅದೇ ರೀತಿ ರಾಜ್ಯ ಸರ್ಕಾರ ಒಂದು ಲೀಟರ್ ಪೆಟ್ರೋಲ್‌ಗೆ ಶೇ 35 ಮತ್ತು ಡೀಸೆಲ್‌ಗೆ ಶೇ 24 ರಷ್ಟು ಮಾರಾಟ ತೆರಿಗೆ ಹಾಕುತ್ತಿದೆ ಎಂದು ಸಿದ್ದರಾಮಯ್ಯ ವಿವರಿಸಿದರು.

ವಿಧಾನಸಭೆಯಲ್ಲಿ ಮಂಗಳವಾರ ನಡೆದ ಕಲಾಪದಲ್ಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮಾತನಾಡಿದರು

ಈಗ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ತೈಲದ ಬೆಲೆ ಕಡಿಮೆ ಇದೆ. ಹಿಂದೆ ಯುಪಿಎ ಸರ್ಕಾರ ಇದ್ದಾಗ ಕಚ್ಚಾ ತೈಲದ ಬೆಲೆ ಹೆಚ್ಚಿದ್ದರೂ ಕಡಿಮೆ ಬೆಲೆಗೆ ಪೆಟ್ರೋಲ್ ಮತ್ತು ಡೀಸೆಲ್ ಸಿಗುತ್ತಿತ್ತು. 2012 ರಲ್ಲಿ ಒಂದು ಬ್ಯಾರಲ್ ಕಚ್ಚಾ ತೈಲದ ಬೆಲೆ 125.41 ಡಾಲರ್ ಇದ್ದಾಗ ನಮ್ಮಲ್ಲಿ ಪೆಟ್ರೋಲ್ ಬೆಲೆ ₹51.17 ಇತ್ತು. ಈಗ ಪ್ರತಿ ಬ್ಯಾರಲ್ ಕಚ್ಚಾ ತೈಲದ ಬೆಲೆ 70 ಡಾಲರ್ ಆಸುಪಾಸು ಇದ್ದರೂ ಪೆಟ್ರೋಲ್ ಬೆಲೆ ₹100 ಸಮೀಪದಲ್ಲಿದೆ ಎಂದು ಹೇಳಿದರು.

ಆಗ ಮಧ್ಯ ಪ್ರವೇಶಿಸಿ ಮಾತನಾಡಿದ ಕಾನೂನು ಮತ್ತು ಸಂಸದೀಯ ಸಚಿವ ಬಸವರಾಜ ಬೊಮ್ಮಾಯಿ, ಡಾಲರ್ ಮೌಲ್ಯದಲ್ಲೂ ಏರುಪೇರಾಗುವುದರಿಂದ ತೈಲ ಬೆಲೆಯಲ್ಲೂ ಏರಿಳಿತವಾಗುತ್ತದೆ ಎಂದು ಹೇಳಿದರು.

‘ನಾನೂ ಶ್ರೀರಾಮನ ಭಕ್ತ’

ಕಾಂಗ್ರೆಸ್ ಸದಸ್ಯರು ವಿಧಾನಸಭೆಯಲ್ಲಿ ‘ಜೈ ಶ್ರೀರಾಮ್’ ಎಂದು ಘೋಷಣೆ ಹಾಕಿದ್ದು ಸ್ವಾರಸ್ಯಕರ ಚರ್ಚೆಗೆ ಕಾರಣವಾಯಿತು.

ತೈಲ ದರ ಏರಿಕೆ ಸಂಬಂಧ ಬಿಜೆಪಿಯ ರಾಜ್ಯಸಭಾ ಸದಸ್ಯ ಡಾ.ಸುಬ್ರಹ್ಮಣ್ಯಂ ಸ್ವಾಮಿ ಅವರ ಟ್ವೀಟ್‌ವೊಂದನ್ನು ಸಿದ್ದರಾಮಯ್ಯ ಪ್ರಸ್ತಾಪಿಸಿದರು. ಆಗ ಕಾಂಗ್ರೆಸ್ ಸದಸ್ಯರು ‘ಜೈಶ್ರೀರಾಮ್’ ಎಂದು ಘೋಷಣೆ ಹಾಕಿದರು.

‘ಯಾಕ್ರಪ್ಪಾ ಬೆಲೆ ಜಾಸ್ತಿ ಆಗಿದ್ದಕ್ಕಾ’ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು. ಕಾಂಗ್ರೆಸ್ ಸದಸ್ಯರು ಮತ್ತೆ ಮತ್ತೆ ಅದೇ ಘೋಷಣೆ ಮೊಳಗಿಸಿದರು.

‘ನೋಡಿ ನಿಮ್ಮ ಬಾಯಲ್ಲಿ ಜೈ ಶ್ರೀರಾಮ್ ಕೇಳಿ ಖುಷಿ ಆಯಿತು’ ಎಂದು ಸಚಿವ ಬಸವರಾಜ ಬೊಮ್ಮಾಯಿ ಅವರು ಕಾಂಗ್ರೆಸ್ಸಿಗರನ್ನು ಛೇಡಿಸಿದರು.

‘ನೋಡಪ್ಪಾ ಬಸವರಾಜ್ ನನ್ನ ಹೆಸರಲ್ಲಿ ರಾಮ ಇದ್ದಾನೆ. ನಾನೂ ಶ್ರೀರಾಮನ ಭಕ್ತನೇ. ರಾಮ ನಿಮಗೆ ಮಾತ್ರ ದೇವರಲ್ಲ ನಮಗೂ ದೇವರೇ’ ಎಂದು ಹೇಳಿದರು. ಇದರಿಂದ ಉತ್ತೇಜಿತರಾದ ಸಿದ್ದರಾಮಯ್ಯ ಪುತ್ರ ಡಾ. ಯತೀಂದ್ರ ಅವರು, ‘ನಮ್ಮ ಮನೆಯಲ್ಲೂ ರಾಮನ ಪೂಜೆ ಮಾಡುತ್ತೇವೆ. ರಾಮ ಬಿಜೆಪಿಯವರ ಆಸ್ತಿಯಲ್ಲ. ಎಲ್ಲರಿಗೂ ದೇವರೇ’ ಎಂದರು.

ಆಗ ಮಧ್ಯ ಪ್ರವೇಶಿಸಿದ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ‘ಅಯೋಧ್ಯೆ ರಾಮ ಮಂದಿರಕ್ಕೆ ದೇಣಿಗೆ ನೀಡಲು ನಿರಾಕರಿಸಿದಿರಿ ಎಂದು ಕೇಳಿದೆ. ವಾಸ್ತವ ಏನು ಹೇಳಿ’ ಎಂದು ನಗುತ್ತಾ ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದರು.

‘ಹೌದು, ಅಯೋಧ್ಯೆ ರಾಮಮಂದಿರಕ್ಕೆ ಹಣ ಕೊಟ್ಟಿಲ್ಲ. ನಮ್ಮ ಊರಿನಲ್ಲಿ ರಾಮಮಂದಿರ ಕಟ್ಟಲು ಹಣ ಕೊಟ್ಟಿದ್ದೇನೆ. ನಾನು ರಾಮನ ವಿರೋಧಿ ಅಲ್ಲ’ ಎಂದು ಸಿದ್ದರಾಮಯ್ಯ ಹೇಳಿದರು.

ಅಂಗಿ ಬಿಚ್ಚಿದ ಪ್ರಕರಣ: ಹಕ್ಕು ಬಾಧ್ಯತಾ ಸಮಿತಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯಲ್ಲಿ ಅಂಗಿ ಬಿಚ್ಚಿ ಪ್ರತಿಭಟಿಸಿದ ಕಾಂಗ್ರೆಸ್‌ನ ಬಿ.ಕೆ. ಸಂಗಮೇಶ್ವರ ಅವರು ಸದಸ್ಯರ ಹಕ್ಕುಚ್ಯುತಿ ಮಾಡಿದ್ದಾರೆ ಎಂಬ ಪ್ರಸ್ತಾವವನ್ನು ಅಂಗೀಕರಿಸಿದ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಕಾಂಗ್ರೆಸ್‌ನ ತೀವ್ರ ಪ್ರತಿರೋಧದ ಮಧ್ಯೆಯೂ ಪ್ರಕರಣದ ವಿಚಾರಣೆಯನ್ನು ಹಕ್ಕುಬಾಧ್ಯತಾ ಸಮಿತಿಗೆ ವಹಿಸಿದರು.

‘ಸಂಗಮೇಶ್ವರ ವರ್ತನೆಯಿಂದ ಇಡೀ ಸದನವೇ ತಲೆ ತಗ್ಗಿಸುವಂತಾಗಿದ್ದು, ಸದಸ್ಯರು ಮತ್ತು ಸಭಾಧ್ಯಕ್ಷರ ಹಕ್ಕುಚ್ಯುತಿಯಾಗಿದೆ’ ಎಂದು ಪ್ರತಿಪಾದಿಸಿದ ಬಿಜೆಪಿಯ ಆರಗ ಜ್ಞಾನೇಂದ್ರ ಪ್ರಸ್ತಾವ ಮಂಡಿಸಲು ಮುಂದಾದರು.

‘ಸಂಗಮೇಶ್ವರ ಅವರನ್ನು ಸದನದಿಂದ ಅಮಾನತು ಮಾಡಿ, ಒಳಬರದಂತೆ ತಡೆದಿದ್ದೀರಿ. ಸಮರ್ಥನೆಗೆ ಅವಕಾಶ ಇಲ್ಲದಂತೆ ಮಾಡಿ ಹಕ್ಕುಚ್ಯುತಿ ಮಂಡಿಸುವುದು ಸರಿಯಲ್ಲ. ವಿಧಾನಸಭೆ ಇತಿಹಾಸದಲ್ಲಿ ಸದಸ್ಯರೊಬ್ಬರ ವಿರುದ್ಧ ಈ ರೀತಿ ನಿರ್ಣಯ ಮಂಡಿಸಿರುವುದು ಒಳ್ಳೆಯ ಬೆಳವಣಿಗೆಯಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು, ತಮ್ಮ ಪಕ್ಷದ ಸದಸ್ಯರ ಜತೆ ಧರಣಿ ನಡೆಸಿದರು. ಸಭಾಧ್ಯಕ್ಷರ ಪೀಠದ ಮುಂದೆ ಬಂದ ಕಾಂಗ್ರೆಸ್ ಸದಸ್ಯರು, ‘ಆರೆಸ್ಸೆಸ್ ಕೈಗೊಂಬೆ ಸರ್ಕಾರ, ಸಿ.ಡಿ ಸರ್ಕಾರ, ಅಶ್ಲೀಲ ಸರ್ಕಾರ, ರಾಸಲೀಲೆ ಸರ್ಕಾರಕ್ಕೆ ಧಿಕ್ಕಾರ’ ಎಂದು ಕೂಗಿದರು. ಅದಕ್ಕೆ ಪ್ರತಿಯಾಗಿ, ‘ಪಾಕಿಸ್ತಾನ ಕೈಗೊಂಬೆ, ಇಟಲಿ ಕಾಂಗ್ರೆಸ್’ ಎಂದು ಬಿಜೆಪಿಯವರು ತಿರುಗೇಟು ಕೊಟ್ಟರು.

ಗಲಾಟೆಯ ಮಧ್ಯೆಯೇ, ಸಭಾಧ್ಯಕ್ಷ ಕಾಗೇರಿ, ‘ಹಕ್ಕುಚ್ಯುತಿ ಪ್ರಸ್ತಾವದ ಬಗ್ಗೆ ಚರ್ಚೆ ಮಾಡಲು ಕಾಂಗ್ರೆಸ್‌ನವರು ತಯಾರಿಲ್ಲ. ಹೀಗಾಗಿ, ಹಕ್ಕುಬಾಧ್ಯತಾ ಸಮಿತಿಗೆ ವಹಿಸುತ್ತಿದ್ದೇನೆ’ ಎಂದು ರೂಲಿಂಗ್ ನೀಡಿದರು.

ಕಾಗೇರಿ ಮಾತಿನ ಅಬ್ಬರ

‘ನೀವು ರಾಜಕೀಯ ಕಾರಣಕ್ಕೆ ನನ್ನ ಬಗ್ಗೆ ಎಷ್ಟೇ ಹಗುರವಾಗಿ, ಬೇಜವಾಬ್ದಾರಿಯಿಂದ ಮಾತನಾಡಿದರೂ ಈ ಸ್ಥಾನದಲ್ಲಿ ಕುಳಿತುಕೊಂಡಿರುವವರೆಗೆ ಪೀಠದ ಗೌರವ, ಘನತೆ ಎತ್ತಿ ಹಿಡಿಯುತ್ತೇನೆ’ ಎಂದು ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಕಾಂಗ್ರೆಸ್‌ನವರನ್ನು ಉದ್ದೇಶಿಸಿ ಏರು ಧ್ವನಿಯಲ್ಲಿ ಹೇಳಿದರು.

‘ಇದು ಪ್ರಜಾಪ್ರಭುತ್ವದ ದೇಗುಲ. ಸಂಸದೀಯ ಮೌಲ್ಯಗಳನ್ನು ನಾವು ಹೆಚ್ಚಿಸಬೇಕಾಗಿದೆ. ಸಂಗಮೇಶ್ವರ ಬೇಜವಾಬ್ದಾರಿಯಿಂದ ನಡೆದುಕೊಂಡಿದ್ದಲ್ಲದೇ, ಈ ಪೀಠದ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ. ಹಕ್ಕುಚ್ಯುತಿ ಚರ್ಚೆಗೂ ಸಿದ್ಧರಿಲ್ಲ. ಇದು ಸರಿ ನಡವಳಿಕೆಯಲ್ಲ’ ಎಂದು ಆಕ್ಷೇಪಿಸಿದರು.

ಪ್ರಜಾವಾಣಿ facebook LIVE
FB.com/prajavani.net

ಶಿವರಾತ್ರಿ ವಿಶೇಷ
ಶಿವತತ್ತ್ವ ಸತ್ಯ

ಇಸ್ರೋ ಉಪ ನಿರ್ದೇಶಕಿ, ಬಾಹ್ಯಾಕಾಶ ವಿಜ್ಞಾನಿ ಡಾ. ಶುಭಲಕ್ಷ್ಮೀ ಕೃಷ್ಣಮೂರ್ತಿ ಅವರ ಗಾಯನ
ಸಂಸ್ಕೃತಿ ಚಿಂತಕಿ, ವಿಭು ಅಕಾಡೆಮಿಯ ಡಾ.ವಿ.ಬಿ. ಆರತಿ ಅವರಿಂದ ವಾಚನ
ವಯಲಿನ್: ವಿದ್ವಾನ್ ಮೈಸೂರು ಸಂಜೀವ್ ಕುಮಾರ್
ಮೃದಂಗ: ವಿದ್ವಾನ್ ಬೆಂಗಳೂರು ರಾಮನಾಥ್
ಗುರುವಾರ, 11 ಮಾರ್ಚ್ 2021 ಸಂಜೆ 6ರಿಂದ

ಪ್ರಜಾವಾಣಿ facebook PREMIER
FB.com/prajavani.net
ಯಕ್ಷ ನವ್ಯ ನಿನಾದ
ನಾದಪ್ರಿಯ ಈಶ್ವರನಿಗೆ ಗಾನಾರ್ಚನೆ
ತೆಂಕು-ಬಡಗು ಯಕ್ಷಗಾನದ ಗಾಯನ-ವಾದನ ವೈಭವಕ್ಕೆ ವಯಲಿನ್, ಕೊಳಲು, ಗಿಟಾರ್, ಕೀಬೋರ್ಡ್ ಹಾಗೂ ರಿದಂ ಪ್ಯಾಡ್‌ಗಳ ಸಾಥ್

ಕಲಾವಿದರು: ರಾಘವೇಂದ್ರ ಮಯ್ಯ, ಅಮೃತಾ ಅಡಿಗ, ರಾಕೇಶ್ ಮಲ್ಯ, ಎ.ಪಿ.ಪಾಠಕ್, ಕೌಶಿಕ್ ರಾವ್ ಹಾಗೂ ಇತರರು
ಗುರುವಾರ, 11 ಮಾರ್ಚ್ 2021 ರಾತ್ರಿ 8ರಿಂದ

‘2ಎ ಪಟ್ಟಿಗೆ ಪ್ರಬಲ ಜಾತಿ ಬೇಡ’

ಒಂದನೇ ಪುಟದಿಂದ

ಮನವಿ ಸ್ವೀಕರಿಸಿದ ಯಡಿಯೂರಪ್ಪ, ಈ ಬಗ್ಗೆ ಪರಿಶೀಲಿಸುವ ಭರವಸೆ ನೀಡಿದರು. ಹಿಂದುಳಿದ ವರ್ಗಗಳಿಗೆ ಇನ್ನಷ್ಟು ಅನುದಾನ ನೀಡುವುದಾಗಿ ತಿಳಿಸಿದರು.

ಇದಕ್ಕೂ ಮುನ್ನ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ 'ಮುಖ್ಯಮಂತ್ರಿ' ಚಂದ್ರು, ‘ಪ್ರವರ್ಗ 2(ಎ) ಪಟ್ಟಿಗೆ ಸೇರ್ಪಡೆ ಮಾಡುವಂತೆ ಪ್ರಬಲ ಸಮುದಾಯಗಳು ಬಲ ಪ್ರದರ್ಶನ ಮಾಡುತ್ತಿವೆ. ಈಗಾಗಲೇ ಈ ಪಟ್ಟಿಯಲ್ಲಿರುವ ಅತಿ ಹಿಂದುಳಿದ ಜಾತಿಗಳು ಮೀಸಲಾತಿ ಪ್ರಯೋಜನ ಪಡೆದುಕೊಳ್ಳಲು ಆಗಿಲ್ಲ. ಹೀಗಿರುವಾಗ ಇನ್ನು ಹೆಚ್ಚಿನ ಜಾತಿಗಳ ಸೇರ್ಪಡೆಯಿಂದ ಈ ಸಣ್ಣಪುಟ್ಟ ಸಮುದಾಯಗಳಿಗೆ ತೊಂದರೆ ಉಂಟಾಗುತ್ತದೆ. ಅತಿ ಹಿಂದುಳಿದ ಜಾತಿಗಳ ಅಸ್ತಿತ್ವ ಮತ್ತು ಅಸ್ಮಿತೆ ಕಾಪಾಡಬೇಕು’ ಎಂದು ಮನವಿ ಮಾಡಿದರು.

ಅಧ್ಯಕ್ಷ ಎಂ.ಸಿ ವೇಣುಗೋಪಾಲ್ ಮಾತನಾಡಿ, ‘ಈ ಪಟ್ಟಿಯಲ್ಲಿರುವ ಸಮುದಾಯಗಳಿಗೆ ರಕ್ಷಣೆ ನೀಡುವ ಅವಶ್ಯಕತೆ ಇದೆ. ಈಗಾಗಲೇ ಸಿದ್ಧಗೊಂಡಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ವರದಿಯನ್ನು ಬಿಡುಗಡೆ ಮಾಡಬೇಕು’ ಎಂದು ಒತ್ತಾಯಿಸಿದರು.

ಅತಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯ ನಿಯೋಗದ ಮನವಿ ಆಲಿಸಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ

24ರಂದು ಸಾರ್ವಜನಿಕ ಸಭೆ

ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕೆ.ಜಯಪ್ರಕಾಶ್ ಹೆಗ್ಡೆ ಅವರನ್ನು ಭೇಟಿ ಮಾಡಿದ ನಿಯೋಗವು ಮನವಿ ಸಲ್ಲಿಸಿತು.

ಜಯಪ್ರಕಾಶ್ ಹೆಗ್ಡೆ ಮಾತನಾಡಿ, ‘ಪ್ರವರ್ಗ 2(ಎ) ಪಟ್ಟಿಗೆ ಬೇರೆ ಸಮುದಾಯ ಸೇರ್ಪಡೆ ಬಗ್ಗೆ ಸಮಗ್ರ ಅಧ್ಯಯನ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸಬೇಕಿದೆ. ಅದರ ಭಾಗವಾಗಿ ಈಗಾಗಲೇ ಈ ಪಟ್ಟಿಯಲ್ಲಿರುವ ಸಮುದಾಯಗಳ ಅಭಿಪ್ರಾಯ ಸಂಗ್ರಹಿಸಲು ಮಾ.24ರಂದು ಸಾರ್ವಜನಿಕ ಸಭೆ ಕರೆಯಲಾಗಿದೆ. ಅಲ್ಲಿ ಬರುವ ಅಭಿಪ್ರಾಯಗಳನ್ನು ಸಂಗ್ರಹಿಸಿ, ಅಗತ್ಯ ಇರುವ ಅಧ್ಯಯನ ನಡೆಸಿ ವರದಿ ನೀಡಲಾಗುವುದು’ ಎಂದರು.

ವೇದಿಕೆಯ ಉಪಾಧ್ಯಕ್ಷ ಪಿ.ಆರ್. ರಮೇಶ್, ‘ಈ ಪಟ್ಟಿಯಲ್ಲಿರುವ ಅಸಹಾಯಕ, ಅಸಂಘಟಿತ ಜಾತಿಗಳ ಜೀವನ್ಮರಣದ ಪ್ರಶ್ನೆ ಇದಾಗಿದೆ. ಸರ್ಕಾರ ಬಲಿಷ್ಠರ ನ್ಯಾಯಬದ್ಧವಲ್ಲದ ಒತ್ತಾಯಕ್ಕೆ ಮಣಿದರೆ ತಬ್ಬಲಿ ಸಮುದಾಯಗಳ ಸಾಮೂಹಿಕ ಆತ್ಮಹತ್ಯೆಗೆ ಪ್ರೇರಣೆಯಾಗುತ್ತದೆ. 102 ಜಾತಿಗಳೂ ಒಟ್ಟಾಗಿ ಹೋರಾಟಕ್ಕೆ ಇಳಿಯುವುದು ಅನಿವಾರ್ಯವಾಗಲಿದೆ’ ಎಂದರು.

‘ಕೈ’ಪಟ್ಟು: ಸರ್ಕಾರಕ್ಕೆ ಇಕ್ಕಟ್ಟು

ಒಂದನೇ ಪುಟದಿಂದ

ಆಗ ಮಧ್ಯ ಪ್ರವೇಶಿಸಿದ ಸಚಿವ ಗೋವಿಂದ ಕಾರಜೋಳ, ‘ಅನೈತಿಕ ಎಂಬ ಪದ ಬಳಸಿದ್ದು ಸರಿಯಲ್ಲ. ವಾಪಸ್ ಪಡೆಯಿರಿ’ ಎಂದರು. ‘ಲಿಖಿತ ಉತ್ತರ ನಿಮಗೆ ಕಳುಹಿಸಿದ್ದಾರೆ. ನೀವು ಬೇಕಿದ್ದರೆ ಪಡೆಯಿರಿ. ಹೀಗೆ ಹೇಳುವುದು ಸರಿಯಲ್ಲ’ ಎಂದು ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಸೂಚಿಸಿದರು.

‘ತಮ್ಮ ವಿರುದ್ಧದ ಯಾವುದೇ ವಿಡಿಯೊ, ಮಾನಹಾನಿಕರ ಸುದ್ದಿ ಪ್ರಕಟಿಸಬಾರದು ಎಂದು ಕೋರ್ಟ್‌ಗೆ ಹೋಗಿದ್ದು ನೀವಲ್ಲವೇ? ನಿಮ್ಮದು ಏನಾದರೂ ಇರಬೇಕಲ್ಲ. ಅನೈತಿಕ ಅಲ್ಲದೇ ಇನ್ನೇನು’ ಎಂದು ಪುಟ್ಟರಂಗ ಶೆಟ್ಟಿ ಪ್ರಶ್ನಿಸಿದರು.

ಆ ವೇಳೆ ನಾರಾಯಣಗೌಡ, ‘ನಾನು ಯಾರ ಆಸ್ತಿ ಹೊಡೆದಿಲ್ಲ. ಯಾವುದೇ ತಪ್ಪು ಮಾಡಿಲ್ಲ. ನನ್ನ ನೈತಿಕತೆ ಬಗ್ಗೆ ಪ್ರಶ್ನಿಸಲು ನಿಮಗೇನು ಅಧಿಕಾರವಿದೆ. ವಾಪಸ್ ತೆಗೆದುಕೊಳ್ಳಿ; ಇಲ್ಲ ಕ್ಷಮೆಯಾಚಿಸಿ. ಆ ಪದವನ್ನು ಕಡತದಿಂದ ತೆಗೆದು ಹಾಕಬೇಕು’ ಎಂದು ಪಟ್ಟು ಹಿಡಿದರು. ಇದಕ್ಕೆ ಸಚಿವರಾದ ಎಸ್.ಟಿ. ಸೋಮಶೇಖರ್, ಶಿವರಾಂ ಹೆಬ್ಬಾರ್ ದನಿಗೂಡಿಸಿದರು.

‘ನೀವು ತಪ್ಪು ಮಾಡಿಲ್ಲವೆಂದರೆ ಕೋರ್ಟ್‌ಗೆ ಹೋಗಿದ್ದೇಕೆ? ಅಷ್ಟಕ್ಕೂ ಪುಟ್ಟರಂಗ ಶೆಟ್ಟಿಯವರು ಅಸಂಸದೀಯ ಪದ ಬಳಸಿಲ್ಲವಲ್ಲ’ ಎಂದು ಕಾಂಗ್ರೆಸ್‌ನ ಪಿ.ಟಿ. ಪರಮೇಶ್ವರ ನಾಯ್ಕ್ ಕುಟುಕಿದರು.

ಮಧ್ಯಪ್ರವೇಶಿಸಿದ ಸಣ್ಣ ನೀರಾವರಿ ಸಚಿವ ಜೆ.ಸಿ. ಮಾಧುಸ್ವಾಮಿ, ‘ನೈತಿಕತೆ ಎಂಬುದು ಇದ್ದರೆ ನೀವು ಇಲ್ಲಿ ಬರುವ ಅಗತ್ಯವೇ ಇರಲಿಲ್ಲ’ ಎಂದು ಪುಟ್ಟರಂಗ ಶೆಟ್ಟಿ (ಪುಟ್ಟರಂಗ ಶೆಟ್ಟರು ಸಚಿವರಾಗಿದ್ದ ವೇಳೆ, ವಿಧಾನಸೌಧದ ಕಚೇರಿಯಲ್ಲೇ ಆಪ್ತ ಸಹಾಯಕ ₹22 ಲಕ್ಷ ಲಂಚ ಪಡೆದಿದ್ದಾರೆ ಎಂಬ ಆರೋಪ ಎದುರಾಗಿತ್ತು) ಅವರನ್ನು ಉದ್ದೇಶಿಸಿ ಹೇಳಿದರು. ಈ ಮಾತಿನಿಂದ ಶೆಟ್ಟಿ ಸುಮ್ಮನೆ ಕುಳಿತರು.

ಪರಿಷತ್‌ನಲ್ಲೂ ಗದ್ದಲ: ವಿಧಾನ ಪರಿಷತ್ತಿನಲ್ಲಿ ಕಾಂಗ್ರೆಸ್ ಸದಸ್ಯರಾದ ಆರ್. ಪ್ರಸನ್ನಕುಮಾರ್ ಅವರು ನಗರ ಪ್ರದೇಶದಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ಕಟ್ಟಡಗಳು ಹಾಗೂ ಬಸವರಾಜ್ ಪಾಟೀಲ್ ಇಟಗಿ ಅವರು ರಾಯಚೂರು ನಗರದ ಕುಡಿಯುವ ನೀರಿನ ಸಮಸ್ಯೆ ಕುರಿತು ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಅವರಿಗೆ ಪ್ರಶ್ನೆ ಕೇಳಬೇಕಿತ್ತು. ಇಬ್ಬರೂ ಪ್ರಶ್ನೆ ಕೇಳುವುದನ್ನು ಬಹಿಷ್ಕರಿಸಿರುವುದಾಗಿ ಹೇಳಿದರು.

‘ಯುವತಿಗೆ ₹5 ಕೋಟಿ ಕೊಟ್ಟಿದ್ದಾರೆ’

ಒಂದನೇ ಪುಟದಿಂದ

‘ಯಶವಂತಪುರ ಪೊಲೀಸ್ ಠಾಣೆ ಅಕ್ಕಪಕ್ಕದಲ್ಲಿ ನಾಲ್ಕನೇ ಮಹಡಿ ಹಾಗೂ ಒರಾಯನ್ ಮಾಲ್ ಅಕ್ಕಪಕ್ಕದಲ್ಲಿ ಐದನೇ ಮಹಡಿಯಲ್ಲಿ ಈ ಷಡ್ಯಂತ್ರ ನಡೆದಿದೆ. ಯಾರು ಷಡ್ಯಂತ್ರ ಮಾಡಿದ್ಧಾರೆ ಎಂದೂ ಗೊತ್ತು. ಆದರೆ, ನಾನು ಈಗ ಹೇಳುವುದಿಲ್ಲ. ನನಗೆ ರಾಜಕಾರಣ ಬೇಕಿಲ್ಲ, ಕುಟುಂಬದ ಗೌರವ ಮುಖ್ಯ. ನನ್ನ ಕುಟುಂಬದ ಮರ್ಯಾದೆ ವಾಪಸ್ ಬರಬೇಕು. ಬಾಲಚಂದ್ರ ಜಾರಕಿಹೊಳಿ ಹೇಳಿದಂತೆ ಈ ಷಡ್ಯಂತ್ರದಲ್ಲಿ 2 + 3 + 4 ರ ಕೈವಾಡವಿದೆ’ ಎಂದರು.

‘ಆ ಯುವತಿಗೆ ಅಪಾರ ಪ್ರಮಾಣದ ದುಡ್ಡಿನ ಜತೆಗೆ ವಿದೇಶದಲ್ಲಿ ಎರಡು ಫ್ಲ್ಯಾಟ್ ಕೂಡ ಕೊಟ್ಟಿದ್ದಾರೆ ಎಂಬ ಮಾಹಿತಿ ಇದೆ. ಇದರ ವಿರುದ್ಧ ನಾನೇಕೆ ದೂರು ನೀಡುವುದಕ್ಕೆ ಹೋಗಲಿ. ಆರೋಪವನ್ನು ನಾನು ಧೈರ್ಯವಾಗಿ ಎದುರಿಸುತ್ತೇನೆ’ ಎಂದು ಹೇಳಿದರು. ‘ಸಿ.ಡಿ ಬಗ್ಗೆ ನಾಲ್ಕು ತಿಂಗಳ ಮೊದಲೇ ತಿಳಿದಿತ್ತು. ಸಿ.ಡಿ ಬಿಡುಗಡೆಗೂ 26 ಗಂಟೆ ಮೊದಲೇ ಆ ಬಗ್ಗೆ ಹೈಕಮಾಂಡ್‌ನಿಂದ ಮಾಹಿತಿ ಬಂದಿತ್ತು. ಧೈರ್ಯದಿಂದ ಇರು ಎಂದೂ ಹೇಳಿತ್ತು. ಯಾವುದಕ್ಕೂ ಹೆದರದೆ ಸಭೆ ಮುಗಿಸಿ ಅಂದು ಮನೆಗೆ ಬಂದಿದ್ದೆ’ ಎಂದು ತಿಳಿಸಿದರು.

‘ಇಂಥ ಹತ್ತು ದೂರು ಕೊಟ್ಟರೂ ಎದುರಿಸುತ್ತೇನೆ. ನನ್ನನ್ನು ರಣರಂಗದಲ್ಲಿ ಎದುರಿಸಲು ಇವರಿಗೆ ಸಾಧ್ಯವಿಲ್ಲ. ಸಾವಿರಾರು ಕೋಟಿ ಖರ್ಚು ಮಾಡಿದರೂ ನನ್ನ ವಿರುದ್ಧ ಗೆಲ್ಲಲು ಆಗುವುದಿಲ್ಲ. ಹೀಗಾಗಿ, ಈ ರೀತಿ ಪಿತೂರಿ ಮಾಡಿದ್ದಾರೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಮುಂಬೈಗೆ ಕರೆದೊಯ್ದವರೇ ಸಿ.ಡಿ ಮಾಡಿದ್ರಾ?’

ಒಂದನೇ ಪುಟದಿಂದ

‘ಈ ಘಟನೆಯಿಂದ ನೊಂದುಕೊಂಡ ಆಕೆಯ ಕುಟುಂಬವನ್ನು ಸಂತ್ರಸ್ತರು ಎನ್ನಬೇಕೋ? ಯುವತಿಯನ್ನೇ ಸಂತ್ರಸ್ತೆ ಎನ್ನಬೇಕೋ? ಸಿ.ಡಿ ನಕಲಿ ಎಂದು ರಮೇಶ ಜಾರಕಿಹೊಳಿ ಹೇಳಿದ್ದಾರೆ. ಅವರನ್ನು, ಅವರ ಸಹೋದರರು, ಪತ್ನಿ ಮತ್ತು ಕುಟುಂಬದ ಸದಸ್ಯರನ್ನು ಸಂತ್ರಸ್ತರು ಎನ್ನಬೇಕೋ’ ಎಂದು ಕೇಳಿದರು.

ಸಲಹೆ ಕೊಟ್ಟವರಾರು?: ‘ಆರು ಮೇಧಾವಿ ಸಚಿವರು ತಮ್ಮ ಸಿ.ಡಿ ಬಿಡುಗಡೆ ಮಾಡದಂತೆ ನ್ಯಾಯಾಲಯದಿಂದ ತಾತ್ಕಾಲಿಕ ತಡೆಯಾಜ್ಞೆ ತಂದಿದ್ದಾರೆ. ಈ ಸಲಹೆ ಕೊಟ್ಟವರು ಯಾರು ಎಂಬುದು ಪ್ರಶ್ನೆ. ಸಚಿವರಿಗೆ ಸ್ವಯಂ ಆತ್ಮವಿಶ್ವಾಸ ಇದ್ದಿದ್ದರೆ ತಡೆ ತರುವ ಪ್ರಶ್ನೆ ಏಕೆ ಉದ್ಭವಿಸುತ್ತಿತ್ತು’ ಎಂದು ಕುಮಾರಸ್ವಾಮಿ ಪ್ರಶ್ನಿಸಿದರು. ‘ಇವೆಲ್ಲವೂ ವ್ಯಕ್ತಿಯ ಖಾಸಗಿ ಬದುಕಿನ ಹವ್ಯಾಸಕ್ಕೆ ಸಂಬಂಧಿಸಿದ ವಿಷಯಗಳು. ನಾಲ್ಕು ಗೋಡೆಗಳ ಮಧ್ಯೆ ನಡೆಯುವ ಸಂಗತಿಯನ್ನು ರೆಕಾರ್ಡ್ ಮಾಡಿ ರಾಜಕೀಯಕ್ಕೆ ಬಳಸುವ ಕೆಲಸವನ್ನು ನಮ್ಮ ಕುಟುಂಬ ಎಂದೂ ಮಾಡಿಲ್ಲ. ನಾನು ಕೂಡ ಒಮ್ಮೆ ತಪ್ಪು ಮಾಡಿದ್ದೆ. ವಿಧಾನಸಭೆಯಲ್ಲೇ ಅದನ್ನು ಒಪ್ಪಿಕೊಂಡಿದ್ದೇನೆ. ತಿದ್ದಿಕೊಂಡು ನಡೆಯುವುದು ಮುಖ್ಯ’ ಎಂದರು.

> **ಎಚ್.ಡಿ. ಕುಮಾರಸ್ವಾಮಿ, ರೇವಣ್ಣ ನನ್ನ ಪರ ಮಾತನಾಡಿದ್ದರು. ಯಡಿಯೂರಪ್ಪ ಅವರು ಧೈರ್ಯ ತುಂಬಿದರು. ನನ್ನ ಮನೋಬಲ ಹೆಚ್ಚಿಸಿದ ಕುಮಾರಸ್ವಾಮಿಗೆ ಕೃತಜ್ಞತೆಗಳು**
> **ರಮೇಶ ಜಾರಕಿಹೊಳಿ,** ಬಿಜೆಪಿ ಶಾಸಕ

> **ರಮೇಶ ಜಾರಕಿಹೊಳಿ ಪ್ರಕರಣ ಕುರಿತು ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಈ ಬಗ್ಗೆ ಬುಕ್ ಆಫ್ ಲಾ ಪ್ರಕಾರ ತನಿಖೆ ನಡೆಸಲಾಗುವುದು**
> **ಬಸವರಾಜ ಬೊಮ್ಮಾಯಿ**
> ಗೃಹ ಸಚಿವ

ದಿನೇಶ್ ಕಲ್ಲಹಳ್ಳಿ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಮೇಶ್ ಜಾರಕಿಹೊಳಿ ಅವರಿಗೆ ಸಂಬಂಧಪಟ್ಟಿದ್ದು ಎನ್ನಲಾದ ಸಿ.ಡಿ. ಪ್ರಕರಣದ ದೂರುದಾರ ದಿನೇಶ್ ಕಲ್ಲಹಳ್ಳಿ, ಕಬ್ಬನ್ ಪಾರ್ಕ್ ಠಾಣೆ ಪೊಲೀಸರ ಎದುರು ಮಂಗಳವಾರ ರಾತ್ರಿ ಹಾಜರಾಗಿ ವಿಚಾರಣೆ ಎದುರಿಸಿದರು.

ಸಿ.ಡಿ. ಪ್ರಕರಣ ಸಂಬಂಧ ಮಾ. 2ರಂದು ದೂರು ನೀಡಿದ್ದ ನಾಗರಿಕ ಹಕ್ಕು ಹೋರಾಟ ಸಮಿತಿ ಅಧ್ಯಕ್ಷ ದಿನೇಶ್, ಇದೀಗ ದೂರು ಹಿಪಡೆಯುವುದಾಗಿ ಕಬ್ಬನ್ ಪಾರ್ಕ್ ಠಾಣೆ ಇನ್‌ಸ್ಪೆಕ್ಟರ್ ಅವರಿಗೆ ಐದು ಪುಟಗಳ ಪತ್ರ ನೀಡಿದ್ದಾರೆ.

ಪತ್ರಕ್ಕೆ ಉತ್ತರಿಸಿರುವ ಪೊಲೀಸರು, ‘ದೂರು ಹಿಂಪಡೆಯಲು ಸದ್ಯಕ್ಕೆ ಅವಕಾಶವಿಲ್ಲ. ದೂರಿನ ಬಗ್ಗೆ ಕೆಲ ಮಾಹಿತಿಗಳನ್ನು ಕಲೆಹಾಕಲು ತಮ್ಮ ವಿಚಾರಣೆ ಅಗತ್ಯವಿದೆ. ಹೀಗಾಗಿ, ಠಾಣೆಗೆ ಬನ್ನಿ’ ಎಂದಿದ್ದರು. ತಮ್ಮ ವಕೀಲರ ಜೊತೆ ದಿಢೀರ್‌ನೇ ಠಾಣೆಗೆ ಬಂದ ದಿನೇಶ್, ಕೆಲ ಗಂಟೆಗಳವರೆಗೆ ಪೊಲೀಸರ ವಿಚಾರಣೆ ಎದುರಿಸಿ ವಾಪಸು ಹೋದರು.

‘ದೂರು ಹಿಂಪಡೆಯಲು ಸಾಧ್ಯವಿಲ್ಲ. ನಿಮ್ಮ ವಿರುದ್ಧವೂ ದೂರುಗಳು ಬಂದಿವೆ. ಎಲ್ಲ ದೂರಿನ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದೆ’ ಎಂಬುದಾಗಿ ಪೊಲೀಸರು, ದಿನೇಶ್‌ಗೆ ಹೇಳಿ ಕಳಹಿಸಿರುವುದಾಗಿ ಗೊತ್ತಾಗಿದೆ.

‘ಲೈಂಗಿಕ ದೌರ್ಜನ್ಯ ಹಾಗೂ ಜೀವ ಬೆದರಿಕೆ ಆರೋಪದಡಿ ದಿನೇಶ್ ದೂರು ಸಲ್ಲಿಸಿದ್ದಾರೆ. ಅದನ್ನು ಸ್ವೀಕರಿಸಿ ಪ್ರಾಥಮಿಕ ತನಿಖೆ ಆರಂಭಿಸಲಾಗಿದ್ದು, ಕೆಲ ಮಾಹಿತಿಗಳನ್ನು ಈಗಾಗಲೇ ಕಲೆ ಹಾಕಲಾಗಿದೆ. ಈ ಅವಧಿಯಲ್ಲಿ ಏಕಾಏಕಿ ದೂರು ಹಿಂಪಡೆಯಲು ಅವಕಾಶವಿಲ್ಲ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ವರ್ಷವಾದರೂ ಕುಟುಂಬದ ಕೈ ಸೇರಿಲ್ಲ ಪಾಸಿಟಿವ್ ವರದಿ!

ಒಂದನೇ ಪುಟದಿಂದ

ವರ್ಷದ ಹಿಂದಿನ ಕಹಿ ನೆನಪುಗಳನ್ನು ‘ಪ್ರಜಾವಾಣಿ’ ಜತೆಗೆ ಹಂಚಿಕೊಂಡ ಮೊಹಮದ್ ಹುಸೇನ್ ಸಿದ್ದಿಕಿ ಅವರ ಪುತ್ರ ಹೈಮದ್ ಫೈಜಲ್, ‘ತಂದೆಗೆ ಕೊರೊನಾ ತಗುಲಿದ್ದು ನಿಜವೇ ಇರಬಹುದು. ಅವರ ಸಾವು ಕೋವಿಡ್‌ನಿಂದ ಸಂಭವಿಸಿಲ್ಲ. ಸರಿಯಾದ ಸಮಯಕ್ಕೆ ಚಿಕಿತ್ಸೆ ಸಿಗದೆ ಮೃತಪಟ್ಟರು ಎಂಬುದು ನನ್ನ ನಂಬಿಕೆ. ಈ ಬಗ್ಗೆ ನಿಖರ ವರದಿ ನೀಡಿ ಎಂದು ಜಿಲ್ಲಾಡಳಿತಕ್ಕೆ ಸಾಕಷ್ಟು ಬಾರಿ ಮನವಿ ಮಾಡಿದ್ದೇನೆ. ಇದೂವರೆಗೂ ನೀಡಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

‘ತಂದೆ ತೀರಿಕೊಂಡ ಬಳಿಕ ಆರು ತಿಂಗಳವರೆಗೆ ನಮ್ಮ ಕುಟುಂಬ ಬಹಳ ಸಂಕಷ್ಟ ಎದುರಿಸಬೇಕಾಯಿತು. ಸ್ನೇಹಿತರು, ಬಂಧುಗಳು, ಪರಿಚಯದವರೂ ದೂರವಾದರು. ದಿನಸಿ ಅಂಗಡಿಯವರು ಕೂಡ ಸಾಮಗ್ರಿ ಕೊಡಲಿಲ್ಲ. ನಮ್ಮನ್ನು ನೋಡಿದರೆ ಸಾಕು; ಬಾಗಿಲು ಹಾಕಿಕೊಳ್ಳುತ್ತಿದ್ದರು. ಆದರೂ ಎಲ್ಲವನ್ನೂ ಸಹಿಸಿಕೊಂಡೆವು. ಸರ್ಕಾರದ ನಿಯಮಗಳನ್ನು ಚಾಚೂ ತಪ್ಪದೇ ಪಾಲಿಸಿದೆವು. ಮಕ್ಕಳು, ಮಹಿಳೆಯರು, ಪುರುಷರು ಮೂರು ತಿಂಗಳು ಮನೆಯಲ್ಲೇ ಬಂದಿಯಾದೆವು’ ಎಂದು ನೊಂದು ನುಡಿದರು.

ಅರ್ಜಿ ಕೊಡಲಿ: ‘ಕೋವಿಡ್‌ನಿಂದ ಸಾವು ಸಂಭವಿಸಿದ ವೇಳೆಯೇ ಕುಟುಂಬದವರಿಗೆ ಅದರ ವರದಿ ನೀಡಲಾಗಿರುತ್ತದೆ. ಸಿದ್ದಿಕಿ ಅವರು ಹೈದರಾಬಾದ್‌ನ ಆಸ್ಪತ್ರೆಯಲ್ಲಿ ಮೃತಪಟ್ಟರು. ಅವರ ಕೋವಿಡ್ ವರದಿ ಮಾರನೇ ದಿನ ಬಂದಿದೆ. ಹಾಗಾಗಿ, ಅವರಿಗೆ ವರದಿ ಸಿಕ್ಕಿರಲಿಕ್ಕಿಲ್ಲ. ಸಿದ್ದಿಕಿ ಅವರ ಎಸ್‌ಆರ್‌ಎಫ್ ಸಂಖ್ಯೆ ಸಮೇತ ಅರ್ಜಿ ಕೊಟ್ಟರೆ ಲಿಖಿತ ವರದಿ ನೀಡುತ್ತೇವೆ’ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ರಾಜಶೇಖರ ಮಾಲಿ ಪ್ರತಿಕ್ರಿಯಿಸಿದರು.

ಶಿವಮೊಗ್ಗ ವಿಮಾನ ನಿಲ್ದಾಣ ಸ್ಥಳದಲ್ಲಿ ಸ್ಫೋಟಕ ಪತ್ತೆ

ಒಂದನೇ ಪುಟದಿಂದ

ಅಲ್ಲಿಯೇ ಇರುವ ಬಂಡೆ ಸ್ಫೋಟಿಸಿ ಕಾಮಗಾರಿಗೆ ಜಲ್ಲಿ ಬಳಕೆ ಮಾಡಲು ಜಿಲ್ಲಾಧಿಕಾರಿ ಅನುಮತಿ ನೀಡಿದ್ದರು. ಸ್ಫೋಟಕ ಪೂರೈಕೆ ಮಾಡುವಂತೆ ಚಿಕ್ಕಬಳ್ಳಾಪುರದ ಸ್ಫೋಟಕ ಪೂರೈಕೆ ಕಂಪನಿ ಜತೆ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಕಂಪನಿ ಮಾಲೀಕರು ಸ್ಫೋಟಕಗಳನ್ನು ಸೋಮವಾರ ಕಳುಹಿಸಿ ಕೊಟ್ಟಿದ್ದರು. ಸ್ಫೋಟಕ ಪರಿಣತರು ಮಂಗಳೂರಿನಿಂದ ಬಾರದ್ದರಿಂದ ಸಾಮಗ್ರಿ ತುಂಬಿದ್ದ ವಾಹನಗಳನ್ನು ಅಲ್ಲೇ ಬಿಟ್ಟು ತೆರಳಿದ್ದರು ಎನ್ನಲಾಗಿದೆ. ನಿರ್ಲಕ್ಷ್ಯ ತೋರಿದ ಸ್ಫೋಟಕ ಕಂಪನಿ ಮಾಲೀಕರ ವಿರುದ್ಧ ಪ್ರಕರಣ ದಾಖಲಾಗಿದೆ.

‘ಈ ಹಿಂದೆ ಎಂಬಿಯು ಮಾಡಿಕೊಂಡಿದ್ದವರು ಸ್ಫೋಟಕಗಳನ್ನು ಉಳಿಸಿದ್ದರು. ಹೊಸದಾಗಿ ಎಂಒಯು ಮಾಡಿಕೊಂಡಿದ್ದವರು ಉಳಿದ ಸಾಮಗ್ರಿಯನ್ನು ಬಳಕೆ ಮಾಡಲು ಬರುವುದಿಲ್ಲ. ಹೀಗಾಗಿ ಬಳಕೆಯಾಗದೇ ಉಳಿದಿದ್ದ ಸ್ಫೋಟಕಗಳನ್ನು ವಶಕ್ಕೆ ಪಡೆಯಲಾಗಿದೆ. ಇದು ಅಕ್ರಮ ಸ್ಫೋಟಕವಲ್ಲ’ ಎಂದು ಜಿಲ್ಲಾಧಿಕಾರಿ ಕೆ.ಬಿ.ಶಿವಕುಮಾರ್ ತಿಳಿಸಿದ್ದಾರೆ.

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ, ವಿಭಾಗ ಕಲಬುರಗಿ
ದೂರವಾಣಿ : 08472 –220196, www.midnglb@rediffmail.com.
ಐಎಫ್‌ಟಿ. ನಂ: ಇಇ/ಸನೀಅಅಇವಿ/ಕ/ಯೋಶಾ-1/ಕೆ.ಡಬ್ಲ್ಯೂ–3/2020–21/942 ದಿನಾಂಕ: 08–03–2021
ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ–3)
1) ಕಾಮಗಾರಿ ವಿವರ : ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ ಕಾರ್ಯಾಲಯದಿಂದ ಅರ್ಹ ಗುತ್ತಿಗೆದಾರರಿಂದ 4702 ಕೆರೆಗಳ ಆಧುನೀಕರಣ – ಪ್ರಧಾನ ಕಾಮಗಾರಿಗಳು (FLOOD DAMAGE – 2020-21) ಕಾಮಗಾರಿಯನ್ನು ಇ-ಟೆಂಡರ ಮುಖಾಂತರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ : ರೂ. 62,45,874.92. 3) ಗುತ್ತಿಗೆದಾರರ ಅರ್ಹತೆ ವಿವರ : 1ನೇ ದರ್ಜೆ. 4) ಟೆಂಡರ್ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ : 16–03–2021 ಬೆಳಿಗ್ಗೆ 11.00 ಗಂಟೆಯ ವರೆಗೆ, 5) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ : 17–03–2021 ಸಾಯಂಕಾಲ 4.00 ಗಂಟೆಯ ವರೆಗೆ. 6) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 18–03–2021 ಸಾಯಂಕಾಲ 5.00 ಗಂಟೆಗೆ. 7) ಆರ್ಥಿಕ ಬಿಡ್ ತೆರೆಯುವ ದಿನಾಂಕ: 20–03–2021 ಸಾಯಂಕಾಲ 11.00 ಗಂಟೆಗೆ. 8) ಹೆಚ್ಚಿನ ವಿವರಗಳಿಗೆ : ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ. 9)ಅಂತರಜಾಲ ತಾಣದ ವಿಳಾಸ : www.e-proc.karnataka.gov.in
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ವಾ.ಸಾ.ಸಂ.ಇ/ಕಲಬುರಗಿ/1062/ಎಂ.ಸಿ.&ಎ/2020–21 ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕಲಬುರಗಿ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560 001. ಫೋನ್ : 080–22265383
website: www.kiadb.in
ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–45/13618/2020–21 ದಿನಾಂಕ: 09.03.2021
ಟೆಂಡರ್ ಮುಂದೂಡುವ ಪ್ರಕಟಣೆ
ಈ ಮೇಲಿನ ಟೆಂಡರ್ ಅಧಿಸೂಚನೆಯಲ್ಲಿ ತಿಳಿಸಿರುವ ಈ ಕೆಳಕಂಡ ಕಾಮಗಾರಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ ವಿಸ್ತರಿಸಲಾಗಿದೆ. ಕಾಮಗಾರಿಯ ಹೆಸರು: (1) ಉತ್ತರ ಕನ್ನಡ ಜಿಲ್ಲೆ, ಕಾರವಾರ ತಾಲ್ಲೂಕು, ಮುಡಗೇರಿ ಗ್ರಾಮದಲ್ಲಿ ನೌಕಾ ಅಲೈಡ್ ಕೈಗಾರಿಕಾ ಪಾರ್ಕ್‌ಗಾಗಿ 18ಮೀ ಮತ್ತು 15ಮೀ ಅಗಲದ ಡಾಂಬರೀಕರಣ ರಸ್ತೆ, ಆರ್.ಸಿ.ಸಿ ಚರಂಡಿ, ಕಲ್ವರ್ಟ್ಸ್ ಮತ್ತು ನೀರು ಸರಬರಾಜು ನಿರ್ಮಾಣದ ಕಾಮಗಾರಿ. (2) ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ದಾಬಸ್‌ಪೇಟೆ 5ನೇ ಹಂತ ಕೈಗಾರಿಕಾ ಪ್ರದೇಶದ ಬ್ಲಾಕ್–1 ರಲ್ಲಿ 30ಮೀ ಅಗಲ ಮತ್ತು 18ಮೀ ಅಗಲದ ಹಾಲಿ ಗ್ರಾಮದ ಡಾಂಬರೀಕರಣ ರಸ್ತೆ, ಆರ್.ಸಿ.ಸಿ ಚರಂಡಿ, ಕಲ್ವರ್ಟ್ಸ್ ಮತ್ತು ಹೆಚ್.ಡಿ.ಪಿ.ಇ. ನೀರು ಸರಬರಾಜು ಕೊಳವೆ ಮಾರ್ಗದ ನಿರ್ಮಾಣದೊಂದಿಗೆ ಹೊಸ ಬಡಾವಣೆ ರಚಿಸುವ ಕಾಮಗಾರಿ.
ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 26.03.2021, ಸಂಜೆ 4.00 ಗಂಟೆವರೆಗೆ.
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು
DIPR/DDU/Zen/R.O:3068/2020-21
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಅಂತರರಾಷ್ಟ್ರೀಯ ಮಹಿಳಾ ದಿನ

ರಾಜ್ಯ ಮಟ್ಟದ ಪ್ರಶಸ್ತಿ ಪ್ರದಾನ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ನೀಡಲಾಗುವ ರಾಜ್ಯಮಟ್ಟದ ವಿವಿಧ ಪ್ರಶಸ್ತಿಗಳ ಪ್ರದಾನ ಸಮಾರಂಭ ಬುಧವಾರ ನಡೆಯಲಿದೆ. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಮಹಿಳೆಯರು, ಮಕ್ಕಳು, ಸಂಘ ಸಂಸ್ಥೆಗಳು ಮತ್ತು ಸ್ತ್ರೀ ಶಕ್ತಿ ಗುಂಪುಗಳಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಶಶಿಕಲಾ ಜೊಲ್ಲೆ ತಿಳಿಸಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ‘ಸೋಮವಾರ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ. ಆದರೆ, ಅದೇ ದಿನ ರಾಜ್ಯ ಬಜೆಟ್ ಮಂಡನೆ ಇತ್ತು. ಈ ಕಾರಣದಿಂದ ಬುಧವಾರ ಸಮಾರಂಭ ನಡೆಸಲು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸಮಯ ನೀಡಿದ್ದಾರೆ. ಅರಮನೆ ಮೈದಾನದ ಪ್ರಿನ್ಸ್ ಗಾಲ್ಫ್ ಸಭಾಂಗಣದಲ್ಲಿ ಬುಧವಾರ ಬೆಳಿಗ್ಗೆ 10 ಗಂಟೆಗೆ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು’ ಎಂದರು.

ವಿವಿಧ ವಿಭಾಗಗಳಲ್ಲಿ ಪ್ರಶಸ್ತಿಗೆ ಆಯ್ಕೆಯಾಗಿರುವ ಮಹಿಳೆಯರು, ಮಕ್ಕಳು, ಸಂಘ ಸಂಸ್ಥೆಗಳು ಮತ್ತು ಸ್ತ್ರೀ ಶಕ್ತಿ ಗುಂಪುಗಳ ವಿವರವನ್ನು ಸಚಿವರು ಪ್ರಕಟಿಸಿದರು.

ಶಶಿಕಲಾ ಜೊಲ್ಲೆ

ಮಹಿಳೆಯರ ಅಭಿವೃದ್ಧಿಗಾಗಿ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆ (₹ 50,000): ಶಾರದಾ ಮಹಿಳಾ ಮಂಡಲ, ಕಾರ್ಕಳ, ಉಡುಪಿ ಜಿಲ್ಲೆ; ಕೀರ್ತಿ ಯುವತಿ ಮಹಿಳಾ ಮಂಡಳಿ, ಮಂಚೇಗೌಡನಕೊಪ್ಪಲು, ಮೈಸೂರು; ಈರಮ್ಮ ಮಹಿಳಾ ಸ್ತ್ರೀ ಶಕ್ತಿ ಸಂಘ, ಗುಡಿಮಠ, ಸಿಂದಗಿ ತಾಲ್ಲೂಕು, ವಿಜಯಪುರ ಜಿಲ್ಲೆ, ಸೋಷಿಯಲ್ ಆ್ಯಕ್ಷನ್ ಫಾರ್ ರೂರಲ್ ಡೆವಲಪ್‌ಮೆಂಟ್ ಅಸೋಸಿಯೇಷನ್ (ಸಾರ್ಡ್), ಮುಧೋಳ, ಬಾಗಲಕೋಟೆ ಜಿಲ್ಲೆ ಮತ್ತು ತಲಾಷ್ ಅಸೋಸಿಯೇಷನ್, ಪಾಂಡುರಂಗನಗರ, ಅರಿಕೆರೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು.

ಮಹಿಳೆಯರ ಅಭಿವೃದ್ಧಿಗೆ ಶ್ರಮಿಸಿದವರು (ವೈಯಕ್ತಿಕ– ₹ 25,000): ರಮಿತಾ ಶೈಲೇಂದ್ರ ರಾವ್, ಗುದೆಲ್ ಬಾಕರ್ ಪೆರ್ವಾಜೆ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ; ಕೆ.ಎನ್. ವಾಣಿ, ಮದ್ದೂರು, ಮಂಡ್ಯ ಜಿಲ್ಲೆ; ಎಂ. ರೇಣುಕಾ, ಗುಂಡ್ಲಹಳ್ಳಿ ಗ್ರಾಮ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ; ಡಾ.ಕರುಣಾ ವೀರ, ವಿಜಯನಗರ, ಬೆಂಗಳೂರು; ಭಾಗ್ಯಮ್ಮ, ಚಿಕ್ಕಬಾಣಾವರ, ಬೆಂಗಳೂರು; ಗೀತಾ ಚಂದ್ರಶೇಖರ್ ಚೌಧರಿ, ವಿಜಯಪುರ, ಲಕ್ಷ್ಮೀದೇವಿ ಗುಡ್ಲಾನೂರ, ಗಂಗಾವತಿ, ಕೊಪ್ಪಳ ಜಿಲ್ಲೆ ಮತ್ತು ಸುನೀತಾ ಲ. ದಿವಟಿ, ವಿಶ್ವೇಶ್ವರನಗರ, ಹುಬ್ಬಳ್ಳಿ.

ಕಲಾ ಕ್ಷೇತ್ರ (₹25,000): ದೀಕ್ಷಾ ಎಂ. ಶೆಟ್ಟಿ, ಕಾಟಿಪಳ್ಳ, ಮಂಗಳೂರು; ಶಶಿಕಲಾ ಅರುಣಾ ದಾನಿ, ವಿದ್ಯಾನಗರ ಹುಬ್ಬಳ್ಳಿ; ಮಂಜುಳಾ ಮ. ಸಂಬಾಳಮಠ, ಲೋಕಾಪುರ, ಮೂಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ; ಡಾ. ಆರ್. ನೀಲಾಂಬಿಕೆ. ಬನಶಂಕರಿ 7ನೇ ಹಂತ, ಬೆಂಗಳೂರು ಮತ್ತು ಡಾ.ಕೆ. ನಾಗರತ್ನಮ್ಮ, ಮರಿಯಮ್ಮನಹಳ್ಳಿ, ಹೊಸಪೇಟೆ ತಾಲ್ಲೂಕು, ವಿಜಯನಗರ ಜಿಲ್ಲೆ.

ಸಾಹಿತ್ಯ ಕ್ಷೇತ್ರ (₹ 25,000): ಶಿವಲಿಂಗಮ್ಮ ಮಲ್ಲಿಕಾರ್ಜುನ ಕಟ್ಟಿ, ವಿಶ್ವೇಶ್ವರನಗರ, ಹುಬ್ಬಳ್ಳಿ, ಡಾ.ಬಿ. ಸಿ. ಶೈಲಾ ನಾಗರಾಜ್, ವಿಜಯನಗರ, ತುಮಕೂರು ಮತ್ತು ವಿಜಯಲಕ್ಷ್ಮಿ ಶಿವಕುಮಾರ ಕೌಟಗೆ, ಕೈಲಾಶ ನಗರ, ಬೀದರ್.

ಕ್ರೀಡಾ ಕ್ಷೇತ್ರ (₹ 25,000): ಸುಧಾ ಮೃತ್ಯುಂಜಯ ಹಿರೇಮಠ, ರಾಣೆಬೆನ್ನೂರು, ಹಾವೇರಿ ಜಿಲ್ಲೆ.

ಶಿಕ್ಷಣ ಕ್ಷೇತ್ರ (₹25,000): ಡಾ. ಎಸ್. ಛಾಯಾಕುಮಾರಿ, ಪ್ರಾಂಶುಪಾಲರು, ನ್ಯೂ ಮಿಲೇನಿಯಂ ಪಬ್ಲಿಕ್ ಸ್ಕೂಲ್, ಉತ್ತರಹಳ್ಳಿ, ಬೆಂಗಳೂರು.

ವೀರ ಮಹಿಳೆ(₹25,000): ಗೌರಿ ಸಿ. ನಾಯಕ, ಗಣೇಶ ನಗರ, ಶಿರಸಿ, ಉತ್ತರ ಕನ್ನಡ ಜಿಲ್ಲೆ.

ರಾಜ್ಯಮಟ್ಟದ ಅತ್ಯುತ್ತಮ ಸ್ತ್ರೀ ಶಕ್ತಿ ಗುಂಪುಗಳು: ಸಿಂಧುಶ್ರೀ ಸ್ತ್ರೀ ಶಕ್ತಿ ಮಹಿಳಾ ಸ್ವಸಹಾಯ ಸಂಘ, ದಾವಸ್‌ಪೇಟೆ, ನೆಲಮಂಗಲ ತಾಲ್ಲೂಕು, ಬೆಂಗಳೂರು (ಪ್ರಥಮ– ₹ 50,000), ಸೂರ್ಯರಶ್ಮಿ ಸ್ತ್ರೀ ಶಕ್ತಿ ಸ್ವಸಹಾಯ ಸಂಘ, ಆದರ್ಶನಗರ, ಚಿಲಿಂಬಿ, ಮಂಗಳೂರು (ದ್ವಿತೀಯ– ₹ 30,000) ಮತ್ತು ಮಹಾಲಕ್ಷ್ಮಿ ಮಹಿಳಾ ಸ್ವಸಹಾಯ ಸಂಘ , ಆದರ್ಶನಗರ, ಕಲಬುರ್ಗಿ (₹ 20,000).

ಯಶೋಧರಮ್ಮ ದಾಸಪ್ಪ ವಿಭಾಗೀಯ ಮಟ್ಟದ ಪ್ರಶಸ್ತಿ (₹ 25,000): ಬೆಂಗಳೂರು ವಿಭಾಗ– ಸ್ಫೂರ್ತಿ ಸ್ತ್ರೀಶಕ್ತಿ ಸ್ವಸಹಾಯ ಸಂಘ, ಹೊಸೂಡಿ, ಶಿವಮೊಗ್ಗ; ಮೈಸೂರು ವಿಭಾಗ– ಶ್ರೀ ಚಾಮುಂಡೇಶ್ವರಿ, ಸ್ತ್ರೀ ಶಕ್ತಿ ಯೋಜನೆ, ಕೊಡಿಯಾಲ ಬಜಾರ್ ಸ್ಟ್ರೀಟ್, ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ; ಬೆಳಗಾವಿ ವಿಭಾಗ– ಶ್ರೀ ಬನಶ್ರೀ ಸ್ತ್ರೀ ಶಕ್ತಿ ಸ್ವಸಹಾಯ ಸಂಘ, ಬನಶಂಕರಿ, ಬಾದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಮತ್ತು ಕಲಬುರ್ಗಿ ವಿಭಾಗ– ಸಿದ್ಧಮಾತಾ ಸ್ತ್ರೀಶಕ್ತಿ ಗುಂಪು, ತ್ರಿಪುರಾಂತ, ಬಸವಕಲ್ಯಾಣ, ಬೀದರ್ ಜಿಲ್ಲೆ.

ಅತ್ಯುತ್ತಮ ತಾಲ್ಲೂಕು ಒಕ್ಕೂಟ ಪ್ರಶಸ್ತಿ: ಮಧುಗಿರಿ ತಾಲ್ಲೂಕು ಸ್ತ್ರೀಶಕ್ತಿ ಬ್ಲಾಕ್ ಸೊಸೈಟಿ, ತುಮಕೂರು ಜಿಲ್ಲೆ (ಪ್ರಥಮ– ₹ 80,000); ಕುಂದಾಪುರ ತಾಲ್ಲೂಕು ಸ್ತ್ರೀಶಕ್ತಿ ಬ್ಲಾಕ್ ಸೊಸೈಟಿ, ಉಡುಪಿ ಜಿಲ್ಲೆ (ದ್ವಿತೀಯ– ₹ 70,000) ಮತ್ತು ಸ್ಫೂರ್ತಿ ಸ್ವಸಹಾಯ ಸಂಘಗಳ ಬ್ಲಾಕ್ ಸೊಸೈಟಿ, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ (ತೃತೀಯ– ₹ 60,000).

ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿ (₹10,000): ಮಾಸ್ಟರ್ ಆದಿತ್ಯ ಎಂ. ಶಿವಳ್ಳಿ, ಕುಸುಗಲ್ ರಸ್ತೆ, ಹುಬ್ಬಳ್ಳಿ (ಹೊಯ್ಸಳ ಶೌರ್ಯ ಪ್ರಶಸ್ತಿ); ದಿವಂಗತ ಲೆನಿನ್ ಬೋಪಣ್ಣ, ಹೈಸೊಡ್ಲೂರು ಗ್ರಾಮ, ಹುದಿಕೇರಿ, ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ (ಮರಣೋತ್ತರ ಹೊಯ್ಸಳ ಶೌರ್ಯ ಪ್ರಶಸ್ತಿ) ಮತ್ತು ನಮನಾ ಬಿ.ಕೆ., ಚೌಳಿಕೆರೆ, ಬಾರ್ಕೂರು, ಉಡುಪಿ ಜಿಲ್ಲೆ (ಕೆಳದಿ ಚೆನ್ನಮ್ಮ ಪ್ರಶಸ್ತಿ).

ಮಕ್ಕಳ ದಿನಾಚರಣೆ ರಾಜ್ಯ ಪ್ರಶಸ್ತಿ (₹ 25,000): ಡಾ.ರೇಖಾ ರಾಜೇಂದ್ರಕುಮಾರ್, ನಾಗರಭಾವಿ, ಬೆಂಗಳೂರು; ಡಾ.ಪಿ. ಅನಂತಕೃಷ್ಣ ಭಟ್, ಕೊಡಿಯಾಲ್‌ಬೈಲ್, ಮಂಗಳೂರು; ರಾಜುಗೌಡ ಅಪ್ಪಾಸಾಬ್ ಗೌರಾಯಿ, ಪಟ್ಟನಕುಡಿ, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಮತ್ತು ಸತೀಶ್ ಫರ್ನಾಂಡಿಸ್, ವಿಮುಕ್ತಿ ಚಾರಿಟಬಲ್ ಟ್ರಸ್ಟ್, ಪೋತ್ನಾಳ, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ.



ಬೆಂಬಿಡದ ಜಾಹೀರಾತುಗಳು!

ವಿಶ್ವನಾಥ ಎಸ್.

ಡಿಜಿಟಲ್ ಯುಗದಲ್ಲಿ ಆನ್‌ಲೈನ್ ಖರೀದಿಯ ಮೇಲೆ ಜನರು ಹೆಚ್ಚು ಒಲವು ತೋರುತ್ತಿದ್ದಾರೆ. ಡಿಸ್ಕೌಂಟ್ ಕೊಡುಗೆಗಳು, ರಿಯಾಯಿತಿ ದರ, ಕ್ಯಾಷ್‌ಬ್ಯಾಕ್ ಎನ್ನುವ ಮೋಡಿಯ ಜೊತೆ ಜೊತೆಗೆ ಕುಳಿತಲ್ಲಿಯೇ ಎಲ್ಲವನ್ನೂ ಖರೀದಿಸಿ ಬಿಡಬಹುದಾದ ಸೌಲಭ್ಯವು ಎಲ್ಲರನ್ನೂ ತನ್ನತ್ತ ಆಕರ್ಷಿಸಿಕೊಳ್ಳುತ್ತಿದೆ. ಆನ್‌ಲೈನ್ ಖರೀದಿಯಲ್ಲಿ ಮೋಸ ಹೋಗುವುದು ಒಂದೆಡೆಯಾದರೆ, ಆ ರೀತಿ ಖರೀದಿಸುವಾಗ ಇನ್ನಷ್ಟು ಖರೀದಿಸುವಂತೆ ನಮ್ಮನ್ನು ಉತ್ತೇಜಿಸುವ ಜಾಹೀರಾತುಗಳು ಇನ್ನೊಂದೆಡೆ!

ಹೌದು, ಬೆಲೆ, ಕಾರ್ಯಸಾಮರ್ಥ್ಯದ ಆಧಾರದ ಮೇಲೆ ಒಂದು ಸ್ಮಾರ್ಟ್‌ಫೋನ್ ಖರೀದಿಸಲು ಆನ್‌ಲೈನ್‌ನಲ್ಲಿ ಹುಡುಕಾಟ ನಡೆಸಿದಿರಿ ಎಂದುಕೊಳ್ಳಿ. ತಕ್ಷಣವೇ

> ನೀವು ಯಾವೆಲ್ಲಾ ಸಾಮಾಜಿಕ ಜಾಲತಾಣಗಳನ್ನು ಬಳಸುವಿರೋ ಅಲ್ಲೆಲ್ಲಾ ಸ್ಮಾರ್ಟ್‌ಫೋನ್‌ಗಳ ಬಗ್ಗೆ ಜಾಹೀರಾತುಗಳು ಬರಲಾರಂಭಿಸುತ್ತವೆ. ಅವುಗಳಿಂದ ಬಿಡುಗಡೆ ಹೇಗೆ?

ನಿಮಗೆ ಒಂದು ನಿರ್ಧಾರಕ್ಕೆ ಬರಲು ಸಾಧ್ಯವಾಗದಷ್ಟರ ಮಟ್ಟಿಗೆ ಬೇರೆ ಬೇರೆ ಕಂಪನಿಗಳ ಸ್ಮಾರ್ಟ್‌ಫೋನ್‌ಗಳು ಕಾಣಿಸಿಕೊಳ್ಳುತ್ತವೆ. ಇದು ಇಷ್ಟಕ್ಕೆ ನಿಲ್ಲುವುದಿಲ್ಲ. ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಲಿಂಕ್ಡ್‌ಇನ್ - ಹೀಗೆ ನೀವು ಯಾವೆಲ್ಲಾ ಸಾಮಾಜಿಕ ಜಾಲತಾಣಗಳನ್ನು ಬಳಸುವಿರೋ ಅಲ್ಲೆಲ್ಲಾ ಸ್ಮಾರ್ಟ್‌ಫೋನ್‌ಗಳ ಬಗ್ಗೆ ಜಾಹೀರಾತುಗಳು ಬರಲಾರಂಭಿಸುತ್ತವೆ. ವೆಬ್‌ಸೈಟ್‌ಗಳಲ್ಲಿಯೂ ಪಾಪಪ್ ಆಗುತ್ತಿರುತ್ತವೆ. ವೆಬ್‌ಕುಕೀಸ್‌ಗಳು ನಮ್ಮ ಬ್ರೌಸಿಂಗ್ ಹಿಸ್ಟರಿಯನ್ನು ಸಂಗ್ರಹಿಸುತ್ತಾ ಇರುವುದರಿಂದಲೇ ಈ ರೀತಿ ಆಗುತ್ತಿರುತ್ತದೆ.

ಕಂಪನಿಗಳು ನಮಗೆ ಗೊತ್ತಿಲ್ಲದಂತೆಯೇ ನಮ್ಮ ಬ್ರೌಸಿಂಗ್ ಹಿಸ್ಟರಿಯನ್ನು ಇತರರೊಂದಿಗೆ ಹಂಚಿಕೊಳ್ಳುತ್ತಿರುತ್ತವೆ. ಮಾತ್ರವಲ್ಲ, ಇನ್ನಷ್ಟು-ಮತ್ತಷ್ಟು ಖರೀದಿಸುವಂತೆ ಪ್ರೇರೇಪಿಸುವ ತರಹದ ಜಾಹೀರಾತುಗಳು ಬರುತ್ತಲೇ ಇರುತ್ತವೆ. ಆನ್‌ಲೈನ್ ಜಾಹೀರಾತು ಲೋಕ ವೇಗವಾಗಿ ಬೆಳೆಯುತ್ತಿರುವುದು ಹೀಗಾಗಿಯೇ. ಆನ್‌ಲೈನ್‌ನಲ್ಲಿ ಖರೀದಿಸುವಾಗ ನಾವು ನಮ್ಮ ಮೊಬೈಲ್ ನಂಬರ್, ಇ-ಮೇಲ್ ವಿಳಾಸ ನೀಡುತ್ತೇವೆ.

ಇದರಿಂದಾಗಿಯೇ ಜಾಹೀರಾತುಗಳು ನಮ್ಮನ್ನು ಹಿಂಬಾಲಿಸುವಂತಾಗುತ್ತದೆ.

ಇಂತಹ ಜಾಹೀರಾತುಗಳನ್ನು ನಿಯಂತ್ರಿಸಲು ಆ್ಯಡ್ ಬ್ಲಾಕ್ ಪ್ಲಸ್, ಆ್ಯಡ್ ಗಾರ್ಡ್‌ನಂತಹ ಕೆಲವು ಉಚಿತವಾಗಿ ತಂತ್ರಾಂಶಗಳಿವೆ. ಇವುಗಳನ್ನು ಇನ್‌ಸ್ಟಾಲ್ ಮಾಡಿಕೊಂಡ ಬಳಿಕ ಮೊಬೈಲ್ ಸೆಟ್ಟಿಂಗ್ಸ್ ಮೂಲಕ ಸೆಕ್ಯುರಿಟಿ ಆಯ್ಕೆ ಮೇಲೆ ಕ್ಲಿಕ್ ಮಾಡಿ unknown source ಆನ್ ಆಗಿರುವುದನ್ನು ಖಚಿತಪಡಿಸಿಕೊಳ್ಳಿ. ಕ್ರೋಮ್ ಬ್ರೌಸರ್‌ನಲ್ಲಿ ಪಾಪ್ ಆ್ಯಡ್ ಅನ್ನು ತಡೆಯಲು ಸೆಟ್ಟಿಂಗ್ಸ್‌ನಲ್ಲಿ ಸೈಟ್ ಸೆಟ್ಟಿಂಗ್ಸ್ ಮೇಲೆ ಕ್ಲಿಕ್ ಮಾಡಿ ಪಾಪಪ್ ಮತ್ತು ರಿಡೈರೆಕ್ಟ್ ಅನ್ನು ಟರ್ನ್ ಆಫ್ ಮಾಡಬೇಕು.

ನಾವು ಇಂದು ಆನ್‌ಲೈನ್ ಜಗತ್ತಿಗೆ ಹೆಚ್ಚು ತೆರೆದುಕೊಂಡಿರುವುದರಿಂದ ಸಾಮಾಜಿಕ ಜಾಲತಾಣಗಳಿಗೆ, ಇ-ಕಾಮರ್ಸ್ ಆ್ಯಪ್‌ಗಳಿಗೆ ಲಾಗಿನ್ ಆಗಲು ನಮ್ಮ ಮೊಬೈಲ್ ಸಂಖ್ಯೆ, ಇ-ಮೇಲ್ ವಿಳಾಸ ನೀಡಿರುತ್ತೇವೆ. ಇಷ್ಟು ಸಾಕು ನಮ್ಮ ಆನ್‌ಲೈನ್ ಚಟುವಟಿಕೆಗಳ ಮೇಲೆ ಕಣ್ಣಿಡಲು. ನಾವು ಬಯಸಲಿ, ಬಯಸದೇ ಇರಲಿ, ನಮ್ಮ ಅಭಿರುಚಿ, ಆಯ್ಕೆಗಳು ಹಾಗೂ ಇಷ್ಟಗಳಿಗೆ ಅನುಗುಣವಾಗಿ ಜಾಹೀರಾತುಗಳು ಹೇಗಾದರೂ ನುಸುಳುತ್ತಲೇ ಇರುತ್ತವೆ. ಇಂತಹವುಗಳಿಂದ ಸಂಪೂರ್ಣ ಹೊರಬರುವುದು ಕಷ್ಟ. ಒಂದಷ್ಟು ನಿಯಂತ್ರಿಸಿಕೊಳ್ಳಲಂತೂ ಸಾಧ್ಯವಿದೆ. ಈಗಾಗಲೇ ಇರುವ ಫೇಸ್‌ಬುಕ್ ಮೂಲಕ ಇನ್ನೊಂದು ಸಾಮಾಜಿಕ ಜಾಲತಾಣಕ್ಕೆ ಲಾಗಿನ್ ಆಗುವುದನ್ನು ತಪ್ಪಿಸಿ, ಇ-ಮೇಲ್ ಮೂಲಕವೇ ಲಾಗಿನ್ ಆಗಿ ಪ್ರತಿಯೊಂದಕ್ಕೂ ಬೇರೆಯದೇ ಆದ ಪಾಸ್‌ವರ್ಡ್ ಸೃಷ್ಟಿಸಿಕೊಳ್ಳುವುದು ಉತ್ತಮ. ❖

ಹಲಸಿನ ಬೀಜದ 'ಚಾಕೊಲೇಟ್', ಬಿಸ್ಕತ್'

ಸಿ.ಎಸ್. ನಿರ್ವಾಣ ಸಿದ್ದಯ್ಯ

ಹಲಸಿನ ಹಣ್ಣಿನಿಂದ ಚಿಪ್ಸ್, ಹಣ್ಣಿನ ತೊಳೆ(ಸೊಳೆ)ಗಳ ನಿರ್ಜಲೀಕರಣ, ಹಲಸಿನ ಹಣ್ಣಿನ ಮಿಲ್ಕ್ ಶೇಕ್, ಹಲಸಿನ ಕಾಯಿಯಿಂದ ಪುಡಿ – ಹೀಗೆ ಹಲವು ಮೌಲ್ಯವರ್ಧಿತ ಉತ್ಪನ್ನಗಳು ತಯಾರಾಗಿ ಮಾರುಕಟ್ಟೆಗೂ ಬಂದಿವೆ. ಆದರೆ ಹಲಸಿನ ಬೀಜಗಳನ್ನು ಉಪಯೋಗಿಸಿ ತಯಾರಿಸಿದ ಆಹಾರ ಉತ್ಪನ್ನಗಳ ಬಳಕೆ ಇರಲಿಲ್ಲ.

ಈಗ ಬೆಂಗಳೂರಿನ ಹೆಸರಘಟ್ಟದ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ(ಐಐಎಚ್‌ಆರ್) ಹಲಸಿನ ಬೀಜವನ್ನೂ ಮೌಲ್ಯವರ್ಧಿಸಿ, ಅದರಿಂದ ಬಿಸ್ಕತ್ತು ಮತ್ತು ಚಾಕೊಲೇಟ್ ತಯಾರಿಸುವ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದೆ. ತಂತ್ರಜ್ಞಾನ ನಮ್ಮ ಆಹಾರಪದ್ಧತಿಗೂ ಹೊಸ ಆಯಾಮಗಳನ್ನು ನೀಡಬಲ್ಲದು; ಮಾತ್ರವಲ್ಲ, ಸಮಾಜದಲ್ಲಿ ಹೊಸ ಬಗೆಯ ಉದ್ಯೋಗಾವಕಾಶಗಳನ್ನೂ ಹೆಚ್ಚಿಸುತ್ತದೆ ಎಂಬುದನ್ನು ಇಂಥ ಸಂಶೋಧನೆಗಳು ನಿರೂಪಿಸುತ್ತಲೇ ಇವೆ.

ಜಾಕೊಲೇಟ್

ಹಲಸಿನ ಬೀಜದಿಂದ ತಯಾರಿಸಿದ ಚಾಕೊಲೇಟ್‌ಗೆ – ಜಾಕೊಲೇಟ್ ಎಂದು ಹೆಸರಿಸಲಾಗಿದೆ. ಈ ಎರಡೂ ತಿನಿಸುಗಳ ಸಿದ್ಧಪಡಿಸುವ ತಂತ್ರಜ್ಞಾನವನ್ನು ಸಂಶೋಧನಾ ಕೇಂದ್ರದ ವಿಜ್ಞಾನಿ ಕೆ.ಸಿ. ನಾರಾಯಣ್ ಅಭಿವೃದ್ಧಿ ಪಡಿಸಿದ್ದಾರೆ.

ಹಲಸಿನ ಹಣ್ಣಿನ ತೊಳೆಗಳಿಗಿಂತ, ಬೀಜದಲ್ಲಿ ಪ್ರೋಟಿನ್ ಪ್ರಮಾಣ ಹೆಚ್ಚು. ಅಷ್ಟೇ ಅಲ್ಲ, ಬೀಜದಲ್ಲಿರುವ ಪೌಷ್ಟಿಕಾಂಶಗಳು ವ್ಯಕ್ತಿಯ ದೇಹದಲ್ಲಿ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತವೆ. 'ಇಂಥ ಪೌಷ್ಟಿಕಾಂಶದ ಆಗರವಾದ ಹಲಸಿನ ಬೀಜಗಳನ್ನು ನಮ್ಮಲ್ಲಿ ಸಮರ್ಪಕವಾಗಿ ಬಳಸುತ್ತಿಲ್ಲ. ಈ ಕಾರಣಕ್ಕಾಗಿ ಹಲಸಿನ ಬೀಜಗಳಿಂದ ಬಿಸ್ಕತ್ ಮತ್ತು ಚಾಕೊಲೇಟ್ ತಯಾರಿಸುವ ತಂತ್ರಜ್ಞಾನವನ್ನು ಆವಿಷ್ಕರಿಸಲಾಗಿದೆ' ಎನ್ನುತ್ತಾರೆ ವಿಜ್ಞಾನಿ ನಾರಾಯಣ್.

ಹಲಸಿನ ಬಿಸ್ಕತ್

ತರಬೇತಿ ಮತ್ತು ತಂತ್ರಜ್ಞಾನ

ಹಲಸಿನ ಬೀಜದ ಚಾಕೊಲೇಟ್ ಮತ್ತು ಬಿಸ್ಕತ್ ತಯಾರಿಕೆಗೆ ತರಬೇತಿ ಬೇಕಾಗುತ್ತದೆ. ಐಐಎಚ್‌ಆರ್ ಸಂಸ್ಥೆಯು ತಂತ್ರಜ್ಞಾನದ ಜೊತೆಗೆ ಮತ್ತು ಅದನ್ನು ಬಳಸಿ ಉತ್ಪನ್ನಗಳನ್ನು ತಯಾರಿಸುವ ತರಬೇತಿಯನ್ನೂ ನೀಡುತ್ತದೆ. ಆದರೆ, ತರಬೇತಿ ಪಡೆಯುವವರು ಮೊದಲು ಈ ತಂತ್ರಜ್ಞಾನದ ಪರವಾನಗಿ ಪಡೆಯುವುದು ಕಡ್ಡಾಯ.

ತರಬೇತಿ ಹೇಗೆ? ಏನು?

ಬಿಸ್ಕತ್ ತಯಾರಿಸಲು ಎರಡು ದಿನಗಳ ಕಾಲ ತರಬೇತಿ ನೀಡಲಾಗುತ್ತದೆ. ಮೊದಲನೆಯ ದಿನ ಹಲಸಿನ ಬೀಜವನ್ನು ಹಿಟ್ಟು ಮಾಡುವ ವಿಧಾನಗಳನ್ನು ಹೇಳಿಕೊಡುತ್ತಾರೆ. ಎರಡನೆಯ ದಿನ ಹಲಸಿನ ಬೀಜದ ಜೊತೆ ಮಿಶ್ರಣ ಮಾಡುವ ಇತರೆ ಪದಾರ್ಥಗಳ ಬಗ್ಗೆ ಮಾಹಿತಿ ನೀಡಲಾಗುತ್ತದೆ. ಒಂದು ದಿನದಲ್ಲಿ ಚಾಕೊಲೇಟ್ ತಯಾರಿಸುವ ವಿಧಾನವನ್ನು ತಿಳಿಸಿಕೊಡುತ್ತಾರೆ.

ಬೆಸ್ಟ್ ಹಾರ್ಟ್ ಇನ್‌ಕ್ಯೂಬೇಟರ್ಸ್

ತರಬೇತಿ ಪಡೆದು ಸ್ವಯಂ ಉದ್ಯಮ ಆರಂಭಿಸುವ ಆಸಕ್ತರಿಗೆ ಬೆಸ್ಟ್ ಹಾರ್ಟ್ ಇನ್‌ಕ್ಯೂಬೇಟರ್ ಸಂಸ್ಥೆ ಐಐಎಚ್‌ಆರ್ ಆವರಣದಲ್ಲೇ ಜಾಗ (ಕೊಠಡಿ) ನೀಡಿ, ಅಲ್ಲೇ ಇರುವ ಯಂತ್ರಗಳನ್ನು ಬಳಸಿಕೊಂಡು ಪ್ರಾಯೋಗಿಕವಾಗಿ ಉತ್ಪನ್ನಗಳನ್ನು ತಯಾರಿಸಿ, ಮಾರಾಟ ಮಾಡಬಹುದು. ಹೀಗೆ ತರಬೇತಿಯಲ್ಲಿರುವ ನವೋದ್ಯಮಿಗೆ 'ಇನ್‌ಕ್ಯುಬೇಟಿ' ಎನ್ನುತ್ತಾರೆ.

ಸಿ.ಕೆ. ನಾರಾಯಣ

ಕೊರೊನಾ ಲಾಕ್‌ಡೌನ್‌ನಿಂದ ಉದ್ಯೋಗ ಕಳೆದುಕೊಂಡು ಹಳ್ಳಿಗಳಲ್ಲಿ ಬದುಕು ಕಟ್ಟಿಕೊಳ್ಳುತ್ತಿರುವ ಯುವಸಮೂಹಕ್ಕೆ ಚಾಕೊಲೇಟ್ ಮತ್ತು ಹಲಸಿನ ಬಿಸ್ಕತ್ ತಯಾರಿಕೆ ತಂತ್ರಜ್ಞಾನ ಸ್ವಂತ ಉದ್ಯಮಕ್ಕೆ ದಾರಿ ಮಾಡಿಕೊಡಬಲ್ಲದು. ಬದುಕನ್ನು ಕಟ್ಟಿಕೊಡುವಂಥ ಹಲವು ದಾರಿಗಳು ನಮ್ಮ ಮುಂದೆ ಕಾಣಿಸಿಕೊಳ್ಳುತ್ತಲೇ ಇರುತ್ತವೆ. ಯುವಸಮೂಹ ಇಂಥ ಹೊಸ ಉದ್ದಿಮೆಗಳಲ್ಲಿ ತೊಡಗುವುದರಿಂದ ಉದ್ಯೋಗದ ಅವಕಾಶಗಳು ಹೆಚ್ಚಿ, ಆರ್ಥಿಕ ಸಬಲತೆಯೂ ದೃಢವಾಗುತ್ತದೆ; ತಂತ್ರಜ್ಞಾನ ಮತ್ತು ಸಮಾಜದ ಆರ್ಥಿಕತೆ–ಆರೋಗ್ಯಗಳ ಹೊಂದಾಣಿಕೆಯೂ ಬಲವಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಐಐಎಚ್‌ಆರ್ ಸಂಪರ್ಕ ಸಂಖ್ಯೆ 080-23086100/372/514 (ಭಾನುವಾರ ಮತ್ತು ಸರ್ಕಾರಿ ರಜೆ ದಿನ ಹೊರತುಪಡಿಸಿ ಸಂಪರ್ಕಿಸಬಹುದು).

ಚಿತ್ರಗಳು: ಐಐಎಚ್‌ಆರ್

ಪೇಟಿಎಂನಿಂದ ಸೌಂಡ್‌ಬಾಕ್ಸ್ 2.0, ಸ್ಮಾರ್ಟ್ ಪಿಓಎಸ್

ಡಿಜಿಟಲ್ ಪಾವತಿಗೆ ಉತ್ತೇಜನ ನೀಡಲು ಪೇಟಿಎಂ, 'ಸೌಂಡ್‌ಬಾಕ್ಸ್ 2.0' ಮತ್ತು 'ಸ್ಮಾರ್ಟ್ ಪಿಒಎಸ್'ಅನ್ನು ಮಂಗಳವಾರ ಬಿಡುಗಡೆ ಮಾಡಿದೆ. ಡಿಜಿಟಲ್ ಪಾವತಿಗಳಲ್ಲಿ 'ಪೇಟಿಎಂ ಸೌಂಡ್‌ಬಾಕ್ಸ್' ಪ್ರಮುಖ ಪಾತ್ರ ವಹಿಸಿದೆ ಎಂದು ಕಂಪನಿ ಹೇಳಿಕೊಂಡಿದೆ. 'ಸೌಂಡ್‌ಬಾಕ್ಸ್ 2.0' ಸಾಧನವು 2000 ಎಂಎಎಚ್ ಬ್ಯಾಟರಿ, ಸಿಮ್ ಸ್ಲಾಟ್ ಹೊಂದಿದ್ದು, ವೈಫೈ ಸಂಪರ್ಕ ಇಲ್ಲದೆಯೂ ಕಾರ್ಯನಿರ್ವಹಿಸಬಲ್ಲದು. ಕನ್ನಡ, ಹಿಂದಿ, ಇಂಗ್ಲಿಷ್, ತಮಿಳು ಮತ್ತು ತೆಲುಗು ಭಾಷೆಗಳನ್ನು ಬೆಂಬಲಿಸುತ್ತದೆ.

ವೈಶಿಷ್ಟ್ಯ

- ಹಣ ಪಾವತಿಯಾಗಿದ್ದು ಧ್ವನಿ ಮತ್ತು ಪರದೆಯಲ್ಲಿ ಏಕಕಾಲಕ್ಕೆ ಖಾತರಿ
- ದಿನದ ವಹಿವಾಟಿನಲ್ಲಿ ಪಾವತಿಯಾಗಿರುವ ಒಟ್ಟು ಮೊತ್ತದ ವಿವರ
- ಬ್ಯಾಟರಿ ಸಾಮರ್ಥ್ಯ ಮತ್ತು ಬಾಳಿಕೆ ಅವಧಿಯು ಧ್ವನಿ ಸಂದೇಶದ ಮೂಲಕ ತಿಳಿಸುತ್ತದೆ.

ಸ್ಮಾರ್ಟ್ ಪಿಒಎಸ್

ವ್ಯಾಪಾರಿಗಳಿಗೆ ತಮ್ಮ ಆ್ಯಂಡ್ರಾಯ್ಡ್ ಫೋನ್ ಮೂಲಕವೇ ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡ್‌ನಿಂದ ಹಣ ಸ್ವೀಕರಿಸಲು ಇದು ಉಪಯುಕ್ತ ಎಂಬುದು ಕಂಪನಿಯ ಹೇಳಿಕೆ. ಕಾಂಟ್ಯಾಕ್ಟ್‌ಲೆಸ್ ಕಾರ್ಡ್ ಪೇಮೆಂಟ್ ಕೂಡ ಸ್ವೀಕರಿಸಬಹುದು. ಇದಕ್ಕಾಗಿ ಪೇಟಿಎಂ ಕಂಪನಿಯು ವೀಸಾ ಮತ್ತು ಮಾಸ್ಟರ್‌ಕಾರ್ಡ್ ಜೊತೆ ಒಪ್ಪಂದ ಮಾಡಿಕೊಂಡಿದೆ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

THE CONCERT

ಇಂಗ್ಲಿಷ್

ಎಸ್ಸೆಸ್ಸೆಲ್ಸಿ

Unit 5

The Concert was a lesson written by Shanta Rameshwar Rao. Here the writer of this lesson narrates an incident which is heart touching story. One Morning, Smita, a girl of 16, was reading the newspaper. She got the attention of the newspaper announcement, that Pandit Ravishankar was playing the Sitar in Shanmukhanand Auditorium, the next day. On hearing the news paper's announcement both Anant and Smita were very much excited. Anant was so excited that, he expressed his last wish that he must hear Pandit Ravishankar's concert and must see him, because he had not many days to live in. It was the chance of his life time.

Actually, Anant was suffering from cancer. He was going to die soon. Even though, his family members came to Bombay for the treatment, their hopes had not been fulfilled. His condition grew worse with each passing day and doctors felt helpless. They said, "take him home, give him the things he likes, indulge him", Then only all the family members knew that Anant had not many days to live in. But they believed in the miracles of modern science. They believed that Anant could be cured at the hospital and he would take part in forthcoming table tennis tournament. They greatly believed that he would play the Sitar again and would become a great Sitarist one day. Though he was a talented boy. He had already composed his own tunes to the astonishment of his Guru.

Anant's sister Smita encouraged all the family members by saying everything will be alright Anant would be cured in the hospital. She hid all her feelings in her heart. Now she was deeply thinking about the wish of Anant. The last wish of him was to see and hear Pandit Ravishankar. With the suggestion of aunt Sushila, Smita decided to go to the concert alone without Anant. The next day Smita



went to the Concert with her father. She sat beside her father in the gallery. She heard the thundering welcome which the audience gave the master. She felt as if everything was going in her dream. She listened to the unfolding ragas, but she was not enjoying the concert completely. She was deeply thinking about the plan she had made to fulfill Anant's last wish. In every beat of the Tabala, she heard Anant's voice it is a chance of life time.

After the end of the concert, Smita decided to meet Pandit Ravishankar. Though she felt very nervous, her heart was beating loudly, her knees felt week, her tongue dry, she took encourage and stood in front of the great masters. She told the story of her brother and requested them to come to her home and play the Sitar for Anant. Thus she proved she was the real sister of Anant and a girl with Mother's heart. After listening to the story of Anant, both Ravishankar and Ustad Allah Rakha agreed to perform for the boy. Though they were foremost artist with busy schedule, they agreed to come to the ordinary people's house and responded positively to the request of the little girl. It shows that both the artists were simple in their attitude and kind by heart. The next morning the great masters came to aunt Sushila's apartment. The neighbours could not believe their eyes. Pandit Ravi Shakar and Ustad Allah Rakha performed the concert for Anant. Anant listened to the ragas happily with a sense of satisfaction, his last wish was fulfilled and he lost his life. ❖

ಪ್ರಜಾವಾಣಿ ನೋಡಿಯೊ

ಹತ್ತನೇ ತರಗತಿಯ ಇಂಗ್ಲಿಷ್ ಮಾಧ್ಯಮ ಜೀವಶಾಸ್ತ್ರ ವಿಭಾಗದ 'ಲೈಫ್ ಪ್ರೋಸೆಸ್ ಎಕ್ಸ್‌ಕ್ರೀಷನ್' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://bit.ly/3viGNxw

ಮಾತೃಕೆಗಳ ಗುಣಾಕಾರ

ಗಣಿತ

ದ್ವಿತೀಯ ಪಿಯುಸಿ

$A = [a_{ij}]$ ಯು mxn ದರ್ಜೆಯ ಮತ್ತು $B = [a_{jk}]$ ಯು nxp ದರ್ಜೆಯ ಮಾತೃಕೆಗಳಾಗಿರಲಿ. ಆಗ A ಮತ್ತು B ಗಳ ಗುಣಲಬ್ಧವು mxp ದರ್ಜೆಯ ಮಾತೃಕೆ C ಯಾಗಿರುತ್ತದೆ. C_{ik} ಯನ್ನು ಪಡೆಯಲು ನಾವು A ನ ಅಡ್ಡಸಾಲು ಮತ್ತು B ನ ಕಂಬ ಸಾಲಿನ ಅಂಶವಾಗಿ ಗುಣಿಸಿ ಮತ್ತು ಆ ಗುಣಲಬ್ಧಗಳ ಮೊತ್ತವನ್ನು ತೆಗೆದುಕೊಳ್ಳಬೇಕು.

A ಮತ್ತು B ಎಂಬ ಮಾತೃಕೆಗಳ ಗುಣಲಬ್ಧವನ್ನು ವ್ಯಾಖ್ಯಾನಿಸಬೇಕಾದರೆ A ಮಾತೃಕೆಯಲ್ಲಿ ಕಂಬ ಸಾಲುಗಳ ಸಂಖ್ಯೆಯು B ನಲ್ಲಿನ ಅಡ್ಡಸಾಲುಗಳ ಸಂಖ್ಯೆಗೆ ಸಮನಾಗಿರಬೇಕು.

$A = [a_{ij}]mxn$, $B = [b_{jk}]$ mxp ಆದರೆ A ನ i ಅಡ್ಡಸಾಲು $(a_{11}\ a_{12} \ldots\ldots a_{in})$

ಆಗಿರುತ್ತದೆ. ಮತ್ತು B ನ k ನ ಕಂಬಸಾಲು $\begin{bmatrix} b_{1k} \\ b_{2k} \\ \cdot \\ b_{nk} \end{bmatrix}$ ಆಗಿರುತ್ತದೆ.

ಆಗ $C_{ik} = a_{i1}\, b_{1k} + a_{i2}\, b_{2k} + \ldots\ldots a_{in}\, b_{nk} = \sum_{j=1}^{n} a_{ij}\, b_{jk}$

ಉದಾಹರಣೆ: $A = \begin{bmatrix} 6 & 9 \\ 2 & 3 \end{bmatrix}$ ಮತ್ತು $B = \begin{bmatrix} 2 & 6 & 0 \\ 7 & 9 & 8 \end{bmatrix}$

ಆದರೆ AB ಯನ್ನು ಕಂಡುಹಿಡಿಯಿರಿ.

ಪರಿಹಾರ: ಮಾತೃಕೆನಲ್ಲಿ ಕಂಬಸಾಲುಗಳಿವೆ. ಅದು B ನಲ್ಲಿನ ಅಡ್ಡಸಾಲುಗಳ ಸಂಖ್ಯೆಗೆ ಸಮವಾಗಿದೆ. ಆದ್ದರಿಂದ A B ಯನ್ನು ಕಂಡುಹಿಡಿಯಬಹುದು.

$$AB = \begin{bmatrix} 6 & 9 \\ 2 & 3 \end{bmatrix} \begin{bmatrix} 2 & 6 & 0 \\ 7 & 9 & 8 \end{bmatrix}$$

$$= \begin{bmatrix} 6(2) + 9(7) & 6(6) + 9(9) & 6(0) + 9(8) \\ 2(2) + 3(7) & 2(6) + 3(9) & 2(0) + 3\,(8) \end{bmatrix}$$

$$\begin{bmatrix} 12 + 63 & 36 + 81 & 0 + 72 \\ 4 + 21 & 12 + 27 & 0 + 24 \end{bmatrix}$$

$$\begin{bmatrix} 75 & 117 & 72 \\ 25 & 39 & 24 \end{bmatrix}$$

A ಮತ್ತು B ಗಳು ಕ್ರಮವಾಗಿ mxn ಮತ್ತು kx1 ಮಾತೃಕೆಗಳಾಗಿದ್ದರೆ, AB ಮತ್ತು BAಗಳೆರಡನ್ನೂ ಕಂಡುಹಿಡಿಯಬೇಕಾದರೆ n = k ಮತ್ತು l = m ಆಗಲೇಬೇಕು. ನಿರ್ದಿಷ್ಟವಾಗಿ ಹೇಳುವುದಾರದರೆ A ಮತ್ತು B ಗಳೆರಡೂ ಒಂದೇ ದರ್ಜೆಯ ಮಾತೃಕೆಗಳಾದಲ್ಲಿ AB ಮತ್ತು BA ಗಳೆರಡನ್ನೂ ಕಂಡುಹಿಡಿಯಬಹುದು.

ಮಾತೃಕೆಯ ಗುಣಾಕಾರವು ಅಪರಿವರ್ತನೀಯ

A ಮತ್ತು B ಯು ಎರಡು ಮಾತೃಕೆಗಳಲ್ಲಿ AB ಮತ್ತು BA ಗಳೆರಡನ್ನೂ ಕಂಡುಹಿಡಿಯಲು ಸಾಧ್ಯವಾದರೂ AB = BA ಆಗಬೇಕು ಎಂದೇನಿಲ್ಲ AB ಮತ್ತು BA ಗಳೆರಡೂ ಬೇರೆ ಬೇರೆ ದರ್ಜೆಯು ಆಗಿದ್ದರಿಂದ AB BA.AB ಮತ್ತು BA ಗಳೆರಡೂ ಒಂದೇ ದರ್ಜೆಯದ್ದಾದರೆ ಅವುಗಳು ಸಮವಾಗಿರುತ್ತದೆ ಎಂದುಕೊಳ್ಳಬಹುದು. ಆದರೆ ಇದು ಹಾಗೆ ಆಗುವುದಿಲ್ಲ.

ಮಾತೃಕೆಗಳ ಗುಣಾಕಾರದ ಗುಣಲಕ್ಷಣಗಳು

ಸಹವರ್ತನೀಯ ನಿಯಮ A, B ಮತ್ತು C ಎಂಬ ಮೂರು ಮಾತೃಕೆಗಳಿಗೆ ಸಮೀಕರಣದ ಎರಡೂ ಬದಿ ಇರುವ ಮಾತೃಕೆಗಳನ್ನು ಕಂಡುಹಿಡಿಯಲು ಸಾಧ್ಯವಾದಲ್ಲಿ (AB)C = A(BC) ಆಗುತ್ತದೆ.

2) ವಿಭಾಜಕ ನಿಯಮ

A, B ಮತ್ತು C ಎಂಬ ಮಾತೃಕೆಗಳಿಗೆ ಸಮೀಕರಣದ ಎರಡೂ ಬದಿಗಳನ್ನು ಕಂಡುಹಿಡಿದರೆ

1) $A(B+C) = AB + AC$

2) $(A+B)C = AC + BC$ ಆಗುವುದು

ಗುಣಾಕಾರದ ಅನನ್ಯತಾಂಶ ಅಸ್ತಿತ್ವ: A ಎಂಬ ಪ್ರತಿಯೊಂದು ವರ್ಗ ಮಾತೃಕೆಗೂ IA = AI = A ಆಗುವಂತೆ ಅದೇ ದರ್ಜೆಯ ಅನನ್ಯತಾ ಮಾತೃಕೆಯೊಂದು ಅಸ್ತಿತ್ವದಲ್ಲಿರುತ್ತದೆ.

ಉದಾಹರಣೆ

$$A = \begin{bmatrix} 1 & 1 & -1 \\ 2 & 0 & 3 \\ 3 & -1 & 2 \end{bmatrix}, \begin{bmatrix} 1 & 3 \\ 0 & 2 \\ -1 & 4 \end{bmatrix} \text{ ಮತ್ತು } C = \begin{bmatrix} 1 & 2 & 3 & -4 \\ 2 & 0 & -2 & 1 \end{bmatrix}$$

ಆದರೆ A(BC) ಮತ್ತು (AB)C ಗಳನ್ನು ಕಂಡು ಹಿಡಿಯಿರಿ (AB)C = A(BC) ಎಂದು ತೋರಿಸಿ

ಪರಿಹಾರ:

$$AB = \begin{bmatrix} 1 & +1 & -1 \\ 2 & 0 & 3 \\ 3 & -1 & 2 \end{bmatrix}, \begin{bmatrix} 1 & 3 \\ 0 & 2 \\ -1 & 4 \end{bmatrix} = \begin{bmatrix} 1+0+1 & 3+2-4 \\ 2+0-3 & 6+0+12 \\ 3+0-2 & 9-2+8 \end{bmatrix}$$

$$= \begin{bmatrix} 2 & 1 \\ -1 & 8 \\ 1 & 15 \end{bmatrix}$$

$$(AB)C = \begin{bmatrix} 2 & 1 \\ -1 & 8 \\ 1 & 15 \end{bmatrix} \begin{bmatrix} 1 & 2 & 3 & -4 \\ 2 & 0 & -2 & 1 \end{bmatrix} = \begin{bmatrix} 2+2 & 4+0 & 6-2 & -8+1 \\ -1+36 & -2+0 & -3-36 & 4+18 \\ 1+30 & 2+0 & 3-30 & -4+15 \end{bmatrix}$$

$$= \begin{bmatrix} 4 & 4 & 4 & -7 \\ 35 & -2 & -39 & 22 \\ 31 & 2 & -27 & 11 \end{bmatrix}$$

$$BC = \begin{bmatrix} 1 & 3 \\ 0 & 2 \\ -1 & 4 \end{bmatrix} \begin{bmatrix} 1 & 2 & 3 & -4 \\ 2 & 0 & -2 & 1 \end{bmatrix} = \begin{bmatrix} 1+6 & 2+0 & 3-6 & -4+3 \\ 0+4 & 0+0 & 0-4 & 0+2 \\ -1+8 & -2+0 & -3-8 & -4+4 \end{bmatrix}$$

$$= \begin{bmatrix} 7 & 7 & -3 & -1 \\ 4 & 0 & -4 & 2 \\ 7 & -2 & -11 & 8 \end{bmatrix}$$

$$A(BC) = \begin{bmatrix} 1 & 1 & -1 \\ 2 & 0 & 3 \\ 3 & -1 & 2 \end{bmatrix} \begin{bmatrix} 7 & 2 & -3 & -1 \\ 4 & 0 & -4 & 2 \\ 7 & -2 & -11 & 8 \end{bmatrix}$$

ಸ್ಪಷ್ಟವಾಗಿ (AB)C = A(BC) ಎಂದಾಗುತ್ತದೆ.

(ಮುಂದುವರಿಯುವುದು)

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ 'ಮ್ಯಾಗ್ನೆಟಿಸಂ ಅಂಡ್ ಮ್ಯಾಟರ್_ ಪೊಟೆನ್ಷಿಯಲ್ ಎನರ್ಜಿ' ಪಾಠವನ್ನು ಇಂಗ್ಲಿಷ್‌ನಲ್ಲಿ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://bit.ly/2N0kxHf

ಸುಭಾಷಿತ

ನಿಮಗೆ ಒಳ್ಳೆಯದು ಯಾವುದು ಎಂಬುದರ ಬಗ್ಗೆ ಪ್ರತಿಯೊಬ್ಬರೂ ಉಪದೇಶಿಸುತ್ತಾರೆ. ನೀವು ಸ್ವತಃ ಉತ್ತರಗಳನ್ನು ಕಂಡುಕೊಳ್ಳಬೇಕೆಂದು ಅವರು ಬಯಸುವುದಿಲ್ಲ. ತಮ್ಮ ಉತ್ತರಗಳನ್ನೇ ನೀವು ನಂಬಬೇಕೆಂದು ಬಯಸುತ್ತಾರೆ. -ಡಾನ್ ಮಿಲ್‌ಮನ್

ಬಾಲ್ಯವಿವಾಹ ಕೊನೆಗಾಣಿಸಲು ಬೇಕಾಗಿದೆ ದೃಢಸಂಕಲ್ಪ

ಜಗತ್ತಿನಲ್ಲಿ ಆಗುತ್ತಿರುವ ಬಾಲ್ಯವಿವಾಹಗಳ ಪೈಕಿ ಶೇಕಡ 50ರಷ್ಟು ಭಾರತ ಸೇರಿದಂತೆ ಐದು ದೇಶಗಳಲ್ಲಿ ನಡೆಯುತ್ತಿವೆ ಎಂದು ಯುನಿಸೆಫ್ ವರದಿಯೊಂದು ಹೇಳಿದೆ. ಈ ವರದಿಯನ್ನು ನಮ್ಮ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕಿದೆ. ಭಾರತ, ಬ್ರೆಜಿಲ್, ಇಥಿಯೋಪಿಯಾ, ಬಾಂಗ್ಲಾದೇಶ ಮತ್ತು ನೈಜೀರಿಯಾದಲ್ಲಿ ಬಾಲ್ಯವಿವಾಹಗಳು ಅತ್ಯಧಿಕ ಪ್ರಮಾಣದಲ್ಲಿ ಆಗುತ್ತಿವೆ ಎಂದು ಈ ವರದಿ ಬೆಟ್ಟು ಮಾಡಿ ತೋರಿಸಿದೆ. ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ 'ಕೋವಿಡ್ 19: ಬಾಲ್ಯವಿವಾಹ ವಿರುದ್ಧದ ಹೋರಾಟದ ಪ್ರಗತಿಗೆ ಅಪಾಯ' ಎಂಬ ವಿಶ್ಲೇಷಣಾತ್ಮಕ ವರದಿಯನ್ನು ಪ್ರಕಟಿಸಿರುವ ಯುನಿಸೆಫ್, 'ಕೋವಿಡ್ ಸಂಕಷ್ಟ ಕಾಲದಲ್ಲಿ ಬಾಲ್ಯವಿವಾಹಗಳ ಸಂಖ್ಯೆ ಇನ್ನಷ್ಟು ಏರಿದಂತಿದೆ' ಎಂದೂ ಕಳವಳ ವ್ಯಕ್ತಪಡಿಸಿದೆ. ಜಗತ್ತಿನಾದ್ಯಂತ ಈಗ 65 ಕೋಟಿ ಬಾಲ್ಯ ವಿವಾಹಿತರು ಬದುಕು ಸಾಗಿಸುತ್ತಿದ್ದಾರೆ. ಈ ವರ್ಷದ ಕೊನೆಗೆ ಇನ್ನೂ ಒಂದು ಕೋಟಿ ಬಾಲ್ಯವಿವಾಹಿತರು ಈ ಪಟ್ಟಿಗೆ ಸೇರುವ ಸಾಧ್ಯತೆ ಇದೆ. ಇದನ್ನು ತಡೆಯಲು ಆಯಾ ದೇಶದ ಸರ್ಕಾರಗಳು ಸಮರೋಪಾದಿಯಲ್ಲಿ ಕ್ರಮಗಳನ್ನು ಕೈಗೊಳ್ಳಬೇಕಿದೆ ಎಂದೂ ವರದಿ ಸೂಚಿಸಿರುವುದು ನಮ್ಮ ಕಣ್ಣು ತೆರೆಸಬೇಕಿದೆ.



ಬಾಲ್ಯವಿವಾಹ ತಡೆಯಲು ಸರ್ಕಾರಗಳು ಸಮರೋಪಾದಿಯಲ್ಲಿ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸೂಚಿಸಿರುವ ಯುನಿಸೆಫ್ ವರದಿ ನಮ್ಮ ಕಣ್ಣು ತೆರೆಸಬೇಕಿದೆ

ಜಗತ್ತಿನ ಪ್ರಬಲ ರಾಷ್ಟ್ರಗಳಲ್ಲಿ ಒಂದಾಗಬೇಕು ಎನ್ನುವ ಹೆಬ್ಬಯಕೆ ಹೊಂದಿರುವ ಭಾರತದ ಮಟ್ಟಿಗೆ ಈ ವರದಿಯು ಮುಜುಗರಕ್ಕೆ ಈಡುಮಾಡುವಂತಹುದು. ಅಭಿವೃದ್ಧಿಯ ನಾಗಾಲೋಟದಲ್ಲಿ ನಾವು ಅಮೆರಿಕ ಮತ್ತು ಯುರೋಪಿನ ಮುಂದುವರಿದ ದೇಶಗಳ ಜೊತೆಗೆ ಪೈಪೋಟಿ ನಡೆಸುವುದರ ಬಗ್ಗೆ ಮಾತನಾಡುತ್ತಿದ್ದೇವೆ. ಆದರೆ ಬಾಲ್ಯವಿವಾಹದಂತಹ ಅನಿಷ್ಟ ಪದ್ಧತಿಗಳ ಪಟ್ಟಿಯಲ್ಲಿ ನಮ್ಮ ದೇಶದ ಹೆಸರು ಇಥಿಯೋಪಿಯಾ, ನೈಜೀರಿಯಾದಂತಹ ತೀರಾ ಹಿಂದುಳಿದ ದೇಶಗಳ ಜೊತೆಗೆ ಸೇರಿಕೊಂಡಿದೆ. ಭಾರತದಲ್ಲಿ ಪ್ರತಿವರ್ಷ ಸುಮಾರು 10 ಲಕ್ಷ ಬಾಲ್ಯ ವಿವಾಹಗಳು ನಡೆಯುತ್ತಿವೆ ಎಂದು ದೇಶಿ ಸಮೀಕ್ಷೆಯೊಂದು ತಿಳಿಸಿದೆ. ಶೇ 27ರಷ್ಟು ಹೆಣ್ಣುಮಕ್ಕಳು 18 ವರ್ಷ ವಯಸ್ಸು ತುಂಬುವ ಮುನ್ನವೇ ಮದುವೆ ಆಗುತ್ತಿದ್ದಾರೆ. ಅದರಲ್ಲೂ ಶೇ 7ರಷ್ಟು ಹೆಣ್ಣುಮಕ್ಕಳು 15 ವರ್ಷ ತುಂಬುವ ಮುನ್ನವೇ ಮದುವೆಗೆ ಕೊರಳೊಡ್ಡುತ್ತಿದ್ದಾರೆ ಎಂಬ ವರದಿಗಳಿವೆ. ರಾಜ್ಯಗಳ ಪೈಕಿ ಶೇಕಡಾವಾರು ಲೆಕ್ಕ ಹಾಕಿದರೆ, ಜಾರ್ಖಂಡ್‌ನಲ್ಲಿ ಅತ್ಯಧಿಕ ಬಾಲ್ಯವಿವಾಹಗಳು ನಡೆಯುತ್ತಿದ್ದು, ಜಮ್ಮು ಮತ್ತು ಕಾಶ್ಮೀರದಲ್ಲಿ ಅತಿಕಡಿಮೆ ಸಂಖ್ಯೆಯಲ್ಲಿ ನಡೆಯುತ್ತಿವೆ. ಸಂಖ್ಯೆಯ ದೃಷ್ಟಿಯಲ್ಲಿ ಉತ್ತರಪ್ರದೇಶ, ಮಧ್ಯಪ್ರದೇಶ, ರಾಜಸ್ಥಾನ, ಪಶ್ಚಿಮ ಬಂಗಾಳ ಮತ್ತು ಬಿಹಾರದಲ್ಲಿ ಬಾಲ್ಯವಿವಾಹ ದೊಡ್ಡ ಪಿಡುಗಿನಂತೆ ವ್ಯಾಪಿಸಿದೆ. ಉತ್ತರಪ್ರದೇಶದಲ್ಲಂತೂ ಪ್ರತೀ ಐವರು ಹೆಣ್ಣುಮಕ್ಕಳಲ್ಲಿ ಒಬ್ಬಳು ಬಾಲ್ಯ ವಿವಾಹಕ್ಕೆ ಒಳಗಾಗುತ್ತಿದ್ದಾಳೆ ಎಂದು 2019ರಲ್ಲಿ ನಡೆದ ಭಾರತದ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ತಿಳಿಸಿದೆ. ಈ ಪಿಡುಗನ್ನು ತಡೆಯಲು ರಾಜ್ಯ ಸರ್ಕಾರಗಳು ಕೈಗೊಂಡಿರುವ ಕ್ರಮಗಳು ಪರಿಣಾಮಕಾರಿಯಾಗಿಲ್ಲ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ಬಾಲ್ಯವಿವಾಹ ಎನ್ನುವುದು ನಮ್ಮ ಸಮಾಜವನ್ನು ಕಾಡುತ್ತಿರುವ ದೊಡ್ಡ ಪಿಡುಗು ಎನ್ನುವುದರ ಬಗ್ಗೆ ಅನುಮಾನವಿಲ್ಲ. ಮಕ್ಕಳ ಬಾಲ್ಯವನ್ನು ಕಸಿದುಕೊಳ್ಳುವ, ಮುಖ್ಯವಾಗಿ ಹೆಣ್ಣುಮಕ್ಕಳಲ್ಲಿ ಅಪೌಷ್ಟಿಕತೆಯನ್ನು ಹೆಚ್ಚಿಸಿ ರೋಗ ರುಜಿನಗಳಿಗೆ ಸುಲಭ ತುತ್ತಾಗಿಸುವ ಇದನ್ನು ತಡೆಯಲು ಕೇಂದ್ರ ಸರ್ಕಾರವು ಗಂಭೀರ ಕ್ರಮಗಳನ್ನು ಕೈಗೊಳ್ಳುವ ಅಗತ್ಯವಿದೆ. ಗ್ರಾಮೀಣ ಪ್ರದೇಶಗಳಲ್ಲಿ ಇರುವ ಅನಕ್ಷರತೆ, ಬಡತನ, ರೂಢಿಗತ ಪದ್ಧತಿಗಳು ಮತ್ತು ಧಾರ್ಮಿಕ ಅಂಧಶ್ರದ್ಧೆಗಳು ಬಾಲ್ಯವಿವಾಹವನ್ನು ತಡೆಯುವಲ್ಲಿ ಅಡ್ಡಿಯಾಗಿವೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಗೆಂದು ಪ್ರತ್ಯೇಕ ಇಲಾಖೆ ಇದೆಯಾದರೂ ಅದರ ಕಾರ್ಯಯೋಜನೆಗಳು ಪರಿಣಾಮಕಾರಿಯಾಗಿ ಅನುಷ್ಠಾನವಾಗುತ್ತಿಲ್ಲ. ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಕೆಲವು ಸ್ವಯಂಸೇವಾ ಸಂಸ್ಥೆಗಳಿಗೆ ಗಟ್ಟಿ ಬೆಂಬಲ ನೀಡುವಲ್ಲಿಯೂ ಸರ್ಕಾರಗಳು ವಿಫಲವಾಗಿವೆ. ಈ ಮಧ್ಯೆ, ಕೊರೊನಾ ಸಾಂಕ್ರಾಮಿಕದಿಂದಾಗಿ ಗ್ರಾಮೀಣ ಪ್ರದೇಶಗಳಲ್ಲಿ ಮಕ್ಕಳ ಶಿಕ್ಷಣ ಮೊಟಕುಗೊಂಡಿದೆ. ಶಾಲೆಯನ್ನು ಅರ್ಧಕ್ಕೆ ಬಿಡುವ ಹೆಣ್ಣುಮಕ್ಕಳ ಸಂಖ್ಯೆಯೂ ಏರಿದೆ. ಶಾಲೆ ಬಿಟ್ಟು ಮನೆಯಲ್ಲಿರುವ ಮಕ್ಕಳಿಗೆ ಆದಷ್ಟು ಬೇಗ ಮದುವೆ ಮಾಡಿ ಆ ಹೊಣೆಗಾರಿಕೆ ಮುಗಿಸಿಬಿಡುವ ಧಾವಂತದಲ್ಲಿ ಹೆತ್ತವರು ಮಕ್ಕಳ ವಯಸ್ಸು ನೋಡದೆ ಮದುವೆ ಮಾಡಿಬಿಡುತ್ತಾರೆ. ಬಾಲ್ಯವಿವಾಹವನ್ನು ತಡೆಯುವ ದಿಸೆಯಲ್ಲಿ ಗ್ರಾಮೀಣ ಜನರಲ್ಲಿ ತಿಳಿವಳಿಕೆ ಮೂಡಿಸಲು ಕೇಂದ್ರ ಸರ್ಕಾರವು ಸಮಗ್ರ ಕ್ರಿಯಾ ಯೋಜನೆಯೊಂದನ್ನು ರೂಪಿಸಬೇಕು. ರಾಜ್ಯಗಳ ಮೇಲೆ ಕಣ್ಗಾವಲು ಇರಿಸಿ ಅದರ ಪರಿಣಾಮಕಾರಿ ಜಾರಿಗೆ ಒತ್ತಡ ಹೇರಬೇಕು. ಮಕ್ಕಳ ಭವಿಷ್ಯ ಮಸುಕಾಗದಂತೆ ನೋಡಿಕೊಳ್ಳಬೇಕು.

ದಿನದ ಟ್ವೀಟ್

ಯಾವುದು ರಾಮಬಾಣ?

ಸುಶಿಕ್ಷಿತರು ನೀತಿ–ನಿಯಮಗಳನ್ನು ಗಾಳಿಗೆ ತೂರುವ ಮೂಲಕ ಹಾಗೂ ತಮ್ಮ ವರ್ತನೆ, ಅಹಂಕಾರದಿಂದ ಸಮಸ್ಯೆಗಳಿಗೆ ಮೂಲ ಕಾರಣರಾಗುತ್ತಿರುವಾಗ, ದೇಶದಲ್ಲಿ ನಾವು ಎದುರಿಸುತ್ತಿರುವ ಎಲ್ಲಾ ಸಮಸ್ಯೆಗಳಿಗೆ ಶಿಕ್ಷಣವು ರಾಮಬಾಣವಾಗುವುದು ಹೇಗೆ? ಹೆಚ್ಚಿನ ವಿದ್ಯಾಭ್ಯಾಸ ಇಲ್ಲದವರು ಹೆಚ್ಚು ಸಾಮಾನ್ಯ ಜ್ಞಾನ ಮತ್ತು ಈ ನೆಲದ ಕಾನೂನಿನ ಬಗ್ಗೆ ಗೌರವವನ್ನು ಹೊಂದಿದ್ದಾರೆ.

ರೋಹಿತ್ ಸಿಂಹ, ಎಂಜಿನಿಯರ್

25 ವರ್ಷಗಳ ಹಿಂದೆ

ಭಾನುವಾರ, 10-3-1996

• **ಕಪ್ಪುಹಣದ ಚುನಾವಣೆ: ಆತಂಕ**

ಕೊಚ್ಚಿ, ಮಾರ್ಚ್ 9 (ಯುಎನ್‌ಐ)– 'ರಾಜಕೀಯ ಪಕ್ಷಗಳು ಯಾವತ್ತೂ ಪಕ್ಷಕ್ಕೆ ನಿಧಿಗಳನ್ನು ಕಳ್ಳಹಣದಲ್ಲೇ ಪಡೆಯುತ್ತವೆ. ಚುನಾವಣೆಗಳನ್ನು ಕಪ್ಪುಹಣದ ಮೂಲಕವೇ ಎದುರಿಸಲಾಗುತ್ತಿದೆ. ಮುಂದಿನ ಚುನಾವಣೆ ಕೂಡಾ ಹೀಗೆಯೇ ನಡೆಯುತ್ತದೆ' ಎಂದು ಲೋಕಸಭೆಯ ಪ್ರತಿಪಕ್ಷದ ನಾಯಕ, ಬಿಜೆಪಿಯ ಅಟಲ್ ಬಿಹಾರಿ ವಾಜಪೇಯಿ ಇಂದು ಸ್ಪಷ್ಟ ಮಾತುಗಳಲ್ಲಿ ಹೇಳಿದರು.

'ಪತ್ರಿಕಾ ಭೇಟಿ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹವಾಲ ಹಗರಣ ಕುರಿತ ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸಿದರು. 'ಬಿಜೆಪಿ ಕೂಡಾ ಈ ವ್ಯವಸ್ಥೆಯ ಒಂದು ಭಾಗ. ಹಾಗಾಗಿ, ವ್ಯವಸ್ಥೆಯ ಒಳಗೆ ಇದ್ದುಕೊಂಡೇ ಭ್ರಷ್ಟಾಚಾರದ ವಿರುದ್ಧ ಬಿಜೆಪಿ ಹೋರಾಟ ನಡೆಸಲಿದೆ' ಎಂದು ವಾಜಪೇಯಿ ಹೇಳಿದರು.

• **ಭಾರತಕ್ಕೆ ನಿರೀಕ್ಷೆಗೂ ಮೀರಿದ ಸುಲಭ ಜಯ ತಂದ ಪುಲಕ**

ಬೆಂಗಳೂರು, ಮಾರ್ಚ್ 9– ಸವಾಲೆನ್ನಿಸುವ ಮೊತ್ತಕ್ಕೂ ಪಾಕಿಸ್ತಾನ ತಂಡದವರು 'ಸೇರಿಗೆ ಸವಾಸೇರು' ಎನ್ನುವಂತೆ ಹಾಕಿದ ಲಗ್ಗೆಯಿಂದ ತತ್ತರಿಸಿದ್ದ ಭಾರತ ತಂಡದವರು ಶ್ರೀನಾಥ್, ವೆಂಕಟೇಶ್ ಪ್ರಸಾದ್ ಹಾಗೂ ಅನಿಲ್ ಕುಂಬ್ಳೆ ಅವರ 'ಸೇಡಿನ ಪ್ರತಿದಾಳಿ'ಯ ಮೂಲಕ ಚೇತರಿಸಿಕೊಂಡು, 39 ರನ್‌ಗಳಿಂದ ಗೆದ್ದು ವಿಲ್ಸ್ ವಿಶ್ವಕಪ್ ಕ್ರಿಕೆಟ್ ಚಾಂಪಿಯನ್‌ಷಿಪ್ ಸೆಮಿಫೈನಲ್ ತಲುಪಿದರು.

ಅನಿಲ್ ಕುಂಬ್ಳೆ ಒಂದು ದಿನದ ಅಂತರ ರಾಷ್ಟ್ರೀಯ ಪಂದ್ಯಗಳಲ್ಲಿ ವಿಕೆಟ್ ಶತಕ ಗಳಿಸಿದರು.

50 ವರ್ಷಗಳ ಹಿಂದೆ

ಬುಧವಾರ, 10-3-1971

• **ಮತ ಎಣಿಕೆಯ ಎಲ್ಲ ಘಟ್ಟದಲ್ಲೂ ಮತದಾನದ ರಹಸ್ಯ ರಕ್ಷಣೆ**

ಬೆಂಗಳೂರು, ಮಾರ್ಚ್ 9– ಮತಗಳ ಎಣಿಕೆಯ ನೂತನ ವಿಧಾನದಲ್ಲಿ ಮತದಾನದ ರಹಸ್ಯ ಎಲ್ಲ ಘಟ್ಟಗಳಲ್ಲೂ ರಕ್ಷಿಸಲ್ಪಟ್ಟಿದೆ.

ಲೋಕಸಭೆಯ ಮಧ್ಯಂತರ ಚುನಾವಣೆಯಿಂದ ಜಾರಿಗೆ ಬಂದಿರುವ ಈ ಪದ್ಧತಿಯಂತೆ ಮೊದಲು ಒಂದು ಮತಗಟ್ಟೆಯ ಪೆಟ್ಟಿಗೆ ಅಥವಾ ಪೆಟ್ಟಿಗೆಗಳನ್ನು ತೆಗೆದುಕೊಂಡು, ಅವುಗಳ ಮೇಲಿನ ಸೀಲುಗಳು ಭದ್ರವಾಗಿವೆಯೇ ಇಲ್ಲವೇ ಎಂಬುದನ್ನು ಪರಿಶೀಲಿಸಲು ಅಭ್ಯರ್ಥಿಗೆ, ಅವರ ಪ್ರತಿನಿಧಿಗಳಿಗೆ ತೋರಿಸಲಾಗುವುದು.

• **ರಾಷ್ಟ್ರದಾದ್ಯಂತ ಜನಗಣತಿ ಇಂದು ಆರಂಭ**

ನವದೆಹಲಿ, ಮಾರ್ಚ್ 9– ಹತ್ತು ಲಕ್ಷಕ್ಕೂ ಹೆಚ್ಚು ಜನ ಲೆಕ್ಕಿಗರು ದೇಶದ ಸುಮಾರು 56 ಕೋಟಿ ಜನತೆಯ ವಿವರ ಜನಗಣತಿಯನ್ನು ಬುಧವಾರ ಆರಂಭಿಸುವರು.

ವಿಶ್ವ ಜನಸಂಖ್ಯೆಯ ಆರರಲ್ಲೊಂದು ಪಾಲಿನಷ್ಟಾಗುವ ಭಾರತೀಯ ಜನತೆಯ ಜನಗಣತಿಯನ್ನು, ಪ್ರತೀ ಮನೆಗೂ ಹೋಗಿ ಸಂಗ್ರಹಿಸುವ ಭಾರೀ ಕಾರ್ಯಕ್ರಮ 31ರಂದು ಕೊನೆಗೊಳ್ಳುವುದು. ಜನಸಂಖ್ಯೆಯ ವಿವರದ ಜತೆಗೆ ಜನತೆಯ ಸಾಮಾಜಿಕ, ಆರ್ಥಿಕ ವಿವರಗಳನ್ನು ಪಟ್ಟಿ ಮಾಡಲಾಗುವುದು.

ಬಹುತ್ವದ ಒಕ್ಕೂಟ ರೂಪಕವಾದ ಬೆವರು, ಸಮತೆಯ ತವರಿಗಾಗಿ ತವಕಿಸುತ್ತಿದೆ

ದೇವರ ದೇವರು ಜನರ ಬೆವರು

ವಿಶ್ಲೇಷಣೆ

ಬರಗೂರು ರಾಮಚಂದ್ರಪ್ಪ

ದೇವರ ಬಗ್ಗೆ ನಂಬಿಕೆಯಿಲ್ಲದ ದೇಶವಿಲ್ಲ. ಹೀಗೆಂದ ಕೂಡಲೇ ಕಮ್ಯುನಿಸ್ಟ್ ದೇಶಗಳಲ್ಲಿ ದೇವರ ಕುರಿತು ನಂಬಿಕೆ ಇದೆಯೆ ಎಂದು ಹುಬ್ಬೇರಬಹುದು. ಕಮ್ಯುನಿಸ್ಟ್ ಸರ್ಕಾರಗಳನ್ನು ಹೊಂದಿದ ದೇಶಗಳು ನಾಸ್ತಿಕವಾದವನ್ನು ಪ್ರತಿಪಾದಿಸಿದರೂ ದೇವರ ಬಗೆಗಿನ ಜನರ ನಂಬಿಕೆಯನ್ನು ಸಂಪೂರ್ಣ ನಿಷೇಧಿಸಿಲ್ಲ. ಕ್ರಾಂತಿಕಾರಿ ಲೆನಿನ್ ತಮ್ಮ ಪಕ್ಷದಲ್ಲಿ ಧಾರ್ಮಿಕ ನಂಬಿಕೆಯುಳ್ಳವರಿಗೂ ಅವಕಾಶ ನೀಡಿದ್ದರು. ಮುಂದೆ ಬ್ರೆಜ್ನೇವ್, ಕ್ರುಶ್ಚೋವ್ ಕಾಲದಲ್ಲಿ ಜನರು ಅವರವರ ನಂಬಿಕೆಯಲ್ಲಿ ಬದುಕುವ ಆಶಯ ಮತ್ತು ಅವಕಾಶಗಳು ವಿಸ್ತರಣೆಗೊಂಡವು.

ಚೀನಾದಲ್ಲಿ ಅಂಗೀಕರಿಸಿದ 1971ರ ಸಂವಿಧಾನದಲ್ಲಿ 'ಧಾರ್ಮಿಕ ಸ್ವಾತಂತ್ರ್ಯ'ವನ್ನು ಕೊಡಲಾಗಿದೆ. ಆದರೆ ಕಮ್ಯುನಿಸ್ಟ್ ಸರ್ಕಾರಗಳು ನೇರವಾಗಿ ಧರ್ಮ, ದೇವರುಗಳನ್ನು ಪ್ರೋತ್ಸಾಹಿಸುವುದಿಲ್ಲ. ಅಂದರೆ ಧರ್ಮ, ದೇವರ ಬಗೆಗಿನ ನಂಬುಗೆಯು ಖಾಸಗಿಯಷ್ಟೇ. ಈ ವಿವರಣೆಯ ಮೂಲಕ ನಾವು ಅರ್ಥ ಮಾಡಿಕೊಳ್ಳಬೇಕಾದ ವಾಸ್ತವವೆಂದರೆ- ವಿಶ್ವದಲ್ಲಿ ಸಂಪೂರ್ಣ ನಾಸ್ತಿಕವಾಗಿರುವ ದೇಶಗಳಿಲ್ಲ ಎಂಬುದು. ಆದರೆ ಆಸ್ತಿಕವಾದೀ ನಂಬಿಕೆಯ ನೆಪದಲ್ಲಿ ದೇವರು ಮತ್ತು ಧರ್ಮಗಳನ್ನು ಜನರ ಶೋಷಣೆಗೆ ಸಾಧನವಾಗಿಸಿಕೊಳ್ಳುವುದು ಮತ್ತು ವೋಟಿನ ಬ್ಯಾಂಕ್ ಆಗಿ ದುರುಪಯೋಗ ಮಾಡುವುದು ಅಕ್ಷಮ್ಯವಷ್ಟೇ ಅಲ್ಲ, ಧರ್ಮ ಮತ್ತು ದೇವರ ಕುರಿತು ಜನರಲ್ಲಿರುವ ನಂಬಿಕೆಗೆ ಮಾಡುವ ಮೋಸ.

ದೇವರ ಅಸ್ತಿತ್ವದ ಪ್ರಶ್ನೆಗೆ ಉತ್ತರ ಹುಡುಕುವುದು ಸುಲಭ ಸಾಧ್ಯವಲ್ಲ. ದೇವರನ್ನು ಕುರಿತಂತೆ ಬುದ್ಧ ಗುರುವಿನ 'ಮೌನ'ದೊಳಗೆ ಅಸಂಖ್ಯ ಮಾತುಗಳಿವೆ. ಈ ಮೌನವೂ ಮಹಾನ್ ವ್ಯಾಖ್ಯಾನದ ಶಕ್ತಿ ಪಡೆದಿದೆ. ಈಗ ನಾಸ್ತಿಕ ಮತ್ತು ಆಸ್ತಿಕ ವಾದಗಳಾಚೆಗೆ ನಿಂತು ನೋಡಬೇಕಾದ ಸಾಮಾಜಿಕ– ಆರ್ಥಿಕ ಸತ್ಯಗಳು ಸಾಕಷ್ಟಿವೆ. ಜನಸಾಮಾನ್ಯರ ಬೆವರಿನಿಂದಲೇ ಈ ಸಮಾಜ ಮತ್ತು ಸಂಸ್ಕೃತಿಗಳು ನಿರ್ಮಾಣಗೊಂಡಿರುವುದು ಅಂತಹ ಒಂದು ಚಾರಿತ್ರಿಕ ಸತ್ಯ. ಈ ಸತ್ಯದ ಆಧಾರದ ಮೇಲೆ ರೂಸೋ ಹೀಗೆ ಹೇಳಿದ್ದರು: 'ಯಾರನ್ನು ನಾವು ನಿರ್ಲಕ್ಷಿಸಿದ್ದೇವೆಯೊ, ಯಾರು ತಮ್ಮ ಹಕ್ಕುಗಳಿಂದ ವಂಚಿತರಾಗಿದ್ದಾರೆಯೊ, ಯಾರು ತುಳಿತಕ್ಕೊಳಗಾಗಿದ್ದಾರೆಯೊ ಆ ಶ್ರೀಸಾಮಾನ್ಯರೇ ಸಾಮಾಜಿಕ ಕ್ರಮಬದ್ಧತೆಯ ನಿಜವಾದ ನಿರ್ಮಾತೃಗಳು. ಯಾರನ್ನು ನಾವು ಬಡವರು ಎನ್ನುತ್ತೇವೆಯೊ, ಯಾರಿಗೆ ಈ ಸಮಾಜದಲ್ಲಿ ಸ್ಥಾನವಿಲ್ಲವೊ ಅವರೇ ನಿಜಸಮಾಜದ ಬೆನ್ನೆಲುಬು, ರಾಷ್ಟ್ರದ ಸತ್ಯಸಾರ'.

ಅಂಬೇಡ್ಕರ್ ಮತ್ತು ಗಾಂಧೀಜಿ ಕಟ್ಟಕಡೆಯ ಮನುಷ್ಯರಿಗಾಗಿ ಮಿಡಿದರು; ದುಡಿದರು. ನೆಹರೂ 'ಜನರ ಬೆವರು, ಕಣ್ಣೀರು ಮತ್ತು ದುಡಿಮೆಯಿಂದ ಇತಿಹಾಸವು ನಿರ್ಮಾಣಗೊಂಡಿದೆ' ಎಂದರು.

ಸಂಸ್ಕೃತಿಯ ರೂಪಧಾರಣೆಯಲ್ಲೂ ಈ ಬೆವರಿನ ಜನರ ಪಾತ್ರವೇ ಪ್ರಮುಖವಾಗಿದೆ. ಮಾನವ ಶಾಸ್ತ್ರಜ್ಞರಾದ ಹರ್ಸ್ಕೊವಿಟ್ಸ್ ಹೇಳಿದಂತೆ, 'ಸಂಸ್ಕೃತಿಯು ಪರಿಸರದ ಮಾನವ ನಿರ್ಮಿತ ಭಾಗ'. ವೈಲ್ಡ್ ಅವರ ಪ್ರಕಾರ, 'ಮನುಷ್ಯರ ಶ್ರಮವು ಎಷ್ಟೆಷ್ಟು ವಿನಿಯೋಗವಾಗುವುದೋ ಅಷ್ಟಷ್ಟು ಸಂಸ್ಕೃತಿಯ ವಿಸ್ತರಣೆಯಾಗುತ್ತದೆ'. ಅಂದರೆ ಜನಸಾಮಾನ್ಯರು ಬೆವರು ಬಸಿದು ಈ ಸಮಾಜ ಮತ್ತು ಸಂಸ್ಕೃತಿಯನ್ನು ಕಟ್ಟುತ್ತಾ ಇತಿಹಾಸ ನಿರ್ಮಿಸಿದರು.

ನಮ್ಮಲ್ಲಿ ವೇದಕಾಲೀನ ಸಮಾಜವೆಂದು ಕರೆಯುವ, ಕೆಲವು ಸಮಾಜ ವಿಜ್ಞಾನಿಗಳು ಪ್ರಾಚೀನ ಸಮತಾವಾದದ ಕಾಲವೆಂದು ನಿರ್ವಚಿಸಿರುವ, ಆಗಿನ ಅವಧಿಯಲ್ಲಿದ್ದ ಜನರಲ್ಲಿ, ಸ್ವಂತ ಆಸ್ತಿಯೆಂಬ ಕಲ್ಪನೆಯೇ ಇರಲಿಲ್ಲ. ಅವರೆಲ್ಲರೂ ಒಟ್ಟಿಗೇ ಬೆವರು ಹರಿಸಿ ಬದುಕು ಕಟ್ಟಿಕೊಳ್ಳುತ್ತ ಬಂದರು; ಮರದ ಪೊಟರೆ, ಗುಹೆ ಮುಂತಾದ ತಾಣಗಳಲ್ಲಿ ಆಶ್ರಯ ಪಡೆದಿದ್ದವರು ಕೆಲ ಕಾಲಾನಂತರದಲ್ಲಿ ಗುಡಿಸಲು ಕಟ್ಟಿದರು. ಈ ಗುಡಿಸಲೇ ಮುಂದೊಮ್ಮೆ ಮಣ್ಣಿನ ಹೆಂಟೆಗಳ ಮನೆಯಾಯಿತು; ಇಟ್ಟಿಗೆಯ ಕಟ್ಟಡವಾಯಿತು. ಹೀಗೆ ವಾಸಸ್ಥಳಗಳು ವಿಕಾಸಗೊಂಡ ವಿನ್ಯಾಸಗಳಲ್ಲೇ 'ಬೆವರು' ವಹಿಸಿದ ಪಾತ್ರವನ್ನು ಗುರುತಿಸಬಹುದು. ಇಲ್ಲಿ ಬೆವರಿನಲ್ಲೇ ಬಲವೂ ಇತ್ತು; ಬುದ್ಧಿಯೂ ಇತ್ತು. ಬರಬರುತ್ತ ಬಲ ಮತ್ತು ಬುದ್ಧಿಗಳು ಬೆವರಿನಿಂದ ಬೇರ್ಪಟ್ಟು ತಮ್ಮದೇ ಹಿತಾಸಕ್ತಿಯ ವಲಯಾಧಿಪತಿಗಳಾದವು. ಆದರೆ ಮೂಲ ನಿರ್ಮಾಣ ಶಕ್ತಿಯಾದ ಬೆವರಿನ ಪಾತ್ರವನ್ನು ಗೌಣ ಮಾಡುವಂತಿಲ್ಲ. ಯಾಕೆಂದರೆ, ಗುರಿಯಿಲ್ಲದೆ ಹರಿಯುತ್ತಿದ್ದ ನೀರಿಗೆ ಕಟ್ಟೆ ಕಟ್ಟಿ ಕೆರೆ ಕುಂಟೆಗಳನ್ನು ನಿರ್ಮಿಸಿದ್ದು, ಬೆಟ್ಟ ಗುಡ್ಡಗಳ ನಡುವೆ ವಾಸದ ತಾಣಗಳನ್ನು ಹಸನು ಮಾಡಿಕೊಂಡಿದ್ದು, ಕಾಡು ಮೇಡುಗಳ ನಡುವೆ ಬೆಳೆ ಬೆಳೆಯಲು ಹೊಲದ ವಲಯಗಳನ್ನು ರೂಪಿಸಿಕೊಂಡಿದ್ದು, ಎಲ್ಲರೊಟ್ಟಾಗಿ ಬದುಕನ್ನು ರೂಪಿಸಿಕೊಳ್ಳತೊಡಗಿದ್ದು- ಈ ಎಲ್ಲದರ ಮೂಲ ಜನಸಾಮಾನ್ಯರ ಬೆವರು. ಇದೇ ಬೆವರಿನ ಜನರು ಗುಡಿಗೋಪುರ, ಕೋಟೆ ಕೊತ್ತಲಗಳನ್ನು ಕಟ್ಟಿದರು. ರಸ್ತೆ, ರಹದಾರಿಗಳನ್ನು ನಿರ್ಮಿಸಿದರು. ರೈತರಾದರು, ಕಾರ್ಮಿಕರಾದರು, ಕೂಲಿಗಾರರಾದರು, ಕಲಾಕಾರರಾದರು. ಬೆವರಿನ ಮೂಲಕ ಬೆಳಕು ಕಟ್ಟುತ್ತಾ ಕತ್ತಲಲ್ಲಿ ಕಟ್ಟಿಹಾಕಲ್ಪಟ್ಟರು!

'ದೇವರು' ಎಂದು ಕರೆಯುತ್ತಿರುವ ಅಗೋಚರ ಶಕ್ತಿಯ ಕಲ್ಪನೆಯೂ ಈ ಬೆವರಿನ ಮೂಲದಿಂದಲೇ ಹುಟ್ಟಿರಬೇಕೆಂದು ಊಹಿಸಬಹುದಾಗಿದೆ. ನಿಸರ್ಗದ ನಿಗೂಢತೆಯಲ್ಲಿ ದೇವರ ನಂಬಿಕೆಯ ಆರಂಭಿಕ ಹಂತವನ್ನು ಗುರುತಿಸಬಹುದು. ಕಾಡು, ಮೇಡು, ಗುಹೆ ಮುಂತಾದ ಕಡೆಗಳಲ್ಲಿ ವಾಸಿಸುತ್ತಿದ್ದ ಜನರು ಮಳೆಯನ್ನು ಕಂಡರು, ಮೋಡದೊಳಗಿನ ಗುಡುಗನ್ನು ಕೇಳಿ ಬೆಚ್ಚಿದರು. ಸಿಡಿಲಿಗೆ ಭಯಪಟ್ಟರು, ಬಿರುಗಾಳಿಯಿಂದ ಬೆದರಿದರು. ಸೂರ್ಯನ ಹಗಲು- ಬಿಸಿಲು ಮತ್ತು ಚಂದ್ರನ ರಾತ್ರಿ- ಬೆಳದಿಂಗಳ ವಿಶೇಷ ಅನುಭವ ಪಡೆದರು. ಈ ಕತ್ತಲು- ಬೆಳಕಿನ ಸ್ಥಿತ್ಯಂತರಗಳು ಪ್ರಶ್ನೆಗಳಾದವು. ನಿಸರ್ಗದ ನಿಗೂಢ ನಡೆಗಳು ಕಾಡಿಸತೊಡಗಿದವು. ಆಗ ಜನರಿಗೆ ತಮ್ಮಿಂದ ಅತೀತವಾದ ಯಾವುದೋ 'ಶಕ್ತಿ'ಯಿದ್ದು ಅದರ ಮೂಲಕ ಈ ಎಲ್ಲವೂ ಸಂಭವಿಸುತ್ತಿವೆ ಎನ್ನಿಸಿರಬೇಕು. ಈ ಶಕ್ತಿಯೇ ಮುಂದೆ ಆರಾಧಿಸುವ ದೇವರಾಗಿರಬಹುದು. ಸೂರ್ಯದೇವ, ವಾಯುದೇವ, ವರುಣದೇವ, ಮೇಘರಾಜ- ಹೀಗೆ ಹೆಸರಾಗಿರಬಹುದು. ಆದ್ದರಿಂದ ನಿಸರ್ಗದ ಜೊತೆ ಹೋರಾಡುತ್ತಲೇ ಒಗ್ಗಿಸಿಕೊಳ್ಳುವ ಹೊಂದಾಣಿಕೆಯ ಭಾಗವಾಗಿ ಗೋಚರಾತ್ಮಕ ಸಮಾಜ, ಸಂಸ್ಕೃತಿ ಮತ್ತು ಅಗೋಚರಾತ್ಮಕ ಶಕ್ತಿರೂಪಗಳು ಹುಟ್ಟುತ್ತ, ಬೆಳೆಯುತ್ತ ಬಂದಿವೆ ಎಂದು ನಿರ್ಣಯಿಸಬಹುದು.

ಈಗಿನ ವಾಸ್ತವವೆಂದರೆ, ಸಮಾಜ ಮತ್ತು ಸಂಸ್ಕೃತಿಗಳ ಸೃಷ್ಟಿರೂಪವಾದ 'ಬೆವರು' ನಿರಂತರವಾಗಿ ನಿರ್ಲಕ್ಷ್ಯಕ್ಕೆ ಒಳಗಾಗುತ್ತ ಬಂದಿದೆ. 'ಬಲ' ಮತ್ತು 'ಬುದ್ಧಿ'ಗಳು ತಮ್ಮದೇ ವರ್ಗ ಹಿತಾಸಕ್ತಿಯನ್ನು ಬೆಳೆಸಿಕೊಂಡಿವೆ; 'ಬಲ'ವು ಆಳುವ ವರ್ಗವಾಗಿ ಬಂಡವಾಳಶಾಹಿಯ ಹಿತಾಸಕ್ತಿಯನ್ನು ರಕ್ಷಿಸುತ್ತಿದ್ದರೆ, 'ಬುದ್ಧಿ'ಯು ಶಿಕ್ಷಣ ಹಾಗೂ ಸಂಸ್ಕೃತಿಯ ಮೂಲ ಗುತ್ತಿಗೆದಾರನಾಗಿ ಪ್ರಭಾವ ಬೀರುತ್ತಿದೆ. ಬೆವರಿನಿಂದ ಬುದ್ಧಿ-ಬಲಗಳಿಗೆ ಸ್ಥಳಾಂತರಗೊಂಡವರು ಕೂಡ ಬೆವರಿನ ಮೂಲವನ್ನು ಮರೆಯುತ್ತಿದ್ದಾರೆ. ನಿಸರ್ಗದ ನಿಗೂಢತೆಯ ಕಾಡುವಿಕೆಯಿಂದ 'ಬೆವರು' ಕಂಡುಕೊಂಡ ಅಗೋಚರ ಶಕ್ತಿಗಳು ಈಗ ಅಭೌತಿಕ ಮಾತ್ರವಾಗಿ ಉಳಿಯದೆ ಭೌತಿಕ ಲಾಭದ ಸಾಧನವಾಗಿಬಿಟ್ಟಿವೆ. 'ಬಲ' ಮತ್ತು 'ಬುದ್ಧಿ' ರೂಪಕಗಳು ಬೆವರನ್ನು ಶೋಷಣೆ ಮಾಡುತ್ತಿವೆ.

ಸಮಾಜ ಮತ್ತು ಸಂಸ್ಕೃತಿಗಳ ಇತಿಹಾಸವನ್ನೇ ನಿರ್ಮಿಸಿದ ಜನರ ಬೆವರು, ದೇವರ ದೇವರೆಂದು ದೇಶಕ್ಕೆ ದೇಶವೇ ಭಾವಿಸಬೇಕಾಗಿದೆ. 'ಬೆವರು' ಎಂಬ ರೂಪಕದಲ್ಲಿ ಶ್ರಮ, ಸಮುದಾಯ, ಸಮಾಜ, ಸಂಸ್ಕೃತಿ- ಎಲ್ಲವೂ ಇವೆ. ಬೆವರಿಗೆ ಏಕ ದೈವವಿಲ್ಲ. ಏಕ ಧರ್ಮವಿಲ್ಲ, ಏಕ ಸಂಸ್ಕೃತಿಯಿಲ್ಲ, ಬೆವರೆಂಬುದು ಬಹುತ್ವದ ಒಕ್ಕೂಟ ರೂಪಕ. ಇಂತಹ ಬೆವರು ಇಂದು ಸಮತೆಯ ತವರಿಗಾಗಿ ತವಕಿಸುತ್ತಿದೆ. ನಾವು ಬೆವರನ್ನೇ ಉಸಿರಾಗಿಸಿಕೊಂಡು ಬುದ್ಧಿ ಬಲಗಳ ಪ್ರಭುತ್ವಪ್ರಜ್ಞೆಯನ್ನು ವಿಮರ್ಶಿಸುತ್ತ, ಪ್ರಶ್ನಿಸುತ್ತ ಪ್ರಜಾಪ್ರಜ್ಞೆಗೆ ಬೆಲೆ ತರಬೇಕಾಗಿದೆ. ಆಗ ಪ್ರಜಾಪ್ರಭುತ್ವ ಉಳಿಯುತ್ತದೆ.

ಚುರುಮುರಿ



ಬ್ಯಾಲೆನ್ಸ್‌ಡ್ ಬಜೆಟ್

• ಮಣ್ಣೆರಾಜು

'ಈ ಸಾಲಿನ ಬಜೆಟ್ ಸಪ್ಪೆ ಅಂತೆ, ಶುಗರ್‌ಲೆಸ್ ಒಬ್ಬಟ್ಟು ಅಂತ ವಿರೋಧ ಪಕ್ಷದವರು ಟೀಕೆ ಮಾಡ್ತಿದ್ದಾರಂತೆ ಕಣ್ರೀ...' ಎಂದಳು ಸುಮಿ.

'ವಿರೋಧ ಪಕ್ಷದವರು ನಮ್ಮ ಪಕ್ಕದ ಮನೆಯವರು ಇದ್ದಂತೆ. ಸಣ್ಣ ಹುಳುಕು ಸಿಕ್ಕಿದರೂ ಹರಿದು ಹಬ್ಬ ಮಾಡಿಬಿಡ್ತಾರೆ. ಸರ್ಕಾರ, ಸಂಸಾರ ನಡೆಸುವವರಿಗೆ ಮಾತ್ರ ನಿಭಾಯಿಸುವ ಕಷ್ಟ ಅರ್ಥ ಆಗೋದು' ಅಂದ ಶಂಕ್ರಿ.

'ಸಂಸಾರಕ್ಕೆ ಯುಗಾದಿ ಹಬ್ಬ ಇದ್ದಂತೆ ಸರ್ಕಾರಕ್ಕೆ ಬಜೆಟ್ ಅಲ್ಲವೇನ್ರೀ? ತೋರಣ ಕಟ್ಟಿ, ಹೂರಣ ಕುಟ್ಟಿ ಆನಂದವಾಗಿ ಆಚರಿಸಬೇಕು ಅಲ್ವಾ?'

'ನಿಜ, ಸಾಲ ತಂದು ಹಬ್ಬ ಮಾಡಿದಂತಾಗಿದೆ ಸರ್ಕಾರದ ಬಜೆಟ್ ಪರಿಸ್ಥಿತಿ. ಕೊರೊನಾ ವಕ್ಕರಿಸಿದಾಗಿನಿಂದ ಯಾವ ಸಂಸಾರ, ಯಾವ ಸರ್ಕಾರ ದುಡ್ಡು-ಕಾಸು ಇಟ್ಟುಕೊಂಡು ಸುಖವಾಗಿವೆ ಹೇಳು?' ಶಂಕ್ರಿಯ ಅನುಭವದ ಮಾತು.

'ಕೇಂದ್ರ ಸರ್ಕಾರದಿಂದ ಬರಬೇಕಾಗಿದ್ದ ಜಿಎಸ್‌ಟಿ ಬಾಬ್ತು ಬಂದಿದ್ದರೆ ರಾಜ್ಯ ಸರ್ಕಾರದ ಬಜೆಟ್ಟಿಗೆ ಇಷ್ಟೊಂದು ಕಷ್ಟ ಆಗುತ್ತಿರಲಿಲ್ಲವಂತೆ'.

'ಕೇಂದ್ರ ಸರ್ಕಾರ ಅನ್ನೋದು ದೊಡ್ಡ ಸಂಸಾರ. ಖರ್ಚು, ಕಷ್ಟ ಜಾಸ್ತಿಯಾಗಿ ಅದೇ ಕಣ್ಣುಬಾಯಿ ಬಿಡ್ತಿದೆಯಂತೆ... ಕೇಂದ್ರ ಸರ್ಕಾರದತ್ತ ಕೈ ಚಾಚುವ ಬದಲು ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು ಅಂತ ರಾಜ್ಯ ಸರ್ಕಾರ ದೊಡ್ಡ ಯೋಜನೆಗಳನ್ನು ಕಡಿತಗೊಳಿಸಿ, ಸಣ್ಣ ಪ್ರಯೋಜನಗಳಿಗೆ ಆದ್ಯತೆ ನೀಡಿದೆಯಂತೆ'.

'ಕಡಿತ ಅಂದ್ರೆ ಏನ್ರೀ? ದುಡ್ಡಿಲ್ಲ ಅಂತ ಮಕ್ಕಳಿಗೆ ಬರೀ ಅಂಗಿ ಕೊಡಿಸಿ ಚೆಡ್ಡಿ ಕಡಿತಗೊಳಿಸೋದಾ? ಹೆಂಡ್ತಿಗೆ ಹೊಸ ಸೀರೆ ಬದಲು ಹಳೆ ಸೀರೆಗೆ ಮ್ಯಾಚಿಂಗ್ ಬ್ಲೌಸ್ ಕೊಡಿಸೋದಾ?' ಗಂಡನ ಯೋಗ್ಯತೆ ಅಳೆದು ಹೇಳಿದಳು ಸುಮಿ.

'ಹೌದು, ಆಯಾ ಇಲ್ಲದೆ, ವ್ಯಯ ಮಾಡಲಾಗದೆ, ಸರ್ಕಾರದ ಆಯವ್ಯಯ ಅಯೋಮಯವಾಗಿದೆಯಂತೆ ಪಾಪ...!' ಅಂದ ಶಂಕ್ರಿ.

ಸಂಗತ

ಜಾಣ ನಡೆಯಿಂದ ಕನ್ನಡದ ಉಳಿವು!

ಕನ್ನಡದ ಕಡ್ಡಾಯಕ್ಕಾಗಿ ಕಾನೂನು ಮಾಡಿ ಎಂದು ಹೋರಾಡುವ ಬದಲು ಕನ್ನಡದ ನೆಲದಲ್ಲಿ ಬಾಳ್ವೆ ಮಾಡಲು ಕನ್ನಡದ ಬಳಕೆ ಅನಿವಾರ್ಯ ಎಂಬ ವಾತಾವರಣ ಸೃಷ್ಟಿಸುವುದೊಳಿತು

• ಡಾ. ಕೆ.ಎಸ್.ಗಂಗಾಧರ

ಅರೆಭಾಷೆಯ ಒಂದು ನಾಟಕವನ್ನು ಇತ್ತೀಚೆಗೆ ನೋಡಿದೆ. ಅರೆಭಾಷೆಯೆಂದರೆ ಕೊಡಗು ಮತ್ತು ಸುಳ್ಯ ಪ್ರದೇಶದಲ್ಲಿ ಗೌಡರ ಭಾಷೆ ಎಂದೇ ಹೆಸರು ಪಡೆದಿರುವ ಭಾಷೆ. ಅರೆಭಾಷೆಗೆಂದೇ ರಚಿತವಾಗಿರುವ ಅಕಾಡೆಮಿಯವರು ನಾಟಕವನ್ನು ಪ್ರಸ್ತುತಪಡಿಸಿದ್ದರು. ಅರೆಭಾಷೆಗೂ ಕನ್ನಡಕ್ಕೂ ಅಂತಹ ವ್ಯತ್ಯಾಸ ಇದ್ದಂತೆ ಕಾಣಲಿಲ್ಲ. ನಾಟಕ ಸಂಪೂರ್ಣವಾಗಿ ಅರ್ಥವಾಯಿತು. ಕನ್ನಡದಂತೆಯೇ ಕಾಣುವ, ಸೀಮಿತ ಜನರ ಬಾಯಲ್ಲಾಡುವ ಇಂತಹ ಭಾಷೆಗೂ ಒಂದು ಅಕಾಡೆಮಿಯ ಅಗತ್ಯವಿದೆಯೇ ಅಂತ ಒಂದು ಕ್ಷಣ ಅನಿಸಿದರೂ ಅವರು ಆ ಭಾಷೆಯ ಉಳಿವಿಗಾಗಿ ಪಡುತ್ತಿರುವ ಕಷ್ಟವನ್ನು ನೋಡಿ ಹೆಮ್ಮೆಯಾಯಿತು.

ಇದೇ ರೀತಿ, ಕನ್ನಡದ ಇತರ ಉಪಭಾಷೆಗಳಾದ ಸಿದ್ಧಿ, ಸಾಂಕೇತಿ, ಕೊಡವ, ಹವ್ಯಕ, ಸೋಲಿಗ ಮುಂತಾದ ಭಾಷೆಗಳನ್ನಾಡುವ ಜನ ತಮ್ಮ ಭಾಷೆಯ ಉಳಿವಿಗಾಗಿ ಅನೇಕ ಕಮ್ಮಟಗಳನ್ನು, ಸಮ್ಮೇಳನಗಳನ್ನು ಮತ್ತು ಭಾಷಾಕೂಟಗಳನ್ನು ನಡೆಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಒಂದು ಮುಖ್ಯಭಾಷೆಯ ಶಕ್ತಿ ಮತ್ತು ಬೆಳವಣಿಗೆ ಅದರ ಉಪಭಾಷೆಗಳ ಒಳಗೊಳ್ಳುವಿಕೆ ಮತ್ತು ಅವುಗಳನ್ನು ಬಳಸುವ ಜನರ ಸಂಸ್ಕೃತಿಯ ಉಳಿವಿನ ಮೇಲೆ ನಿಂತಿರುತ್ತದೆ. ಈ ದೃಷ್ಟಿಯಿಂದ ಕನ್ನಡದ ಉಪಭಾಷೆಗಳು ನಿರಂತರವಾಗಿ ಉಳಿಯುವುದು ಕನ್ನಡದ ಬೆಳವಣಿಗೆಯ ಮೇಲೆ ಸಕಾರಾತ್ಮಕ ಪರಿಣಾಮವನ್ನು ಬೀರುತ್ತದೆ.

ಉಪಭಾಷೆಗಳ ಉಳಿವಿಗಾಗಿ ಜನ ಇಷ್ಟೆಲ್ಲಾ ಕಸರತ್ತು ಮಾಡುತ್ತಿರುವಾಗ ಕರ್ನಾಟಕದ ಮಣ್ಣಲ್ಲಿ ಕನ್ನಡವೇ ಅವಜ್ಞೆಗೆ ಒಳಗಾಗುತ್ತಿರುವ ಸುದ್ದಿಗಳು ಕಳವಳವನ್ನು ಉಂಟುಮಾಡುತ್ತವೆ. ಬೆಳಗಾವಿಯಲ್ಲಿ ಕನ್ನಡ ಧ್ವಜದ ಬಗ್ಗೆ ನಿರಂತರವಾಗಿ ಮೂಡುತ್ತಿರುವ ಗೊಂದಲಗಳು, ಎಂಇಎಸ್ ಉಪಟಳ, ಗಡಿ ಪ್ರದೇಶಗಳಲ್ಲಿ ಕನ್ನಡ ಶಾಲೆಗಳು ಸೊರಗುತ್ತಿರುವುದು... ಇವೆಲ್ಲ ಆಘಾತಕಾರಿ ಸಂಗತಿಗಳೇ.

ಕರ್ನಾಟಕದಲ್ಲಿ ನೆಲೆ ಕಂಡುಕೊಂಡು ಇಲ್ಲೇ ತಮ್ಮ ಬದುಕನ್ನು ಕಟ್ಟಿಕೊಂಡ ಜನ ತಮ್ಮ ದಿನನಿತ್ಯದ ವ್ಯವಹಾರದಲ್ಲಿ ಕನ್ನಡವನ್ನು ಬಳಸದೆ ಇರುವುದು ಅಕ್ಷಮ್ಯ ಅಪರಾಧ. ಇಂತಹ ಜನ ಕನ್ನಡವನ್ನು ಬಳಸಲೇಬೇಕೆಂಬ ಅನಿವಾರ್ಯವನ್ನು ಸೃಷ್ಟಿಸುವುದು ನಮ್ಮ ಜಾಣ್ಮೆಯ ನಡೆಯಾಗಬೇಕು.

ನಮ್ಮಲ್ಲಿಗೆ ಕೆಲವು ಅನ್ಯಭಾಷಿಕ ರೋಗಿಗಳು ಬರುತ್ತಾರೆ. ಇಲ್ಲೇ ಹುಟ್ಟಿ ಇಲ್ಲೇ ಬೆಳೆದಿರುತ್ತಾರೆ. ನಮ್ಮೊಡನೆ ಮಾತನಾಡುವಾಗ ಕನ್ನಡದಲ್ಲಿ ವ್ಯವಹರಿಸುವುದಿಲ್ಲ. ಆದರೆ ವೈದ್ಯರು ನಿರಂತರವಾಗಿ ಕನ್ನಡದಲ್ಲೇ ಮಾತನಾಡಿಸಿದಾಗ ಅಥವಾ ತಮಗೆ ಬೇರೆ ಭಾಷೆ ಬರುವುದೇ ಇಲ್ಲವೆಂಬಂತೆ ವರ್ತಿಸಿದಾಗ ಅಂತಹ ರೋಗಿಗಳ ಬಾಯಿಂದ ನಿಧಾನವಾಗಿ ಕನ್ನಡ ಹೊರಬರುತ್ತದೆ. ಏಕೆಂದರೆ ಸರಿಯಾಗಿ ಅರ್ಥವಾಗದೆ ವೈದ್ಯರು ತಪ್ಪು ಚಿಕಿತ್ಸೆ ನೀಡಿಬಿಟ್ಟರೆ!

ಬೆಂಗಳೂರಿನಲ್ಲಿ ಬಹಳ ಹಿಂದೆ ನಾನೇ ನೋಡಿದ ಘಟನೆ. ಒಂದು ಪುಟ್ಟ ಅಂಗಡಿಗೆ ಮಲಯಾಳಿ ಗಿರಾಕಿಯೊಬ್ಬ ಬರುತ್ತಾನೆ. ಅವನ ಜೊತೆ ಮೊದಲಿಗೆ ಅಂಗಡಿಯವನು ಕನ್ನಡದಲ್ಲೇ ಮಾತನಾಡುತ್ತಾನೆ. ಸ್ವಲ್ಪ ದಿನ ಕಳೆದ ಮೇಲೆ ನೋಡಿದರೆ ಅಂಗಡಿಯವನು ಆ ಗಿರಾಕಿಯ ಜೊತೆ ಹರಕುಮುರುಕು ಮಲಯಾಳಿ ಭಾಷೆಯಲ್ಲಿ ಮಾತನಾಡುವುದನ್ನು ನೋಡಿ ಸೋಜಿಗವಾಗುತ್ತದೆ. ಹೀಗೆ ಮಾಡಿದರೆ ಕನ್ನಡ ಉದ್ಧಾರವಾಗುವುದು ಹೇಗೆ? ಕನ್ನಡದ ಅಸ್ಮಿತೆ ಉಳಿಯುವುದು ಹೇಗೆ?

ಸರೋಜಿನಿ ಮಹಿಷಿ ವರದಿಯ ಪ್ರಕಾರ, ಯಾವುದೇ ವ್ಯಕ್ತಿ 15 ವರ್ಷಗಳಷ್ಟು ಕಾಲ ಕರ್ನಾಟಕದಲ್ಲಿ ನೆಲೆಸಿದರೆ ಆ ವ್ಯಕ್ತಿಯನ್ನು ಕರ್ನಾಟಕದ ಪ್ರಜೆ ಮತ್ತು ಕನ್ನಡಿಗ ಎಂದು ಗುರುತಿಸಬೇಕು. ಆದರೆ ಇಲ್ಲೇ ಹುಟ್ಟಿ ಇಲ್ಲೇ ಬೆಳೆದವರೂ ಕನ್ನಡದ ಗಂಧವೇ ಇಲ್ಲದಂತೆ ವರ್ತಿಸುವುದು ಒಪ್ಪುವಂತಹ ಸಂಗತಿಯಲ್ಲ.

ನನ್ನ ವಿದ್ಯಾರ್ಥಿನಿಯೊಬ್ಬಳು ವೈದ್ಯಕೀಯ ಪದವಿ ಪೂರೈಸಿದ ಮೇಲೆ ವಿದಾಯದ ಧನ್ಯವಾದ ಹೇಳಲು ಬಂದಿದ್ದಳು. ನನ್ನ ಜೊತೆಯಿದ್ದ ನನ್ನ ಸ್ನೇಹಿತರೊಬ್ಬರು, ಸ್ಫುಟವಾಗಿ ಕನ್ನಡದಲ್ಲಿ ಮಾತನಾಡುತ್ತಿದ್ದ ಅವಳನ್ನು ನೋಡಿ, ವೈದ್ಯರಾದವರು ಇಷ್ಟೊಂದು ಚೆನ್ನಾಗಿ ಕನ್ನಡ ಮಾತನಾಡುವುದು ಅಪರೂಪ ಎಂದು ಹೇಳಿ ಅವಳ ಊರನ್ನು ಕೇಳಿದರು. ಅವಳು ದೆಹಲಿ ಎಂದಾಗ ಅವರಿಗೆ ಆಶ್ಚರ್ಯವಾಯಿತು. ಶಿವಮೊಗ್ಗೆಗೆ ಬಂದ ಮೇಲೆ ಅವಳು ಕನ್ನಡ ಕಲಿತು ನಿರರ್ಗಳವಾಗಿ ಮಾತನಾಡುತ್ತಿದ್ದಳು. ಇಂತಹ ಪ್ರಸಂಗಗಳು ಕನ್ನಡ ಬೆಳೆಯುವ ಬಗ್ಗೆ ಇರುವ ಉತ್ಕಟವಾದ ಮೋಹವನ್ನು ಇಮ್ಮಡಿಗೊಳಿಸುತ್ತವೆ.

ಕನ್ನಡದ ಅಸ್ಮಿತೆ ಕರ್ನಾಟಕದಲ್ಲಿ ಮೊಳಗಬೇಕೆಂದರೆ ನಾವು ಅದನ್ನು ಹೆಚ್ಚುಹೆಚ್ಚಾಗಿ ದಿನನಿತ್ಯದ ವ್ಯವಹಾರದಲ್ಲಿ ಬಳಸಬೇಕು. ಇಂಗ್ಲಿಷ್ ಭಾಷೆಯನ್ನು ಬಳಸುವಾಗ ತಪ್ಪಾದರೆ ಕೀಳರಿಮೆಯೆಂದು ಭಾವಿಸುವ ನಾವು, ನಮ್ಮ ಮಕ್ಕಳು ಕನ್ನಡವನ್ನು ತಪ್ಪಾಗಿ ಉಚ್ಚರಿಸಿದಾಗ ಮುಜುಗರ ಪಟ್ಟುಕೊಳ್ಳದಿರುವುದು ಆಭಾಸದಂತೆ ಕಾಣುತ್ತದೆ.

ಕನ್ನಡದ ಕಡ್ಡಾಯಕ್ಕಾಗಿ ಕಾನೂನು ಮಾಡಿ ಎಂದು ಹೋರಾಡುವ ಬದಲು ಕನ್ನಡದ ನೆಲದಲ್ಲಿ ಬಾಳ್ವೆ ಮಾಡಲು ಕನ್ನಡದ ಬಳಕೆ ಅನಿವಾರ್ಯ ಎಂಬ ವಾತಾವರಣವನ್ನು ಸೃಷ್ಟಿಸಿದರೆ ಕನ್ನಡ ಮತ್ತಷ್ಟು ಸಮೃದ್ಧಿಯಾಗುತ್ತದೆ. ಹಿಂಜರಿಕೆ ಇಲ್ಲದೆ ಎಲ್ಲಾ ಸಂದರ್ಭಗಳಲ್ಲೂ ಕನ್ನಡವನ್ನೇ ಬಳಸುತ್ತಾ ಹೋದರೆ ಪಬ್ಬುಗಳಲ್ಲಿ, ಮಾಲುಗಳಲ್ಲಿ, ಐ.ಟಿ ಪಾರ್ಕುಗಳಲ್ಲಿ ಮತ್ತು ಗಡಿ ಪ್ರದೇಶಗಳಲ್ಲಿ ಕೂಡ ಕನ್ನಡದ ಕಲರವ ಕೇಳುವಂತೆ ಆಗುತ್ತದೆ.

ವಾಚಕರ ವಾಣಿ

ಬಾಹ್ಯಾಡಂಬರ, ಒಣಪ್ರತಿಷ್ಠೆ ಸಲ್ಲ

ಮಹಿಳಾ ದಿನಾಚರಣೆಯ ಪ್ರಯುಕ್ತ ಪ್ರಕಟವಾದ ಸಂಪಾದಕೀಯದಲ್ಲಿ (ಪ್ರ.ವಾ., ಮಾರ್ಚ್ 8), ಸ್ತ್ರೀಗೆ ಸಿಗಬೇಕಾದ ಸಮಾನತೆ, ಸ್ವಾತಂತ್ರ್ಯ, ಸಾಮಾಜಿಕ ನ್ಯಾಯಕ್ಕೆ ಗಂಡೂ ಸಂಪೂರ್ಣ ಸಹಕಾರ ನೀಡಬೇಕು; ಸಮಾನತೆಗಾಗಿ ಧ್ವನಿಯೆತ್ತುವುದು ಮನೆಗಳಿಂದ, ಕಚೇರಿಗಳಿಂದ ಮನಃಪೂರ್ವಕವಾಗಿ ಪ್ರಾರಂಭವಾಗಲಿ ಎನ್ನುವ ಸಲಹೆ ಅರ್ಥಪೂರ್ಣವಾದುದು. 'ಹೆಣ್ಣು ಗಂಡು ಇಬ್ಬರೂ ಪಕ್ಷಿಯ ಎರಡು ರೆಕ್ಕೆಗಳಿದ್ದಂತೆ. ಪಕ್ಷಿಗೆ ಎರಡೂ ರೆಕ್ಕೆಗಳು ಹೇಗೆ ಅನಿವಾರ್ಯವೋ ಹಾಗೇ ನಮ್ಮ ಬಾಳಿಗೆ ಗಂಡು ಹೆಣ್ಣು ಇಬ್ಬರೂ ಅನಿವಾರ್ಯ, ಅತ್ಯಗತ್ಯ' ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದರು. ಗಾಂಧೀಜಿ 'ಹೆಣ್ಣು ಶಾಂತಿಯ ಪ್ರತೀಕ, ಪ್ರಕೃತಿಯ ಸ್ವರೂಪ. ಸರ್ವಜೀವಿ ಪೋಷಕಳು. ಆಕೆ ಮುಂಚೂಣಿಯಲ್ಲಿದ್ದರೆ ಸತ್ಯಾಗ್ರಹ, ವೈಯಕ್ತಿಕ ಬದುಕೂ ಯಶಸ್ಸು ಪಡೆಯುತ್ತದೆ ಎಂದಿದ್ದರು'.

ಈ ಎರಡೂ ವಾಸ್ತವ ಸಂಗತಿಗಳನ್ನು ಎಲ್ಲರೂ ಗಮನದಲ್ಲಿ ಇಡುವುದು ಒಳಿತು. ಆದರೆ ಆಧುನಿಕ ಮಹಿಳೆಯು ಬಾಹ್ಯ ಸೌಂದರ್ಯ ಕಾಯ್ದುಕೊಳ್ಳುವುದಕ್ಕಾಗಿ ಮಗುವಿಗೆ ಅಮೃತಪಾನವಾದ ಮೊಲೆಯುಣಿಸದಿರುವುದು, ಅತೀ ಸೌಂದರ್ಯ ಆಕಾಂಕ್ಷೆಯಿಂದ ಸೌಂದರ್ಯ ಪ್ರಸಾಧನವು ಕೋಟ್ಯಂತರ ಡಾಲರ್ ಮೌಲ್ಯದ ಉದ್ದಿಮೆಯಾಗುವುದಕ್ಕೆ ಕಾರಣಳಾಗಿರುವುದು ಆರೋಗ್ಯಕ್ಕೆ ಹಾಗೂ ಪರಿಸರಕ್ಕೆ ಬಹುಮಾರಕ. ಪ್ರಕೃತಿಯ ಮೂಲಭೂತ ಪೋಷಕಗಳಾದ ಗಾಳಿ, ನೀರು, ಆಹಾರ, ಬೆಳಕಿಗೆ ಬೆಲೆ ಕೊಡದೆ ಪುರುಷನ ಅಹಂಕಾರದ ಅಭಿವೃದ್ಧಿಗೆ ನೆರವು ನೀಡಿ, ಆಂತರಿಕ ಆನಂದಕ್ಕಿಂತ ಬಾಹ್ಯಾಡಂಬರ, ಒಣಪ್ರತಿಷ್ಠೆ, ಗುರುತಿಸುವಿಕೆಯೇ ಮುಖ್ಯವೆಂದು ಕೆಲವು ಮಹಿಳೆಯರು ಭಾವಿಸಿರುವುದು ಅಪಾಯಕಾರಿ. ಪರಿಸರಕ್ಕೆ ಮಾರಕವಾದ ಅದ್ದೂರಿ ಬಂಗಲೆ, ಕಾರಿನಂತಹವುಗಳನ್ನು ಒಳಗೊಂಡ ಪರಿಸರ ಮಾರಕ ಜೀವನಶೈಲಿಗೆ ಅಜ್ಞಾನದಿಂದ ಪ್ರಚೋದಿಸುತ್ತಿರುವುದು ವಿಷಾದನೀಯ.

ಇನ್ನಾದರೂ ತಾಯಂದಿರಲ್ಲಿ ಭೂಮಿ ತೂಕದ, ತಾಯ್ತನದ ಹೆಣ್ಣಿನ ಮೂಲಭೂತ ಪೋಷಕಹೃದಯ ಬಲಗೊಳ್ಳಲಿ. ತನ್ಮೂಲಕ ಸರ್ವೇ ಜನಾ, ಸರ್ವೇ ಜೀವಿ ಸುಖಿನೋಭವಂತು ಎನ್ನುವ ಕಡೆ ಕಾಳಜಿ ಹೆಚ್ಚಾಗಲಿ.

ಶಿವನಕೆರೆ ಬಸವಲಿಂಗಪ್ಪ, ದಾವಣಗೆರೆ

ಅಸ್ಪೃಶ್ಯತೆ ತೊಡೆಯಲು ಪ್ರೇರಣೆ

'ಹೀಗೂ ಸಾಧ್ಯ ಪರಿವರ್ತನೆ!' ಎಂಬ ಲೇಖನದಲ್ಲಿ (ಸಂಗತ, ಮಾರ್ಚ್ 9) ಮಲ್ಲಿಕಾರ್ಜುನ ಹೆಗ್ಗಳಗಿ ಅವರು ಮಹಾರಾಷ್ಟ್ರ– ಕರ್ನಾಟಕದ ಗಡಿ ಭಾಗದ ಹಳ್ಳಿಯೊಂದರಲ್ಲಿ ಅಸ್ಪೃಶ್ಯತೆ ಆಚರಣೆ ಬಗ್ಗೆ ಜನರ ಮನೋಭಾವ ಬದಲಾಗಿದ್ದನ್ನು ಮನಮುಟ್ಟುವಂತೆ ವಿವರಿಸಿದ್ದಾರೆ. ನಿಜಕ್ಕೂ ಇದೊಂದು ಮನುಷ್ಯರ ಒಳಗಣ್ಣು ತೆರೆಸುವಂತಹ ಬರಹ.

ಪ್ರಕಾಶ ಖೇಡ ಎಂಬುವರು ತಮ್ಮ ಶಕ್ತಿ, ಸಾಮರ್ಥ್ಯ, ಸಾಧನೆ ಮತ್ತು ಸಂಸ್ಕಾರದಿಂದ ಹಳ್ಳಿಯ ಜನರ ಮನಸ್ಸನ್ನು ಗೆದ್ದು, ಹಳ್ಳಿಯಲ್ಲಿ ಅಸ್ಪೃಶ್ಯತೆಯನ್ನು ತೊಡೆದು ಹಾಕಲು ಪ್ರೇರಣೆಯಾದದ್ದು, ಗುಡಿಯ ಜೀರ್ಣೋದ್ಧಾರಕ್ಕೆ ಹಣ ನೀಡಿ, ಅದರ ಪ್ರವೇಶಕ್ಕೆ ಎಲ್ಲರಿಗೂ ಮುಕ್ತ ಅವಕಾಶ ನೀಡುವಂತೆ ಹಳ್ಳಿಗರನ್ನು ಕೋರಿದ್ದು, ಜನ ಅವರ ಮಾತಿನಂತೆ ದೇವಸ್ಥಾನಕ್ಕೆ ಮುಕ್ತ ಅವಕಾಶ ನೀಡಿದ್ದು ನಿಜಕ್ಕೂ ಒಂದು ಸಾಮಾಜಿಕ ಕ್ರಾಂತಿ. ಅಂಬೇಡ್ಕರ್, ಗಾಂಧಿಯವರ ಕನಸು ಕೂಡ ಇದೇ ಆಗಿತ್ತು. ನಾಗರಿಕ ಸೌಲಭ್ಯಗಳು ಸಾಮಾನ್ಯರಿಗೆ ಸಿಗುವಷ್ಟು ಸುಲಭವಾಗಿ ದಲಿತ ಜನಾಂಗಕ್ಕೂ ಸಿಗಬೇಕು ಎಂಬುದಾಗಿತ್ತು. ಅವರ ಕನಸನ್ನು ಈಡೇರಿಸುವ ದಿಸೆಯಲ್ಲಿ ಪ್ರಕಾಶ ಖೇಡ ಅವರ ಪ್ರಯತ್ನ ಶ್ಲಾಘನೀಯ.

ಪ್ರಾಣೇಶ ಪೂಜಾರ್ ಗಿಣಗೇರಾ, ಕೊಪ್ಪಳ

ಸರ್ವರ ಹಿತ ಕಾಯುವ ಬಜೆಟ್

ಕೋವಿಡ್– 19ರಿಂದ ರಾಜ್ಯ ಸರ್ಕಾರ ಬಹಳಷ್ಟು ಆರ್ಥಿಕ ತೊಂದರೆಯಲ್ಲಿದ್ದರೂ ಅಬಕಾರಿ ತೆರಿಗೆ, ಪೆಟ್ರೋಲ್, ಡೀಸೆಲ್‌ಗಳ ಮೇಲೆ ತೆರಿಗೆ ಹೆಚ್ಚಳ ಮಾಡದಿರುವುದು ಸಮಾಧಾನಕರ. ಮಹಿಳೆಯರು ಆರ್ಥಿಕವಾಗಿ ಸಬಲರಾಗಿ ಸ್ವಾವಲಂಬಿ ಜೀವನ ನಡೆಸಲು ಹಲವಾರು ಯೋಜನೆಗಳ ಘೋಷಣೆ, ವಿವಿಧ ಕ್ಷೇತ್ರಗಳಲ್ಲಿ ಮೂಲ ಸೌಕರ್ಯಗಳನ್ನು ಒದಗಿಸಲು ಅನುದಾನ ಘೋಷಿಸುವ ಮೂಲಕ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಸರ್ವರ ಹಿತ ಕಾಯುವ ಜನಪರ ಬಜೆಟ್ ಮಂಡಿಸಿದ್ದಾರೆ.

ಉದಯ ಮ. ಯಂಡಿಗೇರಿ, ಧಾರವಾಡ

ಅಂಗವಿಕಲರ ಸಬಲೀಕರಣಕ್ಕೆ ಸಿಗದ ಆದ್ಯತೆ

ಚುನಾವಣೆಪೂರ್ವ ಪ್ರಣಾಳಿಕೆಯಲ್ಲಿ ಅಂಗವಿಕಲರಿಗಾಗಿ ಘೋಷಣೆ ಮಾಡಿದ ಆಶ್ವಾಸನೆಗಳನ್ನು ರಾಜ್ಯದ ಈಗಿನ ಸರ್ಕಾರ ತನ್ನ ಎರಡನೇ ಬಜೆಟ್‌ನಲ್ಲಿಯೂ ಸಂಪೂರ್ಣವಾಗಿ ಕಡೆಗಣಿಸಿರುವುದು ಸರ್ಕಾರಕ್ಕೆ ಅಂಗವಿಕಲರ ಮೇಲಿರುವ ಅಸಡ್ಡೆಯನ್ನು ತೋರಿಸುತ್ತದೆ. ಆರ್ಥಿಕ ಸಂಕಷ್ಟದಲ್ಲೂ ಜಾತಿಗೊಂದು ನಿಗಮ ಸ್ಥಾಪನೆಗೆ ಕೋಟ್ಯಂತರ ಹಣ ಮೀಸಲಿಡುವ ಸರ್ಕಾರ, ಅಂಗವಿಕಲರ ಸಬಲೀಕರಣ ಮತ್ತು ಸಾಮಾಜಿಕ ಭದ್ರತೆಗೆ ಒತ್ತು ನೀಡದಿರುವ ಔಚಿತ್ಯವಾದರೂ ಏನು? ಅಂಗವಿಕಲರಿಗೆ ಸಮಾನ ಅವಕಾಶಗಳ ಬಗ್ಗೆ ಶಾಸನ ರಚಿಸಿ ನೀತಿಪಾಠ ಮಾಡುವ ಸರ್ಕಾರ, ಆ ನೀತಿಯನ್ನೇ ಮರೆತಿರುವುದು ಸರಿಯೇ?

ಚಂದ್ರಶೇಖರ ಪುಟ್ಟಪ್ಪ, ಬೆಂಗಳೂರು

ಪಠ್ಯಕ್ಕೆ ಮಂಜಮ್ಮ ಜೀವನಚರಿತ್ರೆ: ಸ್ವಾಗತಾರ್ಹ ಕ್ರಮ

ಜಾನಪದ ಅಕಾಡೆಮಿ ಅಧ್ಯಕ್ಷೆ ಮಂಜಮ್ಮ ಜೋಗತಿ ಅವರ ಜೀವನಚರಿತ್ರೆ 'ನಡುವೆ ಸುಳಿವ ಹೆಣ್ಣು' ಅನ್ನು ಗುಲ್ಬರ್ಗ ವಿಶ್ವವಿದ್ಯಾಲಯದ ಬಿ.ಎಸ್ಸಿ ಕನ್ನಡ ವಿಷಯದ ಪಠ್ಯಕ್ರಮಕ್ಕೆ ಅಳವಡಿಸುವ ಕಾರ್ಯ ನಡೆದಿರುವುದನ್ನು ತಿಳಿದು ಸಂತೋಷವಾಯಿತು. ವಿವಿಧ ಕ್ಷೇತ್ರಗಳಲ್ಲಿ ಮಹತ್ತರ ಸಾಧನೆ ಮಾಡಿದವರ ಪರಿಚಯವನ್ನು ಅವರ ಜೀವನದ ಏಳು-ಬೀಳು, ಸಾಧನೆಗಳ ಮೂಲಕ ವಿದ್ಯಾರ್ಥಿಗಳಿಗೆ ಪರಿಚಯ ಮಾಡಿಕೊಡುವುದು ಉತ್ತಮವಾದ ಕಾರ್ಯ.

ಆದರೆ ಮಂಜಮ್ಮ ಅವರ ಜೀವನಚರಿತ್ರೆಯನ್ನು ಕೇವಲ ಬಿ.ಎಸ್ಸಿ ವಿದ್ಯಾರ್ಥಿಗಳನ್ನು ಗಮನದಲ್ಲಿ ಇಟ್ಟುಕೊಳ್ಳುವುದಕ್ಕಿಂತ ಉಳಿದ ಎಲ್ಲಾ ವಿಭಾಗದ ವಿದ್ಯಾರ್ಥಿಗಳಿಗೂ ಅನ್ವಯವಾಗುವಂತೆ ಪಠ್ಯಕ್ರಮದಲ್ಲಿ ಅಳವಡಿಸುವುದು ಒಳ್ಳೆಯದು. ಶಾಲಾ ಪಠ್ಯಕ್ರಮದಲ್ಲಿ ಅಳವಡಿಸುವುದೂ ಅಪೇಕ್ಷಣೀಯ.

ಸಂಪತ್ ಆಕಳವಾಡಿ, ಕೊಪ್ಪಳ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಆಹಾರ ಪೋಲು

ಹಸಿವು ನಿರ್ಮೂಲನೆಗೆ ಸವಾಲು

ಜಗತ್ತಿನ ಬಲಿಷ್ಠ ಆರ್ಥಿಕತೆಯ ರಾಷ್ಟ್ರಗಳಲ್ಲಿ ಒಂದೆನಿಸಬೇಕು ಎಂಬ ಓಟದಲ್ಲಿರುವ ಭಾರತದಲ್ಲಿ, ಹಸಿವಿನಿಂದ ಜನರು ಸಾಯುತ್ತಿರುವ ಬಗ್ಗೆ ಅಲ್ಲೊಂದು ಇಲ್ಲೊಂದು ವರದಿ ಬರುತ್ತಲೇ ಇದೆ. ಅಪೌಷ್ಟಿಕತೆಯ ಸಮಸ್ಯೆ ನಮ್ಮ ಹಲವು ರಾಜ್ಯಗಳನ್ನು ಕಾಡುತ್ತಿದೆ. ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ಹಸಿವಿನಿಂದ ದಿನಿತ್ಯವೆಂಬಂತೆ ಜನರು ಸಾಯುತ್ತಿದ್ದಾರೆ ಎಂಬುದು ಒಂದು ವಾಸ್ತವವಾದರೆ, ಜಗತ್ತಿನಾದ್ಯಂತ ಪ್ರತಿದಿನವೂ ಲಕ್ಷಾಂತರ ಟನ್‌ಗಳಷ್ಟು ಆಹಾರ ಪೋಲಾಗುತ್ತಿದೆ ಎಂಬುದು ಇನ್ನೊಂದು ಕಟು ವಾಸ್ತವವಾಗಿದೆ.

2019ರಲ್ಲಿ ಜಗತ್ತಿನಾದ್ಯಂತ 93.1 ಕೋಟಿ ಟನ್‌ನಷ್ಟು ಆಹಾರ ಪೋಲಾಗಿದೆ ಎಂದು ವಿಶ್ವ ಸಂಸ್ಥೆಯ ಪರಿಸರ ಕಾರ್ಯಕ್ರಮದಡಿ ತಯಾರಿಸಲಾದ 'ಆಹಾರ ಪೋಲು ಸೂಚ್ಯಂಕ- 2021' ಹೇಳಿದೆ. ಇದರಲ್ಲಿ ಶೇ 61ರಷ್ಟು ಆಹಾರ ಪೋಲು ಮನೆಗಳಲ್ಲೇ ಆಗಿದೆ. ಶೇ 26ರಷ್ಟು ಆಹಾರ ತಯಾರಿಕಾ ಉದ್ದಿಮೆಗಳಿಂದ ಹಾಗೂ ಶೇ 13ರಷ್ಟು ಇತರ ಕಡೆಗಳಿಂದ ಪೋಲಾಗಿದೆ. ಜಾಗತಿಕ ಮಟ್ಟದಲ್ಲಿ ಉತ್ಪಾದಿಸಲಾಗುವ ಒಟ್ಟು ಆಹಾರ ಪದಾರ್ಥಗಳಲ್ಲಿ ಶೇ 17ರಷ್ಟು ಪೋಲಾಗಿದೆ ಎಂದು ವರದಿ ಹೇಳಿದೆ.

ಪೋಲಾಗಿರುವ ಆಹಾರವನ್ನು ತಲಾ 40 ಟನ್‌ಗಳಂತೆ ಲಾರಿಗಳಲ್ಲಿ ತುಂಬಿ, ಒಂದರ ಹಿಂದೊಂದು ನಿಲ್ಲಿಸುತ್ತಾ ಹೋದರೆ, ಅವುಗಳ ಸಾಲು ಭೂಮಿಯನ್ನು 7 ಬಾರಿ ಸುತ್ತುವರಿಯುವಷ್ಟು ಉದ್ದವಾಗುತ್ತದೆ ಎಂದು ವರದಿ ಅಂದಾಜಿಸಿದೆ. ಜಾಗತಿಕ ಮಟ್ಟದಲ್ಲಿ ಪೋಲಾಗುತ್ತಿರುವ ಆಹಾರದ ಅಗಾಧತೆಯನ್ನು ತಿಳಿಸಲು ಈ ಉದಾಹರಣೆ ಸಾಕು.

ಬಡವ- ಶ್ರೀಮಂತ ಭೇದವಿಲ್ಲ: ಶ್ರೀಮಂತ ರಾಷ್ಟ್ರಗಳಲ್ಲೇ ಆಹಾರ ಪದಾರ್ಥ ಹೆಚ್ಚಿನ ಪ್ರಮಾಣದಲ್ಲಿ ಪೋಲಾಗುತ್ತದೆ ಎಂಬ ನಂಬಿಕೆ ಇತ್ತೀಚಿನವರೆಗೂ ಇತ್ತು. ಆದರೆ, ಅದು ಸುಳ್ಳು ಎಂಬುದು ಅಧ್ಯಯನದಿಂದ ತಿಳಿದುಬಂದಿದೆ. ಇಲ್ಲಿ ಶ್ರೀಮಂತ- ಬಡ ರಾಷ್ಟ್ರವೆಂಬ ಭೇದಭಾವವಿಲ್ಲ. ತಲಾ ಆದಾಯದಲ್ಲಿ ಎಷ್ಟೇ ವ್ಯತ್ಯಾಸವಿರಲಿ ಆಹಾರ ಪೋಲಿನ ಪ್ರಮಾಣ ಎಲ್ಲಾ ರಾಷ್ಟ್ರಗಳಲ್ಲೂ ಬಹುತೇಕ ಒಂದೇ ಪ್ರಮಾಣದಲ್ಲಿದೆ.

ಜಾಗತಿಕ ಮಟ್ಟದಲ್ಲಿ ತಲಾವಾರು ಆಹಾರ ಪೋಲು ಪ್ರಮಾಣ ವಾರ್ಷಿಕ 121ಕೆ.ಜಿ.ಯಷ್ಟಿದೆ. ಇದರಲ್ಲಿ 74 ಕೆ.ಜಿ.ಯಷ್ಟು ಮನೆಗಳಲ್ಲೇ ಪೋಲಾಗುತ್ತದೆ ಎಂದು ಅಧ್ಯಯನದಲ್ಲಿ ಕಂಡುಬಂದಿದೆ.

2019ರಲ್ಲಿ 69 ಕೋಟಿ ಜನರು ಆಹಾರದ ಕೊರತೆ ಎದುರಿಸಿದ್ದಾರೆ. ಕೋವಿಡ್‌-19 ಕಾರಣದಿಂದಾಗಿ ಮುಂದಿನ ವರ್ಷಗಳಲ್ಲಿ ಆ ಸಂಖ್ಯೆ ಇನ್ನಷ್ಟು ಏರಿಕೆಯಾಗುವ ಅಂದಾಜು ಇದೆ. 300 ಕೋಟಿ ಜನರಿಗೆ ಆರೋಗ್ಯಕರ ಆಹಾರ ಕೈಗೆಟುಕದಂತಾಗುವ ಸಾಧ್ಯತೆ ಇದೆ. ಆದ್ದರಿಂದ ಆಹಾರ ಪೋಲನ್ನು ನಿಯಂತ್ರಿಸುವ ಕಡೆಗೆ ಜಗತ್ತು ಗಮನ ಹರಿಸಬೇಕು ಎಂದು ವರದಿ ಉಲ್ಲೇಖಿಸಿದೆ.

2030ರ ವೇಳೆಗೆ ಜಾಗತಿಕ ಮಟ್ಟದಲ್ಲಿ ಸುಸ್ಥಿರ ಅಭಿವೃದ್ಧಿಗಾಗಿ ಕೆಲವು ಗುರಿಗಳನ್ನು ನಿರ್ಧರಿಸಲಾಗಿದೆ. ಆ ಗುರಿಯನ್ನು ಸಾಧಿಸಬೇಕಾದರೆ ಆಹಾರ ಪೋಲು ಪ್ರಮಾಣದ ಮೇಲೆ ನಿಯಂತ್ರಣ ಸಾಧಿಸುವುದು ಅಗತ್ಯ. ಸರ್ಕಾರಗಳು ಇತ್ತ ಗಮನ ಹರಿಸಲೇ ಬೇಕಾಗಿದೆ ಎಂದು ತಜ್ಞರು ಹೇಳಿದ್ದಾರೆ.

'ಈ ಉದ್ದೇಶ ಸಾಧನೆಗೆ ಪ್ರತಿಯೊಬ್ಬರೂ ಕಾಣಿಕೆ ನೀಡಬಹುದು. ಖರೀದಿಯ ವೇಳೆ ಎಚ್ಚರಿಕೆಯಿಂದ ಇರಬೇಕು. ಅಡುಗೆಯನ್ನು ಇನ್ನಷ್ಟು ಸೃಜನಾತ್ಮಕಗೊಳಿಸಬೇಕು. ಎಲ್ಲೇ ಆಗಲಿ, ಆಹಾರ ಪೋಲು ಮಾಡುವುದು ಸ್ವೀಕಾರಾರ್ಹವಲ್ಲ ಎಂಬ ಎಚ್ಚರವನ್ನು ಪ್ರತಿಯೊಬ್ಬರೂ ಬೆಳೆಸಿಕೊಳ್ಳಬೇಕು. ಹಾಗಾದರೆ ಮಾತ್ರ ಎಲ್ಲರಿಗೂ ಆಹಾರ ಲಭ್ಯವಾಗುವಂತೆ ಮಾಡುವ ಉದ್ದೇಶ ಈಡೇರಲು ಸಾಧ್ಯ' ಎಂದು ಸಮೀಕ್ಷೆ ನಡೆಸಿದ ತಂಡದಲ್ಲಿದ್ದ ಆ್ಯಂಡರ್ಸನ್ ಹೇಳಿದ್ದಾರೆ.

ವರದಿ: ಉದಯ ಯು., ಜಯಸಿಂಹ ಆರ್., ಅಮೃತಕಿರಣ್ ಬಿ.ಎಂ

ಮನೆಗಳಲ್ಲಿಯೇ ಹೆಚ್ಚು ಪೋಲು



ಭಾರತದಲ್ಲಿ ಆಹಾರ ಪೋಲು

ಭಾರತವನ್ನು, ಆಹಾರ ಪೋಲಿನ ಸಮಗ್ರ ಮಾಹಿತಿ ಲಭ್ಯವಿಲ್ಲದ ದೇಶಗಳ ವರ್ಗದಲ್ಲಿ ಸೇರಿಸಲಾಗಿದೆ. ಈ ಅಧ್ಯಯನದ ವೇಳೆ ದೇಶದ ಕೆಲವೇ ನಗರಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳಲಾಗಿದೆ. ಭಾರತದಲ್ಲಿ ಮನೆಗಳಲ್ಲಿ ಪೋಲಾಗುವ ಆಹಾರದ ಬಗ್ಗೆ ಮಾತ್ರ ಮಾಹಿತಿ ಲಭ್ಯವಿದೆ

6.8 ಕೋಟಿ ಟನ್ — ಭಾರತದ ವಾರ್ಷಿಕ ಆಹಾರ ಪೋಲಿನ ಪ್ರಮಾಣ

50 ಕೆ.ಜಿ. — ಭಾರತದಲ್ಲಿ ವಾರ್ಷಿಕ ತಲಾವಾರು ಆಹಾರ ಪೋಲಿನ ಪ್ರಮಾಣ

ಪರಿಣಾಮಗಳು ಗಂಭೀರ

'ಆಹಾರ ಪೋಲು' ಎಂಬುದು ಹಸಿವಿಗಷ್ಟೇ ಸಂಬಂಧಿಸಿದ ವಿಚಾರವಲ್ಲ. ಪರಿಸರ, ಸಾಮಾಜಿಕ ಮತ್ತು ಆರ್ಥಿಕವಾಗಿಯೂ ಅದು ಬಹಳ ದೊಡ್ಡ ಪರಿಣಾಮ ಉಂಟುಮಾಡುತ್ತದೆ. ಹವಾಮಾನ ಬದಲಾವಣೆ, ಪ್ರಕೃತಿ ಮತ್ತು ಜೀವವೈವಿಧ್ಯ ನಷ್ಟ, ತ್ಯಾಜ್ಯ ನಿರ್ವಹಣೆಗೂ ಇದು ಸವಾಲೆಸೆಯುತ್ತದೆ.

ಹವಾಮಾನ ವೈಪರೀತ್ಯವು ಜಗತ್ತು ಎದುರಿಸುತ್ತಿರುವ ದೊಡ್ಡ ಸಮಸ್ಯೆಯಾಗಿದೆ. ಅದರ ವಿರುದ್ಧ ಕ್ರಮ ಜರುಗಿಸುವುದು ಇನ್ನೂ ಪೂರ್ಣ-ಪ್ರಮಾಣದಲ್ಲಿ ಸಾಧ್ಯವಾಗಿಲ್ಲ. ಹವಾಮಾನ ವೈಪರೀತ್ಯಕ್ಕೆ ಆಹಾರ ತ್ಯಾಜ್ಯದ ಕೊಡುಗೆಯೂ ಇದೆ. ಶೇ 8ರಿಂದ ಶೇ 10ರಷ್ಟು ಹಸಿರುಮನೆ ಅನಿಲ ಹೊರಸೂಸುವಿಕೆಗೆ, ಬಳಕೆಯಾಗದ ಆಹಾರ ಪದಾರ್ಥಗಳು ಕಾರಣವಾಗಿವೆ ಎಂದು ವರದಿ ಅಭಿಪ್ರಾಯಪಟ್ಟಿದೆ.

ದೇಶದ ಜನರು ಹಸಿವಿನಿಂದ ಬಳಲಬಾರದು ಎಂಬ ಕಾರಣಕ್ಕೆ ಆಹಾರ ಧಾನ್ಯ ನೀಡುವ, ಸಿದ್ಧ ಆಹಾರ ಪೂರೈಸುವ ಯೋಜನೆಗಳು ಹಲವು ದೇಶಗಳಲ್ಲಿವೆ. ಹಸಿವು ತಣಿಸಲು ಸರ್ಕಾರಗಳು ನೂರಾರು ಕೋಟಿ ಹಣ ವ್ಯಯಿಸುತ್ತಿವೆ. ಅಧಿಕ ಲಭ್ಯತೆ ಅಥವಾ ಉಚಿತ ಎಂಬ ಕಾರಣಕ್ಕೋ ಏನೋ, ನೂರಾರು ಟನ್‌ನಷ್ಟು ಆಹಾರ ಬಳಕೆಯಾಗದೇ ತಿಪ್ಪೆ ಸೇರುತ್ತಿದೆ. ಹೀಗೆ ಆಹಾರ ಪೂರೈಕೆಗೆ ಮಾಡುವ ಖರ್ಚಿನಿಂದ ಸರ್ಕಾರಗಳಿಗೆ ಆರ್ಥಿಕ ಹೊರೆ ಬೀಳುತ್ತದೆ.

ಆಹಾರ ಪೋಲು ಎಂಬುದು ಈಗ್ಗೆ ಎಂಟು ಹತ್ತು ವರ್ಷಗಳ ಹಿಂದೆ ಮುಂದುವರಿದ ದೇಶಗಳಲ್ಲಿ ಮಾತ್ರ ಕಾಣಸಿಗುತ್ತಿತ್ತು. ಇದೀಗ ಅದು ಜಾಗತಿಕ ಸಮಸ್ಯೆ ಎನಿಸಿಕೊಂಡಿದೆ. ಆಹಾರ ಪೋಲು ತಡೆಗಟ್ಟುವಿಕೆ ಕಾರ್ಯತಂತ್ರಗಳನ್ನು ರೂಪಿಸದಿದ್ದಲ್ಲಿ ಸುಸ್ಥಿರ ಅಭಿವೃದ್ಧಿ ಗುರಿ (ಎಸ್‌ಡಿಜಿ) ಸಾಧಿಸುವುದು ಕಷ್ಟ ಎಂಬುದು ವರದಿಯ ಅಭಿಪ್ರಾಯವಾಗಿದೆ.

ಪೋಲು ತಡೆದರೆ...

- ಆಹಾರ ತ್ಯಾಜ್ಯದ ಪ್ರಮಾಣ ತಗ್ಗಿಸುವುದರಿಂದ ಹಸಿರುಮನೆ ಅನಿಲ ಬಿಡುಗಡೆ ಪ್ರಮಾಣ ತಗ್ಗಿಸಬಹುದು
- ಮಾಲಿನ್ಯದ ಮೂಲಕ ಆಗಬಹುದಾದ ಪರಿಸರ ಹಾನಿಯನ್ನು ನಿಧಾನಗೊಳಿಸಬಹುದು
- ಜಾಗತಿಕ ಮಟ್ಟದಲ್ಲಿ ಆಹಾರದ ಲಭ್ಯತೆ ಹೆಚ್ಚಿ, ಹಸಿವಿನ ಪ್ರಮಾಣ ಕಡಿಮೆಯಾಗುತ್ತದೆ
- ಜಾಗತಿಕ ಆರ್ಥಿಕ ಹಿಂಜರಿತದ ಸಮಯದಲ್ಲಿ ಈ ನಿರ್ಧಾರವು ಹಣವನ್ನು ಉಳಿಸುತ್ತದೆ
- ಆಹಾರ ಪೋಲು ತಡೆಯುವುದರಿಂದ ಕುಟುಂಬಗಳ ವೆಚ್ಚದಲ್ಲೂ ಇಳಿಕೆಯಾಗುತ್ತದೆ

ಏನು ಮಾಡಬೇಕು

- ಗ್ರಾಹಕರು/ಜನರ ನಡವಳಿಕೆಯನ್ನು ಬದಲಿಸಬೇಕು
- ಎಚ್ಚರಿಕೆಯಿಂದ ದಿನಸಿ ವಸ್ತುಗಳನ್ನು ಖರೀದಿಸಬೇಕು
- ಕೌಶಲದಿಂದ ಆಹಾರ ಬೇಯಿಸುವ ಪದ್ಧತಿ ರೂಢಿಯಾಗಬೇಕು
- ಆಹಾರವು ವ್ಯರ್ಥವಾಗದ ರೀತಿಯಲ್ಲಿ ಬಳಸುವ ಅರಿವು ಮೂಡಿಸಬೇಕು
- ಪರಿಸರಕ್ಕೆ ಹಾನಿಯಾಗದಂತೆ ತ್ಯಾಜ್ಯ ವಿಲೇವಾರಿ ಮಾಡಬೇಕು

ಮಧ್ಯಮ ಆದಾಯದ ದೇಶಗಳಲ್ಲಿ ಹೆಚ್ಚು



ಕೆಳ ಮಧ್ಯಮ ಆದಾಯದ ದೇಶಗಳಲ್ಲಿ ತಲಾವಾರು ಆಹಾರ ಪೋಲು ಅತ್ಯಧಿಕ ಪ್ರಮಾಣದಲ್ಲಿದೆ. ಈ ದೇಶಗಳಲ್ಲಿ ಆಹಾರ ಪೋಲು ಹೇಗಾಗುತ್ತದೆ ಎಂಬುದರ ಸಮಗ್ರ ಚಿತ್ರಣ ಲಭ್ಯವಿಲ್ಲ. ಈ ದೇಶಗಳಲ್ಲಿ ಮನೆಗಳಲ್ಲಿ ಪೋಲಾಗುವ ಆಹಾರದ ಪ್ರಮಾಣ ಮಾತ್ರ ಲಭ್ಯವಿದೆ. ಕಡಿಮೆ ಆದಾಯದ ದೇಶಗಳಲ್ಲಿ ಆಹಾರ ಪೋಲು ಹೇಗಾಗುತ್ತದೆ ಎಂಬುದರ ಬಗ್ಗೆ ಸ್ವಲ್ಪವೂ ಮಾಹಿತಿ ಲಭ್ಯವಿಲ್ಲ

ಕೋವಿಡ್ ಕಾರಣವಾಗಿ ಸ್ಥಗಿತಗೊಂಡಿದ್ದ ಪ್ರಯಾಣಿಕ ರೈಲು ಸೇವೆಯು ಶ್ರೀನಗರದಲ್ಲಿ ಫೆಬ್ರುವರಿಯಿಂದ ಪುನರಾರಂಭಗೊಂಡಿದೆ–ಪಿಟಿಐ ಚಿತ್ರ

ಸಂಸದೀಯ ಸಮಿತಿ ಪ್ರಸ್ತಾವ

ಪ್ರಯಾಣಿಕ ರೈಲು ಪೂರ್ಣ ಪುನರಾರಂಭ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿವಿಧ ರಾಜ್ಯಗಳಲ್ಲಿ ಕೋವಿಡ್‌-19 ಮಾರ್ಗಸೂಚಿಗಳನ್ನು ಪಾಲಿಸಿಕೊಂಡು ಪೂರ್ಣ ಪ್ರಮಾಣದ ಪ್ರಯಾಣಿಕ ರೈಲು ಸೇವೆಯನ್ನು ಪುನರಾರಂಭಿಸಬೇಕು ಎಂದು ರೈಲ್ವೆ ಕುರಿತ ಸಂಸದೀಯ ಸ್ಥಾಯಿ ಸಮಿತಿ ಅಭಿಪ್ರಾಯಪಟ್ಟಿದೆ.

ಕೋವಿಡ್ -19 ಲಾಕ್‌ಡೌನ್ ಕಾರಣ ರೈಲು ಸೇವೆಗಳನ್ನು ಸ್ಥಗಿತಗೊಳಿಸಿದ್ದರಿಂದ ಪ್ರಯಾಣಿಕರ ವಿಭಾಗದ ಆದಾಯದಲ್ಲಿ ರೈಲ್ವೆಗೆ ಭಾರಿ ನಷ್ಟ ಉಂಟಾಗಿದೆ ಎಂದು ಮಾಜಿ ಕೇಂದ್ರ ಸಚಿವ ರಾಧಾ ಮೋಹನ್ ಸಿಂಗ್ ನೇತೃತ್ವದ ರೈಲ್ವೆ ಸ್ಥಾಯಿ ಸಮಿತಿಯು ಹೇಳಿದೆ.

ಇಲಾಖೆಯು ಇತ್ತೀಚೆಗೆ ಪ್ರಯಾಣಿಕ ರೈಲುಗಳ ಸಂಖ್ಯೆಯನ್ನು ಹಂತಹಂತವಾಗಿ ಹೆಚ್ಚಿಸುತ್ತಿದೆ. ಈಗಾಗಲೇ ಶೇ 65ಕ್ಕೂ ಹೆಚ್ಚು ಪ್ರಯಾಣಿಕ ರೈಲುಗಳು ಓಡುತ್ತಿವೆ. ಸಂಸ್ಥೆಯ ಆರ್ಥಿಕ ಸ್ಥಿತಿಯು ಹದಗೆಡುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು ಪೂರ್ಣ ಪ್ರಮಾಣದ ರೈಲ್ವೆ ಕಾರ್ಯಾಚರಣೆ ಪುನರಾರಂಭಿಸಲು ಸಮಿತಿ ಒಲವು ವ್ಯಕ್ತಪಡಿಸಿದೆ.

'ಸರಕು ಸಾಗಣೆ ರೈಲುಗಳ ಓಡಾಟದಿಂದ ಬರುವ ಆದಾಯಕ್ಕೆ ಹೋಲಿಸಿದರೆ ಪ್ರಯಾಣಿಕ ರೈಲುಗಳ ಓಡಾಟದಿಂದ ಬರುವ ಆದಾಯ ಕಡಿಮೆ. 2018–19ರಲ್ಲಿ ₹51,066.65 ಕೋಟಿ ಇದ್ದ ಗಳಿಕೆಯು 2019–20ರಲ್ಲಿ ₹50,669.09 ಕೋಟಿಗೆ ಇಳಿಕೆಯಾಗಿತ್ತು. ಕೋವಿಡ್ ಹಾಗೂ ಲಾಕ್‌ಡೌನ್ ಕಾರಣ ಪ್ರಯಾಣಿಕರ ರೈಲು ಸಂಚಾರ ನಿರ್ಬಂಧಿಸಿದ್ದರಿಂದ ಜನವರಿ 2021ರವರೆಗೆ ಈ ವಿಭಾಗದಲ್ಲಿ ₹9,529 ಕೋಟಿ ಮಾತ್ರ ಗಳಿಕೆ ಆಗಿದೆ' ಎಂದು ಸಂಸತ್ತಿನಲ್ಲಿ ಮಂಡನೆಯಾದ ಸಮಿತಿಯ ವರದಿ ತಿಳಿಸಿದೆ.

ಇಲಾಖೆಯ ಆದಾಯವನ್ನು ಹೆಚ್ಚಿಸುವ ಉದ್ದೇಶದಿಂದ ವಿವಿಧ ರಾಜ್ಯಗಳಲ್ಲಿನ ಕೋವಿಡ್ ತಡೆ ನಿಯಮಾವಳಿಗಳನ್ನು ಗಮನದಲ್ಲಿಟ್ಟುಕೊಂಡು ಪ್ರಯಾಣಿಕರ ಸೇವೆಗಳನ್ನು ಪುನರಾರಂಭಿಸುವುದನ್ನು ರೈಲ್ವೆ ಪರಿಗಣಿಸಬೇಕು ಎಂದು ಸಮಿತಿ ಅಭಿಪ್ರಾಯಪಟ್ಟಿದೆ. ಪ್ರಯಾಣಿಕರ ರೈಲುಗಳ ಕಾರ್ಯಾಚರಣೆಯನ್ನು ಸಂಪೂರ್ಣವಾಗಿ ಪುನರಾರಂಭಿಸಿದ ನಂತರ ಈ ವಿಭಾಗದ ಗಳಿಕೆ ಕ್ರಮೇಣ ಸುಧಾರಿಸಬಹುದು ಎಂದು ವರದಿ ಆಶಾಭಾವ ವ್ಯಕ್ತಪಡಿಸಿದೆ.

ಪ್ರಯಾಣಿಕ ರೈಲುಗಳಲ್ಲಿ ಸಂಚರಿಸುವವರಿಗೆ ಭಾರಿ ಪ್ರಮಾಣದ ರಿಯಾಯಿತಿ ನೀಡುವ ಸಂಪ್ರದಾಯವನ್ನು ಇಲಾಖೆ ಪಾಲಿಸಿಕೊಂಡು ಬಂದಿರುವ ಕಾರಣ, ಆಗುವ ನಷ್ಟವನ್ನು ಸರಕು ಸಾಗಣೆ ರೈಲುಗಳಿಂದ ಹೆಚ್ಚುವರಿ ಆದಾಯ ಪಡೆದು ಸರಿದೂಗಿಸಿಕೊಳ್ಳುತ್ತದೆ. ಇಂತಹ ಶುಲ್ಕ ಪದ್ಧತಿಯಿಂದ ಹೆಚ್ಚುವರಿ ಆದಾಯದಲ್ಲಿ ಕೊರತೆ ಉಂಟಾಗುವ ಕಾರಣ, ಸಾಮರ್ಥ್ಯ ವಿಸ್ತರಣೆ ಮತ್ತು ಆಧುನಿಕ ಸೌಲಭ್ಯಗಳನ್ನು ಒದಗಿಸಲು ರೈಲ್ವೆಗೆ ಸಾಧ್ಯವಾಗುತ್ತಿಲ್ಲ ಎಂದು ವರದಿ ತಿಳಿಸಿದೆ.

ಆದಾಯದಲ್ಲಿ ಕೊರತೆ

ಪ್ರಯಾಣಿಕ ರೈಲುಗಳ ಗಳಿಕೆಯಲ್ಲಿ ಕೊರತೆ ಎದುರಾಗಲು ಕೆಲವು ಕಾರಣಗಳನ್ನು ಸಮಿತಿ ಮುಂದಿಟ್ಟಿದೆ. ಸಾಮಾಜಿಕ ಜವಾಬ್ದಾರಿ ಮತ್ತು ಲಾಭದಾಯಕವಲ್ಲದ ಮಾರ್ಗಗಳಲ್ಲಿ ಕಾರ್ಯಾಚರಣೆ ನಡೆಸಿದ್ದರಿಂದ ಹೀಗಾಗಿದೆ ಎಂದು ತಿಳಿಸಿದೆ. ಜೊತೆಗೆ ಕೋವಿಡ್ ಕಾರಣವಾಗಿ ಪ್ರಯಾಣಿಕರ ರೈಲುಗಳನ್ನು ಹೆಚ್ಚು ಕಾಲ ಸ್ಥಗಿತಗೊಳಿಸಿದ್ದರಿಂದ ಪ್ರಯಾಣಿಕರ ವಿಭಾಗದ ಆದಾಯ ಕಡಿಮೆಯಾಗಿದೆ. ಪೂರ್ಣ ಪ್ರಮಾಣದ ರೈಲು ಸೇವೆ ಇನ್ನೂ ಪುನರಾರಂಭಗೊಂಡಿಲ್ಲ ಎಂದು ಸಮಿತಿ ವರದಿಯಲ್ಲಿ ತಿಳಿಸಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಪಾಕಿಸ್ತಾನದ ಅಬುಧಾಬಿ ಕಾಲೊನಿಯಲ್ಲಿ ಒಂದೇ ಕುಟುಂಬದ ಐವರು ಹಿಂದೂಗಳನ್ನು ಕತ್ತು ಸೀಳಿ ಹತ್ಯೆ ಮಾಡಲಾಗಿದೆ. ಜಿಹಾದಿ ಹಂತಕರು ಈ ಕೃತ್ಯ ಎಸಗಿದ್ದಾರೆ ಎಂದು ಹಲವು ಆನ್‌ಲೈನ್ ಸುದ್ದಿ ವಾಹಿನಿಗಳು ಸುದ್ದಿ ಪ್ರಕಟಿಸಿವೆ. ಪೋಸ್ಟ್‌ಕಾರ್ಡ್ ಸೇರಿದಂತೆ ಕನ್ನಡದ ಹಲವು ಫೇಸ್‌ಬುಕ್ ಪುಟಗಳು ಹಂಚಿಕೊಂಡಿವೆ. ಬಿಜೆಪಿ ನಾಯಕ ಸುರೇಂದ್ರ ಪುನಿಯಾ ಸಹ ಈ ಬಗ್ಗೆ ಟ್ವೀಟ್ ಮಾಡಿದ್ದಾರೆ. ಈ ಟ್ವೀಟ್ ಮತ್ತು ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ಆದರೆ, ಇದನ್ನು ಸಿಎಎ ವಿರೋಧಿಗಳು ಪ್ರತಿಭಟಿಸುವುದಿಲ್ಲ ಎಂದು ಈ ಪೋಸ್ಟ್‌ಗಳಲ್ಲಿ ಆಕ್ರೋಶ ವ್ಯಕ್ತಪಡಿಸಲಾಗಿದೆ.



ಇದು ಸುಳ್ಳು ಸುದ್ದಿ ಎಂದು ಆಲ್ಟ್‌ನ್ಯೂಸ್ ಮತ್ತು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿವೆ. ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿ ಈ ಕೃತ್ಯ ನಡೆದಿದೆ. ಕುಟುಂಬದ ಯಜಮಾನನಾದ ರಾಮಚಂದ್ ಈ ಕೃತ್ಯ ಎಸಗಿದ್ದಾನೆ. ಕೆಲಸ ಮಾಡದೆ, ಹೆಂಡತಿ ಜತೆಗೆ ಜಗಳ ನಡೆದ ಸಂದರ್ಭದಲ್ಲಿ ಕುಟುಂಬದ ನಾಲ್ವರನ್ನು ಹತ್ಯೆಮಾಡಿದ್ದಾನೆ. ತಾನೂ ಕತ್ತು ಸೀಳಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಭಾರತದ ಆನ್‌ಲೈನ್ ಮಾಧ್ಯಮಗಳು ಇದನ್ನು ತಪ್ಪಾಗಿ ವರದಿ ಮಾಡಿವೆ. ಇದನ್ನೇ ಜನಸಾಮಾನ್ಯರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ ಎಂದು ಆಲ್ಟ್‌ನ್ಯೂಸ್ ಹೇಳಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಮೂಲಸತ್ವ

ತುಂಬುದಿಟ ಜೀವಿತದ ಗಣನೆಗಳ ಮೀರಿದುದು |
ಇಂಬುಗಳ ಬಿಂಬಗಳ ಸನ್ನಿಧಾನವದು ||
ಅಂಬರದಿನಾಚೆಯದು, ತುಂಬಿರುವುದೆತ್ತಲುಂ |
ಶಂಭು ಪರಬೊಮ್ಮನದು - ಮಂಕುತಿಮ್ಮ || 395 ||

ಪದ-ಅರ್ಥ: ತುಂಬುದಿಟ = ಸಂಪೂರ್ಣ ಸತ್ಯ, ಇಂಬು = ಪ್ರೀತಿ, ಅವಕಾಶ, ಅಂಬರ = ಆಕಾಶ, ತುಂಬಿರುವುದೆತ್ತಲುಂ = ತುಂಬಿರುವುದು + ಎತ್ತಲುಂ (ಎಲ್ಲೆಡೆಗೆ)

ವಾಚ್ಯಾರ್ಥ: ಪರಮಸತ್ಯವೆನ್ನುವುದು ಜೀವಿತಗಳ ಲೆಕ್ಕಕ್ಕೆ ಮೀರಿದ್ದು. ಅದು ನಮ್ಮ ಪ್ರೀತಿ, ಅನುಭವಗಳ ಸ್ಥಾನ. ಅದು ಗಗನವನ್ನು ಮೀರಿದ್ದು, ಎಲ್ಲೆಡೆಗೂ ಹರಡಿಕೊಂಡದ್ದು. ಅದು ಪರಬ್ರಹ್ಮನಾದ ಪರಮೇಶ್ವರನದು.

ವಿವರಣೆ: ಸಂತ ಆಗಸ್ಟಿನ್ ಹೇಳಿದ ಮಾತು ಮನನೀಯವಾದದ್ದು. 'ಅಂತರಂಗದಲ್ಲಿ ಪರಮಸತ್ಯವನ್ನರಿತ ಬಳಿಕ ಅದರ ಬಗ್ಗೆ ಮೌನವಾಗಿ ಉಳಿಯುವುದೇ ಲೇಸು. ಅದರ ಬಗ್ಗೆ ಏನೇ ಮಾತು ಹೇಳಿದರೂ ಅದು ಒಟಗುಟ್ಟಿದಂತೆ, ಸುಳ್ಳನ್ನೇ ಬಡಬಡಿಸಿದಂತೆ. ಮಾತಿಗೆ ಮೀರಿದ ಸತ್ಯವನ್ನು ಮಾತಿನಲ್ಲಿ ಹಿಡಿದಿಡುವ ಹುಚ್ಚುತನ ಬೇಡ".

ಕಗ್ಗದ ಮಾತಿನಂತೆ ಪರಬ್ರಹ್ಮವೆಂಬ ನಿತ್ಯತೆಯನ್ನು, ಅನಂತತೆಯನ್ನು, ಅಮರತ್ವವನ್ನು ಯಾವುದೇ ಹೆಸರು, ರೂಪ, ಗುಣಗಳಿಂದ ಹಿಡಿದಿಡುವುದು ಸಾಧ್ಯವಿಲ್ಲ. ಅದು ತನ್ನನ್ನು ತಾನೇ ಮೀರಬಲ್ಲ, ತನಗೆ ತಾನೇ ಸಾಟಿಯಾಗಬಲ್ಲ, ಕ್ಷಣಕ್ಷಣಕ್ಕೂ ಬೇರೆಯಾಗಬಲ್ಲ, ವಿಕಸನಗೊಳ್ಳುವ ಚಿರಂತನ ಸತ್ಯ. ಅದು ನಮ್ಮ ಚಿಂತನೆಯ ಮಿತಿಗಳನ್ನು ಮೀರಿದ್ದು. ಅದರ ಸನ್ನಿಧಾನದಲ್ಲೇ ನಮಗೆ ಅನುಭವಗಳು ದಕ್ಕುವುದು. ಭಗವಂತನ ವ್ಯಾಪ್ತಿ ಅನೂಹ್ಯವಾದದ್ದು. ಅದರ ಇರುವಿಕೆಯನ್ನು ಗ್ರಹಿಸುವುದು ನಮ್ಮ ಬುದ್ಧಿಶಕ್ತಿಗೆ ನಿಲುಕದ್ದು. ಅದು ಪ್ರತಿಮಾಡಲು ಅಸಮರ್ಥವಾದ ಅಪ್ರತಿಮ ಎನ್ನುತ್ತಾರೆ ಬಸವಣ್ಣನವರು.

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ, ಪಾತಾಳದಿಂದತ್ತತ್ತ ನಿಮ್ಮ ಶ್ರೀ ಚರಣ, ಬ್ರಹ್ಮಾಂಡದಿಂದವೆ ಅತ್ತತ್ತ ನಿಮ್ಮ ಶ್ರೀಮುಕುಟ, ಅಗಮ್ಯ ಅಗೋಚರ ಅಪ್ರತಿಮ ಲಿಂಗವೆ, ಕೂಡಲಸಂಗಮದೇವಯ್ಯ, ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯ ಅದು ಅಗಮ್ಯವಾದ, ಅಗೋಚರವಾದ, ಅಪ್ರತಿಮವಾದ ಶಕ್ತಿಯಾದರೂ ಕರುಣೆಯಿಂದ ನಮ್ಮ ಕೈಗೆ ದೊರಕುವುದೂ ಅಷ್ಟೇ ಸತ್ಯ. ಅದಕ್ಕೇ ಅದನ್ನು ಇಂಬುಗಳ, ಬಿಂಬಗಳ ಸನ್ನಿಧಾನವೆಂದು ಕರೆದದ್ದು.

ನಮ್ಮ ಗಮನಕ್ಕೆ ನಿಲುಕುವ ಸೃಷ್ಟಿಯಲ್ಲಿ ಅಸಾಧಾರಣವಾದ, ಅನೂಹ್ಯವಾದ ಅಪೂರ್ವ ಶಕ್ತಿ ಇದೆ. ನೀರಿನಲ್ಲಿ ಆಪ್ಯಾಯನ ಶಕ್ತಿ ಇದೆ, ನೆಲದಲ್ಲಿ ಧಾರಣಶಕ್ತಿ ಇದೆ, ಬೆಂಕಿಯಲ್ಲಿ ಜ್ವಲನಶಕ್ತಿ, ಗಾಳಿಯಲ್ಲಿ ಸ್ಪಂದನಶಕ್ತಿ, ಆಕಾಶದಲ್ಲಿರುವ ಸೂರ್ಯ, ತಾರೆಗಳಲ್ಲಿ ಅಪಾರವಾದ ವಿದ್ಯುತ್ ಶಕ್ತಿ ಇದೆ. ಆದರೆ ಇವೆಲ್ಲ ಶಕ್ತಿಗಳು ಆ ಮೂಲ ಸತ್ವದ ವಿವಿಧ ರೂಪಗಳು- ಶಂಭು ಪರಬ್ರಹ್ಮನವು. ❖

ದಿನ ಭವಿಷ್ಯ

ಬುಧವಾರ 10 ಮಾರ್ಚ್ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಮಾಘ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಪೂರ್ವಾಭಾದ್ರ ದ್ವಾದಶೀ ಗಂ. 21-17 (ಹ. 3-07) ಬುಧವಾರ ನಿತ್ಯ ನಕ್ಷತ್ರ ಶ್ರವಣ ಗಂ. 37-14 (ರಾ. 9-30) ಪರಿಘ ನಾಮ ಯೋಗ ಗಂ. 11-51 ತೈತಲ ಕರಣ ಗಂ. 21-17 ವಿಷ. ಗಂ. 47-14 ಅಮೃತ ಗಂ. 11-52 : ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 ಸೂರ್ಯೋದಯ: 6-36 ಸೂರ್ಯಾಸ್ತ: 6-26 ಅದೃಷ್ಟ ಸಂಖ್ಯೆ 3 4

ಮೇಷ: ಉದ್ಯೋಗಸ್ಥ ಮಹಿಳೆಯರಿಗೆ ಕಾರ್ಯಕ್ಷೇತ್ರದಲ್ಲಿ ಗೊಂದಲ ಕಿರಿಕಿರಿ. ಪುಸ್ತಕ ಮತ್ತು ಲೇಖನ ಸಾಮಗ್ರಿಗಳ ಮಾರಾಟಗಾರರಿಗೆ ಉತ್ತಮ ವ್ಯಾಪಾರದಿಂದಾಗಿ ಆದಾಯದಲ್ಲಿ ಹೆಚ್ಚಳ.

ವೃಷಭ: ಸಾಮಾಜಿಕ ಉನ್ನತೀಕರಣಕ್ಕಾಗಿ ಹಿರಿಯರೊಂದಿಗೆ ಚರ್ಚಿಸಲಿದ್ದೀರಿ. ಹೆಚ್ಚಿನ ಪರಿಶ್ರಮದಿಂದ ಕೆಲಸಕಾರ್ಯಗಳಲ್ಲಿ ಯಶಸ್ಸನ್ನು ಸಾಧಿಸಲಿದ್ದೀರಿ. ಮಹಿಳಾ ಉದ್ಯೋಗಿಗಳಿಗೆ ಭಡ್ತಿ. ವ್ಯವಹಾರದಲ್ಲಿ ಸ್ಥಿರತೆ.

ಮಿಥುನ: ಪ್ರತಿಷ್ಠಿತ ವ್ಯಕ್ತಿಯೊಬ್ಬರ ಸಹಾಯದಿಂದ ಸರ್ಕಾರದಿಂದ ಆಗಬೇಕಾದ ಕೆಲಸಗಳು ಸುಸೂತ್ರವಾಗಿ ನೆರವೇರುವವು. ಶತ್ರುಗಳ ಬಾಧೆ. ಮಕ್ಕಳ ವಿದ್ಯಾಭ್ಯಾಸದ ಕುರಿತು ಇದ್ದ ಚಿಂತೆಗಳು ದೂರ.

ಕರ್ಕಾಟಕ: ಸರ್ಕಾರಿ ನೌಕರರಿಗೆ ಒಳ್ಳೆಯ ದಿನವಾಗಿದೆ. ರಾಜಕಾರಣಿಗಳು, ಸರ್ಕಾರಿ ಅಧಿಕಾರಿ ವರ್ಗದವರಿಗೆ ಉತ್ತಮ ದಿನವಾಗಿರುವುದು. ಸಂಗಾತಿಯ ಆಲೋಚನೆಗಳಿಗೆ ಪುರಸ್ಕಾರ ನೀಡುವುದು ಒಳ್ಳೆಯದು.

ಸಿಂಹ: ವಾಹನ ಮಾರಾಟದಲ್ಲಿ ತೊಡಗಿದವರಿಗೆ ಉತ್ತಮ ಲಾಭ. ಯಕ್ಷಿಣೀಗಾರರಿಗೆ ಉತ್ತಮ ಅವಕಾಶ. ಕಳೆದುಕೊಂಡ ವಸ್ತುವೊಂದು ಪುನಃ ಕೈ ಸೇರುವ ಸಾಧ್ಯತೆ. ವಿವಾಹ ಸಂಬಂಧ ಒತ್ತಡಕ್ಕೆ ಮಣಿಯಬೇಕಾದೀತು.

ಕನ್ಯಾ: ಕುಟುಂಬದಲ್ಲಿ ಸುಖ ಸಂತೋಷದೊಂದಿಗೆ ಆರ್ಥಿಕ ಅಭಿವೃದ್ಧಿ. ಹಿತೈಷಿಗಳೊಂದಿಗೆ ವಿಶೇಷ ಕಾರ್ಯಕ್ರಮಗಳಲ್ಲಿ ಭಾಗಿ. ಸ್ವಯಂ ಉದ್ಯೋಗಿಗಳಿಗೆ ಹೆಚ್ಚಿನ ಪರಿಶ್ರಮ.

ತುಲಾ: ಸಗಟು ವ್ಯಾಪಾರಗಳಲ್ಲಿ ಗಣನೀಯ ಪ್ರಗತಿ, ಆದಾಯದಲ್ಲಿ ಹೆಚ್ಚಳ ಕಂಡುಬಂದರೂ ಆದಾಯಕ್ಕೆ ಮೀರಿದ ವೆಚ್ಚ ಭರಿಸಬೇಕಾದೀತು. ನೌಕರಿಯಲ್ಲಿರುವವರಿಗೆ ಬಿಡುವು. ಸಂಗಾತಿಯ ಸಹಕಾರದಿಂದಾಗಿ ಸಂತಸ.

ವೃಶ್ಚಿಕ: ಉದ್ಯೋಗದಲ್ಲಿ ಬದಲಾವಣೆಗಾಗಿ ಚಿಂತಿಸಲಿದ್ದೀರಿ. ಹಿತೈಷಿಗಳ ಸಲಹೆಗಾಗಿ ಚರ್ಚಿಸಲಿದ್ದೀರಿ. ದುಡುಕುತನ ತೋರಿಸದಿರುವುದು ಉತ್ತಮ. ಹಣಕಾಸಿನ ವಿಚಾರದಲ್ಲಿ ಸ್ಥಿರತೆ. ಬರಹಗಾರರೊಬ್ಬರ ಅನಿರೀಕ್ಷಿತ ಭೇಟಿ.

ಧನು: ಉದ್ಯೋಗದ ನಿಮಿತ್ತ ದೂರದ ಪ್ರಯಾಣ ಮಾಡಬೇಕಾದೀತು. ಆದಾಯದಲ್ಲಿ ಹೆಚ್ಚಳದಿಂದಾಗಿ ನೆಮ್ಮದಿ ಮೂಡಿಬರಲಿದೆ. ನೇತ್ರ ಸಂಬಂಧಿ ಕಾಯಿಲೆಗಳು ದೂರವಾಗುವವು.

ಮಕರ: ಚಿನ್ನ ಬೆಳ್ಳಿ ಮುಂತಾದ ಆಭರಣ ವ್ಯಾಪಾರಿಗಳಿಗೆ ಉತ್ತಮ ವ್ಯವಹಾರ ಕುದುರುವುದು. ಕೃಷಿ ಕಾರ್ಯಗಳಿಗಾಗಿ ಧನ ವಿನಿಯೋಗ. ಧವಸ ಧಾನ್ಯಗಳ ವ್ಯವಹಾರದಲ್ಲಿ ಹೆಚ್ಚಿನ ಪ್ರಗತಿ ಕಾಣುವಿರಿ.

ಕುಂಭ: ಕೃಷಿ ಹಾಗೂ ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ಉತ್ತಮ ಅವಕಾಶ. ಬರಹಗಾರರಿಗೆ ಸ್ಪರ್ಧೆಯಲ್ಲಿ ಬಹುಮಾನ ಗೆಲ್ಲುವ ಅವಕಾಶ. ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ಹೆಚ್ಚಿನ ವಿನಿಯೋಗ ಮಾಡಬೇಕಾದೀತು.

ಮೀನ: ಆರ್ಥಿಕ ಸದೃಢತೆಯಿಂದಾಗಿ ಆಸ್ತಿ ಖರೀದಿ. ಸಂಶೋಧನಾ ಕೇಂದ್ರಗಳಲ್ಲಿ ಕೆಲಸ ಮಾಡುವವರಿಗೆ ಹೊಸದೊಂದು ಆಶಾಕಿರಣ ಮೂಡಿಬರಲಿದೆ. ರೈತಾಪಿ ವರ್ಗದವರಿಗೆ ಉತ್ತಮ ಬೆಳೆಯ ನಿರೀಕ್ಷೆ.

ನಿಮ್ಮ ಜನ್ಮದಿನ 10-ಮಾರ್ಚ್ ಈ ದಿನವು ಅತ್ಯಂತ ಶುಭಕರವಾಗಿದ್ದು, ಆರೋಗ್ಯದ ಬಗ್ಗೆ ಹೆಚ್ಚೇನೂ ಗಮನ ಹರಿಸುವ ಅವಶ್ಯಕತೆ ಕಂಡುಬರುವುದಿಲ್ಲ. ಪಿತ್ರಾರ್ಜಿತ ಆಸ್ತಿಗಳು ನಿಮ್ಮ ಕೈ ಸೇರುವ ಸಾಧ್ಯತೆ ಕಂಡುಬರುತ್ತಿದೆ. ನಿಮ್ಮ ಜೀವನದ ಬಹು ಮುಖ್ಯವಾದ ಹೊಸ ಯೋಜನೆಗಳನ್ನು ಈ ವರ್ಷದ ಆರಂಭದಲ್ಲಿಯೇ ಕೈಗೊಳ್ಳಲಿದ್ದೀರಿ.

ಪದಬಂಧ 4532 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕೊನೆಗೆ ಗುರಿಯಿದ್ದರೆ ನಿಶ್ಚಿತವಾದ ಉದ್ದೇಶ! (4)
3.ಸಂಸಾರಬಂಧನಕ್ಕೆ ಒಳಗಾದವನು (2)
5.ಮುಖ ತೋರಿಸುತ್ತಿರುವ ಕಪಿ! (4)
7.ನಕ್ಷೆ ಅಥವಾ ಚಿತ್ರವೆಂದರೂ ಸರಿಯೇ (3)
8.ಬೇರೆ ಬೇರೆ ದೇಶಗಳಿಗೆ ಪರಸ್ಪರ ಸಂಬಂಧಿಸಿದ್ದು (5)
11.ಈತ ಬಲಾಢ್ಯ! (3)
12.ರಸವತ್ತಾದ ಮಾತು (4)
14.ವ್ಯತಿರಿಕ್ತದಲ್ಲಿ ಶೂನ್ಯತೆ ಕಾಣುತ್ತಿದೆಯಲ್ಲಾ? (2)
15.ಯಾಗದ ಸಮಾಪ್ತಿ (4)

ಮೇಲಿಂದ ಕೆಳಕ್ಕೆ
1.ನಿರ್ಣಯ ಅಥವಾ ಠರಾವು (4)
2.ವಸ್ತುಗಳನ್ನು ಸಂಗ್ರಹಿಸುವ ಮಳಿಗೆ (3)
4.ಪಂಡಿತ ಇಲ್ಲಿದ್ದಾನೆ (3)
6.ಉಚಿತವೆಂದರೂ ಇದು ನಿಶ್ಚಿತ! (3)
7.ಗೆಲುವು ಈ ರೀತಿ ಬಂದಿದೆ (3)
8.ಹೆಬ್ಬೆರಳು ಇಲ್ಲಿದೆ (3)
9.ಕರವನ್ನು ಕೊನೆಗಿಟ್ಟಾಗ ಸಿಡಿದ ತುಂತುರು (3)
10.ಮೋಕ್ಷದ ಮಾರ್ಗ (4)
11.ಕೋಟೆಯ ಮೇಲುಭಾಗ (3)
13.ಚಿಕ್ಕವನನ್ನು ಹೀಗೆಂದು ಕರೆಯಿರಿ (3)



4531ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಮಗ್ಗಿ 4.ಕಾಮನೆ 5.ಅಂಗಾರಕ 6.ವಾಚ್ಯಾತೀತ 7.ನರ 9.ಗವಿ 13.ಮನ್ವಂತರ 14.ಅಪವ್ಯಯ 15.ವಂತಿಗೆ 16.ಪ್ಲುತ

ಮೇಲಿಂದ ಕೆಳಕ್ಕೆ: 1.ಸಕಾಲಿಕ 2.ಮನೆವಾಳ್ತನ 3.ಮರವು 5.ಅಂತರಂಗ 8.ರಸಮಯ 10.ವಿಚಾರವಂತ 11.ವಕ್ರಗೆರೆ 12.ಚಪಲ

ಸುಡೊಕು 4918

	3			6				2
6		2	4		9		1	
						6		9
3		7	2			4		
		8		4			3	7
4					3	2		8
		9	8					4
8	6				4		2	
		3		2		7		6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4917 ಸುಡೊಕು

4	5	7	2	6	8	1	9	3
9	2	6	1	3	5	4	7	8
1	8	3	7	4	9	2	5	6
6	3	1	4	5	2	7	8	9
5	7	2	8	9	6	3	4	1
8	9	4	3	7	1	5	6	2
3	6	9	5	1	4	8	2	7
2	1	5	6	8	7	9	3	4
7	4	8	9	2	3	6	1	5

ತಮಿಳುನಾಡು ಪಶ್ಚಿಮ ಬಂಗಾಳ ಅಸ್ಸಾಂ ಕೇರಳ ಪುದುಚೇರಿ
ಪ್ರಜಾ ಮತ
ಜನತಂತ್ರದ ಹಬ್ಬ 2021

ಕೇರಳ: ನಾಲ್ಕು ಪಂಚಾಯಿತಿಗಳಲ್ಲಿ ಗೆದ್ದಿರುವ ಟ್ವೆಂಟಿ–20: ವಿಧಾನಸಭೆ ಹಣಾಹಣಿಯಲ್ಲಿ ಅದೃಷ್ಟ ಪರೀಕ್ಷೆಗೆ ನಿರ್ಧಾರ: ಹಲವು ಗಣ್ಯರ ಬೆಂಬಲ

ಚುನಾವಣಾ ರಂಗಕ್ಕಿಳಿದ ಸಿಎಸ್‌ಆರ್ ವೇದಿಕೆ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೇರಳದ ಸ್ಥಳೀಯಾಡಳಿತ ಸಂಸ್ಥೆಗಳಿಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ನಾಲ್ಕು ಪಂಚಾಯಿತಿಗಳಲ್ಲಿ ಗೆಲುವು ಸಾಧಿಸಿದ ‘ಟ್ವೆಂಟಿ–20’ ಎಂಬ ವೇದಿಕೆಯು ವಿಧಾನಸಭೆ ಚುನಾವಣೆಯಲ್ಲಿಯೂ ಅದೃಷ್ಟ ಪರೀಕ್ಷೆಗೆ ಮುಂದಾಗಿದೆ. ಎರ್ನಾಕುಲಂ ಜಿಲ್ಲೆಯ ಐದು ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಅಭ್ಯರ್ಥಿಗಳ ಹೆಸರು ಪ್ರಕಟಿಸಿದೆ.

ಕಿಟೆಕ್ಸ್ ಗಾರ್ಮೆಂಟ್ಸ್‌ನ ಉದ್ಯಮ ಸಾಮಾಜಿಕ ಜವಾಬ್ದಾರಿಯ (ಸಿಎಸ್‌ಆರ್) ಭಾಗವಾಗಿ ಈ ವೇದಿಕೆ ರೂಪುಗೊಂಡಿದೆ. ಉದ್ಯಮ ಸಂಸ್ಥೆಯ ನಿಯಂತ್ರಣದಲ್ಲಿರುವ ವೇದಿಕೆಯು ಪಂಚಾಯಿತಿಯ ಅಧಿಕಾರಕ್ಕೆ ಏರುವುದು ಸರಿಯೇ ಎಂಬ ಚರ್ಚೆ ಆಗ ನಡೆದಿತ್ತು. ಮುಖ್ಯವಾಹಿನಿಯ ರಾಜಕೀಯ ಪಕ್ಷಗಳ ವೈಫಲ್ಯವೇ ಟ್ವೆಂಟಿ–20 ವೇದಿಕೆಯ ಚುನಾವಣಾ ಗೆಲುವಿಗೆ ಕಾರಣ ಎಂದು ಕಿಟೆಕ್ಸ್ ಗಾರ್ಮೆಂಟ್ಸ್‌ನ ಸ್ಥಾಪಕ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಹೇಳಿದ್ದಾರೆ.

ವಿವಿಧ ಕ್ಷೇತ್ರಗಳ ಗಣ್ಯ ವ್ಯಕ್ತಿಗಳು ಬೆಂಬಲ ಸೂಚಿಸಿರುವುದರಿಂದ ಈ ವೇದಿಕೆಯು ಹೆಚ್ಚು ಮಹತ್ವ ಪಡೆದುಕೊಂಡಿದೆ. ವಿ–ಗಾರ್ಡ್ ಇಂಡಸ್ಟ್ರೀಸ್‌ನ ಸ್ಥಾಪಕ, ಸಮಾಜ ಸೇವಕ ಕೊಚ್ಚೌಸೇಫ್ ಚಿಟ್ಟಿಲಪಿಳ್ಳಿ, ನಟ ಮತ್ತು ನಿರ್ದೇಶಕ ಶ್ರೀನಿವಾಸನ್, ಸಿನಿಮಾ ನಿರ್ದೇಶಕ ಸಿದ್ದಿಕ್ ಮುಂತಾದವರು ‘ಟ್ವೆಂಟಿ–20’ಗೆ ಬೆಂಬಲ ಸೂಚಿಸಿದವರಲ್ಲಿ ಸೇರಿದ್ದಾರೆ.

‘ವೇದಿಕೆಯು 2015ರಲ್ಲಿ ಸ್ಥಾಪನೆಗೊಂಡಿತು. ಕೊಚ್ಚಿ ನಗರದಿಂದ 20 ಕಿ.ಮೀ. ದೂರದಲ್ಲಿರುವ ಕಿಜಕ್ಕಂಬಲಂ ಪಂಚಾಯಿತಿಯಲ್ಲಿ ಸ್ಪರ್ಧಿಸಿ ಗೆದ್ದಿತು. ಕಿಟೆಕ್ಸ್ ಗಾರ್ಮೆಂಟ್ಸ್‌ನ ಕೇಂದ್ರ ಕಚೇರಿ ಈ ಪಂಚಾಯಿತಿ ವ್ಯಾಪ್ತಿಯಲ್ಲಿಯೇ ಇದೆ. ಸಿಎಸ್‌ಆರ್ ನಿಧಿ ಮತ್ತು ಇತರ ನಿಧಿಗಳನ್ನು ಬಳಸಿಕೊಂಡು ಪಂಚಾಯಿತಿಯಲ್ಲಿ ಹಲವು ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲಾಗಿದೆ. ಪಂಚಾಯಿತಿ ಆಡಳಿತದಲ್ಲಿ ಹೆಚ್ಚು ದಕ್ಷತೆ ತರಲಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರ ನೀಡಿದ ಅನುದಾನ ಬಳಕೆಯಲ್ಲಿ ಭ್ರಷ್ಟಾಚಾರ ನುಸುಳದಂತೆ ನೋಡಿಕೊಳ್ಳಲಾಗಿದೆ. ಪಾರದರ್ಶಕತೆ ತರಲಾಗಿದೆ. ಜನರ ಅಗತ್ಯಗಳ ಅಧ್ಯಯನ ನಡೆಸಿ ಕೆಲಸಗಳನ್ನು ಮಾಡಲಾಗಿದೆ’ ಎಂದು ಕೊಚ್ಚೌಸೇಫ್ ಚಿಟ್ಟಿಲಪಿಳ್ಳಿ ಹೇಳುತ್ತಾರೆ.

ಈ ಬಾರಿಯ ಚುನಾವಣೆಯಲ್ಲಿ ಹತ್ತಿರದ ಮೂರು ಪಂಚಾಯಿತಿಗಳಲ್ಲಿಯೂ ವೇದಿಕೆಯು ಗೆಲುವು ಸಾಧಿಸಿದೆ. ಕಿಜಕ್ಕಂಬಲಂ ಪಂಚಾಯಿತಿಯಲ್ಲಿ ಆಗಿರುವ ಅಭಿವೃದ್ಧಿ ಕೆಲಸಗಳನ್ನು ಜನರು ಮೆಚ್ಚಿದ ಕಾರಣಕ್ಕಾಗಿಯೇ ಈ ಬಾರಿ ಇನ್ನೂ ಮೂರು ಪಂಚಾಯಿತಿಗಳಲ್ಲಿ ವೇದಿಕೆಗೆ ಗೆಲುವು ಸಾಧಿಸಲು ಸಾಧ್ಯವಾಯಿತು ಎಂದು ಅವರು ವಿಶ್ಲೇಷಿಸುತ್ತಾರೆ. ಈ ಗೆಲುವೇ ಈಗ ವಿಧಾನಸಭೆ ಚುನಾವಣೆಯಲ್ಲಿಯೂ ಸ್ಪರ್ಧಿಸುವ ಉಮೇದು ತುಂಬಿದೆ.

‘ಉದ್ಯಮ ಸಂಸ್ಥೆಯ ನಿಯಂತ್ರಣದಲ್ಲಿರುವ ಟ್ವೆಂಟಿ–20ಯಂತಹ ವೇದಿಕೆಗೆ ಜನರ ಹಿತಾಸಕ್ತಿಗಿಂತ ಸ್ಥಾಪಿತ ಹಿತಾಸಕ್ತಿಯೇ ಹೆಚ್ಚಾಗಿರುತ್ತದೆ. ಅಭಿವೃದ್ಧಿ ಕಾಮಗಾರಿಗಳಿಗೆ ಹಣ ನೀಡಿಯೇ ಅವರು ಜನ ಬೆಂಬಲ ಪಡೆದಿದ್ದಾರೆ. ಕೈಗಾರಿಕಾ ಘಟಕಗಳಿಗೆ ಅನುಮತಿ ನೀಡುವ ಅಧಿಕಾರ ಹೊಂದಿರುವ ಪಂಚಾಯಿತಿಯ ನಿಯಂತ್ರಣ ಕೈಗೆ ಬರುವುದರಿಂದ ಹೀಗೆ ನೀಡಿದ ಹಣ ಕಂಪೆನಿಗೆ ನಷ್ಟವಾಗದು. ಹಲವು ಕಂಪೆನಿಗಳು ಉಂಟುಮಾಡುತ್ತಿರುವ ಮಾಲಿನ್ಯದ ವಿಚಾರವನ್ನು ಕಿಜಕ್ಕಂಬಲಂ ಪಂಚಾಯಿತಿಯಲ್ಲಿ ಮುಚ್ಚಿಡಲಾಗಿದೆ ಎಂಬ ಆರೋಪವೂ ಇದೆ’ ಎಂದು ಕಮ್ಯುನಿಸ್ಟ್ ಚಿಂತಕ ಕೆ.ವೇಣು ಹೇಳುತ್ತಾರೆ.

ಅಸ್ಸಾಂ ಮುಖ್ಯಮಂತ್ರಿ ಸರ್ವಾನಂದ ಸೋನೋವಾಲ್ ಅವರು ಬೆಂಬಲಿಗರ ಜತೆಗೆ ಬಂದು ಮಂಗಳವಾರ ನಾಮಪತ್ರ ಸಲ್ಲಿಸಿದರು ಪಿಟಿಐ ಚಿತ್ರ

ಆದರೆ, ಕೊಚ್ಚೌಸೇಫ್ ಚಿಟ್ಟಿಲಪಿಳ್ಳಿ ಇದನ್ನು ಒಪ್ಪುವುದಿಲ್ಲ. ವೇದಿಕೆಯ ನೇತೃತ್ವ ವಹಿಸಿದ ವ್ಯಕ್ತಿಯು ಉದ್ಯಮಿ ಆಗಿದ್ದರೆ ಅದು ತಪ್ಪು ಎಂದು ಹೇಳುವುದು ಹೇಗೆ ಎಂದು ಅವರು ಪ್ರಶ್ನಿಸುತ್ತಾರೆ. ರಾಜಕೀಯ ಪಕ್ಷಗಳ ಹಲವು ಮುಖಂಡರು ರಾಜಕೀಯಕ್ಕೆ ಬಂದ ಬಳಿಕ ಬೇನಾಮಿಯಾಗಿ ಉದ್ಯಮಗಳನ್ನು ಆರಂಭಿಸಿದ ಉದಾಹರಣೆ ಇದೆ ಎಂದೂ ಅವರು ಹೇಳಿದ್ದಾರೆ.

ಈ ವೇದಿಕೆಯ ಜನಪ್ರಿಯತೆಯು ಮುಖ್ಯವಾಹಿನಿಯ ರಾಜಕೀಯ ಪಕ್ಷಗಳಿಗೆ ತಲೆನೋವಾಗಿ ಪರಿಣಮಿಸಿದೆ. ರಾಜಕೀಯ ಪಕ್ಷಗಳ ಹಲವು ಮುಖಂಡರು ಬಹಿರಂಗವಾಗಿ ಮತ್ತು ಗುಟ್ಟಾಗಿ ವೇದಿಕೆಯ ನಾಯಕರ ಜತೆಗೆ ಮಾತುಕತೆ ನಡೆಸಿದ್ದಾರೆ.

ಅಸ್ಸಾಂನ ಸಮಗುರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಕೀಬುಲ್ ಹುಸೇನ್ ಅವರು ಮಂಗಳವಾರ ನಾಮಪತ್ರ ಸಲ್ಲಿಸುವ ಮುನ್ನ ಮೆರವಣಿಗೆ ನಡೆಸಿದರು. ಪಕ್ಷದ ಮುಖಂಡ ಗೌರವ್ ಗೊಗೊಯಿ ಜತೆಗಿದ್ದರು ಪಿಟಿಐ ಚಿತ್ರ

ಮಮ್ಮುಟ್ಟಿಗೆ ಚುನಾವಣಾ ರಾಜಕಾರಣದಲ್ಲಿ ಆಸಕ್ತಿ ಇಲ್ಲ



ತಮ್ಮದೇ ರಾಜ್ಯ ಮತ್ತು ನೆರೆಯ ರಾಜ್ಯಗಳ ಸಿನಿಮಾ ತಾರೆಯರು ರಾಜಕಾರಣ ಪ್ರವೇಶಿಸಿದ್ದರೂ ಮಲಯಾಳದ ಸೂಪರ್‌ಸ್ಟಾರ್ ಮಮ್ಮುಟ್ಟಿ ಅವರಿಗೆ ಮಾತ್ರ ಚುನಾವಣಾ ರಾಜಕಾರಣದಲ್ಲಿ ಆಸಕ್ತಿ ಇಲ್ಲ.

ತಮ್ಮ ಹೊಸ ಸಿನಿಮಾ ‘ದಿ ಪ್ರೀಸ್ಟ್’ ಬಿಡುಗಡೆಗೆ ಸಂಬಂಧಿಸಿದ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ತಮಗೆ ಗೊತ್ತಿರುವ ರಾಜಕಾರಣವೆಂದರೆ ನಟನೆ ಮಾತ್ರ. ಅದರಲ್ಲಿ ಪೂರ್ಣವಾಗಿ ತೊಡಗಿಸಿಕೊಂಡಿದ್ದೇನೆ ಎಂದು ಹೇಳಿದ್ದಾರೆ. ಚುನಾವಣೆಗೆ ಸ್ಪರ್ಧಿಸುವಂತೆ ಯಾವುದೇ ಪಕ್ಷ ತಮ್ಮನ್ನು ಸಂಪರ್ಕಿಸಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಈ ಬಾರಿ ಅವರು ಸ್ಪರ್ಧಿಸಲಿದ್ದಾರೆ ಎಂಬ ವದಂತಿ ಇತ್ತು.

ಸಿಪಿಎಂ ಜತೆಗೆ ಮಮ್ಮುಟ್ಟಿ ಅವರು ನಿಕಟ ಸಂಬಂಧ ಹೊಂದಿದ್ದಾರೆ. ಪಕ್ಷದ ಬೆಂಬಲದ ಕೈರಳಿ ಟಿ.ವಿ. ವಾಹಿನಿಯ ಅಧ್ಯಕ್ಷರಾಗಿಯೂ ಅವರು ಕೆಲಸ ಮಾಡಿದ್ದಾರೆ.

ಕೇರಳ: ಜೆಡಿಎಸ್ ಅಭ್ಯರ್ಥಿಗಳ ಪಟ್ಟಿ ಪ್ರಕಟ

ಬೆಂಗಳೂರು (ಪಿಟಿಐ): ಏಪ್ರಿಲ್ 6ರಂದು ಕೇರಳ ವಿಧಾನಸಭೆಗೆ ನಡೆಯಲಿರುವ ಚುನಾವಣೆಯಲ್ಲಿ ಸ್ಪರ್ಧಿಸಲಿರುವ ನಾಲ್ವರು ಅಭ್ಯರ್ಥಿಗಳ ಪಟ್ಟಿಯನ್ನು ಜೆಡಿಎಸ್ ಮಂಗಳವಾರ ಪ್ರಕಟಿಸಿದೆ.

ಪಕ್ಷದ ಕೇರಳ ಘಟಕದ ಅಧ್ಯಕ್ಷ ಮ್ಯಾಥ್ಯು ಟಿ. ಥಾಮಸ್ ಅವರು ತಿರುವಲ್ಲ ಕ್ಷೇತ್ರದಿಂದ, ಡಾ. ನೀಲಲೋಹಿತದಾಸ ನಾಡಾರ್ ಅವರು ಕೋವಳಂನಿಂದ, ಕೆ. ಕೃಷ್ಣನ್ ಕುಟ್ಟಿ ಚಿತ್ತೂರ್ ಕ್ಷೇತ್ರದಿಂದ ಹಾಗೂ ಜೋಸ್ ತೇಟ್ಟಯಿಲ್ ಅವರು ಅಂಗಮಾಲಿ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ.

ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಅವರು ಈ ಸ್ಪರ್ಧಿಗಳ ಹೆಸರನ್ನು ಅಂತಿಮಗೊಳಿಸಿದ್ದಾರೆ.

ಕೇರಳದಲ್ಲಿ ಆಡಳಿತಾರೂಢ ಎಲ್‌ಡಿಎಫ್ ಮೈತ್ರಿಯ ಭಾಗವಾಗಿರುವ ಜೆಡಿಎಸ್, 2016ರಲ್ಲಿ ಐದು ಕ್ಷೇತ್ರಗಳಲ್ಲಿ ಸ್ಪರ್ಧಿಸಿ ಮೂರರಲ್ಲಿ ಗೆಲುವು ಸಾಧಿಸಿತ್ತು.

154 ಕ್ಷೇತ್ರಗಳಲ್ಲಿ ಕಮಲ್ ಪಕ್ಷ ಸ್ಪರ್ಧೆ



ಕಮಲಹಾಸನ್

ಚೆನ್ನೈ ವರದಿ: ನಟ ಮತ್ತು ರಾಜಕಾರಣಿ ಕಮಲಹಾಸನ್ ನೇತೃತ್ವದ ಮಕ್ಕಳ್ ನೀಧಿ ಮಯ್ಯಂ (ಎಂಎನ್‌ಎಂ) ಪಕ್ಷವು ತಮಿಳುನಾಡು ವಿಧಾನಸಭೆಯ 154 ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದೆ. ನಟ ಮತ್ತು ರಾಜಕಾರಣಿ ಶರತ್‌ಕುಮಾರ್ ನೇತೃತ್ವದ ಆಲ್ ಇಂಡಿಯಾ ಸಮತ್ವ ಮಕ್ಕಲ್ ಕಚ್ಚಿ (ಎಐಎಸ್‌ಎಂಕೆ) ಮತ್ತು ಇಂಡಿಯಾ ಜನನಾಯಕ ಕಚ್ಚಿ (ಐಜೆಕೆ) ಜತೆಗೆ ಎಂಎನ್‌ಎಂ ಚುನಾವಣಾ ಹೊಂದಾಣಿಕೆ ಮಾಡಿಕೊಂಡಿದೆ. ಈ ಎರಡೂ ಪಕ್ಷಗಳು ತಲಾ 40 ಕ್ಷೇತ್ರಗಳಲ್ಲಿ ಸ್ಪರ್ಧಿಸಲಿವೆ.

ಕಮಲಹಾಸನ್ ಅವರು 2018ರಲ್ಲಿ ಎಂಎನ್‌ಎಂ ಸ್ಥಾಪಿಸಿದ್ದಾರೆ. 2019ರ ಲೋಕಸಭಾ ಚುನಾವಣೆಯಲ್ಲಿ ಈ ಪಕ್ಷಕ್ಕೆ ಶೇ 3.77ರಷ್ಟು ಮತ ಸಿಕ್ಕಿದೆ. ಎಸ್‌ಆರ್‌ಎಂ ಶಿಕ್ಷಣ ಸಂಸ್ಥೆಗಳ ಸ್ಥಾಪಕ ಟಿ.ಆರ್. ಪಾರಿವೇಂದರ್ ಅವರು ಐಜೆಕೆಯ ಮುಖ್ಯಸ್ಥ. ಅವರು 2019ರ ಲೋಕಸಭಾ ಚುನಾವಣೆಯಲ್ಲಿ ಡಿಎಂಕೆ ಚಿಹ್ನೆಯ ಅಡಿಯಲ್ಲಿ ಸ್ಪರ್ಧಿಸಿ ಗೆದ್ದಿದ್ದಾರೆ. 2014ರ ಚುನಾವಣೆಯಲ್ಲಿ ಐಜೆಕೆ, ಬಿಜೆಪಿಯ ಮಿತ್ರ ಪಕ್ಷವಾಗಿತ್ತು. ಡಿಎಂಕೆಯಿಂದ ರಾಜ್ಯಸಭಾ ಸದಸ್ಯರಾಗಿದ್ದ ಶರತ್‌ಕುಮಾರ್, ಬಳಿಕ ಎಐಎಡಿಎಂಕೆ ಸೇರಿದ್ದರು. ನಂತರ ಅದನ್ನೂ ಬಿಟ್ಟು ಸ್ವಂತ ಪಕ್ಷ ಸ್ಥಾಪಿಸಿದ್ದಾರೆ.

ಮೈತ್ರಿಯಿಂದ ಹೊರನಡೆದ ಡಿಎಂಡಿಕೆ

ವಿಜಯಕಾಂತ್

ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಕೇಳಿದಷ್ಟು ಸಂಖ್ಯೆಯ ಕ್ಷೇತ್ರಗಳು ಮತ್ತು ಕೇಳಿದ ಕ್ಷೇತ್ರಗಳು ಸಿಕ್ಕಿಲ್ಲ ಎಂಬ ಕಾರಣಕ್ಕೆ ಎಐಎಡಿಎಂಕೆ ನೇತೃತ್ವದ ಮೈತ್ರಿಕೂಟದಿಂದ ಡಿಎಂಡಿಕೆ ಹೊರನಡೆದಿದೆ. ನಟ ಮತ್ತು ರಾಜಕಾರಣಿ ವಿಜಯಕಾಂತ್ ಅವರ ನೇತೃತ್ವದ ಪಕ್ಷವು ಎಐಎಡಿಎಂಕೆ ಜತೆಗೆ ಹಲವು ಸುತ್ತಿನ ಮಾತುಕತೆ ನಡೆಸಿದರೂ ಕ್ಷೇತ್ರಗಳ ವಿಚಾರದಲ್ಲಿ ಸಹಮತಕ್ಕೆ ಬರಲು ಸಾಧ್ಯವಾಗಿಲ್ಲ.

ಈ ಮೈತ್ರಿಕೂಟದಲ್ಲಿ ಪಿಎಂಕೆ ಮತ್ತು ಬಿಜೆಪಿ ಕೂಡ ಇವೆ. ಪಿಎಂಕೆಗೆ 23 ಮತ್ತು ಬಿಜೆಪಿಗೆ 20 ಕ್ಷೇತ್ರಗಳನ್ನು ನೀಡಲಾಗಿದೆ. ತಮಿಳುನಾಡು ವಿಧಾನಸಭೆಯಲ್ಲಿ ಒಟ್ಟು 234 ಸ್ಥಾನಗಳಿವೆ.

ಪುದುಚೇರಿ: ಎಐಎನ್‌ಆರ್‌ಸಿ–ಬಿಜೆಪಿ–ಎಐಎಡಿಎಂಕೆ ಮೈತ್ರಿ ಅಂತಿಮ

ಪುದುಚೇರಿ ವರದಿ: ಹಲವು ದಿನಗಳ ಅನಿಶ್ಚಿತತೆಯ ಬಳಿಕ, ಪುದುಚೇರಿ ವಿಧಾನಸಭೆ ಚುನಾವಣೆಗೆ ಎಐಎನ್‌ಆರ್‌ಸಿ, ಬಿಜೆಪಿ ಮತ್ತು ಎಐಎಡಿಎಂಕೆ ನಡುವೆ ಮೈತ್ರಿ ಅಂತಿಮವಾಗಿದೆ. ಮಾಜಿ ಮುಖ್ಯಮಂತ್ರಿ ಎನ್. ರಂಗಸ್ವಾಮಿ ನೇತೃತ್ವದ ಎಐಎನ್‌ಆರ್‌ಸಿ 16 ಕ್ಷೇತ್ರಗಳಲ್ಲಿ ಮತ್ತು ಉಳಿದೆರಡು ಪಕ್ಷಗಳು 14 ಕ್ಷೇತ್ರಗಳಲ್ಲಿ ಸ್ಪರ್ಧಿಸಲಿವೆ. ಮುಖ್ಯಮಂತ್ರಿ ಅಭ್ಯರ್ಥಿ ಯಾರು ಎಂಬುದನ್ನು ಚುನಾವಣೆಯ ಬಳಿಕ ನಿರ್ಧರಿಸಲಾಗುವುದು ಎಂದು ಬಿಜೆಪಿ ಹೇಳಿದೆ.

ಮುಖ್ಯಮಂತ್ರಿ ಅಭ್ಯರ್ಥಿ ವಿಚಾರದಲ್ಲಿ ಒಮ್ಮತಕ್ಕೆ ಬರಲು ಸಾಧ್ಯವಾಗಿಲ್ಲ. ರಂಗಸ್ವಾಮಿ ಅವರಿಗೆ ಮುಖ್ಯಮಂತ್ರಿ ಗಾದಿಯ ಮೇಲೆ ಕಣ್ಣಿದೆ. ಹಾಗೆಯೇ, ಈ ಹಿಂದಿನ ಕಾಂಗ್ರೆಸ್ ನೇತೃತ್ವದ ಸರ್ಕಾರದಲ್ಲಿ ಸಚಿವರಾಗಿದ್ದು, ಬಳಿಕ ಬಿಜೆಪಿ ಸೇರಿದ ಎ. ನಮಃಶಿವಾಯ ಅವರೂ ಈ ಸ್ಥಾನದ ಆಕಾಂಕ್ಷಿಯಾಗಿದ್ದಾರೆ.

‘ಹೊರಗಿನವಳು’ ಹೇಳಿಕೆಗೆ ಮಮತಾ ತಿರುಗೇಟು

ನಂದಿಗ್ರಾಮ (ಪಶ್ಚಿಮ ಬಂಗಾಳ) (ಪಿಟಿಐ): ಟಿಎಂಸಿ ತೊರೆದು ಈಗ ಬಿಜೆಪಿ ಸೇರಿರುವ ಸುವೇಂದು ಅಧಿಕಾರಿ ಅವರು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು ‘ಹೊರಗಿನವರು’ ಎಂದು ಕರೆದಿದ್ದಾರೆ. ಮಮತಾ ಬ್ಯಾನರ್ಜಿ ಅವರು ಇದಕ್ಕೆ ತಿರುಗೇಟು ನೀಡಿದ್ದಾರೆ.

ಝೂರಗ್ರಾಮದಲ್ಲಿ ಬಿಜೆಪಿ ಅಭ್ಯರ್ಥಿ ಪರ ಪ್ರಚಾರ ನಡೆಸಿದ ಸುವೇಂದು, ‘ನಂದಿಗ್ರಾಮದಲ್ಲಿ ಹೊರಗಿನವರು ಬಂದು ಸ್ಪರ್ಧಿಸುತ್ತಿದ್ದಾರೆ. ಅವರನ್ನು 50,000 ಮತಗಳ ಅಂತರದಿಂದ ಸೋಲಿಸದೇ ಇದ್ದರೆ ನಾನು ರಾಜಕೀಯ ತೊರೆಯುತ್ತೇನೆ’ ಎಂದು ಪುನರುಚ್ಚರಿಸಿದ್ದರು. ಅಲ್ಲದೆ, ಟಿಎಂಸಿಯನ್ನು ಅಧಿಕಾರದಿಂದ ಓಡಿಸಿ ಎಂದು ಕರೆ ನೀಡಿದ್ದರು.

ಇದೇ ಸಂದರ್ಭದಲ್ಲಿ ನಂದಿಗ್ರಾಮದಲ್ಲಿ ಪ್ರಚಾರ ನಡೆಸುತ್ತಿದ್ದ ಮಮತಾ ಬ್ಯಾನರ್ಜಿ ಅವರು ಸುವೇಂದು ಅಧಿಕಾರಿ ಅವರಿಗೆ ತಿರುಗೇಟು ನೀಡಿದ್ದಾರೆ. ‘ಹೊರಗಿನ ಗುಜರಾತಿ ಜನರಿಗೆ ತಮ್ಮನ್ನು ಮಾರಿಕೊಂಡವರು, ಈಗ ನನ್ನನ್ನು ಹೊರಗಿನವಳು ಎಂದು ಕರೆಯುತ್ತಿದ್ದಾರೆ. ನಾನು ಪಶ್ಚಿಮ ಬಂಗಾಳದ ಮನೆಮಗಳು ಆಗಿರದಿದ್ದರೆ, 10 ವರ್ಷ ಆಡಳಿತ ನಡೆಸಲು ಸಾಧ್ಯವಿರಲಿಲ್ಲ’ ಎಂದು ಹೇಳಿದ್ದಾರೆ.

‘ಈ ನಾಯಕರಿಗೆ ನಾನು ಈಗ ಹೊರಗಿನವಳಾಗಿದ್ದೇನೆ. ಗುಜರಾತಿನಿಂದ ಬಂದವರು ಈ ನೆಲದ ಮಂದಿಯಾಗಿದ್ದಾರೆ. ಈ ಕ್ಷೇತ್ರದಲ್ಲಿ ಸ್ಪರ್ಧಿಸಬೇಡಿ ಎಂದು ನಂದಿಗ್ರಾಮದ ಜನರು ಹೇಳಲಿ, ನಾನು ಇಲ್ಲಿಂದ ಹೋಗುತ್ತೇನೆ’ ಎಂದು ಮಮತಾ ಹೇಳಿದ್ದಾರೆ.

ಜೈಶ್ರೀರಾಂ ಘೋಷಣೆಗೆ ತಡೆ: ಅರ್ಜಿ ವಜಾ

ನವದೆಹಲಿ ವರದಿ: ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ‘ಜೈ ಶ್ರೀರಾಂ’ ಘೋಷಣೆ ಕೂಗುವುದಕ್ಕೆ ತಡೆ ನೀಡಬೇಕು ಎಂದು ಕೋರಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ವಜಾಗೊಳಿಸಿದೆ. ಹಾಗೆಯೇ, ಪಶ್ಚಿಮ ಬಂಗಾಳದಲ್ಲಿ ಎಂಟು ಹಂತಗಳಲ್ಲಿ ಮತದಾನ ನಿಗದಿ ಮಾಡಿರುವುದನ್ನು ಪ್ರಶ್ನಿಸಿರುವ ಅರ್ಜಿಯನ್ನೂ ವಜಾ ಮಾಡಿದೆ.

ಜನಪ್ರಾತಿನಿಧ್ಯ ಕಾಯ್ದೆಯ ಉಲ್ಲಂಘನೆ ಆಗಿದೆ ಎಂದು ಅರ್ಜಿದಾರರು ಭಾವಿಸಿದ್ದರೆ ಅವರು ಸಂಬಂಧಪಟ್ಟ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಬೇಕು. ಈ ಎರಡೂ ಅಂಶಗಳನ್ನು ಪ್ರಶ್ನಿಸಲು ಸುಪ್ರೀಂ ಕೋರ್ಟ್ ಸರಿಯಾದ ವೇದಿಕೆ ಅಲ್ಲ ಎಂದು ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬಡೆ ನೇತೃತ್ವದ ಪೀಠವು ಹೇಳಿತು.

ಒಂದು ರಾಜಕೀಯ ಪಕ್ಷವು ‘ಜೈ ಶ್ರೀರಾಂ’ ಘೋಷಣೆಯನ್ನು ನಿರಂತರವಾಗಿ ಬಳಸಿಕೊಳ್ಳುತ್ತಿದೆ. ಚುನಾವಣೆ ಸಂದರ್ಭದಲ್ಲಿ ಧಾರ್ಮಿಕ ಘೋಷಣೆ ಕೂಗುವುದು ಸರಿಯಾದ ಕ್ರಮ ಅಲ್ಲ ಎಂದು ಅರ್ಜಿದಾರ ಎಂ.ಎಲ್. ಶರ್ಮಾ ವಾದಿಸಿದರು.

ಮಂಗಳೂರು ಬಳಿಯ ಗಂಜಿಮಠದಲ್ಲಿ ಸ್ಥಾಪನೆ

ಪ್ಲಾಸ್ಟಿಕ್ ಪಾರ್ಕ್: ಕೇಂದ್ರ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಮತ್ತು ಉತ್ತರ ಪ್ರದೇಶದಲ್ಲಿ ತಲಾ ಒಂದು ಪ್ಲಾಸ್ಟಿಕ್ ಪಾರ್ಕ್ ಸ್ಥಾಪನೆಗೆ ಕೇಂದ್ರ ಸರ್ಕಾರ ತಾತ್ವಿಕ ಒಪ್ಪಿಗೆ ನೀಡಿದೆ.

ಲೋಕಸಭೆಯಲ್ಲಿ ಮಂಗಳವಾರ ಈ ಸಂಬಂಧ ಲಿಖಿತ ಉತ್ತರ ನೀಡಿರುವ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಸಚಿವ ಡಿ.ವಿ.ಸದಾನಂದಗೌಡ, ಪ್ಲಾಸ್ಟಿಕ್ ಪಾರ್ಕ್‌ಗಾಗಿ ಗುಜರಾತ್, ಆಂಧ್ರಪ್ರದೇಶ, ಕರ್ನಾಟಕ, ಉತ್ತರ ಪ್ರದೇಶ, ಬಿಹಾರ, ಹಿಮಾಚಲ ಪ್ರದೇಶ ಮತ್ತು ಗೋವಾ ಸರ್ಕಾರಗಳಿಂದ ಪ್ರಸ್ತಾವನೆ ಸಲ್ಲಿಕೆಯಾಗಿದ್ದವು ಎಂದು ತಿಳಿಸಿದ್ದಾರೆ.

ಸ್ಥಳ, ಯೋಜನೆಯ ಅಂದಾಜು ವೆಚ್ಚ ಮತ್ತಿತರ ಅಂಶಗಳಿರುವ ಪ್ರಾಥಮಿಕ ಪ್ರಸ್ತಾವನೆಗಳನ್ನು ಕರ್ನಾಟಕ, ಉತ್ತರ ಪ್ರದೇಶ, ಬಿಹಾರ ಮತ್ತು ಹಿಮಾಚಲ ಪ್ರದೇಶ ಸರ್ಕಾರಗಳು ನಿಗದಿತ ಅವಧಿಯಲ್ಲಿ ಸಲ್ಲಿಸಿವೆ. ಈ ಪೈಕಿ ಕರ್ನಾಟಕ ಮತ್ತು ಉತ್ತರ ಪ್ರದೇಶ ಸರ್ಕಾರಗಳ ಪ್ರಸ್ತಾವನೆಗೆ ಸಮ್ಮತಿ ನೀಡಲಾಗಿದೆ ಎಂದು ಅವರು ಹೇಳಿದ್ದಾರೆ.

ತಜ್ಞರ ಸಮಿತಿಯು ತಾಂತ್ರಿಕ ಪರಿಶೀಲನೆ ನಡೆಸಿ ಸಲ್ಲಿಸಿದ ವರದಿಯನ್ವಯ ಕರ್ನಾಟಕದ ಮಂಗಳೂರು ಬಳಿಯ ಗಂಜಿಮಠ ಹಾಗೂ ಉತ್ತರ ಪ್ರದೇಶದ ಗೋರಖ್‌ಪುರ ಬಳಿ ಪ್ಲಾಸ್ಟಿಕ್ ಪಾರ್ಕ್ ಸ್ಥಾಪಿಸಲಾಗುವುದು. ಈ ಪಾರ್ಕ್‌ನ ಎಲ್ಲ ಘಟಕಗಳು ಶಾಸನಬದ್ಧ ಮಾನದಂಡ ಅನುಸರಿಸಬೇಕಲ್ಲದೆ, ಅಗತ್ಯ ಪರಿಸರ ಅನುಮತಿ ಹೊಂದಿರಬೇಕು ಎಂದು ಅವರು ತಿಳಿಸಿದ್ದಾರೆ.

ಈ ಘಟಕಗಳ ಸ್ಥಾಪನೆಯಿಂದ ಪರಿಸರದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುವ ಸಾಧ್ಯತೆ ಇದ್ದರೆ ಸರ್ಕಾರವು ಅಗತ್ಯ ಸಮೀಕ್ಷೆ ಕೈಗೊಳ್ಳಲಿದೆ ಎಂದೂ ಅವರು ವಿವರಿಸಿದ್ದಾರೆ.

ಮಹಾರಾಷ್ಟ್ರ ಸರ್ಕಾರದಿಂದ ಸೊಲ್ಲಾಪುರದಲ್ಲಿ ಬಸವೇಶ್ವರರ ಬೃಹತ್ ಸ್ಮಾರಕ

ಪ್ರಜಾವಾಣಿ ವಾರ್ತೆ

ಮುಂಬೈ: 12ನೇ ಶತಮಾನದ ದಾರ್ಶನಿಕ, ವಚನಕಾರ ಬಸವೇಶ್ವರರ ಬೃಹತ್ ಸ್ಮಾರಕವನ್ನು ಸೊಲ್ಲಾಪುರ ಜಿಲ್ಲೆಯಲ್ಲಿ ನಿರ್ಮಿಸಲು ಮಹಾರಾಷ್ಟ್ರ ಸರ್ಕಾರ ಮುಂದಾಗಿದೆ.

ಕರ್ನಾಟಕ ಗಡಿಯ ಸೊಲ್ಲಾಪುರ ಜಿಲ್ಲೆಯು ಹೆಚ್ಚಿನ ಸಂಖ್ಯೆಯಲ್ಲಿ ಲಿಂಗಾಯತ ಸಮುದಾಯದವರನ್ನು ಒಳಗೊಂಡಿದೆ. ಧಾರ್ಮಿಕ ಕ್ಷೇತ್ರವಾಗಿ ಗುರುತಿಸಿಕೊಂಡಿರುವ ಜಿಲ್ಲೆಯಲ್ಲಿ ಮರಾಠಿ, ತೆಲುಗು ಮತ್ತು ಕನ್ನಡ ಭಾಷಿಕರಿದ್ದು, ಹಲವು ಸಂಸ್ಕೃತಿಗಳ ಸಂಗಮ ಸ್ಥಾನವಾಗಿದೆ.

ಉದ್ಧವ್ ಠಾಕ್ರೆ ನೇತೃತ್ವದ ‘ಮಹಾ ವಿಕಾಸ್ ಅಘಾಡಿ’ ಮೈತ್ರಿ ಸರ್ಕಾರವು ಸೊಲ್ಲಾಪುರದ ಮಂಗಳವೇಡಾ ಪ್ರದೇಶದಲ್ಲಿ ಈ ಸ್ಮಾರಕ ನಿರ್ಮಿಸಲು ಮುಂದಾಗಿದೆ. ಸೋಮವಾರ 2021-22ನೇ ಸಾಲಿನ ಬಜೆಟ್ ಮಂಡನೆ ವೇಳೆ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರು ಈ ಕುರಿತು ಮಾಹಿತಿ ನೀಡಿದ್ದಾರೆ.

‘ಸಂತ ಬಸವೇಶ್ವರರು ಸೊಲ್ಲಾಪುರ ಜಿಲ್ಲೆಯ ಮಂಗಳವೇಡಾದಲ್ಲಿ 30 ವರ್ಷಗಳಿಗೂ ಹೆಚ್ಚು ಕಾಲ ನೆಲೆಸಿದ್ದರು. ಅವರು ಜನರಿಗೆ ಸಮಾನತೆ, ಕಾಯಕ ಮತ್ತು ನೈತಿಕ ಜೀವನದ ಮಹತ್ವವನ್ನು ಬೋಧಿಸಿದವರು. ಅವರ ನೆನಪಿನಲ್ಲಿ ಸ್ಮಾರಕ ನಿರ್ಮಿಸಲು ಅಗತ್ಯ ಅನುದಾನ ನೀಡಲಾಗುವುದು’ ಎಂದು ಅಜಿತ್ ಪವಾರ್ ಹೇಳಿದ್ದಾರೆ.

ಮಂಗಳವೇಡಾವು ‘ಸಂತರ ನಾಡು’ ಎಂದೇ ಪ್ರಸಿದ್ಧವಾಗಿದೆ. ಇಲ್ಲಿ ಸಂತ ಜಯತೀರ್ಥ, ಸಂತ ದಾಮಾಜಿ, ಸಂತ ಕನ್ಹೋಪಾತ್ರ, ಸಂತ ಬಸವೇಶ್ವರ ನೆಲೆಸಿದ್ದರು.

ಸೊಲ್ಲಾಪುರ ಜಿಲ್ಲಾ ಕೇಂದ್ರದಿಂದ 55 ಕಿಲೋಮೀಟರ್ ಪಶ್ಚಿಮಕ್ಕೆ ಮತ್ತು ಪಂಢರಪುರದಿಂದ ಆಗ್ನೇಯಕ್ಕೆ 25 ಕಿಲೋಮೀಟರ್ ದೂರದಲ್ಲಿ ಮಂಗಳವೇಡಾ ಇದೆ.

18 ರೈಲ್ವೆ ನೌಕರರಿಗೆ ಕೋವಿಡ್ ದೃಢ

ವಿಜಯನಗರ (ಹೊಸಪೇಟೆ): ‘ರೈಲ್ವೆ ಇಲಾಖೆಯ 18 ಜನ ನೌಕರರಿಗೆ ಮಂಗಳವಾರ ಕೋವಿಡ್–19 ದೃಢಪಟ್ಟಿರುವುದರಿಂದ ನಗರದ ರೈಲು ನಿಲ್ದಾಣವನ್ನು ಕೊರೊನಾ ಹಾಟ್‌ಸ್ಪಾಟ್ ಆಗಿ ಘೋಷಿಸಲಾಗಿದೆ’ ಎಂದು ಉಪವಿಭಾಗಾಧಿಕಾರಿ ಸಿದ್ದರಾಮೇಶ್ವರ ತಿಳಿಸಿದರು.

‘ನಿತ್ಯ ಒಂದಂಕಿಗೆ ಸೀಮಿತವಾಗಿದ್ದ ಕೋವಿಡ್ ಪ್ರಕರಣಗಳ ಸಂಖ್ಯೆ ಮಂಗಳವಾರ ಏಕಾಏಕಿ ಏರಿಕೆಯಾಗಿದೆ. ಬಿಹಾರ, ಉತ್ತರ ಪ್ರದೇಶದ ನೌಕರರನ್ನು ಮಾ.2ರಂದು ನೈರುತ್ಯ ರೈಲ್ವೆ ಇಲಾಖೆಯಲ್ಲಿ ಕೆಲಸಕ್ಕೆ ನಿಯೋಜಿಸಲಾಗಿದ್ದು, ಎಲ್ಲರೂ ನಗರದ ರೈಲು ನಿಲ್ದಾಣದಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ಆರಂಭದಲ್ಲಿ ಒಬ್ಬ ನೌಕರನಲ್ಲಿ ಸೋಂಕು ಕಾಣಿಸಿಕೊಂಡಿತ್ತು. ಅವರೊಂದಿಗೆ ಸಂಪರ್ಕಕ್ಕೆ ಬಂದಿದ್ದ 20 ಜನರನ್ನು ಪರೀಕ್ಷೆಗೆ ಒಳಪಡಿಸಿದಾಗ ಇತರೆ 18 ಜನರಲ್ಲಿ ಸೋಂಕು ಇರುವುದು ದೃಢಪಟ್ಟಿದೆ’ ಎಂದು ಸುದ್ದಿಗೋಷ್ಠಿಯಲ್ಲಿ ಅವರು ಮಾಹಿತಿ ನೀಡಿದರು.

ರೈಲು ನಿಲ್ದಾಣದಲ್ಲಿರುವ ಒಟ್ಟು 200 ಜನ ಸಿಬ್ಬಂದಿಗೂ ಕೊರೊನಾ ಸುರಕ್ಷತೆ ಮಾರ್ಗಸೂಚಿ ಅನುಸರಿಸಲು ಸೂಚನೆ ಕೊಡಲಾಗಿದೆ ಎಂದು ತಿಳಿಸಿದರು.

ಉತ್ತರಾಖಂಡ: ಮುಖ್ಯಮಂತ್ರಿ ಸ್ಥಾನಕ್ಕೆ ತ್ರಿವೇಂದ್ರಸಿಂಗ್ ರಾವತ್ ರಾಜೀನಾಮೆ

ಪ್ರಜಾವಾಣಿ ವಾರ್ತೆ

ಡೆಹ್ರಾಡೂನ್: ರಾಜ್ಯ ನಾಯಕತ್ವದಲ್ಲಿ ಶೀಘ್ರವೇ ಬದಲಾವಣೆಯಾಗಲಿದೆ ಎಂಬ ಊಹಾಪೋಹಗಳ ನಡುವೆಯೇ ಉತ್ತರಾಖಂಡ ಮುಖ್ಯಮಂತ್ರಿ ತ್ರಿವೇಂದ್ರ ಸಿಂಗ್ ರಾವತ್ ತಮ್ಮ ಸ್ಥಾನಕ್ಕೆ ಮಂಗಳವಾರ ರಾಜೀನಾಮೆ ನೀಡಿದ್ದಾರೆ.

ಅವರ ಕಾರ್ಯ ವೈಖರಿ ಬಗ್ಗೆ ಪಕ್ಷದಲ್ಲಿಯೇ ತೀವ್ರ ಅಸಮಾಧಾನ ಕಂಡು ಬಂದ ಹಿನ್ನೆಲೆಯಲ್ಲಿ ನಾಯಕತ್ವ ಬದಲಾವಣೆ ಮಾತುಗಳು ಕೇಳಿ ಬಂದಿದ್ದವು. ಈಗ ಅವರು ರಾಜೀನಾಮೆ ನೀಡುವುದರೊಂದಿಗೆ ಈ ಎಲ್ಲ ಊಹಾಪೋಹಗಳಿಗೆ ತೆರೆ ಬಿದ್ದಂತಾಗಿದೆ.

ಮಾರ್ಚ್ 17ರಂದು ರಾವತ್ ಅವರು ಮುಖ್ಯಮಂತ್ರಿಯಾಗಿ ನಾಲ್ಕು ವರ್ಷ ಪೂರೈಸಲಿದ್ದರು.

ಮುಖ್ಯಮಂತ್ರಿ ಸ್ಥಾನಕ್ಕೆ ಉನ್ನತ ಶಿಕ್ಷಣ ಸಚಿವ ಧನಸಿಂಗ್ ರಾವತ್ ಅವರ ಹೆಸರು ಮುಂಚೂಣಿಯಲ್ಲಿದೆ.

ಬಿಜೆಪಿ ವರಿಷ್ಠರ ಭೇಟಿಗಾಗಿ ತ್ರಿವೇಂದ್ರಸಿಂಗ್ ದೆಹಲಿಗೆ ತೆರಳಿದ್ದರು. ಅಲ್ಲಿಂದ ಮರಳಿದ ನಂತರ ರಾಜಭವನಕ್ಕೆ ತೆರಳಿದ ಅವರು, ರಾಜ್ಯಪಾಲರಾದ ಬೇಬಿ ರಾಣಿ ಮೌರ್ಯ ಅವರಿಗೆ ರಾಜೀನಾಮೆ ಪತ್ರ ಸಲ್ಲಿಸಿದರು.

ಉತ್ತರಾಖಂಡ ರಾಜ್ಯಪಾಲರಾದ ಬೇಬಿ ರಾಣಿ ಮೌರ್ಯ ಅವರಿಗೆ ಮುಖ್ಯಮಂತ್ರಿ ತ್ರಿವೇಂದ್ರಸಿಂಗ್ ರಾವತ್ ಮಂಗಳವಾರ ರಾಜೀನಾಮೆ ಪತ್ರ ಸಲ್ಲಿಸಿದರು –ಪಿಟಿಐ ಚಿತ್ರ

‘ಬುಧವಾರ ಬೆಳಿಗ್ಗೆ 10ಕ್ಕೆ ಬಿಜೆಪಿ ಶಾಸಕಾಂಗ ಪಕ್ಷದ ಸಭೆ ಪಕ್ಷದ ಕಚೇರಿಯಲ್ಲಿ ನಡೆಯುವುದು. ತಮ್ಮ ಉತ್ತರಾಧಿಕಾರಿಯನ್ನು ಈ ಸಭೆಯಲ್ಲಿ ಆಯ್ಕೆ ಮಾಡಲಾಗುತ್ತದೆ’ ಎಂದು ಅವರು ರಾಜೀನಾಮೆ ನೀಡಿದ ಬಳಿಕ ಸುದ್ದಿಗಾರರಿಗೆ ತಿಳಿಸಿದರು.

‘ನಿಮ್ಮ ಬದಲಾವಣೆಗೆ ಏನು ಕಾರಣ’ ಎಂಬ ಪತ್ರಕರ್ತರ ಪ್ರಶ್ನೆಗೆ, ‘ಇದು ಪಕ್ಷದ ಒಮ್ಮತದ ನಿರ್ಧಾರ’ ಎಂದು ಉತ್ತರಿಸಿದರು. ಇದೇ ಪ್ರಶ್ನೆಯನ್ನು ಪತ್ರಕರ್ತರು ಮತ್ತೆ ಕೇಳಿದಾಗ, ‘ನಿಖರ ಕಾರಣ ತಿಳಿಯಲು ನೀವು ದೆಹಲಿಗೆ ಹೋಗಬೇಕು’ ಎಂದಷ್ಟೆ ಹೇಳಿದರು.

2000ರಲ್ಲಿ ಉತ್ತರಪ್ರದೇಶದಿಂದ ಪ್ರತ್ಯೇಕಿಸಿ, ಉತ್ತರಾಖಂಡ ರಾಜ್ಯವನ್ನು ರಚಿಸಲಾಯಿತು. ಈ ವರೆಗೆ ಎಂಟು ಜನ ಮುಖ್ಯಮಂತ್ರಿಗಳು ರಾಜ್ಯಭಾರ ಮಾಡಿದ್ದು, ಈ ಪೈಕಿ ಎನ್.ಡಿ.ತಿವಾರಿ ಅವರು ಮಾತ್ರ ಅಧಿಕಾರಾವಧಿಯನ್ನು ಪೂರ್ಣಗೊಳಿಸಿದ್ದಾರೆ.

ರಾವತ್ ವಿರುದ್ಧ ಪಕ್ಷದಲ್ಲಿಯೇ ಅಸಮಾಧಾನ ತೀವ್ರಗೊಂಡ ಕಾರಣ ಕಳೆದ ವಾರ ಬಿಜೆಪಿ ಹೈಕಮಾಂಡ್ ರಮಣ್‌ಸಿಂಗ್ ಹಾಗೂ ದುಷ್ಯಂತ್ ಗೌತಮ್ ಅವರನ್ನು ಉತ್ತರಾಖಂಡಕ್ಕೆ ಕಳುಹಿಸಿತ್ತು. ಶಾಸಕರೊಂದಿಗೆ ಮಾತುಕತೆ ನಡೆಸಿದ್ದ ಈ ಇಬ್ಬರು ನಾಯಕರು, ಹೈಕಮಾಂಡ್‌ಗೆ ವರದಿ ಸಲ್ಲಿಸಿದ್ದರು.

ಈ ಬೆಳವಣಿಗೆ ಬೆನ್ನಲ್ಲೇ ಸೋಮವಾರ ದೆಹಲಿಗೆ ದೌಡಾಯಿಸಿದ್ದ ರಾವತ್, ಪಕ್ಷದ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಭೇಟಿ ಮಾಡಿದ್ದರು. ಅಧಿಕಾರ ತ್ಯಜಿಸುವಂತೆ ಈ ಭೇಟಿ ವೇಳೆಯಲ್ಲಿಯೇ ರಾವತ್ ಅವರಿಗೆ ಸೂಚಿಸಲಾಯಿತು ಎಂದು ಮೂಲಗಳು ಹೇಳಿವೆ.

70 ಸದಸ್ಯರ ಬಲದ ಉತ್ತರಾಖಂಡ ವಿಧಾನಸಭೆಗೆ 2017ರಲ್ಲಿ ನಡೆದ ಚುನಾವಣೆಯಲ್ಲಿ 57 ಸ್ಥಾನಗಳನ್ನು ಗೆಲ್ಲುವ ಮೂಲಕ ಬಿಜೆಪಿ ಅಧಿಕಾರದ ಗದ್ದುಗೆ ಏರಿತ್ತು. ಮುಂದಿನ ವರ್ಷ ವಿಧಾನಸಭೆಗೆ ಚುನಾವಣೆ ನಡೆಯಲಿದೆ.

ಮ್ಯಾನ್ಮಾರ್: ಮಂಡಿಯೂರಿ ಕ್ರೈಸ್ತ ಸನ್ಯಾಸಿನಿ ಅಳಲು, ಚಿತ್ರ ವೈರಲ್

‘ಮಕ್ಕಳನ್ನು ಕೊಲ್ಲಬೇಡಿ, ನನಗೇ ಗುಂಡಿಕ್ಕಿ’

ಯಾಂಗೂನ್, ಮ್ಯಾನ್ಮಾರ್(ಎಎಫ್‌ಪಿ): ‘ದಯವಿಟ್ಟು ಮಕ್ಕಳಿಗೆ ಏನೂ ಮಾಡಬೇಡಿ. ಬೇಕಿದ್ದರೆ ನನ್ನನ್ನೇ ಕೊಂದುಬಿಡಿ’ ಎಂದು ಶಸ್ತ್ರಸಜ್ಜಿತ ಭದ್ರತಾ ಸಿಬ್ಬಂದಿ ಎದುರು, ಮಂಡಿಯೂರಿ ಕುಳಿತ ಕ್ರೈಸ್ತ ಸನ್ಯಾಸಿನಿಯೊಬ್ಬರು ಬೇಡಿಕೊಂಡಿದ್ದಾರೆ.

ಶ್ವೇತ ವಸ್ತ್ರಧಾರಿಯಾಗಿದ್ದ ಸನ್ಯಾಸಿನಿ, ಎರಡೂ ಕೈಜೋಡಿಸಿ ನ್ಯೂ ಜುಂಟಾ ಭದ್ರತಾ ಸಿಬ್ಬಂದಿ ಎದುರು ಕುಳಿತು ಕೈಮುಗಿಯುತ್ತಿರುವ ಚಿತ್ರ ಈಗ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಸನ್ಯಾಸಿನಿಯ ನಿಲುವಿಗೆ ಮೆಚ್ಚುಗೆ ವ್ಯಕ್ತವಾಗಿದೆ.

ಮೈಕ್ತಿಯಾನಾ ನಗರದಲ್ಲಿ ಘಟನೆ ನಡೆದಿದೆ. ಜನನಾಯಕಿ ಸೂಕಿ ಬಂಧನ, ಸೇನಾದಂಗೆಯ ನಂತರ ಪ್ರಜಾಪ್ರಭುತ್ವ ಮರುಸ್ಥಾಪನೆಗೆ ಆಗ್ರಹಪಡಿಸಿ ಇಲ್ಲಿ, ದೇಶವ್ಯಾಪಿ ಪ್ರತಿಭಟನೆ ನಡೆಯುತ್ತಿದೆ. ಜನರು ಬೀದಿಗಿಳಿದಿದ್ದಾರೆ. ಜಲಫಿರಂಗಿ, ರಬ್ಬರ್ ಬುಲೆಟ್ ಪ್ರಯೋಗಿಸಿದರೂ ಅಂಜದೇ ಭದ್ರತಾ ಸಿಬ್ಬಂದಿಗೆ ಪ್ರತಿರೋಧ ತೋರುತ್ತಿದ್ದಾರೆ.

‘ಮಕ್ಕಳ ಬದಲಾಗಿ, ನನಗೇ ಗುಂಡಿಕ್ಕಿ’ ಎಂದು ಕ್ರೈಸ್ತ ಸನ್ಯಾಸಿನಿ ಭದ್ರತಾ ಸಿಬ್ಬಂದಿ ಎದುರು ಮಂಡಿಯೂರಿರುವುದು– ಎಎಫ್‌ಪಿ ಚಿತ್ರ

ಕಚಿನ್ ರಾಜ್ಯದ ರಾಜಧಾನಿಯೂ ಆಗಿರುವ ಮೈಕ್ತಿಯಾನಾ ನಗರದಲ್ಲೂ ಪ್ರತಿಭಟನೆ ತೀವ್ರಗೊಂಡಿದೆ. ಭದ್ರತಾ ಸಿಬ್ಬಂದಿಯು ಸನ್ಯಾಸಿನಿ ಆ್ಯನ್ ರೋಸ್‌ನು ತ್ವಾಂಗ್ ಮತ್ತು ಇತರ ಇಬ್ಬರನ್ನು ಬೆನ್ನಟ್ಟಿದಾಗ, ಪ್ರತಿಯಾಗಿ ಸನ್ಯಾಸಿನಿಯು ಹೀಗೇ ಮನವಿ ಮಾಡಿದ್ದಾರೆ.

‘ಭದ್ರತಾ ಸಿಬ್ಬಂದಿ ಪ್ರತಿಭಟನಾಕಾರರನ್ನು ಬೆನ್ನಟ್ಟಿದ್ದರು. ನನಗೆ, ಮಕ್ಕಳದೇ ಚಿಂತೆಯಾಗಿತ್ತು. ನಾನು ಮಂಡಿಯೂರಿ ಬೇಡುತ್ತಿದ್ದರೆ, ಸಿಬ್ಬಂದಿ ನನ್ನ ಹಿಂಭಾಗ ಇದ್ದ ಪ್ರತಿಭಟನಕಾರರತ್ತ ಗುಂಡು ಹಾರಿಸುತ್ತಿದ್ದರು. ಮಕ್ಕಳು ನನ್ನ ಎದುರೇ ಜೀವರಕ್ಷಣೆಗಾಗಿ ಓಡುತ್ತಿದ್ದರು. ಅದನ್ನು ನೋಡಿ ನನಗೆ ಸಹಿಸಲಾಗಲಿಲ್ಲ’ ಎಂದು ಅವರು ಸುದ್ದಿಸಂಸ್ಥೆಗೆ ಪ್ರತಿಕ್ರಿಯಿಸಿದ್ದಾರೆ.

‘ನಾನು ಬೇಡುವಾಗಲೇ ವ್ಯಕ್ತಿಯೊಬ್ಬ ಗುಂಡಿಗೆ ಬಲಿಯಾದ. ಆ ಕ್ಷಣ ನನಗೆ ಜಗತ್ತೇ ಕುಸಿಯುತ್ತಿರುವಂತೆ ಭಾಸವಾಯಿತು. ಆ ಬೆಳವಣಿಗೆ ನನಗೆ ತುಂಬ ಬೇಸರ ಉಂಟು ಮಾಡಿತು. ಅದಕ್ಕಾಗಿಯೇ, ಮಕ್ಕಳ ಬದಲಿಗೆ ನನ್ನನ್ನು ಕೊಲ್ಲಿ ಎಂದು ಬೇಡಿಕೊಂಡೆ’ ಎಂದು ಹೇಳಿದ್ದಾರೆ.

ಈ ಮಧ್ಯೆ, ಸೋಮವಾರ ನಡೆದ ಘರ್ಷಣೆಗೆ ಸಂಬಂಧಿಸಿದಂತೆ ಸಿಬ್ಬಂದಿ ಹಾರಿಸಿದ ಗುಂಡಿನಿಂದಾಗಿ ಇಬ್ಬರು ಸತ್ತಿದ್ದಾರೆ ಎಂಬುದನ್ನು ಸ್ಥಳೀಯ ರಕ್ಷಣಾ ತಂಡವು ದೃಢಪಡಿಸಿದೆ.

‘ಬ್ರಿಟನ್ ಸಂಸದರ ಚರ್ಚೆ ಏಕಪಕ್ಷೀಯ’

ನವದೆಹಲಿ: ಕೇಂದ್ರ ಸರ್ಕಾರದ ಕೃಷಿ ಕಾಯ್ದೆಗಳ ವಿರುದ್ಧ ರೈತರು ನಡೆಸುತ್ತಿರುವ ಪ್ರತಿಭಟನೆಗೆ ಸಂಬಂಧಿಸಿ ಬ್ರಿಟನ್ ಸಂಸದರು ಚರ್ಚೆ ನಡೆಸಿರುವುದನ್ನು ಲಂಡನ್‌ನಲ್ಲಿರುವ ಭಾರತೀಯ ಹೈಕಮಿಷನರ್ ಕಚೇರಿ ಖಂಡಿಸಿದೆ. ಅಲ್ಲದೆ ತೀವ್ರ ಆಕ್ಷೇಪವನ್ನು ವ್ಯಕ್ತಪಡಿಸಿರುವ ಭಾರತ, ಮಂಗಳವಾರ ಇಲ್ಲಿನ ಬ್ರಿಟಿಷ್ ರಾಯಭಾರಿಯನ್ನು ಕರೆಸಿ ವಿರೋಧ ದಾಖಲಿಸಿದೆ.

‘ಚರ್ಚೆಯು ಏಕಪಕ್ಷೀಯವಾಗಿದ್ದು ಸುಳ್ಳು ಪ್ರತಿಪಾದನೆಗಳಿಂದ ಕೂಡಿತ್ತು ಎಂದು ಹೈಕಮಿಷನರ್ ಕಚೇರಿ ತಿಳಿಸಿದೆ. ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ ಹರ್ಷವರ್ಧನ್, 'ಮತ್ತೊಂದು ದೇಶದ ಕೃಷಿ ಸುಧಾರಣೆಗಳ ಕುರಿತು ಚರ್ಚಿಸುವುದು ರಾಜಕೀಯ ಹಸ್ತಕ್ಷೇಪ ಎಂದಿದ್ದಾರೆ.

ಪ್ರಜಾವಾಣಿ

ಶಿವರಾತ್ರಿ ಸಂಭ್ರಮ
ಮಹಾ ಶಿವರಾತ್ರಿ ಪ್ರಯುಕ್ತ
ಶಿವಾಲಯ/ಶಿವಲಿಂಗದೊಂದಿಗೆ
ಒಂದು ಸೆಲ್ಫಿ ತೆಗೆದು, ಮಾರ್ಚ್ 12ರ ಒಳಗೆ +917338018541ಗೆ ವಾಟ್ಸ್‌ಆ್ಯಪ್ ಮಾಡಿ. ಆಯ್ದ ಚಿತ್ರಗಳನ್ನು ಪ್ರಜಾವಾಣಿ ಫೇಸ್‌ಬುಕ್‌ನಲ್ಲಿ ಪ್ರಕಟಿಸಲಾಗುವುದು ಹಾಗೂ ಅದೃಷ್ಟಶಾಲಿಗಳಿಗೆ ₹1,000/- ಗಿಫ್ಟ್ ವೌಚರ್ ನೀಡಲಾಗುವುದು.

*ಷರತ್ತುಗಳು ಅನ್ವಯ.
@prajavani.net @prajavani @prajavani @prajavani | prajavani.net

ಪ್ರಶ್ನೋತ್ತರ

ಯು.ಪಿ.ಪುರಾಣಿಕ್
ಬ್ಯಾಂಕಿಂಗ್-ಹಣಕಾಸು ತಜ್ಞ
uppuranik@gmail.com
ಮೊ: 9448015300

ರಾಮಚಂದ್ರಪ್ಪ, ಮೈಸೂರು

● **ಪ್ರಶ್ನೆ: ನಾನು ಕೆನರಾ ಬ್ಯಾಂಕ್‌ನಲ್ಲಿ ₹ 30 ಲಕ್ಷ ಠೇವಣಿ ಇರಿಸಿದ್ದೇನೆ. ಪತ್ರಿಕೆಗಳಲ್ಲಿ, ₹ 5 ಲಕ್ಷಕ್ಕಿಂತ ಹೆಚ್ಚಿನ ಹಣ ಬ್ಯಾಂಕ್‌ನಲ್ಲಿ ಠೇವಣಿ ಇರಿಸಿದರೆ ಭದ್ರತೆ ಇರುವುದು ₹ 5 ಲಕ್ಷಕ್ಕೆ ಮಾತ್ರ ಎಂಬ ಸುದ್ದಿ ಬಂದಿದೆ. ನಾನು ₹ 5 ಲಕ್ಷ ಮಾತ್ರ ಕೆನರಾ ಬ್ಯಾಂಕ್‌ನಲ್ಲಿ ಇರಿಸಿ, ಉಳಿದ ₹ 25 ಲಕ್ಷವನ್ನು, ಐದು ಭಾಗ ಮಾಡಿ, ಐದು ಬ್ಯಾಂಕ್‌ಗಳಲ್ಲಿ ಠೇವಣಿ ಮಾಡಬೇಕೆಂದಿದ್ದೇನೆ. ಅಂಚೆ ಕಚೇರಿಯಲ್ಲಿಯೂ ಇದೇ ಕಾನೂನು ಇದೆಯೇ? ನನ್ನ ಗೊಂದಲ ಪರಿಹರಿಸಿ.**

ಉತ್ತರ: ಇದೇ ಗೊಂದಲ ಹಲವರನ್ನು ಕಾಡುತ್ತಿದೆ. ಬ್ಯಾಂಕ್‌ನಲ್ಲಿ ₹ 5 ಲಕ್ಷಕ್ಕೂ ಹೆಚ್ಚಿನ ಮೊತ್ತಕ್ಕೆ ಭದ್ರತೆ ಇಲ್ಲ ಎನ್ನುವ ಮಾತು ಸತ್ಯಕ್ಕೆ ದೂರವಾದುದು. ಭಾರತೀಯ ರಿಸರ್ವ್ ಬ್ಯಾಂಕ್, ಡೆಪಾಸಿಟ್ ಗ್ಯಾರಂಟಿ ಇನ್ಶುರೆನ್ಸ್ ಕಾರ್ಪೊರೇಷನ್ ಮುಖಾಂತರ, ಬ್ಯಾಂಕ್‌ಗಳು ದಿವಾಳಿಯಾದ ಸಂದರ್ಭದಲ್ಲಿ ₹ 5 ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ಮೊತ್ತದ ಠೇವಣಿ ಇರಿಸಿದವರಿಗೆ ಗರಿಷ್ಠ ₹ 5 ಲಕ್ಷ ಹಣಕ್ಕೆ ಖಾತರಿ ನೀಡುತ್ತದೆ. ಠೇವಣಿದಾರರು ಮುಖ್ಯವಾಗಿ ಗಮನಿಸಬೇಕಾದ ವಿಚಾರವೆಂದರೆ ಭದ್ರವಾದ ಹಾಗೂ ರಾಷ್ಟ್ರೀಕೃತ ಬ್ಯಾಂಕ್‌ಗಳು ದಿವಾಳಿ ಆಗುವ ಸಂದರ್ಭ ಬಹುತೇಕ ಇರುವುದಿಲ್ಲ.

ನೀವು ಠೇವಣಿ ಇಟ್ಟಿರುವ ಕೆನರಾ ಬ್ಯಾಂಕ್ ರಾಷ್ಟ್ರೀಕೃತ ಬ್ಯಾಂಕ್ ಹಾಗೂ ತುಂಬಾ ಭದ್ರತೆ ಇರುವ ಬ್ಯಾಂಕ್. ₹ 5 ಲಕ್ಷದ ಡೆಪಾಸಿಟ್ ಇನ್ಶುರೆನ್ಸ್ ಮಿತಿಯನ್ನು ಪರಿಗಣಿಸಿ ಕೆನರಾ ಬ್ಯಾಂಕ್‌ನಲ್ಲಿ ಇರಿಸಿದ ₹ 30 ಲಕ್ಷ ಠೇವಣಿ ವಿಂಗಡಿಸಿ ಇನ್ನೂ 5–6 ಬ್ಯಾಂಕ್‌ಗಳಿಗೆ ಹೋಗುವ ಅವಶ್ಯವಿಲ್ಲ. ಅಂಚೆ ಕಚೇರಿ ಠೇವಣಿಗಳಿಗೆ ಶೇ 100ರಷ್ಟು ಕೇಂದ್ರ ಸರ್ಕಾರದ ಖಾತರಿ ಇದೆ. ಇಲ್ಲಿ ಕೂಡಾ ಬ್ಯಾಂಕ್‌ಗಳಲ್ಲಿ ದೊರೆಯುವ ಎಲ್ಲಾ ವಿಧದ ಠೇವಣಿಗಳಿವೆ. ಬಡ್ಡಿದರದಲ್ಲಿಯೂ ಬಹಳ ವ್ಯತ್ಯಾಸವಿಲ್ಲ. ಅವಧಿ ಠೇವಣಿಗೆ 1ರಿಂದ 3 ವರ್ಷಗಳಿಗೆ ಶೇ 5.5 ಹಾಗೂ 5 ವರ್ಷದ ಠೇವಣಿಗೆ ಶೇ 6.7 ಹಾಲಿ ಇರುವ ಬಡ್ಡಿದರ. ಬ್ಯಾಂಕ್ ಠೇವಣಿಯ ಮೇಲೆ ಅದೇ ಬ್ಯಾಂಕ್‌ನಲ್ಲಿ ತಕ್ಷಣ ಸಾಲ ಪಡೆಯಬಹುದು ಹಾಗೂ ಅವಧಿಗೆ ಮುನ್ನ ಅಸಲಿನಲ್ಲಿ ಏನೂ ಕಡಿತ ಇಲ್ಲದೆ ಹಣ ಕೂಡಾ ವಾಪಾಸ್ ಪಡೆಯಬಹುದು. ಈ ಸೌಲಭ್ಯ ಅಂಚೆ ಕಚೇರಿ ಠೇವಣಿಗಳಲ್ಲಿ ಲಭ್ಯವಿಲ್ಲ. ಒಟ್ಟಿನಲ್ಲಿ ಠೇವಣಿದಾರರು ಭದ್ರತೆ ಸಲುವಾಗಿ ಹಲವಾರು ಬ್ಯಾಂಕ್‌ಗಳನ್ನು ಸುತ್ತಾಡುವ ಅಗತ್ಯ ಖಂಡಿತವಾಗಿಯೂ ಇಲ್ಲ.

ಸಂತೋಷ್, ಕೆ.ಆರ್.ಪುರ, ಬೆಂಗಳೂರು

● **ಪ್ರಶ್ನೆ: ನಾನು ನಿಮ್ಮ ಸಲಹೆಯಂತೆ 10 ವರ್ಷಗಳ ಆರ್.ಡಿ. ಮಾಡಿ ನಿವೇಶನ ಕೊಂಡಿದ್ದೇನೆ. ನನಗೊಂದು ಮಾಹಿತಿ ಬೇಕಾಗಿದೆ. ನನ್ನ ತಾಯಿಯ ವಯಸ್ಸು 65 ವರ್ಷ. ಅವಳ ಬಳಿ ₹ 6 ಲಕ್ಷ ಉಳಿತಾಯ ಖಾತೆಯಲ್ಲಿ ಇದೆ. ಈ ಹಣ ನನ್ನ ತಂಗಿಯ ಮದುವೆಗೆ ಕೊಡಬೇಕೆಂದಿದ್ದಾಳೆ. ತಂಗಿಯ ವಯಸ್ಸು 24 ವರ್ಷ. ತಂಗಿಗೆ ವರ ನೋಡುತ್ತಿದ್ದು, ಒಂದೆರಡು ವರ್ಷಗಳಲ್ಲಿ ಮದುವೆ ಮಾಡಬೇಕಾಗಿದೆ. ನನ್ನ ತಾಯಿ ಹಿರಿಯ ನಾಗರಿಕಳಾಗಿದ್ದರಿಂದ ₹ 6 ಲಕ್ಷವನ್ನು ಅಂಚೆ ಕಚೇರಿ–ಎಲ್ಐಸಿ ವಯೋವಂದನಾ ಯೋಜನೆಯಲ್ಲಿ ಇರಿಸಲು ನಿಮ್ಮ ಅಭಿಪ್ರಾಯ ತಿಳಿಸಿ.**

ಉತ್ತರ: ಅಂಚೆ ಕಚೇರಿ ಹಾಗೂ ವಯೋವಂದನಾ ಯೋಜನೆ ಇವೆರಡರಲ್ಲಿಯೂ ಹಿರಿಯ ನಾಗರಿಕರಿಗೆ ವಾರ್ಷಿಕ ಶೇ 7.4ರಷ್ಟು ಬಡ್ಡಿ ಬರುತ್ತದೆ. ಆದರೆ ಹಿರಿಯ ನಾಗರಿಕರ ಅಂಚೆ ಕಚೇರಿ ಠೇವಣಿಯ ಅವಧಿ 5 ವರ್ಷ ಹಾಗೂ ವಯೋವಂದನಾ ಯೋಜನೆಯ ಅವಧಿ 10 ವರ್ಷ. ನಿಮ್ಮ ತಂಗಿಗೆ ಒಂದೆರಡು ವರ್ಷಗಳಲ್ಲಿ ಮದುವೆ ಮಾಡುವ ಸಂಭವ ಇರುವುದರಿಂದ ಈ ಯೋಜನೆಗಳಲ್ಲಿ ಹಣ ತೊಡಗಿಸಿದರೆ ಮದುವೆಯ ಸಮಯದಲ್ಲಿ ಠೇವಣಿ ಹಣ ಪಡೆಯಲು ಸಾಧ್ಯವಿಲ್ಲ. ನಿಮ್ಮ ತಾಯಿ ಉಳಿತಾಯ ಖಾತೆಯಲ್ಲಿರುವ ಹಣವನ್ನು ಅದೇ ಬ್ಯಾಂಕ್‌ನಲ್ಲಿ ಒಮ್ಮೆಲೇ ಬಡ್ಡಿ ಬರುವ ಠೇವಣಿಯಲ್ಲಿ ಒಂದು ವರ್ಷದ ಅವಧಿಗೆ ಇರಿಸಲಿ. ಒಂದು ವರ್ಷದಲ್ಲಿ ಮದುವೆ ನಿಶ್ಚಯವಾಗದಿರುವಲ್ಲಿ ಮುಂದೆ ಇನ್ನೊಂದು ವರ್ಷಕ್ಕೆ ಅದೇ ಠೇವಣಿ ನವೀಕರಿಸಲಿ. ಬ್ಯಾಂಕ್‌ಗಳಲ್ಲಿ ಅವಧಿ ಠೇವಣಿ ಎಷ್ಟು ವರ್ಷಗಳ ಅವಧಿಗೆ ಇರಿಸಿದರೂ ಅವಧಿಗೆ ಮುನ್ನ ಪಡೆಯುವ ಹಕ್ಕು ಠೇವಣಿದಾರರಿಗೆ ಇರುತ್ತದೆ. ಈ ಸವಲತ್ತು ಬೇರೆ ಕಡೆ ಇರುವುದಿಲ್ಲ.

ಮೀನಾಕ್ಷಿ, ಚಿತ್ರದುರ್ಗ

● **ಪ್ರಶ್ನೆ: 2005ರಲ್ಲಿ ಯುಟಿಐ, ರಿಲಯನ್ಸ್ ಮ್ಯೂಚವಲ್ ಫಂಡ್‌ಗಳಲ್ಲಿ ನಾನು ಹಣ ತೊಡಗಿಸಿದ್ದೆ. ಬೇರೆ ಬೇರೆ ತಾಪತ್ರಗಳಿಂದ ಅವುಗಳನ್ನು ಮರೆತುಬಿಟ್ಟೆ. ನಾನು ಹಣ ಪಡೆಯದಿರುವುದರಿಂದ ಈಗ ವಾಪಸ್ ಪಡೆಯಲು ಸಾಧ್ಯವೇ?**

ಉತ್ತರ: ನೀವು ಯುಟಿಐ ಹಾಗೂ ರಿಲಯನ್ಸ್ ಮ್ಯೂಚುವಲ್ ಫಂಡ್‌ಗಳಲ್ಲಿ ಹಣ ಹೂಡಿಕೆ ಮಾಡಿದ್ದಕ್ಕೆ ಅವರು ನಿಮಗೆ ಸ್ಟೇಟ್‌ಮೆಂಟ್ ಕಳಿಸುತ್ತಾರೆ. ಅದರಲ್ಲಿ ನಿಮ್ಮ ಹೆಸರು, ವಿತರಿಸಿದ ಯುನಿಟ್‌ಗಳ ವಿವರ, ಖಾತೆ ಸಂಖ್ಯೆ ಎಲ್ಲವೂ ನಮೂದಾಗಿರುತ್ತದೆ. ಇಂತಹ ಯಾವುದಾದರೂ ಪುರಾವೆ ಇದ್ದಲ್ಲಿ ಹಣ ಹೂಡಿದ ಕಂಪನಿಯಲ್ಲಿ ವಿಚಾರಿಸಬಹುದು. ಯಾವುದೇ ಪುರಾವೆಗಳಿಲ್ಲದೇ ಇದ್ದಲ್ಲಿ 15 ವರ್ಷಗಳ ಹಿಂದಿನ ವ್ಯವಹಾರ ಕಂಪನಿಯವರಿಗೆ ಹುಡುಕಲು ಸಾಧ್ಯವಿಲ್ಲ. ಮ್ಯೂಚುವಲ್ ಫಂಡ್, ಜೀವ ವಿಮೆ, ಬ್ಯಾಂಕ್ ಠೇವಣಿ ಹಾಗೂ ಸ್ಥಿರ ಆಸ್ತಿ ಈ ಎಲ್ಲಾ ಹೂಡಿಕೆಗಳಲ್ಲಿ ದೊರೆಯುವ ಮೂಲ ಪ್ರತಿಗಳನ್ನು ಪಡೆದ ನಂತರ ಜೆರಾಕ್ಸ್ ಮಾಡಿಸಿ ಪ್ರತ್ಯೇಕವಾಗಿ ಇಟ್ಟುಕೊಂಡರೆ ಮೂಲ ಪ್ರತಿ ಸಿಗದೇ ಇದ್ದಾಗ, ಕಳೆದಾಗ, ಹೂಡಿದ ಹಣ ಪಡೆಯಲು ಅನುಕೂಲವಾಗುತ್ತದೆ. ಪುರಾವೆಗಳಿಲ್ಲದೆ ಯಾವ ಕಚೇರಿಯಲ್ಲಿಯೂ ವಿವರಣೆ ಸಿಗುವುದಿಲ್ಲ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ
ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–56001.
ಇ–ಮೇಲ್: **businessdesk@prajavani.co.in**

ಏಪ್ರಿಲ್ 1ರಿಂದ ಇ–ಇನ್‌ವಾಯ್ಸ್ ಕಡ್ಡಾಯ

ನವದೆಹಲಿ (ಪಿಟಿಐ): ₹ 50 ಕೋಟಿಗಿಂತ ಹೆಚ್ಚಿನ ವಹಿವಾಟು ನಡೆಸುವ ವಾಣಿಜ್ಯ ಸಂಸ್ಥೆಗಳು ಬೇರೆ ವಾಣಿಜ್ಯ ಸಂಸ್ಥೆಗಳ ಜೊತೆ ನಡೆಸುವ ವಹಿವಾಟುಗಳಿಗೆ ಸಂಬಂಧಿಸಿದಂತೆ ಇ–ಇನ್‌ವಾಯ್ಸ್ ಸಿದ್ಧಪಡಿಸುವುದನ್ನು ಕೇಂದ್ರ ಸರ್ಕಾರ ಏಪ್ರಿಲ್ 1ರಿಂದ ಕಡ್ಡಾಯಗೊಳಿಸಿದೆ.

₹ 500 ಕೋಟಿಗಿಂತ ಹೆಚ್ಚಿನ ವಹಿವಾಟು ಹೊಂದಿರುವ ಕಂಪನಿಗಳು ಹಾಗೂ ₹ 100 ಕೋಟಿಗಿಂತ ಹೆಚ್ಚಿನ ವಹಿವಾಟು ಹೊಂದಿರುವ ಕಂಪನಿಗಳು ಇತರ ವಾಣಿಜ್ಯ ಸಂಸ್ಥೆಗಳ ಜೊತೆ ನಡೆಸುವ ವಹಿವಾಟುಗಳಿಗೆ ಇ–ಇನ್‌ವಾಯ್ಸ್ ಸಿದ್ಧಪಡಿಸುವುದು ಕಡ್ಡಾಯ ಎಂಬ ನಿಯಮ ಈಗಾಗಲೇ ಜಾರಿಗೆ ಬಂದಿದೆ.

ಏಪ್ರಿಲ್ 1ರಿಂದ ಈ ನಿಯಮವು ₹ 50 ಕೋಟಿ ವಹಿವಾಟು ನಡೆಸುವ ಕಂಪನಿಗಳಿಗೂ ಅನ್ವಯ ಆಗಲಿದೆ ಎಂದು ಕೇಂದ್ರ ಪರೋಕ್ಷ ತೆರಿಗೆ ಮತ್ತು ಸುಂಕಗಳ ಮಂಡಳಿ ಹೇಳಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,956
ಇಂದಿನ ಅಂತ್ಯ	15,098
▲	142
ದಿನದ ಗರಿಷ್ಠ	15,126

ವಿನಿಮಯ ದರ

$ ಡಾಲರ್	72.93
£ ಪೌಂಡ್	101.36
€ ಯುರೊ	86.85
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹400
12 ಮೊಟ್ಟೆಗೆ	₹54
ಮೈಸೂರು	
100 ಮೊಟ್ಟೆಗೆ	₹403

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1540 (1515)
ಸೋಯಾ (ರಿಫೈನ್ಡ್)	₹1222 (1220)
ಸೂರ್ಯಕಾಂತಿ (ರಿಫೈನ್ಡ್)	₹1700 (1650)
ಪಾಮೋಲಿನ್	₹1200 (1200)

ಕಚ್ಚಾ ತೈಲ ಆಮದು: ಅನ್ಯ ಮೂಲ ಹುಡುಕುವಂತೆ ಕಂಪನಿಗಳಿಗೆ ಕೇಂದ್ರ ಸೂಚನೆ

ಮಧ್ಯಪ್ರಾಚ್ಯದ ಅವಲಂಬನೆ ತಗ್ಗಿಸಲು ಕ್ರಮ

ಮುಖ್ಯಾಂಶಗಳು
- ಗಯಾನಾದಿಂದ ತೈಲ ಆಮದಿಗೆ ಚಿಂತನೆ
- ರಷ್ಯಾ ಜೊತೆಗಿನ ಆಮದು ಒಪ್ಪಂದ ನವೀಕರಣ
- ಆರಂಭದಲ್ಲಿ ಹೆಚ್ಚಿನ ಬೆಲೆಗೆ ಆಮದು ಸಾಧ್ಯತೆ

ನವದೆಹಲಿ (ರಾಯಿಟರ್ಸ್): ಕಚ್ಚಾ ತೈಲ ಆಮದು ವಿಚಾರದಲ್ಲಿ ಕೆಲವೇ ದೇಶಗಳನ್ನು ನೆಚ್ಚಿಕೊಳ್ಳುವುದು ಬೇಡ ಎಂದು ಕೇಂದ್ರ ಸರ್ಕಾರವು ತನ್ನ ಮಾಲೀಕತ್ವದ ತೈಲ ಮಾರಾಟ ಕಂಪನಿಗಳಿಗೆ ಹೇಳಿದೆ. ಕಚ್ಚಾ ತೈಲ ಉತ್ಪಾದನೆಯನ್ನು ಏಪ್ರಿಲ್ ತಿಂಗಳಿನಲ್ಲಿಯೂ ಹೆಚ್ಚಿಸುವುದು ಬೇಡ 'ಒಪೆಕ್ +' ದೇಶಗಳು ತೀರ್ಮಾನಿಸಿದ ನಂತರ, ತೈಲಕ್ಕಾಗಿ ಮಧ್ಯಪ್ರಾಚ್ಯದ ಮೇಲಿನ ಅವಲಂಬನೆಯನ್ನು ಹಂತ ಹಂತವಾಗಿ ಕಡಿಮೆ ಮಾಡುವಂತೆ ಸರ್ಕಾರವು ಹೇಳಿದೆ ಎಂದು ಮೂಲಗಳು ತಿಳಿಸಿವೆ.

ಭಾರತವು ತೈಲವನ್ನು ಅತಿಹೆಚ್ಚಿನ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುವ ದೇಶಗಳ ಸಾಲಿನಲ್ಲಿ ವಿಶ್ವದಲ್ಲಿ ಮೂರನೆಯ ಸ್ಥಾನದಲ್ಲಿದೆ. ಭಾರತಕ್ಕೆ ಅಗತ್ಯವಿರುವ ಒಟ್ಟು ತೈಲದಲ್ಲಿ ಶೇಕಡ 84ರಷ್ಟು ಹೊರರಾಷ್ಟ್ರಗಳಿಂದ ಆಮದಾಗುತ್ತದೆ. ಆಮದಿನ ಪೈಕಿ ಶೇ 60ರಷ್ಟು ಮಧ್ಯಪ್ರಾಚ್ಯದ ದೇಶಗಳಿಂದ ಬರುತ್ತದೆ. ಪಾಶ್ಚಿಮಾತ್ಯ ದೇಶಗಳಿಂದ ಬರುವ ತೈಲಕ್ಕಿಂತಲೂ ಮಧ್ಯಪ್ರಾಚ್ಯದ ದೇಶಗಳು ಮಾರಾಟ ಮಾಡುವ ತೈಲ ತುಸು ಅಗ್ಗ.

'ತೈಲ ಆಮದಿನ ವಿಚಾರದಲ್ಲಿ ಬೇರೆ ಬೇರೆ ಮೂಲಗಳನ್ನು ಕಂಡುಕೊಳ್ಳುವಂತೆ ನಾವು ಕಂಪನಿಗಳಿಗೆ ಹೇಳಿದ್ದೇವೆ. ತೈಲ ಉತ್ಪಾದನೆಯಲ್ಲಿ ತೊಡಗಿರುವ ಮಧ್ಯಪ್ರಾಚ್ಯದ ದೇಶಗಳು ನಮ್ಮನ್ನು ಒತ್ತೆಯಾಳುಗಳಂತೆ ನೋಡಲು ನಾವು ಅವಕಾಶ ನೀಡುವುದಿಲ್ಲ. ತೈಲ ಮಾರುಕಟ್ಟೆಯಲ್ಲಿ ಅಸ್ಥಿರತೆ ನಿವಾರಣೆ ಆಗಬೇಕು ಎಂದು ಆ ದೇಶಗಳು ಬಯಸಿದಾಗ ನಾವು ಅವರ ಬೆಂಬಲಕ್ಕೆ ನಿಂತಿದ್ದೆವು' ಎಂದು ಸರ್ಕಾರದ ಅಧಿಕಾರಿಯೊಬ್ಬರು ಹೇಳಿದರು.

ಕೋವಿಡ್–19 ಕಾರಣದಿಂದಾಗಿ ಕಚ್ಚಾ ತೈಲದ ಬೇಡಿಕೆಯು ಕುಸಿದುಬಿದ್ದಿದ್ದಾಗಲೂ ಭಾರತವು ಮಧ್ಯಪ್ರಾಚ್ಯದ ದೇಶಗಳಿಂದ ತೈಲ ಆಮದು ಮಾಡಿಕೊಳ್ಳುವುದನ್ನು ಸ್ಥಗಿತಗೊಳಿಸಿರಲಿಲ್ಲ ಎಂದು ಅವರು ತಿಳಿಸಿದರು. ಆದರೆ, ಏಪ್ರಿಲ್‌ನಿಂದ ಉತ್ಪಾದನೆ ಹೆಚ್ಚಿಸಬೇಕು ಎಂದು ಭಾರತ ಮಾಡಿಕೊಂಡ ಮನವಿಯನ್ನು ಒಪೆಕ್ ದೇಶಗಳು ಪುರಸ್ಕರಿಸಿಲ್ಲ.

ಬೇರೆ ದೇಶಗಳಿಂದ ತೈಲ ಆಮದು ಮಾಡಿಕೊಳ್ಳುವುದರಿಂದ ಆರಂಭಿಕ ಹಂತದಲ್ಲಿ ಹೆಚ್ಚು ಹಣ ಪಾವತಿಸಬೇಕಾಗಿ ಬಂದರೂ, ಭವಿಷ್ಯದಲ್ಲಿ ಇದು ದೇಶಕ್ಕೆ ಪ್ರಯೋಜನ ತಂದುಕೊಡಲಿದೆ ಎಂದು ಆ ಅಧಿಕಾರಿ ಹೇಳಿದರು. ಸರ್ಕಾರದಿಂದ ಈ ರೀತಿಯ ಸೂಚನೆ ಬಂದಿರುವುದು ಹೌದು ಎಂದು ಎರಡು ತೈಲ ಸಂಸ್ಕರಣಾ ಘಟಕಗಳು ಖಚಿತಪಡಿಸಿವೆ.

ಗಯಾನಾದಿಂದ ತೈಲ ಆಮದು ಮಾಡಿಕೊಳ್ಳುವ ಆಲೋಚನೆ ಇದೆ. ಇಂಡಿಯನ್ ಆಯಿಲ್ ಕಾರ್ಪೊರೇಷನ್ ಕಂಪನಿಯು ರಷ್ಯಾದಿಂದ ತೈಲ ಆಮದು ಮಾಡಿಕೊಳ್ಳುವ ಒಪ್ಪಂದವನ್ನು ನವೀಕರಿಸಿದೆ ಎಂದು ಮೂಲಗಳು ಹೇಳಿವೆ. ಇರಾನ್‌ನಿಂದ ತೈಲ ಆಮದು ಮಾಡಿಕೊಳ್ಳುವುದನ್ನು ಈ ವರ್ಷದಿಂದ ಮತ್ತೆ ಆರಂಭಿಸಬಹುದು ಎಂಬ ಭರವಸೆ ಕೇಂದ್ರಕ್ಕಿದೆ. ಈ ವಿಚಾರವಾಗಿ ಸುದ್ದಿಸಂಸ್ಥೆ ಕೇಳಿದ್ದ ಪ್ರತಿಕ್ರಿಯೆಗೆ ಪೆಟ್ರೋಲಿಯಂ ಸಚಿವಾಲಯ ಹಾಗೂ ಇಂಡಿಯನ್ ಆಯಿಲ್ ಸ್ಪಂದಿಸಿಲ್ಲ.

ಭಾರತಕ್ಕೆ ಈಗ ತೈಲ ಪೂರೈಕೆ ಮಾಡುತ್ತಿರುವ ದೇಶಗಳ ಪೈಕಿ ಇರಾಕ್ ಹಾಗೂ ಸೌದಿ ಅರೇಬಿಯಾ ಮುಂಚೂಣಿ ಸ್ಥಾನಗಳಲ್ಲಿವೆ. 'ಹೊಸ ಆರಂಭವೊಂದನ್ನು ಮಾಡಲೇಬೇಕಿದೆ. ಕಿರು ಅವಧಿಯ ಖರೀದಿ ಒಪ್ಪಂದಗಳನ್ನು ಬೇರೆ ಬೇರೆ ದೇಶಗಳೊಂದಿಗೆ ಮಾಡಿಕೊಳ್ಳುವ ಪ್ರಯತ್ನವನ್ನು ನಾವು ನಡೆಸಿದ್ದೇವೆ' ಎಂದು ಮೂಲಗಳು ಹೇಳಿವೆ.

ಸೆನ್ಸೆಕ್ಸ್ 584 ಅಂಶ ಏರಿಕೆ

ಮುಂಬೈ (ಪಿಟಿಐ): ಖಾಸಗಿ ಬ್ಯಾಂಕ್‌ಗಳು ಮತ್ತು ಐ.ಟಿ. ಕಂಪನಿಗಳ ಷೇರುಗಳ ಗಳಿಕೆ ಹಾಗೂ ಜಾಗತಿಕ ಮಟ್ಟದಲ್ಲಿನ ಸಕಾರಾತ್ಮಕ ಅಂಶಗಳಿಂದಾಗಿ ದೇಶಿ ಷೇರುಪೇಟೆ ಸೂಚ್ಯಂಕಗಳು ಏರಿಕೆ ಕಂಡವು. ಮುಂಬೈ ಷೇರುಪೇಟೆ ಸೂಚ್ಯಂಕ 584 ಅಂಶ ಏರಿಕೆ ಕಂಡು 51,025 ಅಂಶಗಳಿಗೆ ತಲುಪಿತು.

87 ಸಾವಿರ ಟನ್ ಈರುಳ್ಳಿ ರಫ್ತು: ತೋಮರ್

ನವದೆಹಲಿ (ಪಿಟಿಐ): ಈರುಳ್ಳಿ ರಫ್ತು ನಿಷೇಧ ಹಿಂಪಡೆದ ನಂತರ, ಜನವರಿ–ಫೆಬ್ರುವರಿ ಅವಧಿಯಲ್ಲಿ 87 ಸಾವಿರ ಟನ್ ಈರುಳ್ಳಿ ರಫ್ತು ಮಾಡಲಾಗಿದೆ ಎಂದು ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಮಂಗಳವಾರ ಲೋಕಸಭೆಗೆ ತಿಳಿಸಿದ್ದಾರೆ.

ಮುಂಗಾರು ಇಳುವರಿ ಉತ್ತಮವಾಗಿರುವ ನಿರೀಕ್ಷೆಯಿಂದ ಜನವರಿ 1ರಿಂದ ರಫ್ತು ನಿಷೇಧ ಹಿಂಪಡೆಯಲಾಗಿದೆ ಎಂದು ಅವರು ಲಿಖಿತ ಉತ್ತರ ನೀಡಿದ್ದಾರೆ. 2019–20ರಲ್ಲಿ ₹ 2,320 ಕೋಟಿ ಮೌಲ್ಯದ 11.50 ಲಕ್ಷ ಟನ್ ಈರುಳ್ಳಿ ರಫ್ತು ಮಾಡಲಾಗಿತ್ತು.

2020ರ ಡಿಸೆಂಬರ್‌ನಲ್ಲಿ ದೇಶದಾದ್ಯಂತ ಈರುಳ್ಳಿಯ ಸರಾಸರಿ ರಿಟೇಲ್ ದರವು ಕೆ.ಜಿಗೆ ₹ 44.33 ಇತ್ತು. 2021ರ ಜನವರಿಯಲ್ಲಿ ಕೆ.ಜಿಗೆ ₹ 38.59 ಹಾಗೂ ಫೆಬ್ರುವರಿಯಲ್ಲಿ ಕೆ.ಜಿಗೆ ₹ 44.08ರಷ್ಟಾಗಿತ್ತು ಎಂದು ಅವರು ವಿವರಿಸಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	950-1000
ನಡುಗೋಲು	1000-1100
ರಾಶಿ	1200-1300
ರಾಶಿ ಉತ್ತಮ	1300-1400
ಜರಡಿ	1500-1600
ಹೆರಕಿದ್ದು	2000-2100
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1700-1750
ಹಸಿರು ಅತಿ ಉತ್ತಮ	1900-2000
ಕಾಳು ಮೆಣಸು	335
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-40500
ಹಳತು	42500-50500
ಕಾರ್ಕಳ	
ಹೊಸತು	35000-40500
ಹಳತು	45000-50500
ಪುತ್ತೂರು	
ಕೋಕ	9500-24000
ಹೊಸತು	28500-40500
ಸಿದ್ದಾಪುರ	
ಬಿಳಿಗೋಟು	22699-30019
ಕೋಕ	20299-28999
ಚಾಲಿ	34599-37099
ಕೆಂಪುಗೋಟು	19199-31099
ರಾಶಿ	38899-42009
ತಟ್ಟಿಬೆಟ್ಟೆ	33009-40899
ಯಲ್ಲಾಪುರ	
ಬಿಳಿಗೋಟು	23089-30899
ಕೋಕ	19312-29199
ಚಾಲಿ	31609-41111
ಕೆಂಪುಗೋಟು	26899-33691
ರಾಶಿ	39900-45729
ತಟ್ಟಿಬೆಟ್ಟೆ	30899-39689
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	42119-43500
ಗೊರಬಲು	15869-31777
ರಾಶಿ	36609-42009
ಸರಕು	47099-75100
ಸಾಗರ	
ಬಿಳಿಗೋಟು	22499-24899
ಚಾಲಿ	32069-33449
ಕೋಕ	27499-31999
ಕೆಂಪುಗೋಟು	29269-34399
ರಾಶಿ	35009-41999
ಸರಕು	14409-17501
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	250-378
ದ್ವಿತಳಿ (ಬಿ.ವಿ)	290-460

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	9850	---	9900	--- ಸೆಂಟ್ಸ್
ಎಸಿ	3920	---	3900	
ಆರ್‌ಪಿ	5250	---	5200	
ಆರ್‌ಸಿ	3000	---	2925	--- ಡಾಲರ್ಸ್

ವಾಣಿಜ್ಯ ಉದ್ದೇಶದ ಎಸ್‌ಎಂಎಸ್: ನಿಯಮ ಜಾರಿಗೆ ಒಂದು ವಾರ ತಡೆ

ನವದೆಹಲಿ (ಪಿಟಿಐ): ವಾಣಿಜ್ಯ ಉದ್ದೇಶದ ಎಸ್‌ಎಂಎಸ್‌ಗಳಿಗೆ ಸಂಬಂಧಿಸಿದ ನಿಯಮಗಳ ಅನುಷ್ಠಾನವನ್ನು ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರವು (ಟ್ರಾಯ್) ಒಂದು ವಾರದ ಮಟ್ಟಿಗೆ ಮುಂದೂಡಿದೆ. ಈ ನಿಯಮದ ಕಾರಣದಿಂದಾಗಿ ಸೋಮವಾರ ಬ್ಯಾಂಕಿಂಗ್, ಪಾವತಿ ಕೆಲಸಗಳಿಗೆ ಒಟಿಪಿ (ಒಂದು ಬಾರಿ ಬಳಸುವ ಗುಪ್ತಸಂಖ್ಯೆ) ಸಮರ್ಪಕವಾಗಿ ಬರುತ್ತಿರಲಿಲ್ಲ.

ಬ್ಲಾಕ್‌ಚೈನ್ ತಂತ್ರಜ್ಞಾನವನ್ನು ಬಳಸಿ ಕೆಲಸ ನಿರ್ವಹಿಸುವ ಈ ನಿಯಮವು, ಅನಗತ್ಯ ಹಾಗೂ ವಂಚನೆಯ ಉದ್ದೇಶದ ಎಸ್‌ಎಂಎಸ್‌ಗಳನ್ನು ನಿಗ್ರಹಿಸುವ ಗುರಿ ಹೊಂದಿದೆ. ವಾಣಿಜ್ಯ ಉದ್ದೇಶದ ಎಸ್‌ಎಂಎಸ್ ರವಾನಿಸುವ ಕಂಪನಿಗಳು ತಮ್ಮ ಸಂದೇಶದ ಸ್ವರೂಪ ಹೇಗಿರುತ್ತದೆ ಎಂಬುದನ್ನು ದೂರಸಂಪರ್ಕ ಸೇವಾ ಕಂಪನಿಗಳಲ್ಲಿ ನೋಂದಾಯಿಸಬೇಕು ಎಂದು ನಿಯಮ ಹೇಳುತ್ತದೆ. ಇಂತಹ ಕಂಪನಿಗಳು ಒಟಿಪಿ ಅಥವಾ ಎಸ್‌ಎಂಎಸ್ ರವಾನಿಸಿದಾಗ, ಅದನ್ನು ಅವರು ಅದಾಗಲೇ ನೋಂದಾಯಿಸಿರುವ ಎಸ್‌ಎಂಎಸ್ ಸ್ವರೂಪದ ಜೊತೆ ತಾಳೆ ಮಾಡಿ ನೋಡಲಾಗುತ್ತದೆ.

ಆದರೆ, ಸೋಮವಾರ ಇಂತಹ ಒಟಿಪಿಗಳು ಗ್ರಾಹಕರ ಮೊಬೈಲ್‌ಗೆ ಸಮರ್ಪಕವಾಗಿ ಬರುತ್ತಿರಲಿಲ್ಲ. ಇದರಿಂದಾಗಿ ಬ್ಯಾಂಕ್‌ಗಳು ಮತ್ತು ದೂರಸಂಪರ್ಕ ಕಂಪನಿಗಳು ಆರೋಪ–ಪ್ರತ್ಯಾರೋಪಗಳಲ್ಲಿ ತೊಡಗಿದ್ದವು.

ಮುಂಬೈ ಧಾರಣೆ

ಶೇಂಗಾ

9-3-2021

ಜಾವಾ 70/80(ಹೊಸ)	10550-10600
ಜಾವಾ 80/90(ಹೊಸ)	10250-10300
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	8800-8900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1550 (1525)
ಒಂದು ವಾರದ ಡೆಲಿವರಿ	1545 (1520)
ಸೋಯಾ ಕಚ್ಚಾ	1210 (---)
ಪಾಮ್ ವಾರದ ಡೆಲಿವರಿ	1198 (1198)
ಸೂರ್ಯಕಾಂತಿ ಎಣ್ಣೆ ಕಚ್ಚಾ	1660 (1620)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 44,550 (44,350)
ಬೆಳ್ಳಿ ಕೆ.ಜಿ 66,250 (65,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ

"ನಾಯಕತ್ವದಲ್ಲಿ ಮಹಿಳೆಯರು : ಕೋವಿಡ್–19 ಇರುವ ಜಗತ್ತಿನಲ್ಲಿ ಸಮಾನ ಭವಿಷ್ಯವನ್ನು ಸಾಧಿಸುವುದು"

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ

ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಮತ್ತು ಇತರೆ ಪ್ರಶಸ್ತಿಗಳ ಪ್ರದಾನ ಸಮಾರಂಭ
ದಿನಾಂಕ: 10 ಮಾರ್ಚ್, 2021, ಬೆಳಗ್ಗೆ 10.00 ಗಂಟೆಗೆ
ಸ್ಥಳ: ಪ್ರಿನ್ಸಸ್ ಗಾಲ್ಫ್, ಗೇಟ್ ನಂ.9, ಅರಮನೆ ಮೈದಾನ ಬಳ್ಳಾರಿ ರಸ್ತೆ, ಬೆಂಗಳೂರು

ಉದ್ಘಾಟನೆ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಪ್ರದಾನ
ಶ್ರೀ ಬಿ.ಎಸ್.ಯಡಿಯೂರಪ್ಪ
ಸನ್ಮಾನ್ಯ ಮುಖ್ಯಮಂತ್ರಿಗಳು

ಅಧ್ಯಕ್ಷತೆ
ಡಾ. ಅಶ್ವತ್ಥ ನಾರಾಯಣ ಸಿ.ಎನ್
ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ, ಐಟಿ, ಬಿಟಿ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವರು

ವಿಶೇಷ ಆಹ್ವಾನಿತರು
ಶ್ರೀ ಡಿ.ವಿ.ಸದಾನಂದಗೌಡ — ಮಾನ್ಯ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಸಚಿವರು, ಭಾರತ ಸರ್ಕಾರ
ಶ್ರೀಮತಿ ನಿರ್ಮಲಾ ಸೀತಾರಾಮನ್ — ಮಾನ್ಯ ಹಣಕಾಸು ಮತ್ತು ಕಾರ್ಪೋರೇಟ್ ವ್ಯವಹಾರಗಳ ಖಾತೆ ಸಚಿವರು, ಭಾರತ ಸರ್ಕಾರ

ಮಕ್ಕಳ ದಿನಾಚರಣೆ ಅಂಗವಾಗಿ ನೀಡುವ ಪ್ರಶಸ್ತಿ ಪ್ರದಾನ
ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ
ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು, ಕರ್ನಾಟಕ ಸರ್ಕಾರ

ಮುಖ್ಯ ಅತಿಥಿಗಳು
ಶ್ರೀ ಆರ್.ಅಶೋಕ್ — ಮಾನ್ಯ ಕಂದಾಯ ಸಚಿವರು
ಶ್ರೀ ಎಸ್.ಸುರೇಶ್ ಕುಮಾರ್ — ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಸಕಾಲ ಸಚಿವರು
ಶ್ರೀ ವಿ. ಸೋಮಣ್ಣ — ಮಾನ್ಯ ವಸತಿ ಸಚಿವರು
ಶ್ರೀ ಬಿ.ಎ.ಬಸವರಾಜ್ — ಮಾನ್ಯ ನಗರಾಭಿವೃದ್ಧಿ ಸಚಿವರು
ಶ್ರೀ ಕೆ.ಗೋಪಾಲಯ್ಯ — ಮಾನ್ಯ ಅಬಕಾರಿ ಸಚಿವರು
ಶ್ರೀ ಅರವಿಂದ ಲಿಂಬಾವಳಿ — ಮಾನ್ಯ ಅರಣ್ಯ ಮತ್ತು ಕನ್ನಡ ಮತ್ತು ಸಂಸ್ಕೃತಿ ಸಚಿವರು
ಶ್ರೀ ಎಸ್.ಟಿ.ಸೋಮಶೇಖರ್ — ಮಾನ್ಯ ಸಹಕಾರ ಸಚಿವರು
ಶ್ರೀ ಎಂ.ಟಿ.ಬಿ. ನಾಗರಾಜು — ಮಾನ್ಯ ಪೌರಾಡಳಿತ ಹಾಗೂ ಸಕ್ಕರೆ ಖಾತೆ ಸಚಿವರು
ಶ್ರೀ ಎಸ್.ಆರ್.ವಿಶ್ವನಾಥ್ — ಮಾನ್ಯ ಅಧ್ಯಕ್ಷರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಶಾಸಕರು, ಯಲಹಂಕ

ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ
ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು ಕಲಾವಿದರೊಂದಿಗೆ ಸಂವಾದ ನಡೆಸುತ್ತಿರುವುದು.

ಅತ್ಯುತ್ತಮ ಸ್ತ್ರೀಶಕ್ತಿ ಗುಂಪುಗಳಿಗೆ ಹಾಗೂ ತಾಲ್ಲೂಕು ಒಕ್ಕೂಟಗಳಿಗೆ ರಾಜ್ಯ ಮಟ್ಟದ ಪ್ರಶಸ್ತಿ ಪ್ರದಾನ
ಶ್ರೀ ಗೋವಿಂದ ಎಂ. ಕಾರಜೋಳ — ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಸಚಿವರು
ಶ್ರೀ ಲಕ್ಷ್ಮಣ ಸವದಿ — ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಶ್ರೀ ಬಿ.ಸಿ.ಪಾಟೀಲ್ — ಮಾನ್ಯ ಕೃಷಿ ಸಚಿವರು

ಈ ಕಾರ್ಯಕ್ರಮದಲ್ಲಿ ಬೆಂಗಳೂರು ಪ್ರತಿನಿಧಿಸುವ ಮಾನ್ಯ ಲೋಕಸಭಾ ಹಾಗೂ ರಾಜ್ಯಸಭಾ ಸಂಸದರು, ವಿಧಾನಸಭೆ ಹಾಗೂ ವಿಧಾನಪರಿಷತ್ ಮಾನ್ಯ ಸದಸ್ಯರು ಹಾಗೂ ವಿವಿಧ ನಿಗಮ ಮಂಡಳಿಗಳ ಅಧ್ಯಕ್ಷರು ಭಾಗವಹಿಸಲಿದ್ದಾರೆ

ಮಹಿಳೆಯರ ಅಭಿವೃದ್ಧಿಗಾಗಿ ಯೋಜನೆಗಳು.

▶ **ಪೋಷಣ್ ಅಭಿಯಾನ ಯೋಜನೆ** – ಇಲಾಖೆಯ ಫಲಾನುಭವಿಗಳ ಗುರಿಯನ್ನಾಧರಿಸಿ ಎಲ್ಲಾ ಪೌಷ್ಟಿಕತೆಯ ಯೋಜನೆಗಳನ್ನು ಒಗ್ಗೂಡಿಸುವ ಯೋಜನೆ ಇದಾಗಿದೆ. 0–6 ವರ್ಷದ ಮಕ್ಕಳು, ಗರ್ಭಿಣಿಯರು ಮತ್ತು ಹಾಲುಣಿಸುವ ತಾಯಂದಿರ ಪೌಷ್ಟಿಕತೆಯ ಸ್ಥಿತಿಯನ್ನು ನಿರ್ಧಿಷ್ಟ ಅವಧಿಗೆ ಸುಧಾರಿಸುವುದು ಈ ಯೋಜನೆಯ ಮುಖ್ಯ ಗುರಿಯಾಗಿದೆ.

ಪೋಷಣ್ ಅಭಿಯಾನ್ ಯೋಜನೆಯಡಿ ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ 65,911 ಅಂಗನವಾಡಿ ಕೇಂದ್ರಗಳಿಗೆ ತೂಕದ ಯಂತ್ರಗಳನ್ನು ವಿತರಿಸಲಾಗಿದೆ. ಸದರಿ ಯೋಜನೆಯಡಿ ಮೇಲ್ವಿಚಾರಕಿ ಹಾಗೂ ಅಂಗನವಾಡಿ ಕಾರ್ಯಕರ್ತೆಯರಿಗೆ ಸ್ಮಾರ್ಟ್ ಫೋನ್ ಮತ್ತು ಪವರ್ ಬ್ಯಾಂಕ್‌ಗಳನ್ನು ಸಹ ಒದಗಿಸಲಾಗಿದೆ.

▶ **ಪ್ರಧಾನಮಂತ್ರಿ ಮಾತೃವಂದನಾ ಯೋಜನೆ** – ಮಹಿಳೆಯರ ಮೊದಲ ಪ್ರಸವದ ಮೊದಲು ಮತ್ತು ನಂತರದ ಅವಧಿಯಲ್ಲಿ ಸಾಕಷ್ಟು ವಿಶ್ರಾಂತಿಗಾಗಿ ಅಂಶಿಕ ಪರಿಹಾರವನ್ನು ಪ್ರೋತ್ಸಾಹಧನ ರೂಪದಲ್ಲಿ ವೇತನ ನಷ್ಟಕ್ಕಾಗಿ ರೂ.5,000/– ನೀಡಲಾಗುತ್ತಿದೆ.

▶ **ಮಾತೃಪೂರ್ಣ ಯೋಜನೆ** – ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಅಂಗನವಾಡಿ ಕೇಂದ್ರದಲ್ಲಿ ಗರ್ಭಿಣಿ ಹಾಗೂ ಬಾಣಂತಿಯರಿಗೆ ಹಾಲು, ಮೊಟ್ಟೆ ಮತ್ತು ಕಡಲೆಬೀಜದ ಚಿಕ್ಕಿ ಸೇರಿದಂತೆ ಮಧ್ಯಾಹ್ನದ ಬಿಸಿಯೂಟ ನೀಡುವ ಮಹತ್ವಾಕಾಂಕ್ಷೆಯ ಕಾರ್ಯಕ್ರಮವಾಗಿದೆ.

▶ **ಪೂರಕ ಪೌಷ್ಟಿಕ ಆಹಾರ ಯೋಜನೆ** – ಕೋವಿಡ್ –19 ರ ಸಾಂಕ್ರಾಮಿಕ ರೋಗದ ನಿಮಿತ್ತ ಅಂಗನವಾಡಿ ಕೇಂದ್ರಗಳಿಗೆ ಫಲಾನುಭವಿಗಳು ಹಾಜರಾಗದಿದ್ದರೂ ಸಹ ಒಟ್ಟು 49,03,163 ಫಲಾನುಭವಿಗಳ ಮನೆ ಬಾಗಿಲಿಗೆ ಪೂರಕ ಪೌಷ್ಟಿಕ ಆಹಾರ ಯೋಜನೆಗಳ ಸೌಲಭ್ಯವನ್ನು ಒದಗಿಸಲಾಗಿದೆ.

▶ **ಕೇಂದ್ರ ಸರ್ಕಾರದ ಒನ್ ಸ್ಟಾಪ್ ಸೆಂಟರ್(ಸಖಿ) 2016–17:**
ರಾಜ್ಯದ ಎಲ್ಲ 30 ಜಿಲ್ಲೆಗಳಲ್ಲಿ ಒನ್ ಸ್ಟಾಪ್ ಸೆಂಟರ್(ಸಖಿ) ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಕೇಂದ್ರಗಳಲ್ಲಿ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಒಂದೇ ಸೂರಿನಡಿ ಸಮಗ್ರ ಸೌಲಭ್ಯ ಅಂದರೆ, ವೈದ್ಯಕೀಯ ಚಿಕಿತ್ಸೆ ಮತ್ತು ನೆರವು, ಪೊಲೀಸ್ ನೆರವು, ಕಾನೂನು ನೆರವು ಹಾಗೂ ಸಮಾಲೋಚನೆ ವ್ಯವಸ್ಥೆಗಳನ್ನು ಒದಗಿಸಲಾಗುತ್ತಿದೆ.

▶ **ಸ್ವಾಧಾರಗೃಹ : ಸಂಕಷ್ಟ ಪರಿಸ್ಥಿತಿಯಲ್ಲಿರುವ ಮಹಿಳೆಯರಿಗಾಗಿ ಯೋಜನೆ: (2016–2017)**
ಸಂಕಷ್ಟ ಪರಿಸ್ಥಿತಿಯಲ್ಲಿರುವ ಮಹಿಳೆಯರಿಗಾಗಿ ಆಶ್ರಯ, ಆಹಾರ, ಬಟ್ಟೆ, ತರಬೇತಿ ಹಾಗೂ ಶಿಕ್ಷಣ ನೀಡುವುದರ ಮೂಲಕ ಆರ್ಥಿಕವಾಗಿ, ಸಾಮಾಜಿಕವಾಗಿ ಸಶಕ್ತರಾಗುವಂತೆ ಮಾಡುವ ಉದ್ದೇಶದಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರದವತಿಯಿಂದ ಸ್ವಾಧಾರಗೃಹ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಮಹಿಳಾ ಕಲ್ಯಾಣ ಕ್ಷೇತ್ರದಲ್ಲಿ ಅನುಭವವಿರುವ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಕೇಂದ್ರಗಳು ನೊಂದವರಿಗೆ ಮುಖ್ಯವಾಗಿ ತಾತ್ಕಾಲಿಕ ಆಶ್ರಯ ಒದಗಿಸುವ ಕೇಂದ್ರಗಳಾಗಿವೆ. ರಾಜ್ಯದಲ್ಲಿ ಪ್ರಸ್ತುತ 52 ಸ್ವಾಧಾರಗೃಹ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ.

▶ **ಬಾಲಕಿಯರ ವಸತಿ ನಿಲಯ:**
ಹಿಂದುಳಿದ ತಾಲ್ಲೂಕುಗಳ ಗ್ರಾಮಾಂತರ ಪ್ರದೇಶದ ಹೆಣ್ಣುಮಕ್ಕಳ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸಲು ಹಾಗೂ ಶಾಲೆ ಬಿಡುವುದನ್ನು ತಪ್ಪಿಸಲು ಅನುಕೂಲವಾಗುವಂತೆ, ಇಲಾಖಾ ಅನುದಾನಿತ ಸ್ವಯಂಸೇವಾ ಸಂಸ್ಥೆಗಳ ಮೂಲಕ 20 ಜಿಲ್ಲೆಗಳಲ್ಲಿ 39 ಬಾಲಕಿಯರ ವಸತಿ ನಿಲಯಗಳನ್ನು ನಡೆಸಲಾಗುತ್ತಿದೆ.

▶ **ಭಾಗ್ಯಲಕ್ಷ್ಮಿ –ಸುಕನ್ಯಾ ಸಮೃದ್ಧಿ ಖಾತೆ ಯೋಜನೆ**
ಸದರಿ ಯೋಜನೆಯನ್ನು ಪ್ರಸ್ತುತ 2020–21 ನೇ ಸಾಲಿನಿಂದ ಅಂಚೆ ಇಲಾಖೆಯ ಸುಕನ್ಯಾ ಸಮೃದ್ಧಿ ಖಾತೆ ಯೋಜನೆಯ ಮೂಲಕ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.

ಈ ಯೋಜನೆಯಡಿ ಬಿಪಿಎಲ್ ಕುಟುಂಬದ 2 ಹೆಣ್ಣು ಮಕ್ಕಳಿಗೆ, ಪ್ರತಿ ಮಗುವಿನ ಹೆಸರಿನಲ್ಲಿ ರೂ.3,000/–ದಂತೆ 15 ವರ್ಷಗಳ ವರೆಗೆ ಒಟ್ಟು ರೂ.45,000/– ಗಳನ್ನು ಠೇವಣಿ ಹೂಡಲಾಗುತ್ತದೆ. 21 ವರ್ಷ ಅವಧಿ ಪೂರ್ಣಗೊಂಡ ನಂತರ ಪರಿಪಕ್ವ ಮೊತ್ತ ರೂ.1.27 ಲಕ್ಷ ಲಭಿಸುವುದು.
ಪ್ರಸ್ತುತ 2020–21 ನೇ ಸಾಲಿಗೆ ರೂ.38.73 ಕೋಟಿಗಳ ಅನುದಾನಕ್ಕೆ 1,29,122 ಫಲಾನುಭವಿಗಳು ಈ ಸೌಲಭ್ಯಕ್ಕೆ ಅರ್ಹರಾಗಿರುತ್ತಾರೆ.

▶ **ಸ್ತ್ರೀಶಕ್ತಿ ಯೋಜನೆ**
ಸ್ತ್ರೀಶಕ್ತಿ ಯೋಜನೆಯನ್ನು ರಾಜ್ಯದಲ್ಲಿ ಅಕ್ಟೋಬರ್ 2000 ರಿಂದ ಅನುಷ್ಠಾನಗೊಳಿಸಲಾಗುತ್ತಿದೆ. ರಾಜ್ಯದಲ್ಲಿ ಒಟ್ಟು 1,65,960/– ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳು ರಚನೆಯಾಗಿವೆ.
ಜನವರಿ–2021 ರ ಅಂತ್ಯದವರೆಗೆ, ಸ್ತ್ರೀಶಕ್ತಿ ಗುಂಪುಗಳಲ್ಲಿ ಒಟ್ಟು 25.86 ಲಕ್ಷ ಮಹಿಳಾ ಸದಸ್ಯರಿದ್ದು, ಪ್ರಾರಂಭದಿಂದ ಇಲ್ಲಿಯವರೆಗೆ ಒಟ್ಟು ರೂ.12,514.74 ಕೋಟಿ ಉಳಿತಾಯ ಮಾಡಿರುತ್ತಾರೆ 1,46,631 ಗುಂಪುಗಳಿಗೆ ಬ್ಯಾಂಕ್‌ಗಳಿಂದ ರೂ.10,015.19 ಕೋಟಿ ಸಾಲ ಸೌಲಭ್ಯವನ್ನು ಒದಗಿಸಲಾಗಿದೆ.

▶ **ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ**
ದಮನಿತ ಮಹಿಳೆಯರು ಮತ್ತು ಅವರ ಮಕ್ಕಳ ಶ್ರೇಯೋಭಿವೃದ್ಧಿಗಾಗಿ ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ದಮನಿತ ಮಹಿಳೆಯರ ಕೋಶಗಳನ್ನು ರಚಿಸಲಾಗಿರುತ್ತದೆ.

▶ **ಕರ್ನಾಟಕ ರಾಜ್ಯ ಮಹಿಳಾ ಆಯೋಗ**
ಕರ್ನಾಟಕ ಸರ್ಕಾರವು ಕೆಲಸದ ಸ್ಥಳಗಳಲ್ಲಿ ಮಹಿಳೆಯರಿಗೆ ಸುರಕ್ಷತೆ ಒದಗಿಸುವ ಮತ್ತು ಯಾವುದೇ ದೌರ್ಜನ್ಯಕ್ಕೆ ಅವಕಾಶವಾಗದಿರಲು "ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ (ತಡೆ, ನಿಷೇಧ ಮತ್ತು ನಿವಾರಣೆ) ಅಧಿನಿಯಮ 2013"ನ್ನು ಜಾರಿಗೊಳಿಸಿದೆ.

ತಮ್ಮೆಲ್ಲರಿಗೂ ಆದರದ ಸ್ವಾಗತ
ಡಾ.ಎಸ್.ನಾಗಾಂಬಿಕಾದೇವಿ ಭಾ.ಆ.ಸೇ., ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು
ಶ್ರೀ ಆರ್.ಎಸ್.ಪೆದ್ದಪ್ಪಯ್ಯ ಭಾ.ಆ.ಸೇ., ಆಯುಕ್ತರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಶ್ರೀಮತಿ ಟಿ.ಆರ್.ಶೋಭಾ ಕ.ಆ.ಸೇ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ
ಶ್ರೀ ಶಂಕರ್‌ಗೌಡ ಆರ್.ಪಾಟೀಲ್ ಕ.ಆ.ಸೇ, ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಹಿಳಾ ಆಯೋಗ
DIPR / W & C / 08 / 20 - 21

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪ್ರಜಾವಾಣಿ
FOR ADVERTISEMENT QUERIES
• OBITUARY
• REMEMBRANCES
Contact:
Santhosh : 9880856233
Vishal : 9845114560
Ravi : 9606912256
Office: 080-45557160 /163 /164

ತೂಕ ಕಳೆದುಕೊಂಡ ಆಟಗಾರರು: ಸ್ಟೋಕ್ಸ್

ಅಹಮದಾಬಾದ್ (ಪಿಟಿಐ): ಮೊಟೇರಾದಲ್ಲಿ ಈಚೆಗೆ ನಡೆದ ಭಾರತದೆದುರಿನ ನಾಲ್ಕನೇ ಟೆಸ್ಟ್‌ನಲ್ಲಿ ಆಡಿದ್ದ ತಮ್ಮ ತಂಡದ ಕೆಲವು ಆಟಗಾರರು ದಿಢೀರನೆ ದೇಹತೂಕ ಕಳೆದುಕೊಂಡಿದ್ದಾರೆ ಎಂದು ಇಂಗ್ಲೆಂಡ್ ಆಲ್‌ರೌಂಡರ್ ಬೆನ್ ಸ್ಟೋಕ್ಸ್ ಹೇಳಿದ್ದಾರೆ.

‘ಅಹಮದಾಬಾದಿನಲ್ಲಿ ಸುಮಾರು 41 ಡಿಗ್ರಿ ಸೆಲ್ಸಿಯಸ್‌ನಲ್ಲಿ ತಾಪಮಾನವಿತ್ತು. ಅದರಿಂದಾಗಿ ನಾವು ಅನಾರೋಗ್ಯಕ್ಕೆ ಒಳಗಾದೆವು. ನಮ್ಮಲ್ಲಿ ಕೆಲವರಿಗೆ ಹೊಟ್ಟೆನೋವು ಕಾಡಿತ್ತು. ಅದರಿಂದಾಗಿ ದೇಹತೂಕ ಇಳಿಯಿತು’ ಎಂದು ಸ್ಟೋಕ್ಸ್ ಇಂಗ್ಲೆಂಡ್‌ನ ‘ಡೇಲಿ ಮಿರರ್’ ಪತ್ರಿಕೆಗೆ ಹೇಳಿದ್ದಾರೆ.

‘ಹೋದ ವಾರ ನಾನು ಐದು ಕೆಜಿ ತೂಕ ಕಳೆದುಕೊಂಡಿದ್ದೇನೆ. ಡಾಮ್ ಸಿಬ್ಲಿ ನಾಲ್ಕು ಕೆಜಿ ಮತ್ತು ಜಿಮ್ಮಿ ಆ್ಯಂಡರ್ಸನ್ ಮೂರು ಕೆಜಿ ತೂಕ ಕಳೆದುಕೊಂಡಿದ್ದಾರೆ. ಸ್ಪಿನ್ನರ್ ಜ್ಯಾಕ್ ಲೀಚ್ ತಮ್ಮ ಬೌಲಿಂಗ್ ಸ್ಪೆಲ್‌ಗಳ ಮಧ್ಯದ ಬಹುತೇಕ ಸಮಯವನ್ನು ಕ್ರೀಡಾಂಗಣದ ಹೊರಗೆ ಕಳೆದಿದ್ದಾರೆ. ಬಹಳಷ್ಟು ಸಲ ಶೌಚಾಲಯಕ್ಕೂ ಹೋಗಿದ್ದಾರೆ’ ಎಂದು ಬೆನ್ ಹೇಳಿದರು.

‘ನಾನು ಈ ಕಾರಣಗಳನ್ನು ನೀಡುತ್ತಿರುವುದು ನಮ್ಮ ಸೋಲನ್ನು ಸಮರ್ಥಿಸಿಕೊಳ್ಳಲು ಅಲ್ಲ. ಭಾರತದ ಆಟಗಾರರು ಅದರಲ್ಲೂ ರಿಷಭ್ ಪಂತ್ ಅವರ ಅಮೋಘ ಆಟದ ಮುಂದೆ ನಾವು ಸೋತಿದ್ದೇವೆ. ನಮ್ಮಲ್ಲ ಕೊರತೆಗಳು ಮತ್ತು ಅನಾರೋಗ್ಯದ ನಡುವೆಯೂ ಆಡಲು ಕಣಕ್ಕಿಳಿದಿದ್ದೆವು. ಸಂಪೂರ್ಣ ಸಾಮರ್ಥ್ಯದೊಂದಿಗೆ ಆಡಿದೆವು’ ಎಂದು ಬೆನ್ ಹೇಳಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕ ನೋಟಿಸ್
[illegible]

ಸಾರ್ವಜನಿಕ ನೋಟಿಸ್
[illegible]
ದಿನಾಂಕ 2021ರ ಮಾರ್ಚ್ ತಿಂಗಳ 10 ದಿನಾಂಕದಂದು
ಖೈತಾನ್ - ಕಂಪನಿ ಪರವಾಗಿ
ಸಹಿ/-
ಸುಧೀರ್ ಮದಮ್ಮಯ್ಯ
ಪಾಲುದಾರರು

[illegible]
7 ರಲ್ಲಿನ ಜಮೀನು.
ದಿನಾಂಕ 2021ರ ಮಾರ್ಚ್ ತಿಂಗಳ 10 ದಿನಾಂಕದಂದು
ಖೈತಾನ್ - ಕಂಪರವಾಗಿ
ಸಹಿ/-
ಸುಧೀರ್ ಮದಮ್ಮಯ್ಯ
ಪಾಲುದಾರರು

PUBLIC NOTICE
To Place your Classified Ads Contact:
9880856233

ವ್ಯಾಪಾರ
Business Offers
Finance
ಮುದ್ರಾ ಯೋಜನೆಯ ಮೂಲಕ ಕೃಷಿ ಸ್ಥಿರಾಸ್ತಿ, ವೈಯುಕ್ತಿಕ, ಬಿಸಿನೆಸ್, ವಿದ್ಯಾ, ವಾಹನಸಾಲ 4% ಬಡ್ಡಿಯಲ್ಲಿ ಸಾಲ ಲಭ್ಯ. 8273414936, 7888199584

Business For Sale
ಮಾರಾಟಕ್ಕಿದೆ: ಬೆಂಗಳೂರಿನಲ್ಲಿ ಉತ್ತಮ ವ್ಯಾಪಾರವಿರುವ ಬೇಕರೀ (ಜೂಸ್ & ಟೀ ಪಾಯಿಂಟ್). ಸಂಪರ್ಕಿಸಿ: 7406781063

ಉದ್ಯೋಗಾವಕಾಶ
General
VIDEOCON, ಟಯೋಟಾ, TVS, ಬ್ರಿಟಾನಿಯಾ ಕಂಪನಿಗಳಿಗೆ SSLC, PUC, ITI, ಡಿಗ್ರಿಯವರು, ವಿದ್ಯಾರ್ಹತೆಯಿಲ್ಲದವರು ನೇರನೇಮಕಾತಿ 16,600-56,000/- ವಸತಿಯೂಟವಿದೆ. 9611715755

ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ಬಳಿ ಇರುವ ಹಾಸ್ಪೆಲ್‌ಗಾಗಿ ಸೌತ್ ಇಂಡಿಯನ್ ವೆಜ್ /ನಾನ್ ವೆಜ್ ಕುಕ್ ಗಳು, ಸಪ್ಲೈಯರ್ ಗಳು. ತಕ್ಷಣ ಬೇಕಾಗಿದ್ದಾರೆ.ಆಕರ್ಷಕ ಸಂಬಳ.ಸಂಪರ್ಕಿಸಿ: 9538785122, 9900098105

★ನೇರನೇಮಕಾತಿ★ ಬೆಂಗಳೂರಿನಲ್ಲಿ ನೂತನವಾಗಿ ಪ್ರಾರಂಭವಾಗಿರುವ CF AYUR ಕಂಪನಿಗೆ ಪಿ.ಯು.ಸಿ. ಡಿಗ್ರಿಯಾಗಿರುವ 19ರಿಂದ 24ವರ್ಷದೊಳಗಿನ ಯುವಕ/ಯುವತಿಯರು ತಕ್ಷಣ ಬೇಕಾಗಿದ್ದಾರೆ. ಸಂಬಳ:18,000 24,000 ವಸತಿಯೂಟವಿರುತ್ತದೆ. 9740015552/ 9743282734

ಬೇಕಾಗಿದ್ದಾರೆ ನೇರನೇಮಕಾತಿ TOYOTA, ಟಾಟಾ ಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC, PUC, ITI ನವರು.ಡಿಗ್ರಿಯವರುಗಳು 16,800-56,000/- ವಸತಿಯೂಟವಿದೆ. 7795049766, 7795048129

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ:7760014526, 9739544856

WORK FROM HOME
ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

Part-Time Jobs
ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Call Centre
WANTED FEMALE telecallers &field executives Kannada process Fixed salary Rajajinagar 6th block,No registration fees Direct company Contact: 9945500004/9535000055

Wanted
ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ MNC ಕಂಪನಿಗಳಿಗೆ ಹಾಗೂ ಎಲ್ಲಾಜಿಲ್ಲೆಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC, PUC, ITI Degree Pass/Fail ಆದವರಿಗೆ, ಉಚಿತ ವಸತಿಯೂಟದೊಂದಿಗೆ ESI/PF ನೊಂದಿಗೆ ಸಂಬಳ 16,800/- ರಿಂದ 45000/- ದವರೆಗೆ. 9916016092, 9739993386,

ಉದ್ಯೋಗಾವಕಾಶ ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಮನೆಗೆಲಸ, ಮಕ್ಕಳನ್ನು ನೋಡಿಕೊಳ್ಳಲು ವಯಸ್ಸಾದವರನ್ನು, ವೃದ್ಧರನ್ನು ನೋಡಿಕೊಳ್ಳಲು ಹೋಂ ನರ್ಸಿಂಗ್ ಕೆಲಸ ಮಾಡಲು ಯುವಕರು-ಯುವತಿಯರು ಬೇಕಾಗಿದ್ದಾರೆ.ಉಚಿತ ಊಟ, ವಸತಿಯೊಂದಿಗೆ 12,000 - 17,000/- ಫೋನ್: 9663189777, 8792666115

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ತಕ್ಷಣ ಬೇಕಾಗಿದ್ದಾರೆ :TVS, TOYOTA, VOLVO ಮುಂತಾದ ಕಂಪನಿ ಹಾಗೂ ಆಫೀಸ್ ವರ್ಕ್ ಗಳಿಗೆ ಯುವಕ ಯುವತಿಯರು. ವಸತಿಯೂಟದೊಂದಿಗೆ 15800-55000/- 7411720917, 7411720918

ಭವಿಷ್ಯ
Astrology
★ಕೊಳ್ಳೆಗಾಲದಿಂದ★ ನೇರಪರಿಹಾರ.ಕೊಳ್ಳೆಗಾಲದ ನಂ.1ಸ್ಪೆಷಲಿಸ್ಟ್ ಪಂಡಿತ್.ಕಾಳಿಪ್ರಸಾದ್ ಗುರೂಜಿ.9740286807 ವಿದ್ಯೆ,ಉದ್ಯೋಗ,ಸ್ತ್ರೀಪುರುಷ ಪ್ರೇಮ,ಸಂತಾನ,ವಿವಾಹ, ಶತ್ರುದೋಷ,ಸಾಲಭಾದೆ, ವ್ಯಾಪಾರ,ಪ್ರೇತಬಾದೆ, ದೈವದೋಷ,ನಾಗದೋಷ, ದಾಂಪತ್ಯ ಸಮಸ್ಯೆ ಇನ್ನೂ ಅನೇಕ ಕಠಿಣವಾದ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ತಿಳಿಸುತ್ತಾರೆ.#12,ಅಂಬೇಡ್ಕರ್ ಮುಖ್ಯರಸ್ತೆ,ಗೀತಭವನ,ಕೊಳ್ಳೆಗಾಲ

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

ನಿಮ್ಮ ಯಾವುದೇ ರೀತಿಯ ವಶೀಕರಣ ಹಾಗೂ ನಿಮ್ಮ ಸಮಸ್ಯೆಗಳಾದ ಸಂತಾನ, ಸತಿ-ಪತಿ ಕಲಹ, ಸಾಲಬಾಧೆ, ಪ್ರೇಮವಿಚಾರ, ಶತ್ರುನಾಶ, ಇನ್ನೂ ಅನೇಕ ಸಮಸ್ಯೆಗಳಿಗೆ ಕೆಲವೇ ಗಂಟೆಗಳಲ್ಲಿ ವಿಶಿಷ್ಟ ಶಾಸ್ತ್ರೋಕ್ತ ಪರಿಹಾರ ಶತಸಿದ್ಧ.9980714116

★॥ಸಿಗಂದೂರು ಚೌಡೇಶ್ವರಿ॥★ ವಶೀಕರಣ ಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

★ವಶೀಕರಣ ಮೋಡಿಮಾಂತ್ರಿಕರು★ 500ವರ್ಷಗಳ ಇತಿಹಾಸ 35000ಜನರಿಗೆ ಸಮಾಧಾನ ಸ್ತ್ರೀ ವಶೀಕರಣ, ಪ್ರೇಮವಿಚಾರ, ಗಂಡ ಹೆಂಡತಿ ಕಲಹ,ಇನ್ಯಾವುದೇ ಸಮಸ್ಯೆಗಳಿಗೆ ಶೀಘ್ರದಲ್ಲೇ ಪರಿಹಾರ. 7829724990

ವಿಶೇಷ ವ್ಯಕ್ತಿಯಾಗಬೇಕಾ? ಪರಿಹರಿಸುವ ವಿದ್ಯೆಗಳನ್ನು, ವಶೀಕರಣದ ವ್ಯಂಜನವನ್ನು ಮನೆಯಲ್ಲಿದ್ದುಕೊಂಡೇ ಕಲಿತುಕೊಳ್ಳಿ. ಸಮಸ್ಯೆಗಳಿಗೂ, ರೋಗಕ್ಕೂ, ವ್ಯಾಪಾರಕ್ಕೂ, ಪರಿಹಾರಕ್ಕಾಗಿ ಹಣಕಾಸಿನ ಸಹಾಯವಿದೆ. 8884826120

★ಚೌಡೇಶ್ವರಿದೇವಿ★ ಆರಾಧಕರು ಪ್ರಧಾನ ತಾಂತ್ರಿಕ್ ಮಂಜುನಾಥ್. ಪ್ರೀತಿಪ್ರೇಮ, ದಾಂಪತ್ಯ ಸಮಸ್ಯೆ, ವಶೀಕರಣ ಫೋನಿನ ಮುಖಾಂತರ ಕೆಲವೇ ನಿಮಿಷಗಳಲ್ಲಿ ಪರಿಹಾರ. 8050498041

ಪ್ರಖ್ಯಾತ ಪಂಡಿತರು, ವಶೀಕರಣ ಸ್ಪೆಷಲಿಸ್ಟ್. ಯಾವುದೇ ಗುಪ್ತ ಸಮಸ್ಯೆಗಳಿಗೆ ಕೇರಳೀಯ, ಬಂಗಾಳಿ ಪದ್ಧತಿಯಿಂದ ಖಚಿತ ಪರಿಹಾರ. A.R. ಗಣಾಚಾರಿ 9902157331

ಅಂಬಾಭವಾನಿ ಜ್ಯೋತಿಷ್ಯಾಲಯ: ಕೊಳ್ಳೆಗಾಲದ ನಂ.1 ವಶೀಕರಣ ಸ್ಪೆಷಲಿಸ್ಟ್ ದೇವಿಪ್ರಸಾದ್ (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೆಯಿರಲಿ 2ದಿನದಲ್ಲಿ ಪರಿಹಾರ.9886755306

ಪ್ರಜಾವಾಣಿ ಕ್ಲಾಸಿಫೈಡ್ಸ್
For Lineage & Single/ Multi Column Classifieds Display ads
BOOK YOUR AD ON SUNDAY & GET 50% OFF ON WEEKDAYS
For more information contact:
9880856233 / 9845114560
9606912256

ವಾಹನ
Four Wheelers Selling
Others
INTRA V10 ವಾಹನ ಈಗ 3.99% ಬಡ್ಡಿದರ ಲಾಭದ ಭರವಸೆಯೊಂದಿಗೆ
TATA INTRA ವಾಹನದ ಮೇಲೆ ಆಕರ್ಷಕ ಕೊಡುಗೆಗಳೊಂದಿಗೆ

33 kW ಇಂಜಿನ್
3.99%* ಬಡ್ಡಿದರ / 47 ತಿಂಗಳು
₹30,000/-* ದವರೆಗೆ ಗ್ರಾಹಕರ ಕೊಡುಗೆಗಳು
ಎಕ್ಸ್‌ಚೇಂಜ್ ₹25,000/-* ದವರೆಗೆ
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore - 7259784441
Bangalore/Mysore 95389 35533
Tumkur/Davanagere/ Chitradurga - 7829055525
Mangalore/Shivamogga/ Udupi/Hassan/ Chikkamagalur/Karwar 96208 63338
Hubli/Haveri/Gadag/Bellary/ Raichur - 9620955858
Bagalkot/Bijapur/Gulbarga/ Belgaum/Bidar 8095202223
* ಷರತ್ತುಗಳು ಅನ್ವಯಿಸುತ್ತದೆ.

ಪ್ರವಾಸ
Travel
19.04.2021, 17/11 ದಿನಗಳ ಕಾಶಿ,ನೇಪಾಳ, ಪೋಖ್ರಾ,ಮುಕ್ತಿನಾಥ್, ಲೂಂಬಿನಿ. 12.05.2021 ದೆಹಲಿ,ಹರಿದ್ವಾರ್, ಯುಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದರಿನಾಥ್. 23.06.2021 ದೆಹಲಿ, ವೈಷ್ಣೋದೇವಿ, ಕಾಶ್ಮೀರ್, ಗುಲ್ಮಾರ್ಗ್, ಅಮರನಾಥ್, ಹಿಮಲಿಂಗದರ್ಶನ ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವಲ್ಸ್ ಎನ್ ಆರ್ ಕಾಲೋನಿ, ಬೆಂಗಳೂರು-19. 9342287551, 8050629305

02.05.2021, 14.05.2021, 04.06.2021,04.07.2021 ರಿಂದ 14/20/27 ದಿನಗಳ ಕಾಶಿ,ಗಯಾ, ಪೂರಿಜಗನ್ನಾಥ್, ಪ್ರಯಾಗ, ಅಯೋಧ್ಯ, ಬದರಿನಾಥ್, ಕೇದಾರನಾಥ್, ಗಂಗೋತ್ರಿ, ಯುಮುನೋತ್ರಿ, ವೈಷ್ಣೋದೇವಿ, ದೆಹಲಿ/14 ದಿನಗಳ ಮುಕ್ತಿನಾಥ್, ನೇಪಾಳ, ಪೊಖ್ರಾ,ಜನಕಪುರಿ, ನೈಮಿಶಾರಣ್ಯ, ಘೋರಕ್-ಪುರ್. 'ಶ್ರೀಸುಧಾ ಟ್ರಾವಲ್ಸ್' 080-22429289, 9448119290, 9019301300

ಕಾಶಿ ಪ್ರವಾಸ 2 ಜ್ಯೋತಿರ್ಲಿಂಗದೊಂದಿಗೆ, 6ದಿನಗಳು ವಿಮಾನದಲ್ಲಿ ಪ್ರಯಾಗ್‌ರಾಜ್, ಗಯಾ, ಬುದ್ಧಗಯಾ, ವೈದ್ಯನಾಥೇಶ್ವರ ಹಾಗೂ ಇತರೆ. ಪ್ರಕೃತಿ ಹಾಲಿಡೇಸ್.7259646056, 9741518956

ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿ

ಸೆಮಿಫೈನಲ್‌ನಲ್ಲಿ ಕರ್ನಾಟಕ–ಮುಂಬೈ ತಂಡಗಳ ಹಣಾಹಣಿ

ಪೃಥ್ವಿ ಶಾ

ನವದೆಹಲಿ: ಪೃಥ್ವಿ ಶಾ ಅಬ್ಬರದ ಶತಕದ ಬಲದಿಂದ ಜಯಭೇರಿ ಬಾರಿಸಿದ ಮುಂಬೈ ತಂಡವು ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿತು. ಗುರುವಾರ ನಡೆಯಲಿರುವ ನಾಲ್ಕರ ಘಟ್ಟದ ಪಂದ್ಯದಲ್ಲಿ ಸಮರ್ಥ್ ನಾಯಕತ್ವದ ಕರ್ನಾಟಕವನ್ನು ಪೃಥ್ವಿ ಬಳಗವು ಎದುರಿಸಲಿದೆ.

ಮಂಗಳವಾರ ಪಾಲಂ ಏರ್‌ಫೋರ್ಸ್ ಕ್ರೀಡಾಂಗಣದಲ್ಲಿ ನಡೆದ ಕ್ವಾರ್ಟರ್‌ಫೈನಲ್‌ನಲ್ಲಿ ಟಾಸ್ ಗೆದ್ದ ಸೌರಾಷ್ಟ್ರ ತಂಡವು 50 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 284 ರನ್ ಗಳಿಸಿತು. ಅದಕ್ಕುತ್ತರವಾಗಿ ಮುಂಬೈ ತಂಡವು 41.5 ಓವರ್‌ಗಳಲ್ಲಿ 1 ವಿಕೆಟ್‌ಗೆ 285 ರನ್ ಗಳಿಸಿತು. 9 ವಿಕೆಟ್‌ಗಳ ಜಯ ದಾಖಲಿಸಿತು.

ಮುಂಬೈ ತಂಡದ ನಾಯಕ ಪೃಥ್ವಿ ಶಾ (ಔಟಾಗದೆ 185; 123ಎಸೆತ, 21ಬೌಂಡರಿ, 7ಸಿಕ್ಸರ್) ಅವರು ಟೂರ್ನಿಯಲ್ಲಿ ಮೂರನೇ ಶತಕ ಹೊಡೆದರು. ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ ಯಶಸ್ವಿ ಜೈಸ್ವಾಲ್ (75; 104ಎಸೆತ, 10ಬೌಂಡರಿ, 1ಸಿಕ್ಸರ್) ಅವರೊಂದಿಗೆ 238 ರನ್ ಸೇರಿಸಿದರು. ಸೋಮವಾರ ನಡೆದಿದ್ದ ಕ್ವಾರ್ಟರ್‌ಫೈನಲ್‌ನಲ್ಲಿ ಕರ್ನಾಟಕ ತಂಡವು ಕೇರಳದ ವಿರುದ್ಧ ಜಯಿಸಿತ್ತು. ಪಂದ್ಯದಲ್ಲಿ ಆರಂಭಿಕ ಜೋಡಿ ಸಮರ್ಥ್ ಮತ್ತು ದೇವದತ್ತ ಪಡಿಕ್ಕಲ್ ಶತಕಗಳನ್ನು ಗಳಿಸಿದ್ದರು.

ಉತ್ತರಪ್ರದೇಶಕ್ಕೆ ಜಯ: ಮಧ್ಯಮ-ಕ್ರಮಾಂಕದ ಬ್ಯಾಟ್ಸ್‌ಮನ್ ಉಪೇಂದ್ರ ಯಾದವ್ (112; 101ಎ, 11ಬೌಂ, 2ಸಿ) ಅವರ ಅಮೋಘ ಶತಕದ ಬಲದಿಂದ ಉತ್ತರಪ್ರದೇಶ ತಂಡವು ಎಂಟರ ಘಟ್ಟದ ಇನ್ನೊಂದು ಪಂದ್ಯದಲ್ಲಿ 46 ರನ್‌ಗಳಿಂದ ದೆಹಲಿ ತಂಡವನ್ನು ಮಣಿಸಿತು. ಸೆಮಿಫೈನಲ್‌ನಲ್ಲಿ ಉತ್ತರ ಪ್ರದೇಶ ತಂಡವು ಗುಜರಾತ್ ಎದುರು ಕಣಕ್ಕಿಳಿಯಲಿದೆ.

ಸಂಕ್ಷಿಪ್ತ ಸ್ಕೋರು: ಸೌರಾಷ್ಟ್ರ: 50 ಓವರ್‌ಗಳಲ್ಲಿ 5ಕ್ಕೆ 284 (ಅವಿ ಬಾರೋಟ್ 37, ಸ್ನೆಲ್ ಪಟೇಲ್ 30, ವಿಶ್ವರಾಜ್ ಜಡೇಜ 53, ಸಮರ್ಥ್ ವ್ಯಾಸ್ ಔಟಾಗದೆ 90, ಚಿರಾಗ್ ಜಾನಿ ಔಟಾಗದೆ 53, ಶಮ್ಸ್ ಮುಲಾನಿ 51ಕ್ಕೆ2), ಮುಂಬೈ : 41.5 ಓವರ್‌ಗಳಲ್ಲಿ 1 ವಿಕೆಟ್‌ಗೆ 285 (ಪೃಥ್ವಿ ಶಾ ಔಟಾಗದೆ 185, ಯಶಸ್ವಿ ಜೈಸ್ವಾಲ್ 75, ಆದಿತ್ಯ ತಾರೆ ಔಟಾಗದೆ 20) ಫಲಿತಾಂಶ: ಮುಂಬೈ ತಂಡಕ್ಕೆ 9 ವಿಕೆಟ್‌ಗಳ ಜಯ.

ಉತ್ತರಪ್ರದೇಶ: 50 ಓವರ್‌ಗಳಲ್ಲಿ 7ಕ್ಕೆ280 (ಕರಣ್ ಶರ್ಮಾ 83, ಉಪೇಂದ್ರ ಯಾದವ್ 112, ಸಮೀರ್ ಚೌಧರಿ ಔಟಾಗದೆ 43, ಪ್ರದೀಪ್ ಸಂಗ್ವಾನ್ 49ಕ್ಕೆ2, ಸಮರಜೀತ್ ಸಿಂಗ್ 51ಕ್ಕೆ2) ದೆಹಲಿ: 48.1 ಓವರ್‌ಗಳಲ್ಲಿ 234 (ಹಿಮ್ಮತ್ ಸಿಂಗ್ 39, ಲಾಲಿ ಯಾದವ್ 61, ಅನುಜ್ ರಾವತ್ 47, ಪ್ರದೀಪ್ ಸಂಗ್ವಾನ್ 26, ಯಶ್ ದಯಾಳ್ 53ಕ್ಕೆ3, ಅಕೀಬ್ ಖಾನ್ 60ಕ್ಕೆ2, ಅಕ್ಷದೀಪ್ ನಾಥ್ 29ಕ್ಕೆ2) ಫಲಿತಾಂಶ: ಉತ್ತರಪ್ರದೇಶ ತಂಡಕ್ಕೆ 46 ರನ್ ಜಯ.

ಸೆಮಿಫೈನಲ್: ಗುಜರಾತ್– ಉತ್ತರಪ್ರದೇಶ (ಸ್ಥಳ: ಅರುಣ್ ಜೇಟ್ಲಿ ಕ್ರೀಡಾಂಗಣ, ದೆಹಲಿ).
ಕರ್ನಾಟಕ–ಮುಂಬೈ: (ಸ್ಥಳ: ಪಾಲಂ ಎ ಕ್ರೀಡಾಂಗಣ, ದೆಹಲಿ) ಮಾರ್ಚ್ 11 ರಂದು ಬೆಳಿಗ್ಗೆ 9ರಿಂದ.

ಐಸಿಸಿ ತಿಂಗಳ ಆಟಗಾರ ಅಶ್ವಿನ್

ಆರ್ ಅಶ್ವಿನ್

ದುಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್‌ನ (ಐಸಿಸಿ) ಫೆಬ್ರುವರಿ ತಿಂಗಳ ಶ್ರೇಷ್ಠ ಆಟಗಾರ ಗೌರವಕ್ಕೆ ಪಾತ್ರರಾಗಿದ್ದಾರೆ.

ಈಚೆಗೆ ಮುಕ್ತಾಯವಾದ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯಲ್ಲಿ ಅಶ್ವಿನ್ ಅವರ ಆಲ್‌ರೌಂಡ್ ಆಟ ರಂಗೇರಿತ್ತು.

ಹೋದ ತಿಂಗಳು ಅವರು ಆಡಿದ ಮೂರು ಟೆಸ್ಟ್‌ಗಳಲ್ಲಿ 24 ವಿಕೆಟ್ ಗಳಿಸಿದ್ದರು. ಒಟ್ಟು 176 ರನ್ ಗಳಿಸಿದರು. ಅದರಲ್ಲಿ ಒಂದು ಶತಕ ಕೂಡ ಬಾರಿಸಿದ್ದರು. ಅಹಮದಾಬಾದಿನಲ್ಲಿ ನಡೆದಿದ್ದ ಮೂರನೇ ಟೆಸ್ಟ್ ನಲ್ಲಿ ಅವರು 400 ವಿಕೆಟ್‌ಗಳ ಮೈಲುಗಲ್ಲು ಕೂಡ ದಾಟಿದ್ದರು.

ಈ ಸರಣಿಯಲ್ಲಿ ಭಾರತ ತಂಡವು 3–1ರಿಂದ ಗೆದ್ದು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಪ್ರವೇಶಿಸಲು ಮಹತ್ವದ ಕಾಣಿಕೆ ನೀಡಿದರು.

ತಿಂಗಳ ಆಟಗಾರ ಸ್ಪರ್ಧೆಯಲ್ಲಿ ಇಂಗ್ಲೆಂಡ್ ತಂಡದ ನಾಯಕ ಜೋ ರೂಟ್ (333 ರನ್ ಮತ್ತು ಆರು ವಿಕೆಟ್) ಮತ್ತು ಪದಾರ್ಪಣೆ ಟೆಸ್ಟ್‌ನಲ್ಲಿಯೇ ದ್ವಿಶತಕ ಬಾರಿಸಿ ದಾಖಲೆ ಬರೆದಿದ್ದ ವೆಸ್ಟ್ ಇಂಡೀಸ್ ತಂಡದ ಯುವ ಆಟಗಾರ ಕೈಲ್ ಮೇಯರ್ಸ್ ಇದ್ದರು. ಬಾಂಗ್ಲಾ ವಿರುದ್ಧದ ಪಂದ್ಯದಲ್ಲಿ ವಿಂಡೀಸ್ ಬಳಗವು 395 ರನ್‌ಗಳ ಗುರಿ ಸಾಧಿಸಿ ಜಯಿಸಲು ಅವರ ದ್ವಿಶತಕ ಕಾರಣವಾಗಿತ್ತು.

ಮಹಿಳೆಯ ವಿಭಾಗದಲ್ಲಿ ಇಂಗ್ಲೆಂಡ್‌ನ ಟಾಮಿ ಬೀಮೌಂಟ್ ಗೌರವಕ್ಕೆ ಪಾತ್ರರಾದರು.

ಇಂಡಿಯನ್ ಪ್ರೀಮಿಯರ್ ಲೀಗ್

ಆರ್‌ಸಿಬಿ ಆಟಗಾರರ ಫಿಟ್‌ನೆಸ್ ಪರೀಕ್ಷೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಡಿಯನ್ ಪ್ರೀಮಿಯರ್ ಲೀಗ್ ಟ್ವೆಂಟಿ–20 ಕ್ರಿಕೆಟ್ ಟೂರ್ನಿಯ 14ನೇ ಆವೃತ್ತಿಯ ಆರಂಭಕ್ಕೆ ಇನ್ನೊಂದು ತಿಂಗಳು ಬಾಕಿ ಇದೆ. ಭಾರತದಲ್ಲಿ ಬಯೋಬಬಲ್ ವ್ಯವಸ್ಥೆಯಲ್ಲಿ ನಡೆಯಲಿರುವ ಟೂರ್ನಿಗಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ತನ್ನ ಆಟಗಾರರಿಗೆ ತಾಲೀಮು ಆರಂಭಿಸಿದೆ.

ಮಂಗಳವಾರ ಪ್ರಕಾಶ್ ಪಡುಕೋಣೆ-ರಾಹುಲ್ ದ್ರಾವಿಡ್ ಸ್ಪೋರ್ಟ್ಸ್ ಅಕಾಡೆಮಿಯಲ್ಲಿ ತಂಡದ ಯುವ ಆಟಗಾರರ ಫಿಟ್‌ನೆಸ್ ಪರೀಕ್ಷೆ ನಡೆಯಿತು. ಆಧುನಿಕ ತಂತ್ರಜ್ಞಾನದ ಸಲಕರಣೆಗಳು ಇರುವ ಇಲ್ಲಿಯ ಕ್ರೀಡಾ ವಿಜ್ಞಾನ ಕೇಂದ್ರದಲ್ಲಿ ಆಟಗಾರರ ಎಲುವು ಸಾಂದ್ರತೆ, ವೇಗ, ಮಾಂಸಖಂಡಗಳ ಬಲಿಷ್ಠತೆಯ ಪರೀಕ್ಷೆಗಳನ್ನು ನಡೆಸಲಾಯಿತು. ಈ ಕುರಿತು ಆರ್‌ಸಿಬಿಯ ವಿಡಿಯೊವೊಂದನ್ನು ಟ್ವೀಟ್ ಮಾಡಿದೆ.

’ಕೊರೊನಾ ಕಾರಣದಿಂದಾಗಿ ಬಯೋಬಬಲ್ ವ್ಯವಸ್ಥೆಯಲ್ಲಿ ಕ್ರಿಕೆಟ್ ಟೂರ್ನಿಗಳು ನಡೆಯುತ್ತಿವೆ. ದೈಹಿಕವಾದ ಶ್ರಮದೊಂದಿಗೆ ಮಾನಸಿಕವಾಗಿ ಸದೃಢವಾಗಿರುವುದು ಕೂಡ ಮುಖ್ಯವಾಗುತ್ತದೆ. ಆದ್ದರಿಂದ ಆಟಗಾರರಿಗೆ ನೀಡುವ ಫಿಟ್‌ನೆಸ್ ತರಬೇತಿಯಲ್ಲಿ ಕೆಲವು ಪ್ರಮುಖ ಬದಲಾವಣೆಗಳಾಗಿವೆ. ತಂತ್ರಜ್ಞಾನದ ಅನುಕೂಲ ಇದೆ. ತಂತ್ರಾಂಶಗಳಿಂದ ಸಿಗುವ ದತ್ತಾಂಶಗಳು ಉಪಯುಕ್ತ. ಆದನ್ನು ಆಟಗಾರರನ್ನು ಮನೋದೈಹಿಕವಾಗಿ ಸದೃಢಗೊಳಿಸಲು ಬಳಸಿಕೊಳ್ಳುವ ರೀತಿಯು ಮುಖ್ಯವಾಗುತ್ತದೆ. ಅದಕ್ಕಾಗಿ ನುರಿತ ಸಿಬ್ಬಂದಿ ಇದ್ದಾರೆ. ಇದೀಗ ಅನ್‌ಕ್ಯಾಪ್ಡ್ ಆಟಗಾರರನ್ನು ಶಿಬಿರದಲ್ಲಿ ತೊಡಗಿಸಿಕೊಳ್ಳಲಾಗಿದೆ‘ ಎಂದು ತಂಡದ ಟ್ರೇನರ್ ಶಂಕರ್ ಬಸು ವಿಡಿಯೊದಲ್ಲಿ ಹೇಳಿದ್ದಾರೆ.

ಆರ್‌ಸಿಬಿ ತಂಡದ ನಾಯಕ ವಿರಾಟ್ ಕೊಹ್ಲಿ ಸೇರಿದಂತೆ ಕೆಲವು ಪ್ರಮುಖ ಆಟಗಾರರು ಭಾರತ ತಂಡದಲ್ಲಿ ಆಡುತ್ತಿದ್ದಾರೆ. ಯುವ ಆಟಗಾರ ದೇವದತ್ತ ಪಡಿಕ್ಕಲ್ ಮತ್ತಿತರರು ವಿಜಯ್ ಹಜಾರೆ ಟ್ರೋಫಿ ಟೂರ್ನಿಯಲ್ಲಿ ಆಡುತ್ತಿದ್ದಾರೆ.

ಇಂಗ್ಲೆಂಡ್ ವಿರುದ್ಧದ ಟ್ವೆಂಟಿ–20 ಕ್ರಿಕೆಟ್ ಸರಣಿಗೆ ಸಜ್ಜಾಗುತ್ತಿರುವ ಭಾರತ ತಂಡದ ಆಟಗಾರರು ಮಂಗಳವಾರ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಅಭ್ಯಾಸ ನಡೆಸಿದರು–ಪಿಟಿಐ ಚಿತ್ರ

ಕಾವ್ಯಾ ನಾಲ್ಕು ಗೋಲು: ಕಿಕ್‌ಸ್ಟಾರ್ಟ್ ಜಯಭೇರಿ

ಬೆಂಗಳೂರು: ಕಾವ್ಯಾ ಪಿ. ಗಳಿಸಿದ ನಾಲ್ಕು ಗೋಲುಗಳ ನೆರವಿನಿಂದ ಕಿಕ್‌ಸ್ಟಾರ್ಟ್ ಎಫ್‌ಸಿ ತಂಡವು ಭರ್ಜರಿ ಜಯ ಗಳಿಸಿತು.ಇಲ್ಲಿ ನಡೆಯುತ್ತಿರುವ ರಾಜ್ಯ ಫುಟ್‌ಬಾಲ್ ಸಂಸ್ಥೆಯ (ಕೆಎಸ್‌ಎಫ್‌ಎ) ಮಹಿಳಾ ಲೀಗ್‌ನಲ್ಲಿ ಆ ತಂಡವು ಮಂಗಳವಾರ 7–0ಯಿಂದ ಸ್ಲ್ಯಾಮ್‌ಜರ್ಸ್ ಬೆಳಗಾವಿ ತಂಡವನ್ನು ಸೋಲಿಸಿತು.

ಕಿಕ್‌ಸ್ಟಾರ್ಟ್ ತಂಡದ ನವೊಬಿ ಚಾನು ಲಾಯಿಶ್ರಾಮ್ 23ನೇ ನಿಮಿಷದಲ್ಲಿ ಮೊದಲ ಗೋಲು ದಾಖಲಿಸುವ ಮೂಲಕ ತಂಡಕ್ಕೆ ಮುನ್ನಡೆ ಒದಗಿಸಿದರು. 24, 44, 78 ಹಾಗೂ 90ನೇ ನಿಮಿಷಗಳಲ್ಲಿ ಕಾಲ್ಚಳಕ ತೋರಿದ ಕಾವ್ಯಾ ತಂಡದ ಗೆಲುವನ್ನು ಖಚಿತಪಡಿಸಿದರು. ಕ್ಷೇತ್ರಿಮಯುಮ್ ಮಾರ್ಗರೇಟ್ ದೇವಿ (30) ಹಾಗೂ ಬೀಬಿ ನೌಶಾಮ್ ಮಮೋದೆ (87ನೇ ನಿಮಿಷ) ತಲಾ ಒಂದು ಗೋಲು ಹೊಡೆದರು. ಮತ್ತೊಂದು ಪಂದ್ಯದಲ್ಲಿ ಬೆಂಗಳೂರು ಯುನೈಟೆಡ್ ಎಫ್‌ಸಿಯು 1–0ಯಿಂದ ಪರಿಕ್ರಮ ಎಫ್‌ಸಿ ತಂಡವನ್ನು ಸೋಲಿಸಿತು.

ವೈದ್ಯಕೀಯ ನಿಯತಕಾಲಿಕ ಲ್ಯಾನ್ಸೆಟ್‌ನಲ್ಲಿ ವರದಿ ಪ್ರಕಟ

ಕೋವ್ಯಾಕ್ಸಿನ್: ರೋಗ ನಿರೋಧಕ ಶಕ್ತಿ ಹೆಚ್ಚಳ

ಹೈದರಾಬಾದ್: ಭಾರತ್ ಬಯೋಟೆಕ್ ಅಭಿವೃದ್ಧಿಪಡಿಸಿರುವ ಕೋವಿಡ್ ಲಸಿಕೆ ಕೋವ್ಯಾಕ್ಸಿನ್ (ಬಿಬಿವಿ152) ಹೆಚ್ಚು ಸುರಕ್ಷಿತ ಹಾಗೂ ರೋಗನಿರೋಧಕ ಶಕ್ತಿಯನ್ನು ವೃದ್ಧಿಸುವಲ್ಲಿಯೂ ಸಫಲವಾಗಿದೆ ಎಂಬ ಅಂಶ ಲಸಿಕೆಯ ಎರಡನೇ ಹಂತದ ಕ್ಲಿನಿಕಲ್ ಟ್ರಯಲ್‌ನಲ್ಲಿ ಕಂಡುಬಂದಿದೆ.

ಈ ಕುರಿತ ಅಧ್ಯಯನ ವರದಿ ಪ್ರಸಿದ್ಧ ವೈದ್ಯಕೀಯ ನಿಯತಕಾಲಿಕೆ ‘ಲ್ಯಾನ್ಸೆಟ್’ನಲ್ಲಿ ಪ್ರಕಟವಾಗಿದೆ.

‘ಮೊದಲ ಹಂತದ ಟ್ರಯಲ್‌ಗೆ ಹೋಲಿಸಿದಾಗ ಎರಡನೇ ಹಂತದಲ್ಲಿ ಕೋವ್ಯಾಕ್ಸಿನ್ ಲಸಿಕೆ ಪಡೆದ ವ್ಯಕ್ತಿಯಲ್ಲಿ ರೋಗನಿರೋಧಕ ಶಕ್ತಿ ವೃದ್ಧಿಸಿತ್ತು. ಸುರಕ್ಷತೆಗೆ ಸಂಬಂಧಿಸಿದ ಸ್ಪಂದನೆಯೂ ಉತ್ತಮವಾಗಿತ್ತು’ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಕೋವ್ಯಾಕ್ಸಿನ್ ಎರಡನೇ ಹಂತದ ಟ್ರಯಲ್ ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ನಡೆದಿತ್ತು. 380 ಜನ ಕಾರ್ಯಕರ್ತರನ್ನು ಎರಡು ಗುಂಪುಗಳನ್ನಾಗಿ ವಿಂಗಡಿಸಿ ಲಸಿಕೆಯನ್ನು ನೀಡಲಾಗಿತ್ತು.

ಭಾರತ–ಬಾಂಗ್ಲಾ ನಡುವಿನ ‘ಮೈತ್ರಿ ಸೇತು’ ಉದ್ಘಾಟನೆ

ನವದೆಹಲಿ (ಪಿಟಿಐ): ತ್ರಿಪುರಾದಲ್ಲಿರುವ ಭಾರತ ಮತ್ತು ಬಾಂಗ್ಲಾದೇಶದ ನಡುವಿನ ‘ಫೆನಿ’ ನದಿಗೆ ಭಾರತ ನಿರ್ಮಿಸಿರುವ ‘ಮೈತ್ರಿ ಸೇತು’ವನ್ನು ಪ್ರಧಾನಿ ನರೇಂದ್ರ ಮೋದಿ ಮತ್ತು ಬಾಂಗ್ಲಾದೇಶ ಪ್ರಧಾನಿ ಶೇಖ್ ಹಸೀನಾ ಮಂಗಳವಾರ ವಿಡಿಯೊ ಕಾನ್ಫರೆನ್ಸ್ ಮೂಲಕ ಉದ್ಘಾಟಿಸಿದರು.

‘ಈ ಸೇತುವೆ ಉಭಯ ದೇಶಗಳ ನಡುವಿನ ಸಂಪರ್ಕವನ್ನು ಮತ್ತಷ್ಟು ಬಲಪಡಿಸುತ್ತದೆ ಮತ್ತು ಆರ್ಥಿಕ ಚಟುವಟಿಕೆಗಳನ್ನು ವೃದ್ಧಿಸುತ್ತದೆ’ ಎಂದು ಪ್ರಧಾನಿ ಮೋದಿ ಹೇಳಿದರೆ, ‘ವ್ಯಾಪಾರ ವಹಿವಾಟಿಗೆ ರಾಜಕೀಯ ಗಡಿಗಳು ಭೌತಿಕ ಅಡೆತಡೆಗಳಾಗಿರಬಾರದು’ ಎಂದು ಹಸೀನಾ ಅಭಿಪ್ರಾಯಪಟ್ಟರು.

‘ನಾವು ಭಾರತದೊಂದಿಗೆ ಸಂಪರ್ಕ ಬೆಳೆಸುವ ಮೂಲಕ ದಕ್ಷಿಣ ಏಷ್ಯಾದಲ್ಲಿ ಹೊಸ ಯುಗವನ್ನು ಸೃಷ್ಟಿ ಮಾಡುತ್ತಿದ್ದೇವೆ’ ಎಂದು ಹಸೀನಾ ತಿಳಿಸಿದರು. ‘ಮೈತ್ರಿ ಸೇತು’ವೆಯಿಂದಾಗಿ ನಮ್ಮ ದೇಶ ನೇಪಾಳ ಮತ್ತು ಭೂತಾನ್‌ನೊಂದಿಗಿನ ವ್ಯಾಪಾರ ವಹಿವಾಟಿಗೆ ನೆರವಾಗುತ್ತದೆ. ಈ ಪ್ರದೇಶದಲ್ಲಿನ ಆರ್ಥಿಕ ಚಟುವಟಿಕೆಗಳು ವಿಸ್ತಾರಗೊಳ್ಳುತ್ತವೆ’ ಎಂದೂ ಅವರು ಹೇಳಿದರು. 1.9 ಕಿ.ಮೀ. ಉದ್ದದ ಈ ಸೇತುವೆಯನ್ನು ರಾಷ್ಟ್ರೀಯ ಹೆದ್ದಾರಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮವು ₹ 133 ಕೋಟಿ ವೆಚ್ಚದಲ್ಲಿ ನಿರ್ಮಿಸಿದೆ. ಇದು ಭಾರತದ ಸಬ್ರೂಮ್ ಮತ್ತು ಬಾಂಗ್ಲಾದೇಶದ ರಾಮಗಡವನ್ನು ಸಂಪರ್ಕಿಸುತ್ತದೆ.

‘ಡಬ್ಬಲ್ ಎಂಜಿನ್ ಸರ್ಕಾರ’

‘ಡಬ್ಬಲ್ ಎಂಜಿನ್ ಸರ್ಕಾರ (ಕೇಂದ್ರ, ರಾಜ್ಯಗಳಲ್ಲಿ ಒಂದೇ ಪಕ್ಷದ ಸರ್ಕಾರ) ಇಲ್ಲದಿರುವ ರಾಜ್ಯಗಳಲ್ಲಿ ಏನಾಗುತ್ತಿದೆ ಎಂಬುದನ್ನು ತಿಳಿಯಲು ನೀವು ನೆರೆಯ ರಾಜ್ಯಗಳತ್ತ ನೋಡಬಹುದು. ಆ ರಾಜ್ಯಗಳಲ್ಲಿ ಬಡವರು, ರೈತರು ಮತ್ತು ಹೆಣ್ಣುಮಕ್ಕಳನ್ನು ಸಬಲೀಕರಣಗೊಳಿಸುವಂತಹ ನೀತಿಗಳಿಲ್ಲ. ಇದ್ದರೂ ಬಹಳ ನಿಧಾನವಾಗಿ ಅನುಷ್ಠಾನವಾಗುತ್ತಿವೆ’ ಎಂದು ಪ್ರಧಾನಿ ಹೇಳಿದರು.

ವೈಕುಂಠ ಸಮಾರಾಧನೆ

ಶ್ರೀ ಎಸ್.ಆರ್. ಸೋಮ ಶೇಕರ ರೆಡ್ಡಿ (ಸೋಮಣ್ಣ)
ಸುದ್ದಗುಂಟೆ ಪಾಳ್ಯ
ದಿನಾಂಕ 01.03.2021 ಸೋಮವಾರ ಮಧ್ಯಾಹ್ನ 12.25 ಗಂಟೆಗೆ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಇವರ ತತ್ಸಂಬಂಧವಾದ ಉತ್ತರ ಕ್ರಿಯಾದಿಯನ್ನು ದಿನಾಂಕ 11.03.2021ನೇ ಗುರುವಾರ ಬೆಳಿಗ್ಗೆ 9.30ಕ್ಕೆ ಹಾಗೂ ವೈಂಕುಠ ಸಮಾರಾಧನೆಯನ್ನು ಮಧ್ಯಾಹ್ನ 12.00 ಗಂಟೆಗೆ ನಮ್ಮ ಸ್ವಗೃಹದಲ್ಲಿ ನಡೆಸಲು ನಿಶ್ಚಯಿಸಲಾಗಿದೆ.
ಇಂತಿ ದುಃಖತಪ್ತರು
ಶ್ರೀಮತಿ ಎನ್. ಶಾಂತ ಮತ್ತು ಮಕ್ಕಳು ಹಾಗೂ ಕುಟುಂಬದವರು
ಮೊಬೈಲ್ : 97400 21155

ಶ್ರೀಮತಿ ಮುನಿವೆಂಕಟಮ್ಮ 22-01-2016
ಶ್ರೀ ಎಂ.ಗೋವಿಂದಪ್ಪ 10-03-2006
ಸವಿನೆನಪು
ನೀವುಗಳು ನಮ್ಮನ್ನಗಲಿದರೂ, ನಿಮ್ಮ ಸರಳತೆ, ಪ್ರೀತಿ ಮತ್ತು ಆದರ್ಶಗಳೇ ನಮಗೆ ದಾರಿ ದೀಪ. ನಿಮ್ಮ ಆಶೀರ್ವಾದ ಸದಾ ಇರಲಿ.
ಶ್ರೀಮತಿ ಮತ್ತು ಶ್ರೀ ವೈ.ಜಿ. ಕೇಶವ ಮತ್ತು ಮಕ್ಕಳು, ಯಲಹಂಕ.
ಜೈ ಹನುಮಾನ್ ಹಾಲೋ ಬ್ಲಾಕ್ಸ್, ಕ್ರಷರ್ ಹಾಗೂ ಲಾರಿ ಮಾಲೀಕರು.

ಶ್ರೀ ನರಸಿಂಹಯ್ಯ ಜಮೀನ್ದಾರರು
(ಮಾಜಿ ನಗರಸಭಾ ಸದಸ್ಯರು, ಶಾಂತಿನಗರ)
ಮರಣ : 10–03–1990
ಶ್ರೀಮತಿ ಮುನಿರಂಗಮ್ಮ
(ನರಸಿಂಹಯ್ಯನವರ ಧರ್ಮಪತ್ನಿ)
ಮರಣ : 30–09–2005
ನಿಮ್ಮ ಸವಿನೆನಪು ಸದಾ ಹಸಿರಾಗಿ ನಮ್ಮ ಮನದಲ್ಲಿರುತ್ತದೆ.
ನಿಮ್ಮ ಆಶೀರ್ವಾದ ಸದಾ ನಮ್ಮೊಂದಿಗೆ ಇರಲಿ,
ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸುವ
ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬ ವರ್ಗದವರು

ಶೆಫಾಲಿ ವರ್ಮಾ–ಪಿಟಿಐ ಚಿತ್ರ

ಟಿ20 ರ‍್ಯಾಂಕಿಂಗ್: ಎರಡನೇ ಸ್ಥಾನಕ್ಕೆ ಶೆಫಾಲಿ ವರ್ಮಾ

ದುಬೈ (ಪಿಟಿಐ): ಭಾರತದ ಯುವ ಬ್ಯಾಟ್ಸ್‌ವುಮನ್ ಶೆಫಾಲಿ ವರ್ಮಾ ಅವರು ಐಸಿಸಿ ಮಹಿಳಾ ಟ್ವೆಂಟಿ–20 ರ‍್ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನಕ್ಕೇರಿದ್ದಾರೆ. ಮಂಗಳವಾರ ಪ್ರಕಟಗೊಂಡಿರುವ ರ‍್ಯಾಂಕಿಂಗ್ ಪಟ್ಟಿಯಲ್ಲಿ ತಂಡದ ಉಪನಾಯಕಿ ಸ್ಮೃತಿ ಮಂದಾನ ಅವರಿಗೆ ಏಳನೇ ಸ್ಥಾನ ಲಭಿಸಿದೆ.

ಬ್ಯಾಟ್ಸ್‌ವುಮನ್‌ಗಳ ವಿಭಾಗದಲ್ಲಿ ಶೆಫಾಲಿ ಅವರು 744 ಪಾಯಿಂಟ್ಸ್ ಕಲೆಹಾಕಿದ್ದು, ಅಗ್ರಸ್ಥಾನದಲ್ಲಿರುವ ಆಸ್ಟ್ರೇಲಿಯಾದ ಬೆಥ್ ಮೂನಿ (748) ಅವರಿಗಿಂತ ಕೇವಲ ನಾಲ್ಕು ಪಾಯಿಂಟ್ಸ್ ಹಿಂದಿದ್ದಾರೆ. ಮಂದಾನ ಬಳಿ 693 ಪಾಯಿಂಟ್‌ಗಳಿವೆ.

ಜೆಮಿಮಾ ರಾಡ್ರಿಗಸ್ (643) ಒಂಬತ್ತನೇ ಸ್ಥಾನದಲ್ಲಿದ್ದಾರೆ. ನ್ಯೂಜಿಲೆಂಡ್‌ನ ಸೋಫಿ ಡಿವೈನ್, ಆಸ್ಟ್ರೇಲಿಯಾದ ಮೆಗ್ ಲ್ಯಾನಿಂಗ್ ಹಾಗೂ ಅಲಿಸ್ಸಾ ಹೀಲಿ ಕ್ರಮವಾಗಿ ಮೂರು, ನಾಲ್ಕು ಮತ್ತು ಐದನೇ ಕ್ರಮಾಂಕದಲ್ಲಿದ್ದಾರೆ.

ಟಿಟಿ: ಮುಖ್ಯ ಸುತ್ತಿಗೆ ಸಮ್ಯಕ್

ಬೆಂಗಳೂರು: ಕರ್ನಾಟಕದ ಸಮ್ಯಕ್ ಕಶ್ಯಪ್ ಹಾಗೂ ಆಕಾಶ್ ಕೆ.ಜೆ., ರಾಷ್ಟ್ರೀಯ ಜೂನಿಯರ್ ಹಾಗೂ ಯೂತ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನ ಮುಖ್ಯ ಸುತ್ತಿಗೆ ಅರ್ಹತೆ ಗಳಿಸಿದ್ದಾರೆ.

ಮಧ್ಯಪ್ರದೇಶದ ಇಂದೋರ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಯೂತ್ ಬಾಲಕರ ಅರ್ಹತಾ ಸುತ್ತಿನ ಪಂದ್ಯದಲ್ಲಿ ಸಮ್ಯಕ್ 11–8, 4–11, 9–11, 11–6, 11–5ರಿಂದ ತಮಿಳುನಾಡಿನ ದೀನ್‌ದಯಾಳ್ ವಿಶ್ವ ಅವರನ್ನು ಮಣಿಸಿದರು. ಜೂನಿಯರ್ ಬಾಲಕರ ವಿಭಾಗದಲ್ಲೂ ಸಮ್ಯಕ್ ಮುಖ್ಯ ಸುತ್ತಿಗೆ ಕಾಲಿಟ್ಟರು. ಈ ವಿಭಾಗದಲ್ಲಿ ಅವರು 11–7, 11–5, 11–5ರಿಂದ ಪಿಎಸ್‌ಪಿಬಿಎ ತಂಡದ ಲುಬಿತ್ ಮವಾರ್ ಅವರನ್ನು ಸೋಲಿಸಿದರು.

ಜೂನಿಯರ್ ಬಾಲಕರ ವಿಭಾಗದಲ್ಲಿ ಆಕಾಶ್ ಕೆ.ಜೆ 10–12, 13–11, 11–4, 11–9ರಿಂದ ಆಂಧ್ರಪ್ರದೇಶದ ವೆಂಕಟ ಕಾರ್ತಿಕೇಯ ಮನ್ನವ ಎದುರು ಗೆದ್ದರು. ಕರ್ನಾಟಕದ ಶ್ರೀಕಾಂತ್ ಪಿ.ವಿ. ಹಾಗೂ ರೋಹಿತ್ ಶಂಕರ್ ಕೂಡ ಈ ವಿಭಾಗದಲ್ಲಿ ಮುಖ್ಯ ಸುತ್ತಿಗೆ ಲಗ್ಗೆಯಿಟ್ಟರು. ಶ್ರೀಕಾಂತ್ 11–6, 11–7, 7–11, 11–4ರಿಂದ ಮಿಜೋರಾಂನ ಎಂ.ಆರ್. ಥಾಂಗ್‌ಸಿಯಾನ್‌ಸಂಗಾ ಅವರನ್ನು ಸೋಲಿಸಿದರು.

ಐಎಸ್‌ಎಲ್: ಪ್ರಶಸ್ತಿ ಸುತ್ತಿಗೆ ಎಟಿಕೆಎಂಬಿ

ಮಡಗಾಂವ್ (ಪಿಟಿಐ): ಎಟಿಕೆ ಮೋಹನ್ ಬಾಗನ್ (ಎಟಿಕೆಎಂಬಿ) ತಂಡವು ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ ತಂಡವನ್ನು ಮಣಿಸಿ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಫೈನಲ್‌ಗೆ ಲಗ್ಗೆಯಿಟ್ಟಿತು. ಮಂಗಳವಾರ ಇಲ್ಲಿ ನಡೆದ ಸೆಮಿಫೈನಲ್ ಹಣಾಹಣಿಯಲ್ಲಿ ಎಟಿಕೆಎಂಬಿ 2–1ರಿಂದ ಎದುರಾಳಿಗೆ ಸೋಲುಣಿಸಿತು.

ಎಟಿಕೆಎಂಬಿ ಪರ ಡೇವಿಡ್ ವಿಲಿಯಮ್ಸ್ (38ನೇ ನಿಮಿಷ) ಹಾಗೂ ಮನ್ವೀರ್ ಸಿಂಗ್ (68) ಗೋಲು ಹೊಡೆದರೆ, ವಿ.ಪಿ. ಸುಹೈರ್ (74ನೇ ನಿಮಿಷ) ನಾರ್ತ್‌ಈಸ್ಟ್ ಪರ ಕಾಲ್ಚಳಕ ತೋರಿದರು.

ಮಾರ್ಚ್ 13ರಂದು ಫಟೋರ್ಡದಲ್ಲಿ ನಡೆಯುವ ಫೈನಲ್ ಪಂದ್ಯದಲ್ಲಿ ಮುಂಬೈ ಸಿಟಿ ಎಫ್‌ಸಿ ತಂಡವನ್ನು ಎಟಿಕೆಎಂಬಿ ಎದುರಿಸಲಿದೆ.

ಫುಟ್‌ಬಾಲ್ ಪಂದ್ಯಗಳ ಮುಂದೂಡಿಕೆ

ಬೆಂಗಳೂರು: ರೆಫರಿಗಳು ಕಾರ್ಯನಿರ್ವಹಿಸಲು ನಿರಾಕರಿಸಿದ ಹಿನ್ನೆಲೆಯಲ್ಲಿ ಬೆಂಗಳೂರು ಜಿಲ್ಲಾ ಫುಟ್‌ಬಾಲ್ ಸಂಸ್ಥೆಯ (ಬಿಡಿಎಫ್‌ಎ) ಸೂಪರ್ ಡಿವಿಷನ್ ಲೀಗ್ ಪಂದ್ಯಗಳನ್ನು ಮಂಗಳವಾರ ಅನಿರ್ದಿಷ್ಟಾವಧಿಗೆ ಮುಂದೂಡಲಾಗಿದೆ.

ಮಂಗಳವಾರ ಮೊದಲ ಪಂದ್ಯದಲ್ಲಿ ಕಿಕ್‌ಸ್ಟಾರ್ಟ್ ಎಫ್‌ಸಿ ತಂಡವು ಎಎಸ್‌ಸಿ ಸೆಂಟರ್ ತಂಡವನ್ನು ಎದುರಿಸಬೇಕಿತ್ತು. ಉಭಯ ತಂಡಗಳ ಆಟಗಾರರು ಹಾಗೂ ಸಿಬ್ಬಂದಿ ಅಂಗಣಕ್ಕಿಳಿದರೂ ರೆಫರಿಗಳು ದೂರ ಉಳಿದರು. ಇದರಿಂದ ಪಂದ್ಯಗಳನ್ನು ಮುಂದೂಡಬೇಕಾಯಿತು.

ಸೋಮವಾರ ಎಫ್‌ಸಿ ಬೆಂಗಳೂರು ಯುನೈಟೆಡ್ ಎದುರಿನ ಪಂದ್ಯದಲ್ಲಿ ಬೆಂಗಳೂರು ಎಫ್‌ಸಿ (ಬಿಎಫ್‌ಸಿ) ಸೋತಿತ್ತು. ಬಳಿಕ ಬಿಎಫ್‌ಸಿ ತಂಡದ ಕಾಯ್ದಿರಿಸಿದ ಆಟಗಾರರು ಹಾಗೂ ರೆಫರಿಗಳ ಮಧ್ಯೆ ಗಲಾಟೆ ನಡೆದಿತ್ತು.

ಮಹಿಳಾ ಕ್ರಿಕೆಟ್: ದಕ್ಷಿಣ ಆಫ್ರಿಕಾ ವಿರುದ್ಧ ಭಾರತಕ್ಕೆ 9 ವಿಕೆಟ್‌ಗಳ ಗೆಲುವು

ಜೂಲನ್ ಬೌಲಿಂಗ್‌ಗೆ ಒಲಿದ ಜಯ

ಲಖನೌ (ಪಿಟಿಐ): ಅನುಭವಿ ಮಧ್ಯಮವೇಗದ ಬೌಲರ್ ಜೂಲನ್ ಗೋಸ್ವಾಮಿ (42ಕ್ಕೆ 4) ಹಾಗೂ ಸ್ಮೃತಿ ಮಂದಾನ (ಔಟಾಗದೆ 80, 64 ಎಸೆತ) ಅವರ ಅಮೋಘ ಆಟ ಭಾರತಕ್ಕೆ ಗೆಲುವು ತಂದುಕೊಟ್ಟಿತು. ದಕ್ಷಿಣ ಆಫ್ರಿಕಾ ಎದುರು ಇಲ್ಲಿನ ಏಕನಾ ಕ್ರೀಡಾಂಗಣದಲ್ಲಿ ನಡೆದ ಎರಡನೇ ಏಕದಿನ ಪಂದ್ಯದಲ್ಲಿ ಭಾರತ ಒಂಬತ್ತು ವಿಕೆಟ್‌ಗಳ ಜಯಿಸಿತು. ಈ ಮೂಲಕ ಐದು ಪಂದ್ಯಗಳ ಸರಣಿಯಲ್ಲಿ 1–1ರ ಸಮಬಲ ಸಾಧಿಸಿದೆ.

ಮಿಥಾಲಿ ರಾಜ್ ನಾಯಕತ್ವದ ಭಾರತ ತಂಡ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಬ್ಯಾಟಿಂಗ್ ಮಾಡಿದ ಪ್ರವಾಸಿ ಪಡೆ ಕೇವಲ 157 ರನ್‌ಗಳಿಗೆ ಸರ್ವಪತನವಾಯಿತು. 38 ವರ್ಷದ ಜೂಲನ್ ಮತ್ತು ಮಧ್ಯಮವೇಗಿ ಮಾನಸಿ ಜೋಷಿ (23ಕ್ಕೆ 2) ಹಾಗೂ ಕರ್ನಾಟಕದ ಸ್ಪಿನ್ನರ್ ರಾಜೇಶ್ವರಿ ಗಾಯಕವಾಡ್ (37ಕ್ಕೆ 3) ಎದುರಾಳಿ ತಂಡವನ್ನು ಅಲ್ಪಮೊತ್ತಕ್ಕೆ ನಿಯಂತ್ರಿಸುವಲ್ಲಿ ಯಶಸ್ವಿಯಾದರು.

ಆತಿಥೇಯ ತಂಡದ ಆರಂಭಿಕ ಆಟಗಾರ್ತಿ ಸ್ಮೃತಿ ಹಾಗೂ ಪೂನಂ ರಾವತ್ (ಔಟಾಗದೆ 62, 89 ಎಸೆತ, 8 ಬೌಂಡರಿ) ಮುರಿಯದ ಎರಡನೇ ವಿಕೆಟ್ ಜೊತೆಯಾಟದಲ್ಲಿ 138 ರನ್ ಸೇರಿಸಿದರು. 29ನೇ ಓವರ್‌ನಲ್ಲಿ ಭಾರತ ಗೆಲುವಿನ ದಡ ಸೇರಿತು. ಇದರೊಂದಿಗೆ ಮೊದಲ ಪಂದ್ಯದ ಸೋಲಿಗೆ ಸೇಡು ತೀರಿಸಿಕೊಂಡಿತು.

ಮಿಂಚಿನ ಬ್ಯಾಟಿಂಗ್ ಮಾಡಿದ ಸ್ಮೃತಿ ಅವರ ಇನಿಂಗ್ಸ್‌ನಲ್ಲಿ 10 ಬೌಂಡರಿ ಹಾಗೂ ಮೂರು ಭರ್ಜರಿ ಸಿಕ್ಸರ್‌ಗಳಿದ್ದವು. ತಾವೆದುರಿಸಿದ ಮೊದಲ ಎರಡು ಎಸೆತಗಳನ್ನು ಸಿಕ್ಸರ್‌ಗೆ ಅಟ್ಟಿದ ಅವರು ಎದುರಾಳಿ ತಂಡಕ್ಕೆ ಸ್ಪಷ್ಟ ಸಂದೇಶ ರವಾನಿಸಿದರು.

ಭಾರತ ಇನಿಂಗ್ಸ್‌ನ ಐದನೇ ಓವರ್‌ನಲ್ಲಿ ಜೆಮಿಮಾ ರಾಡ್ರಿಗಸ್ (9) ವಿಕೆಟ್ ಕೈಚೆಲ್ಲಿದರು. ಈ ಹಂತದಲ್ಲಿ ಜೊತೆಗೂಡಿದ ಸ್ಮೃತಿ ಹಾಗೂ ಪೂನಂ ಸೊಗಸಾದ ಇನಿಂಗ್ಸ್ ಕಟ್ಟಿದರು. ಆಟಕ್ಕೆ ಕುದುರಿಕೊಳ್ಳಲು ಪೂನಂ ಸ್ವಲ್ಪ ಸಮಯ ತೆಗೆದುಕೊಂಡರೆ, ಸ್ಮೃತಿ ಬೌಂಡರಿಗಳನ್ನು ಸಿಡಿಸತೊಡಗಿದರು. 20ನೇ ಓವರ್‌ನಲ್ಲಿ ಸ್ಮೃತಿ ಅರ್ಧಶತಕ ಪೂರೈಸಿದರು. ಅದೇ ಲಯದಲ್ಲಿ ಮುಂದುವರಿದು 29ನೇ ಓವರ್‌ನಲ್ಲಿ ಗೆಲುವಿನ ರನ್ ಗಳಿಸಿದರು.

ಇದಕ್ಕೂ ಮೊದಲು ದಕ್ಷಿಣ ಆಫ್ರಿಕಾ ಪರ ಲಾರಾ ಗೂಡಾಲ್ (49) ಹಾಗೂ ನಾಯಕಿ ಸ್ಯೂನ್ ಲೂಸ್ (36) ಉತ್ತಮವಾಗಿ ಬ್ಯಾಟ್ ಬೀಸಿದರು. ಆದರೆ ಉಳಿದವರ ವೈಫಲ್ಯ ತಂಡದ ಸೋಲಿಗೆ ಕಾರಣವಾಯಿತು.

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ: 41 ಓವರ್‌ಗಳಲ್ಲಿ 157 (ಲಾರಾ ಗೂಡಾಲ್ 49, ಸ್ಯೂನ್ ಲೂಸ್ 36, ತ್ರಿಶಾ ಚೆಟ್ಟಿ 12, ಮಿಗ್ನನ್ ಡು ಪ್ರೀಜ್ 11; ಜೂಲನ್ ಗೋಸ್ವಾಮಿ 42ಕ್ಕೆ 4, ಮಾನಸಿ ಜೋಷಿ 23ಕ್ಕೆ 2, ರಾಜೇಶ್ವರಿ ಗಾಯಕವಾಡ್ 37ಕ್ಕೆ 3). ಭಾರತ: 28.4 ಓವರ್‌ಗಳಲ್ಲಿ 1 ವಿಕೆಟ್‌ಗೆ 160 (ಸ್ಮೃತಿ ಮಂದಾನ ಔಟಾಗದೆ 80, ಪೂನಂ ರಾವತ್ ಔಟಾಗದೆ 62; ಶಬ್ನಿಮ್ ಇಸ್ಮಾಯಿಲ್ 46ಕ್ಕೆ 1). ಫಲಿತಾಂಶ: ಭಾರತಕ್ಕೆ ಒಂಬತ್ತು ವಿಕೆಟ್‌ಗಳ ಜಯ. ಪಂದ್ಯಶ್ರೇಷ್ಠ ಆಟಗಾರ್ತಿ: ಜೂಲನ್ ಗೋಸ್ವಾಮಿ.

ಜೂಲನ್ ಗೋಸ್ವಾಮಿ– ರಾಯಿಟರ್ಸ್ ಸಂಗ್ರಹ ಚಿತ್ರ

ಮುಖ್ಯಾಂಶಗಳು

- ಅರ್ಧಶತಕ ಸಿಡಿಸಿದ ಸ್ಮೃತಿ ಮಂದಾನ, ಪೂನಂ ರಾವತ್
- ವಿಜಯಪುರದ ರಾಜೇಶ್ವರಿ ಗಾಯಕವಾಡ್‌ಗೆ ಮೂರು ವಿಕೆಟ್
- ಐದು ಪಂದ್ಯಗಳ ಸರಣಿಯಲ್ಲಿ 1–1ರ ಸಮಬಲ

ಸ್ಮೃತಿ ಮಂದಾನ–ಎಎಫ್‌ಪಿ ಚಿತ್ರ

ಮೈಸೂರು ರೇಸ್

‘ಮೇಕ್ ಮೈ ವೇ’ ಗೆಲ್ಲುವ ನಿರೀಕ್ಷೆ

‘ಎಂ ಗೋವಿಂದಪ್ಪ ಮೆಮೋರಿಯಲ್ ಟ್ರೋಫಿ’ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ‘ಮೇಕ್ ಮೈ ವೇ’ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಮಾಂಟೆಗ್ರೆಕೊ 1, ಸ್ವಿಸ್ ಬೇ 9, ಟೋಬಿನ್ 4
2ನೇ ರೇಸ್: ಏರ್‌ಲೈನ್‌ಸಿಟಿ 6, ಫೆಸ್ಟೀವ್ ಸ್ಟಾರ್ 3, ಕಂಟ್ರೀಸ್ ಸ್ಟೈಲ್ 1
3ನೇ ರೇಸ್: ನೆಕ್ಸ್ಟ್ ಲೆವೆಲ್ 4, ರಾಯಲ್ ಡಿಸೈನ್ 8, ಹೀಈಸ್ ದನ್ ಇಟ್ 6
4ನೇ ರೇಸ್: ಡಾಗೋಬರ್ಟ್ 4, ಸ್ಕಾರ್ಲೆಟ್ ಪ್ರಿನ್ಸೆಸ್ 5, ಅಸೆಂಡೆನ್ಸಿ 3
5ನೇ ರೇಸ್: ರೆಡ್ ಕ್ಯಾಪ್ರಿ 1, ಟ್ರಸ್ಟ್ ಬಾಂಡ್ 8, ಮನಿ ಮೂನ್ಸ್ 2
6ನೇ ರೇಸ್: ಮೇಕ್ ಮೈ ವೇ 2, ಕಾವಾರೋಝಿ 1, ಸ್ಟೀನ್‌ಲೈಟ್ 3
7ನೇ ರೇಸ್: ಎಸ್ಕೇಪ್ ಪ್ಲಾನ್ 2, ಡಿ ಬ್ರದರ್ 9, ಫ್ರಿನ್ಜ್ ಬೆನೆಫಿಟ್ 4
8ನೇ ರೇಸ್: ಅಸ್ಟ್ರೋಲಜರ್ 4, ಇಂಟೆನ್ಸ್ ಕಮಾಂಡ್ 6, ರಾಚ್ 3
9ನೇ ರೇಸ್: ಪಾಪಾಡೊಕಿಯ 12, ಟಚ್ ಆಫ್ ಕ್ಲಾಸ್ 11, ವಿಜಯ ಸಾರಥಿ 9

ಉತ್ತಮ ಬೆಟ್: ರೆಡ್ ಕ್ಯಾಪ್ರಿ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
5,6,7,8,9	1,2,3	4,5,6	7,8,9

ಟೆನಿಸ್: ಕ್ವಾರ್ಟರ್‌ಗೆ ಗೋವಿನ್ ಸೆಹ್ವಾಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರನೇ ಶ್ರೇಯಾಂಕದ ಕಾರ್ತಿಕ್ ಎಸ್.ಕೆವಿನ್‌ಗೆ ಆಘಾತ ನೀಡಿದ ಕರ್ನಾಟಕದ ಗೋವಿನ್ ಸೆಹ್ವಾಗ್ ಎಐಟಿಎ 18 ವರ್ಷದೊಳಗಿನವರ ರಾಷ್ಟ್ರೀಯ ರ‍್ಯಾಂಕಿಂಗ್ ಟೆನಿಸ್ ಟೂರ್ನಿ ಎಂಟರಘಟ್ಟಕ್ಕೆ ಲಗ್ಗೆಯಿಟ್ಟರು. ಇಲ್ಲಿಯ ಟಾಪ್‌ಸ್ಪಿನ್ ಟೆನಿಸ್ ಅಕಾಡೆಮಿಯಲ್ಲಿ ನಡೆಯುತ್ತಿರುವ ಟೂರ್ನಿಯ ಪ್ರೀ-ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಮಂಗಳವಾರ ಅವರು 6–0, 7–6ರಿಂದ ತಮಿಳುನಾಡು ಆಟಗಾರನನ್ನು ಮಣಿಸಿದರು.

ಕರ್ನಾಟಕದ ಮತ್ತೊಬ್ಬ ಆಟಗಾರ ಆಕರ್ಷ್ ಗಾಂವಕರ್ 6-2, 6-2ರಿಂದ ಅಸ್ಸಾಂ ಆಟಗಾರ, ಏಳನೇ ಶ್ರೇಯಾಂಕದ ಮನನ್ ನಾಥ್ ಅವರನ್ನು ಪರಾಭವಗೊಳಿಸಿ ಕ್ವಾರ್ಟರ್‌ಫೈನಲ್ ತಲುಪಿದರು.

ಸೌಮ್ಯಾ ರೋಣಡೆ, ಬಾಲಕಿಯರ ವಿಭಾಗದ ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ 6-4, 6-0ರಿಂದ ಸಿರಿ ಪಾಟೀಲ್ ಅವರನ್ನು ಸೋಲಿಸಿದರು.

ಬಾಲಕರ ಪ್ರೀಕ್ವಾರ್ಟರ್‌ಫೈನಲ್ ಇತರ ಪಂದ್ಯಗಳಲ್ಲಿ ಸ್ಕಂದ ಪ್ರಸನ್ನರಾವ್ 6-2, 6-2ರಿಂದ ರಕ್ಷಕ್ ತರುಣ್ ಎದುರು, ರಿಷಿವರ್ಧನ್ 6-2, 6-1ರಿಂದ ಶಂತನು ನಂಬಿಯಾರ್ ಎದುರು, ಅದಿತ್ ಅಮರನಾಥ್ 6-2, 6-2ರಿಂದ ಕ್ರಿಶ್ ಅಜಯ್ ತ್ಯಾಗಿ ವಿರುದ್ಧ, ರೇತಿನ್ ಪ್ರಣವ್ 6-3, 6-1ರಿಂದ ಭುವನ್ ಪ್ರಕಾಶ್ ಎದುರು, ಅರ್ಜುನ್ ಪ್ರೇಮಕುಮಾರ್ 6-7, 6-4, 6-2ರಿಂದ ಅನೂಪ್ ಕೃಷ್ಣಮೂರ್ತಿ ವಿರುದ್ಧ ಗೆದ್ದರು.

ಬಾಲಕಿಯರ ವಿಭಾಗದ ಪ್ರೀಕ್ವಾರ್ಟರ್‌ಫೈನಲ್ ಮತ್ತೊಂದು ಪಂದ್ಯದಲ್ಲಿ ಅಮೋದಿನಿ ನಾಯಕ್ 6-1, 6-2ರಿಂದ ಚಾರ್ಮಿ ಗೋಪಿನಾಥ್ ಎದುರು ಗೆದ್ದರು.

ಅಥ್ಲೆಟಿಕ್ಸ್ ಸಂಸ್ಥೆಗೆ ಪರಮೇಶ್ವರ ನೇಮಕ

ಜಿ. ಪರಮೇಶ್ವರ

ಬೆಂಗಳೂರು: ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆ (ಕೆಎಎ) ಹಂಗಾಮಿ ಅಧ್ಯಕ್ಷರಾಗಿ ಕಾಂಗ್ರೆಸ್ ಶಾಸಕ ಡಾ. ಜಿ. ಪರಮೇಶ್ವರ ಅವರು ನೇಮಕವಾಗಿದ್ದಾರೆ.

ಮಂಗಳವಾರ ನಡೆದ ಕೆಎಎ ಆಡಳಿತ ಸಮಿತಿ ಸಭೆಯಲ್ಲಿ ಈ ನೇಮಕವನ್ನು ಪ್ರಕಟಿಸಲಾಯಿತು ಎಂದು ಕಾರ್ಯದರ್ಶಿ ಎ. ರಾಜವೇಲು ತಿಳಿಸಿದ್ದಾರೆ.

‘ಒಲಿಂಪಿಕ್ಸ್‌ಗೆ ವಿದೇಶಿ ಪ್ರೇಕ್ಷಕರಿಲ್ಲ’

ಟೋಕಿಯೊ (ಎಎಫ್‌ಪಿ): ಕೊರೊನಾ ವೈರಸ್ ಪ್ರಸರಣದ ಅಪಾಯವನ್ನು ತಪ್ಪಿಸಲು ಈ ಸಲದ ಒಲಿಂಪಿಕ್ಸ್‌ಗೆ ವಿದೇಶಿ ಪ್ರೇಕ್ಷಕರಿಗೆ ಪ್ರವೇಶ ನೀಡದಿರಲು ಆಯೋಜಕರು ತೀರ್ಮಾನಿಸಿದ್ದಾರೆ.